# ಕಲಾ ಶಿಕ್ಷಣ
# ART EDUCATION

## ಸಂಪನ್ಮೂಲ ಪುಸ್ತಕ
## SOURCE BOOK

**ಒಂದರಿಂದ ನಾಲ್ಕನೇ ವರೆಗಿನ ತರಗತಿಗಳು**

**(ಎಲ್.ಪಿ. ವಿಭಾಗ)**

STD. 1 to 4


ಕೇರಳ ಸರಕಾರ

ಶಿಕ್ಷಣ ಇಲಾಖೆ

ತಯಾರಿಸಿದವರು

**ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT), ಕೇರಳ**

2018

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ!

## ಪ್ರತಿಜ್ಞೆ

ಭಾರತವು ನನ್ನ ದೇಶ, ಭಾರತೀಯರೆಲ್ಲರೂ ನನ್ನ ಸಹೋದರ ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣ ಪರಂಪರೆಗೆ ನಾನು ಹೆಮ್ಮೆ ಪಡುತ್ತೇನೆ.

ನಾನು ನನ್ನ ತಂದೆ ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ.

ನಾನು ನನ್ನ ದೇಶದ ಮತ್ತು ಜನತೆಯ ಕ್ಷೇಮ ಹಾಗೂ ಸಮೃದ್ಧಿಗಾಗಿ ಸದಾ ಪ್ರಯತ್ನಿಸುತ್ತೇನೆ.

State Council of Education Research and Training (SCERT)
Poojappura, Thiruvananthapuram 695012, Kerala.

website : www.scert.kerala.gov.in
email : scertkerala@gmail.com
phone : 0471-2341883, Fax : 0471-2341869
First Edition : 2018
Printed at : KBPS, Kakkanad, Kochi

ಸ್ನೇಹಿತರೇ,

ಶಿಕ್ಷಣ ಹಕ್ಕು ಕಾಯ್ದೆಯ ಪ್ರಕಾರ ವೃತ್ತಿ ಶಿಕ್ಷಣವು ಇತರ ವಿಷಯಗಳಷ್ಟೇ ಪ್ರಾಧಾನ್ಯತೆಯೊಂದಿಗೆ ಜ್ಯಾರಿಗೆ ಬರುತ್ತಿದೆ. ಒಂದನೇ ತರಗತಿಯಿಂದಲೇ ಕ್ರಮಬದ್ಧವಾದ ಪಠ್ಯಕ್ರಮವನ್ನು ರೂಪುಗೊಳಿಸಿ ಆಗಿರುತ್ತದೆ. ಇದರ ಪ್ರಕಾರ ತರಗತಿಯ ಚಟುವಟಿಕೆಗಳಿಗೆ ಸಹಾಯಕವಾಗುವ ರೀತಿಯಲ್ಲಿ ಅಧ್ಯಾಪಕರಿಗಾಗಿ ಸಂಪನ್ಮೂಲ ಪುಸ್ತಕಗಳನ್ನು ಎಸ್.ಸಿ.ಇ.ಆರ್.ಟಿ ಸಿದ್ಧಗೊಳಿಸಿದೆ. ಮಕ್ಕಳಿಗೂ ಸಮಾಜಕ್ಕೂ ಅಗತ್ಯವಾದ ಜೀವನದ ಮೂಲಭೂತ ಘಟಕಗಳಾದ ಆಹಾರ, ಕೃಷಿ, ಆರೋಗ್ಯ ಸಂರಕ್ಷಣೆ, ಬಟ್ಟೆ ಬರೆ, ವಸತಿ, ವಿನೋದ, ಸೇವೆಗಳು, ನಿರುಪಯುಕ್ತ ವಸ್ತುಗಳಿಂದ ಉತ್ಪನ್ನಗಳ ತಯಾರಿ ಇತ್ಯಾದಿ ವಲಯಗಳನ್ನೊಳಗೊಂಡ ಪಠ್ಯಕ್ರಮಕ್ಕೆ ರೂಪು ನೀಡಲಾಗಿದೆ. ಇವುಗಳಲ್ಲಿ ಪ್ರತಿಯೊಂದರ ಕಲಿಕಾ ಸಾಧನೆಗಳು, ಆಶಯಗಳು, ಸಾಮರ್ಥ್ಯಗಳು, ಕಲಿಕಾ ಚಟುವಟಿಕೆಗಳು ಮೌಲ್ಯಮಾಪನ ವಿಧಾನಗಳು ಇತ್ಯಾದಿಗಳನ್ನು ಇದರಲ್ಲಿ ಸಮಗ್ರವಾಗಿ ಪರಾಮರ್ಶಿಸಲಾಗಿದೆ. ಒಂದರಿಂದ ನಾಲ್ಕು, ಐದರಿಂದ ಏಳು, ಎಂಟರಿಂದ ಹತ್ತು ಎಂಬ ರೀತಿಯಲ್ಲಿ ಮೂರು ಪುಸ್ತಕಗಳಾಗಿ ಸಂಪನ್ಮೂಲ ಪುಸ್ತಕಗಳನ್ನು ತಯಾರಿಸಲಾಗಿದೆ.

ನಮ್ಮ ಸಾರ್ವಜನಿಕ ಶಿಕ್ಷಣ ಸಂಸ್ಥೆಗಳಲ್ಲಿ ವೃತ್ತಿ ಶಿಕ್ಷಣವು ಕಾರ್ಯದಕ್ಷತೆಯಿಂದ ಜಾರಿಗೊಳಿಸಲು ಇದು ತುಂಬಾ ಸಹಕಾರಿಯಾಗಬಹುದೆಂದು ಆಶಿಸುತ್ತೇನೆ.

ಪ್ರೀತಿಪೂರ್ವವಾಗಿ,

**ಡಾ. ಜೆ. ಪ್ರಸಾದ್**

ನಿರ್ದೇಶಕರು

ಎಸ್.ಸಿ.ಇ.ಆರ್.ಟಿ

## PARTICIPANTS IN THE WORKSHOP

**Dr. C. Gokuldasan Pillai**
(Rtd). Asst. Prof. SCERT.
**Sri. P.S. Mohan**
(Rtd), Principal, DIET, Pathanamthitta.
**Dr. Padmanabhan**
Senior Lecture, DIET, Malappuram
**Sri. M.C. Sugunan**
H.S.A. (St.Ignecious, H.S.S. Kanhiramattam, Ernakulam.
**Sri.M.Harindran**
U.P.S.A, Palathayi U.P.S, Kadavathur, P.O, Kannur.
**Sri. Gopalakrishna Pillai**
(Rtd), Kollam
**Smt. Latha Kumari**
H.S.A. N.S.S. H.S.S Madvoor, Thiruvananthapuram.
**Sri. Ek. Aravindan**
U.P.S.A (Thrikottor U.P.S, Payyoli, Kozhikode)
**Sri. T.K Baburaj**
U.P.S.A., Eyyannar, U.P.S Kozhikode.
**Sri.M. Sunil, Kumar**
U.P.S.A No.1,Karthikapalli, U.P.S. Vatakara, Kozhikode
**Sri.Shreejith**
U.P.S.A, Malappuram
**Sri. A. Ashokan**
U.P.S.A. Vatakara.
**Smt. Haleenabeevi**
H.S.A Govt H.S.S, Pattali, Kollam
**Smt. Ushabai**
H,S,A, Malappuram G.G.H.S
**Smt. Alis**
H.S.A. Wayanad.
**Sri. G Stallin**
(Rtd), Senior Lecturer, DIET Pathanamthitta

## ACADEMIC CO ORDINATOR

**Dr. N. Gopala Krishna Pillai,** Research Officer, SCERT, Kerala

# ಅನುಕ್ರಮಣಿಕೆ


1. **ಕೇರಳ ಶಾಲಾ ಪಠ್ಯಕ್ರಮ 2013 –** ಸಾಮಾನ್ಯ ಸಮೀಪನ ............ 7
2. **ಕಲೆಯ ಕಲಿಕೆ –** ಅಗತ್ಯ ಮತ್ತು ಪ್ರಾಧಾನ್ಯ ............ 32
3. **ಕಲೆಯ ಕಲಿಕ –** ಕಲಿಕಾ ಸಮೀಪನ ............ 36
4. **ಕಲೆಯ ಕಲಿಕೆ –** ವಿವಿಧ ವಲಯಗಳು ............ 40
5. **ಕಲೆಯ ಕಲಿಕೆ –** ಮೌಲ್ಯನಿರ್ಣಯ ............ 45
6. **ಕಲೆಯ ಕಲಿಕೆ –** ಬೆಂಬಲ ವ್ಯವಸ್ಥೆಗಳು ............ 50
7. **ಕಲೆಯ ಕಲಿಕೆ –** ಅನುಕ್ರಮಣಿಕೆ ವಿಷಯದ ಮಂಡಲಗಳು ............ 51

**7.1 ಚಿತ್ರಕಲೆ ............ 52**

ಒಂದನೇ ತರಗತಿ ............ 54
ಎರಡನೇ ತರಗತಿ ............ 64
ಮೂರನೇ ತರಗತಿ ............ 71
ನಾಲ್ಕನೇ ತರಗತಿ ............ 79

**7.2 ಸಂಗೀತ ............ 89**

ಒಂದನೇ ತರಗತಿ ............ 92
ಎರಡನೇ ತರಗತಿ ............ 103
ಮೂರನೇ ತರಗತಿ ............ 114
ನಾಲ್ಕನೇ ತರಗತಿ ............ 124

**7.3 ನೃತ್ಯಕಲೆ ............ 141**

ಒಂದನೇ ತರಗತಿ ............ 144
ಎರಡನೇ ತರಗತಿ ............ 155
ಮೂರನೇ ತರಗತಿ ............ 163
ನಾಲ್ಕನೇ ತರಗತಿ ............ 171

**7.4 ನಾಟಕ ............ 181**

ಒಂದನೇ ತರಗತಿ ............ 184
ಎರಡನೇ ತರಗತಿ ............ 192
ಮೂರನೇ ತರಗತಿ ............ 201
ನಾಲ್ಕನೇ ತರಗತಿ ............ 208

**ಮಾದರಿ ಪ್ರಶ್ನೆಪತ್ರಿಕೆ**

# 1. ಕೇರಳ ಶಾಲಾ ಪಠ್ಯಕ್ರಮ 2013 ಸಾಮಾನ್ಯ ಸಮೀಪನಗಳು

## 1.1 ಪೀಠಿಕೆ

**ಸಾ**ಮಾಜಿಕ ಬದುಕಿನ ಗುಣಮಟ್ಟದ ಹಿನ್ನೆಲೆಯಲ್ಲಿ ಹೇಳುವುದಾದರೆ ಕೇರಳವು ದೇಶಕ್ಕೆ ಮಾದರಿಯಾಗಿದೆ. ಸಾರ್ವಜನಿಕ ಶಿಕ್ಷಣದ ವ್ಯಾಪಕತೆ, ಸಾರ್ವಜನಿಕ ಆರೋಗ್ಯದ ಗುಣಮಟ್ಟ ಎಂಬಿವುಗಳೇ ಕೇರಳದ ಈ ಸಾಧನೆಗೆ ಪ್ರಧಾನ ಕಾರಣವಾಗಿವೆ. ಸಮಾಜದ ಎಲ್ಲ ವರ್ಗಗಳ ಮಕ್ಕಳನ್ನು ಶಾಲೆಗೆ ಕಳುಹಿಸಲು ಸಾಧ್ಯವಾಗಿದ್ದರೂ, ಎಲ್ಲರಿಗೂ ಗುಣಮಟ್ಟದ ಶಿಕ್ಷಣ ಎಂಬುದು ಕೇರಳದ ಶಿಕ್ಷಣ ಕ್ಷೇತ್ರವು ಎದುರಿಸುವ ಅತಿ ದೊಡ್ಡ ಸವಾಲಾಗಿದೆ. 1986 ರ ರಾಷ್ಟ್ರೀಯ ಶಿಕ್ಷಣ ನೀತಿಯ ಅಂಗವಾಗಿ ಶೈಕ್ಷಣಿಕ ಗುಣಮಟ್ಟವನ್ನು ಕಾಪಾಡಿಕೊಳ್ಳಲು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಹಾಗೂ ಅಧ್ಯಾಪಕ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಇದರೊಂದಿಗೆ ಪಠ್ಯಕ್ರಮವನ್ನು ಶಿಶುಕೇಂದ್ರಿತ, ಚಟುವಟಿಕೆ ಆಧಾರಿತ, ಪ್ರಕ್ರಿಯಾತ್ಮಕ ಹಾಗೂ ಕಾಲೋಚಿತವಾಗಿ ಪರಿಷ್ಕರಿಸುವ ಪ್ರಯತ್ನಗಳಾಗಿವೆ. ಇದರ ಪರಿಣಾಮವಾಗಿ ತರಗತಿಗಳಲ್ಲಿ ಜ್ಞಾನ ನಿರ್ಮಾಣ ಪ್ರಕ್ರಿಯೆಗಳು ನಡೆಯಬೇಕು ಎಂಬ ತಿಳುವಳಿಕೆ ಮೂಡಿತು. ಇದರಂತೆ ಮಗುವನ್ನು ಶೈಕ್ಷಣಿಕ ಪ್ರಕ್ರಿಯೆಗಳ ಕೇಂದ್ರಸ್ಥಾನದಲ್ಲಿ ಇರಿಸುವ ಚಟುವಟಿಕೆಗಳಿಗೆ ನಾಂದಿ ಹಾಡಲು ನಮಗೆ ಸಾಧ್ಯವಾಗಿದೆ.

ಬದುಕಿನ ಎಲ್ಲಾ ಕ್ಷೇತ್ರಗಳೂ ಪ್ರತಿ ಕ್ಷಣ ಬದಲಾಗುತ್ತಿವೆ. ಅಧ್ಯಾಪನ ಶಾಸ್ತ್ರ, ಅಧ್ಯಯನ ಮನಶ್ಶಾಸ್ತ್ರ ಮೊದಲಾದ ವಿಷಯಗಳ ಹೊಸ ಸಂಶೋಧನೆಗಳು ಮತ್ತು ಪ್ರಾಯೋಗಿಕವಾದ ಅನುಭವಗಳು ಉತ್ತಮ ರೀತಿಯ ಕಲಿಕೋಪಕರಣಗಳ ನಿರ್ಮಾಣ ಹಾಗೂ ಕಲಿಕಾನುಭವಗಳ ವಿನಿಮಯ ಮತ್ತು ಮೌಲ್ಯಮಾಪನವನ್ನು ನಡೆಸಲು ನಮ್ಮನ್ನು ಪ್ರೇರೇಪಿಸಿವೆ. ಎಲ್ಲಾ ವರ್ಗದ ಮಕ್ಕಳ ಕಲಿಕೆಯ ಪ್ರಗತಿಯನ್ನು ನಾವು ಗುರಿಯಿರಿಸಿಕೊಂಡಿದ್ದೇವೆ.

“ವಿಭಿನ್ನವಾದ ಸಾಮಾಜಿಕ, ಆರ್ಥಿಕ ಹಿನ್ನೆಲೆಯುಳ್ಳ, ವಿಭಿನ್ನ ದೈಹಿಕ, ಮಾನಸಿಕ, ಬೌದ್ಧಿಕ ಸಾಮರ್ಥ್ಯಗಳಿರುವ ಎಲ್ಲ ಮಕ್ಕಳಿಗೆ ಕಲಿಯಲು ಹಾಗೂ ಶಾಲೆಗಳಲ್ಲಿ ಉತ್ತೀರ್ಣರಾಗಲು ಸಾಧ್ಯವೆಂದು ದೃಢಪಡಿಸಬೇಕು. ಲಿಂಗ, ಜಾತಿ, ಭಾಷೆ, ಸಂಸ್ಕೃತಿ, ಧರ್ಮ, ಅಂಗವೈಕಲ್ಯಗಳೇ ಮೊದಲಾದ ಕಾರಣಗಳಿಂದ ಉಂಟಾಗುವ ಸಮಸ್ಯೆಗಳನ್ನು ಮೀರಲು ಯೋಜನೆಗಳು ಮತ್ತು ಶಿಕ್ಷಣ ನೀತಿಗಳು ಮಾತ್ರ ಸಾಲದು. ಎಳೆಯ ಪ್ರಾಯದಿಂದಲೇ ಯೋಗ್ಯವಾದ ಕಲಿಕಾ ಗುರಿಗಳನ್ನೂ, ಅಧ್ಯಾಪನ ರೀತಿಗಳನ್ನೂ ಆರಿಸಿ ರೂಪಿಸಬೇಕಾಗಿದೆ. (NCF 2005, ಪು.27)

- ವಿಭಿನ್ನ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಯುಳ್ಳವರು.
- ವಿಭಿನ್ನ ದೈಹಿಕ, ಮಾನಸಿಕ ಮತ್ತು ಬೌದ್ಧಿಕ ಸಾಮರ್ಥ್ಯವುಳ್ಳವರು.

ಹೀಗೆ ಎಲ್ಲಾ ವರ್ಗಗಳಿಗೆ ಸೇರಿದವರಿಗೆ ಕಲಿಕಾ ಸಾಧನೆಯನ್ನು ಗಳಿಸಲು ಶಿಕ್ಷಣ ಪ್ರಕ್ರಿಯೆಯ ಎಲ್ಲಾ ವಲಯಗಳಲ್ಲಿ ಸೂಕ್ಷ್ಮವೂ ಶಾಸ್ತ್ರೀಯವೂ ಆಗಿರುವ ಧೋರಣೆಗಳನ್ನು ಸ್ವೀಕರಿಸಬೇಕಾದುದು ನಮ್ಮ ದೃಷ್ಟಿಕೋನವಾಗಬೇಕು ಎಂದು ಎನ್.ಸಿ.ಎಫ್. ನಿರ್ದೇಶಿಸುತ್ತದೆ. ಕಾಲೋಚಿತವಾಗಿ ಪಠ್ಯಕ್ರಮವನ್ನು ನವೀಕರಿಸುವುದು ಮತ್ತು ಈ ವ್ಯವಸ್ಥೆಯನ್ನು ಕ್ರಿಯಾತ್ಮಕವಾಗಿಸುವುದರಿಂದ ಮಾತ್ರ ಈ ಗುರಿಯನ್ನು ಸಾಧಿಸಬಹುದು. ಈ ದೃಷ್ಟಿಕೋನದ ಹಿನ್ನೆಲೆಯಲ್ಲಿ ಈಗ ಪಠ್ಯಕ್ರಮವನ್ನು ಪರಿಷ್ಕರಿಸಲಾಗುತ್ತಿದೆ. ಶೈಕ್ಷಣಿಕ ಪ್ರಕ್ರಿಯೆಗಳಲ್ಲಿ ನಿರಂತರವಾಗಿ ತೊಡಗಿಸಿಕೊಂಡಿರುವ ಎಲ್ಲರ ಅನುಭವ, ಸಂಶೋಧನೆ ಹಾಗೂ ಅಧ್ಯಯನ ಶೋಧಗಳನ್ನು ಬಳಸಿಕೊಂಡು ಇದನ್ನು ಮಾಡಲಾಗುವುದು. ಸಮರ್ಪಕತೆಯಿಂದ ಮತ್ತಷ್ಟು ಸಮರ್ಪಕತೆಗೆ ಎಂಬ ವೈಜ್ಞಾನಿಕ ಸಮೀಪನವನ್ನು ಇಲ್ಲಿ ಸ್ವೀಕರಿಸಲಾಗುವುದು.

## 1.2 ಪಠ್ಯಕ್ರಮ ಪರಿಷ್ಕರಣೆಯ ಅಗತ್ಯ

ಕಳೆದ ಐದು ವರ್ಷಗಳಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಅನೇಕ ಹೊಸ ಆಶಯಗಳು ಮೂಡಿಬಂದಿವೆ. ಭಾರತದಲ್ಲಿ 2009 ರಲ್ಲಿ ಜ್ಯಾರಿಗೆ ಬಂದ ವಿದ್ಯಾಭ್ಯಾಸ ಹಕ್ಕು ಕಾಯಿದೆಯಿಂದ ಶಿಕ್ಷಣವು ಮಕ್ಕಳ ಹಕ್ಕಾಗಿ ಬದಲಾಗಿದೆ. ಹಕ್ಕು ಆಧಾರಿತ ವಿದ್ಯಾಲಯ (Right based Educational Institution) ಎಂಬ ಗುರಿಯನ್ನು ಸಾಧಿಸಲು ನಮ್ಮ ಪಠ್ಯಕ್ರಮವನ್ನು ಅಂತಾರಾಷ್ಟ್ರೀಯ ಗುಣಮಟ್ಟಕ್ಕೆ ಏರಿಸಬೇಕಾಗಿದೆ. ಅಂತಾರಾಷ್ಟ್ರೀಯ ಗುಣಮಟ್ಟ ಎಂಬುದು ಯಾವುದೇ ಒಂದು ದೇಶದ ಗುಣಮಟ್ಟವಲ್ಲ. ಇದು ಒಂದು ಪ್ರತ್ಯೇಕ ಹಂತವನ್ನು ದಾಟುವ ಮಗು ಜಗತ್ತಿನ ಯಾವುದೇ ಪ್ರದೇಶದಲ್ಲಿದ್ದರೂ ಆರ್ಜಿಸಬೇಕಾದ ಜ್ಞಾನ ಮತ್ತು ಅನುಭವಗಳ ಒಟ್ಟು ಮೊತ್ತವಾಗಿದೆ. ಜಾಗತಿಕ ಮಟ್ಟದಲ್ಲಿ ಜ್ಯಾರಿಗೊಂಡಿರುವ ಉತ್ತಮ ಅಧ್ಯಯನ, ಅಧ್ಯಾಪನ ಮಾದರಿಗಳು ಕೇರಳದ ಮಕ್ಕಳಿಗೂ ಸಿಗಬೇಕಾದುದು ಅಗತ್ಯ ಎಂಬುದನ್ನು ಇದು ಸೂಚಿಸುತ್ತದೆ.

ಶಿಕ್ಷಣ ಹಕ್ಕು ಕಾಯ್ದೆಯಲ್ಲಿ ಪಠ್ಯಕ್ರಮ, ಮೌಲ್ಯಮಾಪನ ಎಂಬಿವುಗಳ ಸಂಬಂಧಪಟ್ಟ ಕಾನೂನುಗಳು ಪಠ್ಯಕ್ರಮ ಪರಿಷ್ಕರಣೆಯಲ್ಲಿ ಪರಿಗಣಿಸುವುದು ಅಗತ್ಯವಾಗಿದೆ.

---

### ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆ 2009
### ಸೆಕ್ಷನ್ –29 (ಅಧ್ಯಾಯ 5)
### ಪಠ್ಯಕ್ರಮ ಹಾಗೂ ಮೌಲ್ಯನಿರ್ಣಯ ಸೂಚಕಗಳು

1) ಪ್ರಾಥಮಿಕ ಶಿಕ್ಷಣದ ಪಠ್ಯಕ್ರಮ ಹಾಗೂ ಮೌಲ್ಯ ನಿರ್ಣಯ ವಿಧಾನಗಳನ್ನು ಆಯಾ ಸರಕಾರದ ಅಧಿಸೂಚನೆಯ ಮೂಲಕ ಸೂಚಿಸಲಾಗುವ ಒಂದು ಶೈಕ್ಷಣಿಕ ಅಧಿಕಾರ ಸ್ಥಾನದ ಮೂಲಕ ಪ್ರತಿಪಾದಿಸಬೇಕು.

2) ಶೈಕ್ಷಣಿಕ ಅಧಿಕಾರ ಸ್ಥಾನ 1 ನೇ ಉಪವಿಭಾಗದ ಪ್ರಕಾರ ಪಠ್ಯಕ್ರಮ ಹಾಗೂ ಮೌಲ್ಯ ನಿರ್ಣಯ ವಿಧಾನವನ್ನು ಪ್ರತಿಪಾದಿಸುವಾಗ ಕೆಳಗಿನ ಅಂಶಗಳನ್ನು ಪರಿಗಣಿಸಬೇಕಾಗಿದೆ.

*a)* *ಸಂವಿಧಾನದಲ್ಲಿ ಹೇಳಲಾದ ಮೌಲ್ಯಗಳ ಹೊಂದಿಕೆ.*

*b)* *ಮಗುವಿನ ಸರ್ವತೋಮುಖವಾದ ಬೆಳವಣಿಗೆ.*

*c)* *ಮಗುವಿನ ಜ್ಞಾನ, ಸಾಮರ್ಥ್ಯ, ಕೌಶಲ್ಯಗಳನ್ನು ಕ್ರಮೇಣ ಹೆಚ್ಚಿಸುವುದು.*

*d)* *ದೈಹಿಕ ಹಾಗೂ ಮಾನಸಿಕ ಸಾಮರ್ಥ್ಯಗಳ ಸಂಪೂರ್ಣ ಬೆಳವಣಿಗೆ.*

e) ಮಗುವಿಗೆ ಇಷ್ಟವಾದ, ಶಿಶು ಕೇಂದ್ರಿತವಾದ ಚಟುವಟಿಕೆಗಳಿರುವ ಕಲಿಕೆ.

f) ಕಲಿಕೆಯ ಮಾಧ್ಯಮವನ್ನು ಮಗುವಿನ ಮಾತೃಭಾಷೆಯಲ್ಲಿಯೇ ನೀಡುವುದನ್ನು ಆದಷ್ಟು ಪ್ರಾಯೋಗಿಕಗೊಳಿಸಬೇಕು.

g) ಭಯ, ಮಾನಸಿಕ ಒತ್ತಡ ಉಂಟಾಗುವ ಸ್ಥಿತಿ, ಆತಂಕ ಇವುಗಳಿಂದ ಮಗುವನ್ನು ಮುಕ್ತಗೊಳಿಸಿ, ಸ್ವತಂತ್ರವಾಗಿ ಅಭಿಪ್ರಾಯ ಪ್ರಕಟಿಸಲು ಮಗುವಿಗೆ ಸಹಾಯ ನೀಡುವುದು.

h) ಮಗುವಿನ ಜ್ಞಾನಗ್ರಹಣ ಮತ್ತು ಅದನ್ನು ಪ್ರಯೋಗಿಸುವ ಸಾಮರ್ಥ್ಯದ ಸಮಗ್ರ ಮತ್ತು ನಿರಂತರ ಮೌಲ್ಯಮಾಪನ.

---

ಶಿಕ್ಷಣ ಹಕ್ಕು ಕಾಯ್ದೆಯ ಹಿನ್ನೆಲೆಯಲ್ಲಿ ನಿರಂತರ ಹಾಗೂ ಸಮಗ್ರವಾದ ಮೌಲ್ಯಮಾಪನವು ಸಾಂವಿಧಾನಿಕ ಬಾಧ್ಯತೆಯಾಗಿದೆ. ಇದನ್ನು ಗಮನದಲ್ಲಿರಿಸಿಕೊಂಡು ಪಠ್ಯಕ್ರಮವನ್ನು ಪರಿಷ್ಕರಿಸಬೇಕು. ಈ ಹಿನ್ನೆಲೆಯಲ್ಲಿ ಪಾಠಪುಸ್ತಕ ಪರಿಷ್ಕರಣೆಯನ್ನು ನಾವು ಕಾಣಬೇಕು.

**ಕೇರಳ ಶಾಲಾ ಪಠ್ಯಕ್ರಮದ (2013) ವೈಶಿಷ್ಟ್ಯಗಳನ್ನು ನೋಡೋಣ.**

1) ವಿದ್ಯಾರ್ಥಿ ಕೇಂದ್ರಿತ, ಪ್ರಕ್ರಿಯಾತ್ಮಕ, ಚಟುವಟಿಕೆ ಪ್ರಧಾನ, ಮೌಲ್ಯಾಧಾರಿತ ಪಠ್ಯಕ್ರಮ.

2) ಬೌದ್ಧಿಕ ಹಂತದಲ್ಲಿ, ಪ್ರಕ್ರಿಯೆಗಳ ಹಂತದಲ್ಲಿ, ಮನೋಭಾವ ಹಂತದಲ್ಲಿ ಹಾಗೂ ಮೌಲ್ಯಗಳ ಹಂತದಲ್ಲಿ ಮಗುವಿನ ಕಲಿಕಾ ಸಾಧನೆಗಳಿಗೆ ಒತ್ತು ನೀಡಲಾಗಿದೆ.

3) ಜ್ಞಾನ ನಿರ್ಮಾಣ ಎಂಬ ತಾತ್ವಿಕ ನೆಲೆಗಟ್ಟಿನಲ್ಲಿರುವ ಪಠ್ಯಕ್ರಮ.

4) ವಿನಿಮಯ ಪ್ರಕ್ರಿಯೆಯಲ್ಲಿ ವೈವಿಧ್ಯಪೂರ್ಣವೂ ಯೋಗ್ಯವೂ ಆದ ಅಧ್ಯಾಪನ ತಂತ್ರಗಳನ್ನು ಸ್ವೀಕರಿಸಿ ಉಪಯೋಗಿಸಲು ಅಧ್ಯಾಪಕರಿಗೆ ಸ್ವಾತಂತ್ರ್ಯವಿದೆ.

5) ಕಲಿಕಾಸಾಧನೆ, ಮಕ್ಕಳ ವಿಭಿನ್ನ ಗುಣಮಟ್ಟ ಇವುಗಳನ್ನು ತಿಳಿದು ವಿವಿಧ ಕಲಿಕಾ ವಿಧಾನಗಳನ್ನು ಅನುಷ್ಠಾನಗೊಳಿಸುವುದು. ಕಂಡು ಹಿಡಿಯುವ ಕಲಿಕೆ, ಆಶಯಗ್ರಹಣ ರೀತಿ, ಹೊಸ ಚಿಂತನೆಗಳು, ಯೋಚಿಸುವ ಸಾಮರ್ಥ್ಯವನ್ನು ಬೆಳೆಸುವುದು. ಸಹಕಾರ ಕಲಿಕೆ, ಸಹವರ್ತಿ ಕಲಿಕೆ, ಚಿಂತನೆಗಳ ಪ್ರತಿಫಲನ, ವೈಯಕ್ತಿಕ ಮತ್ತು ಗುಂಪಿನ ಅವಕಾಶಗಳನ್ನು ಒದಗಿಸುವುದು ಮೊದಲಾದ ವಿಧಾನಗಳನ್ನು ಪರಿಗಣಿಸುವುದು.

6) ಉಚಿತ ಸಾರ್ವಜನಿಕ ಶಿಕ್ಷಣ ಎಂಬ ಹಾಗೆ ಎಲ್ಲ ಮಕ್ಕಳ ಕಲಿಕಾ ಸಾಧನೆಗೆ ಪ್ರಾಧಾನ್ಯ ನೀಡಬೇಕು.

7) ಪ್ರಿ–ಪ್ರೈಮರಿಯಿಂದ ಹೈಯರ್ ಸೆಕಂಡರಿ ವರೆಗೆ ಸಮಗ್ರವಾದ ಪಠ್ಯಕ್ರಮ.

8) ಪ್ರತಿಯೊಂದು ತರಗತಿಗೂ ವಿವಿಧ ವಿಷಯಗಳ ಹೂರಣವನ್ನು ರಾಷ್ಟ್ರೀಯ ಮಟ್ಟದ ವಿಷಯಗಳ ಹೂರಣದೊಂದಿಗೆ ಏಕೀಕರಿಸಿ, ಕೇರಳದ ಪಾಠಪುಸ್ತಕಗಳನ್ನು ತಯಾರಿಸಲಾಗುವುದು.

9) ರಾಷ್ಟ್ರೀಯ ಮಟ್ಟದಲ್ಲಿರುವಂತೆ ಒಂದು ಮತ್ತು ಎರಡನೇ ತರಗತಿಗಳಿಗೆ ಮಾತೃಭಾಷೆ(ಪರಿಸರ ಅಧ್ಯಯನದೊಂದಿಗೆ) ಗಣಿತ ಮತ್ತು ಇಂಗ್ಲಿಷ್ ಎಂಬ ಮೂರು ಪಾಠಪುಸ್ತಕಗಳನ್ನು ಸಿದ್ಧಪಡಿಸಲಾಗುವುದು.

10) ಒಂದರಿಂದ ನಾಲ್ಕನೇ ತರಗತಿಯವರೆಗಿನ ಇಂಗ್ಲಿಷ್ ಮಾಧ್ಯಮ ಪಾಠಪುಸ್ತಕಗಳನ್ನು ಸಿದ್ಧಪಡಿಸಲಾಗುವುದು.

11) ಶಾಸ್ತ್ರೀಯ ಭಾಷೆ ಹಾಗೂ ಮಾತೃಭಾಷೆ ಎಂಬ ನೆಲೆಯಲ್ಲಿ ಕನ್ನಡ ಭಾಷಾ ಕಲಿಕೆಗೆ ವಿಶೇಷವಾದ ಪ್ರಾಧಾನ್ಯ ನೀಡಲಾಗುವುದು.

12) ಪ್ರಿ–ಪ್ರೈಮರಿ ಶಿಕ್ಷಣಕ್ಕಾಗಿ ಏಕೀಕೃತ ಪಠ್ಯಕ್ರಮವನ್ನು ರೂಪಿಸಿ, ಔಪಚಾರಿಕ ಶಿಕ್ಷಣದ ಅಂಗವಾಗಿ ಬದಲಾಯಿಸಲು ನಿರ್ದೇಶಿಸಲಾಗುವುದು.

## ಉಚಿತ ಹಾಗೂ ಕಡ್ಡಾಯ ಶಿಕ್ಷಣಕ್ಕಿರುವ ಮಕ್ಕಳ ಹಕ್ಕು ಕೇರಳದ ಕಾನೂನುಗಳು ಹಾಗೂ ಪರಿಚ್ಛೇದಗಳು 2011

### ಶೈಕ್ಷಣಿಕ ಅಧಿಕಾರಗಳು

1. 29ನೇ ಪರಿಚ್ಛೇದದ ಪ್ರಕಾರ ರಾಜ್ಯ ಶಿಕ್ಷಣ ಸಂಶೋಧನಾ ಮತ್ತು ತರಬೇತಿ ಸಮಿತಿ (SCERT) ಶೈಕ್ಷಣಿಕ ಅಧಿಕಾರಗಳನ್ನು ನೀಡಲಾಗಿದೆ.
2. (1)ನೇ ಉಪಪರಿಚ್ಛೇದದ ಅಡಿಯಲ್ಲಿ ಪ್ರಕಟಿಸಿರುವ ಪ್ರಕಾರ ಶೈಕ್ಷಣಿಕ ಅಧಿಕಾರವನ್ನು ಹೊಂದಿರುವ ಸಂಸ್ಥೆಯ ಪಠ್ಯಕ್ರಮ, ಮೌಲ್ಯಮಾಪನ ಸೂಚಕ ತಯಾರಿಸುವಾಗ ಈ ಕಾನೂನಿನ 29ನೇ ಪರಿಚ್ಛೇದದ (2)ನೇ ಉಪಪರಿಚ್ಛೇದದ ಅಂಶ (a) ಯಿಂದ (f) ವರೆಗಿನ ನಿಬಂಧನೆಗಳಿಗೆ ಬಾಧಕವಾಗದಂತೆ;
   - (a) ಸಕಾಲಿಕಲವೂ ಪ್ರಾಯಕ್ಕನುಗುಣವೂ ಆಗಿರುವ ಪಠ್ಯಕ್ರಮ ಮತ್ತು ಪಾಠಪುಸ್ತಕಗಳಿಗೆ ಮೂಲಭೂತವಾದ ಜೀವನ ನೈಪುಣ್ಯವನ್ನು ರೂಢಿಸಿಕೊಳ್ಳಲು ಅಗತ್ಯವಾದ ಕಲಿಕಾ ಸಾಮಗ್ರಿಗಳೂ ಒಳಗೊಂಡಂತೆ ಇತರ ಕಲಿಕಾ ಸಾಮಗ್ರಿಗಳಿಗೆ ರೂಪು ನೀಡುವುದು;
   - (b) ಒಂದರಿಂದ ಎಂಟರ ವರೆಗಿನ ತರಗತಿಗಳಲ್ಲಿ ಪ್ರತಿಯೊಂದು ವಿಷಯಕ್ಕೂ ಅಗತ್ಯವಾದ ಕನಿಷ್ಠ ಕಲಿಕಾ ಪರಿಣಾಮಗಳನ್ನು ನಿರ್ಣಯಿಸಬೇಕಲ್ಲದೆ ಮಕ್ಕಳಿಗಾಗಿ ಮೌಲಿಕವಾದ ಸೂಚಕಗಳನ್ನು ವಿಕಾಸಗೊಳಿಸಿ ಮಕ್ಕಳ ಕಲಿಕಾ ಪರಿಣಾಮಕ್ಕಾಗಿ ಅಧ್ಯಾಪಕರ ಜವಾಬ್ದಾರಿಯ ಮಾನದಂಡಗಳಿಗೆ ರೂಪು ನೀಡುವುದು;
   - (c) ಕಲಿಕೆ ಮತ್ತು ಬೋಧನೆಯ ಪರಿಣಾಮಗಳ ಆಧಾರದಲ್ಲಿ ಸೇವಾಕಾಲದ ಅಧ್ಯಾಪಕ ತರಬೇತಿ ಸಾಮಗ್ರಿಗಳನ್ನು ಅಭಿವೃದ್ಧಿಪಡಿಸುವುದು;
   - (d) 1995ರ ನ್ಯೂನತೆಗಳಿರುವ ವ್ಯಕ್ತಿಗಳಿಗಾಗಿರುವ (ಸಮಾನ ಹಕ್ಕುಗಳು, ಹಕ್ಕುಗಳ ಸಂರಕ್ಷಣೆ ಹಾಗೂ ಪೂರ್ಣ ಭಾಗವಹಿಸುವಿಕೆ) ನಿಯಮಗಳಿಗನುಸಾರವಾಗಿ ನ್ಯೂನತೆಗಳಿರುವ ಮಕ್ಕಳಿಗೆ ಶಿಕ್ಷಣವನ್ನು ನೀಡುವುದಕ್ಕಾಗಿ ಅಧ್ಯಾಪಕರಿಗೆ ಸೇವಾಪೂರ್ವ ಮತ್ತು ಸೇವಾಕಾಲದ ತರಬೇತಿ ಕಾರ್ಯಕ್ರಮಗಳಿಗೆ ರೂಪು ನೀಡುವುದು;
   - (e) ನಿರಂತರವೂ ಸಮಗ್ರವೂ ಆದ ಮೌಲ್ಯಮಾಪನವನ್ನು ಜಾರಿಗೆ ತರುವುದಕ್ಕಾಗಿ ಅಗತ್ಯವಾದ ಸೂಚನೆಗಳನ್ನೂ ಮಾಹಿತಿಗಳನ್ನೂ ತಯಾರಿಸುವುದು.
   - (f) ಶೈಕ್ಷಣಿಕ ಧೋರಣೆಗಳು ಹಾಗೂ ಕಾರ್ಯಕ್ರಮಗಳು, ಪಠ್ಯಕ್ರಮ, ಬೋಧನೆಯ ಮೂಲಕ ಮಕ್ಕಳ ಮೇಲಾಗುವ ಪರಿಣಾಮ ಇತ್ಯಾದಿಗಳ ಕುರಿತು ಸಂಶೋಧನೆಗಳನ್ನೂ ಅಧ್ಯಯನಗಳನ್ನೂ ಕೈಗೊಳ್ಳುವುದು ಮತ್ತು ಅದನ್ನು ಜಾರಿಗೊಳಿಸುವುದು.

13) ಮಾಹಿತಿ ತಂತ್ರಜ್ಞಾನವನ್ನು (ICT) ಒಂದು ಪಠ್ಯವಿಷಯ ಎನ್ನುವುದಕ್ಕಿಂತ ಪಠ್ಯವಿಷಯಗಳನ್ನು ಸಂವಹನಮಾಡುವ ಮಾಧ್ಯಮವಾಗಿ ಬಳಸಬೇಕು.

14) ವಿಶೇಷವಾದ ಪರಿಗಣನೆಗೆ ಅರ್ಹರಾದ ಮಕ್ಕಳಿಗೆ ವಿಭಿನ್ನ ಹಾಗೂ ನೂತನವಾದ ಕಲಿಕಾ ತಂತ್ರಗಳನ್ನು ಆವಿಷ್ಕರಿಸಿ ಅನುಷ್ಠಾನಗೊಳಿಸುವುದು ಮತ್ತು ವಿಭಿನ್ನವಾದ ಮೌಲ್ಯಮಾಪನ ಚಟುವಟಿಕೆಗಳನ್ನು ಆವಿಷ್ಕರಿಸಿ ಅನುಷ್ಠಾನಗೊಳಿಸುವುದು.

15) ಕಲಿಕಾ ಸಾಧನೆಗಳನ್ನು ಅವಲಂಬಿಸಿದ ಸಮಗ್ರ ಮತ್ತು ನಿರಂತರವಾದ ಮೌಲ್ಯ ಮಾಪನ (CCE) ನಡೆಸಬೇಕು.

16) ಆರೋಗ್ಯ ಮತ್ತು ಕ್ರೀಡಾ ಶಿಕ್ಷಣ, ಕಲೆಯ ಶಿಕ್ಷಣ, ವೃತ್ತಿ ಪರಿಚಯ ಇವುಗಳನ್ನು ಕಡ್ಡಾಯ ಪಠ್ಯವಿಷಯಗಳಾಗಿ ಪರಿಗಣಿಸಲಾಗಿದೆ.

17) ಹೈಯರ್ ಸೆಕಂಡರಿ ವಿಭಾಗದಲ್ಲಿ ಕಾಲಾನುಸಾರಿಯಾಗಿ ಪಾಠ ಪುಸ್ತಕಗಳನ್ನು ಸಿದ್ಧಪಡಿಸಬೇಕು.

18) ರಾಷ್ಟ್ರೀಯ ಶಿಕ್ಷಣ ನಿಯಮದ ಬೆಳಕಿನಲ್ಲಿ ಹಕ್ಕು ಆಧಾರಿತ ಶಿಕ್ಷಣಕ್ಕೆ ಒತ್ತು ನೀಡಬೇಕು.

19) ಪ್ರತಿಯೊಬ್ಬ ಅಧ್ಯಾಪಕನೂ ಓರ್ವ ಸಹರಕ್ಷಕ (Mentor)ನ ಸ್ಥಾನಕ್ಕೇರಿ, ಬೇಕಾದ ಕಾಳಜಿಯನ್ನು, ರಕ್ಷಣೆಯನ್ನು ಶಾಲೆಯಲ್ಲಿ ಮತ್ತು ತರಗತಿಯಲ್ಲಿ ಮಗುವಿಗೆ ಒದಗಿಸಬೇಕು.

20) ಅಧ್ಯಾಪಕರು ಪಾಲಿಸಬೇಕಾದ ವೃತ್ತಿ ನೀತಿ ಸಂಹಿತೆಗೆ (Code of Professional Ethics for School Teacher) ಒತ್ತು ನೀಡಲಾಗುವುದು.

21) 21ನೇ ಶತಮಾನದ ಕಲಿಕಾ ನೈಪುಣ್ಯಗಳು (21st Century Learning skills) ಕಾಲೋಚಿತವಾಗಿ ಗಳಿಸಿಕೊಳ್ಳುವುದಕ್ಕೆ ಯೋಗ್ಯವಾಗಿವೆ.

22) ಮಾನವೀಯ ಮೌಲ್ಯಗಳನ್ನು ಒಳಗೊಂಡ ತಲೆಮಾರನ್ನು ಸೃಷ್ಟಿಸಲು ಸಮರ್ಥವಾಗಿದೆ.

23) ಸಮಾನ ಅವಕಾಶ ಮತ್ತು ಸಮಾನತೆ (Equity and Equality) ಲಭಿಸುವ ಶಿಕ್ಷಣ ವ್ಯವಸ್ಥೆಗೆ ಹೊಂದಿಕೊಂಡಿದೆ.

ಸಹಜವಾದ ಕಲಿಕೆ, ಕಲಿಯುವ ಮಕ್ಕಳ ಬೌದ್ಧಿಕ, ಮಾನಸಿಕ ಬೆಳವಣಿಗೆಯನ್ನು ದೃಷ್ಟಿಯಲ್ಲಿರಿಸಿಕೊಂಡು ತಲೆ, ಹೃದಯ, ಹಸ್ತ ಸಮನ್ವಯಗೊಂಡ ಪಠ್ಯಕ್ರಮ (Curriculum for the harmony of head, Heart and Hand) ಎಂಬ ಕಾಣ್ಕೆಯೊಂದಿಗೆ ಪಠ್ಯಕ್ರಮವನ್ನು ನಾವು ಮಾಡಬೇಕು.

ಹಾಗಾದರೆ ಪಠ್ಯಕ್ರಮ ಸಮೀಪನ ಹೇಗಿರಬೇಕು? ಅದರ ಸೈದ್ಧಾಂತಿಕ ಮತ್ತು ಪ್ರಾಯೋಗಿಕವಾದ ಅಡಿಪಾಯ ಹೇಗಿರಬೇಕು?

## 1.3 ಪಠ್ಯಕ್ರಮ ಸಮೀಪನ

ಪಂಚೇಂದ್ರಿಯಗಳನ್ನು ಬಳಸಿ ಸುತ್ತುಮುತ್ತಲಿನ ಪರಿಸರದಿಂದ ಕಲಿಯಲಿರುವ ಸಹಜ ಸಾಮರ್ಥ್ಯಗಳೊಂದಿಗೆ ಮಗು ಹುಟ್ಟುತ್ತದೆ. ಜಗತ್ತನ್ನು ಹೊಸ ರೀತಿಯಲ್ಲಿ ನೋಡಲು, ಅರ್ಥಮಾಡಲು, ವ್ಯವಹರಿಸಲು, ಮೌಲ್ಯಮಾಪನ ಮಾಡಲು ಶಾಲೆಯ ಶಿಕ್ಷಣದ ಮೂಲಕ ಮಗುವಿಗೆ ಸಾಧ್ಯವಾಗಬೇಕು.

ತನ್ನ ಮುಂದಿರುವ ಸಮಸ್ಯೆಗಳನ್ನು ಎದುರಿಸಿ, ಆ ಸಮಸ್ಯೆಗಳನ್ನು ಪರಿಹರಿಸಿಕೊಂಡು ಕಲಿಕೆ ನಡೆಯುತ್ತದೆ. ಪಠ್ಯಕ್ರಮ ವಿನಿಮಯ ಸಮೀಪನದ ಲಕ್ಷಣಗಳು ಯಾವುವು?

- ಚಟುವಟಿಕೆ ಆಧಾರಿತವಾದುದು.
- ಪ್ರಕ್ರಿಯೆಗಳಿಂದ ಕೂಡಿದ್ದು.
- ಕಲಿಕೆಯನ್ನು ಗಟ್ಟಿಗೊಳಿಸುವುದು.
- ಕಲಿಕಾ ಸಾಧನೆಗಳನ್ನು ಸಫಲಗೊಳಿಸಲು ಸಮರ್ಥವಾದುದು.
- ಪರಿಸರ ಆಧಾರಿತವಾದುದು.
- ವಿಕಾಸದ ವಲಯಗಳನ್ನು ಪರಿಗಣಿಸುವುದು.
- ವಿದ್ಯಾರ್ಥಿಯ ಸ್ವಭಾವಕ್ಕೆ ಅನುಗುಣವಾದುದು.
- ಕಲಿಕೆಯೊಂದಿಗೆ ಮೌಲ್ಯ ನಿರ್ಣಯವೂ ಜತೆಯಾಗಿರುವುದು.

ಜ್ಞಾನನಿರ್ಮಾಣ ಆಧಾರಿತವಾದ ಕಲಿಕಾ ರೀತಿಯು ಪಠ್ಯಕ್ರಮಕ್ಕೆ ಆಧಾರವಾಗಿದೆ. ವಿದ್ಯಾರ್ಥಿಯ ಆರ್ಜಿತ ಜ್ಞಾನ ಮತ್ತು ಆಶಯ ಪರಿಸರವನ್ನು ಪರಿಗಣಿಸಿಕೊಂಡು ಪ್ರಯೋಜನಕಾರಿಯಾದ ಕಲಿಕಾ ಚಟುವಟಿಕೆಗಳನ್ನು ಏರ್ಪಡಿಸುವುದರಿಂದ ಸಹಜ ಜ್ಞಾನವನ್ನು ರೂಪಿಸಲು ಸಾಧ್ಯ ಎಂಬುದು ಈ ದೃಷ್ಟಿಕೋನದ ವೈಶಿಷ್ಟ್ಯ.

## ಕಲಿಕಾನುಭವಗಳು

ಬದುಕಿನ ವಿಭಿನ್ನ ಹಿನ್ನೆಲೆಗಳಿಂದ ಬರುವ ವಿದ್ಯಾರ್ಥಿಗಳ ಆರ್ಜಿತ ಜ್ಞಾನ, ಸಾಮರ್ಥ್ಯ, ಆಸಕ್ತಿ ಇವುಗಳು ವಿಭಿನ್ನವಾಗಿರುವವಲ್ಲವೇ. ಈ ವೈಶಿಷ್ಟ್ಯವನ್ನು ಪರಿಗಣಿಸಿಕೊಂಡು ವ್ಯಕ್ತಿ ಭಿನ್ನತೆಯನ್ನೂ ಬಹುಮುಖವಾದ ಬುದ್ಧಿಮತ್ತೆಯನ್ನೂ ಗಮನದಲ್ಲಿರಿಸಿಕೊಂಡು ಕಲಿಕೆಯ ಅನುಭವಗಳನ್ನು ರೂಪಿಸಬೇಕಾದುದು ಮುಖ್ಯವಾಗಿದೆ.

## ಕಲಿಕಾ ಪರಿಸರ

ವಿದ್ಯಾರ್ಥಿಯ ಆಸಕ್ತಿ ಹಾಗೂ ಬೆಳವಣಿಗೆಯನ್ನು ದೃಷ್ಟಿಯಲ್ಲಿರಿಸಿಕೊಂಡು, ವೈವಿಧ್ಯಪೂರ್ಣ ಕಲಿಕಾ ಚಟುವಟಿಕೆಗಳಲ್ಲಿ ಭಾಗಿಯಾಗಲು ಅನುಕೂಲವಾಗುವಂತೆ ತರಗತಿಗಳನ್ನು ಸಿದ್ಧಪಡಿಸಬೇಕು. ವಿದ್ಯಾರ್ಥಿ ಕೇಂದ್ರಿತ ಕಲಿಕಾ ಚಟುವಟಿಕೆಗಳಿಗೆ ಸಹಾಯಕವಾಗುವಂತೆ ಚಟುವಟಿಕೆ ಆಧಾರಿತ ಕಲಿಕೆಯನ್ನು ಹೇಗೆ ಮಾಡಬೇಕೆಂದು ನಾವು ತಿಳಿದುಕೊಂಡೆವಲ್ಲವೇ?

## ಕಲಿಕಾ ಪ್ರಕ್ರಿಯೆ

- ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಅನುಭವಗಳ ಆಧಾರದಲ್ಲಿ ಜ್ಞಾನ ನಿರ್ಮಾಣ (Knowledge Construction) ಮಾಡುವನು.
- ಜ್ಞಾನ ನಿರ್ಮಾಣವನ್ನು ವೈಯುಕ್ತಿಕ ಮತ್ತು ಸಾಮಾಜಿಕ ಹಂತಗಳಲ್ಲಿ ಮಾಡಬೇಕು.
- ವಿವಿಧ ಕಲಿಕಾ ಶೈಲಿಗಳನ್ನು (Learning Style) ಪರಿಗಣಿಸಿಕೊಂಡು ವಿವಿಧ ಇಂದ್ರಿಯಾನುಭವಗಳನ್ನು (Multisensory Experiences) ನೀಡುವ ಮೂಲಕ ಕಲಿಕೆಯನ್ನು ಯಶಸ್ವಿಗೊಳಿಸ ಬಹುದು.

*ಮಕ್ಕಳು ತೊಡಗಿಕೊಂಡಿರುವ ಜ್ಞಾನ ನಿರ್ಮಾಣ ಪ್ರಕ್ರಿಯೆಯಲ್ಲಿ ಅಧ್ಯಾಪಕರು ಸಕ್ರಿಯವಾಗಿ ಭಾಗವಹಿಸಿದರೆ, ಅದು ಮಕ್ಕಳ ತಿಳುವಳಿಕೆಯನ್ನು ಗಟ್ಟಿಗೊಳಿಸಲು ಸಹಾಯಕವಾಗುವುದು. ಕಲಿಕೆಯಲ್ಲಿ ತೊಡಗಿಸಿಕೊಂಡಿರುವ ಮಕ್ಕಳು ತಮ್ಮ ಜ್ಞಾನವನ್ನು ತಾವೇ ನಿರ್ಮಿಸಿಕೊಳ್ಳುತ್ತಾರೆ. ತಾವು ಶಾಲೆಯಲ್ಲಿ ಕಲಿತಿರುವುದನ್ನು ಹೊರಗಿನ ವಿಷಯಗಳೊಂದಿಗೆ ಅನ್ವಯಿಸಿ ಪ್ರಶ್ನೆಗಳನ್ನು ಕೇಳುವಂತೆ ಪ್ರೋತ್ಸಾಹಿಸಬೇಕು. ಬಾಯಿಪಾಠ ಹೊಡೆದು ಒಂದೇ ಒಂದು ಸರಿಯಾದ ಉತ್ತರವನ್ನು ಕಂಡುಕೊಳ್ಳುವುದಕ್ಕಿಂತ, ತಮ್ಮದೇ ವಾಕ್ಯಗಳಲ್ಲಿ ಸ್ವತಂತ್ರವಾಗಿ ಉತ್ತರವನ್ನು ಹೇಳುವಂತೆ ಪ್ರೋತ್ಸಾಹಿಸಬೇಕು. ಇವುಗಳೆಲ್ಲಾ ತಮ್ಮ ಜ್ಞಾನವನ್ನು ವಿಸ್ತರಿಸುವ ಮಕ್ಕಳಿಗೆ ಸಹಾಯ ಮಾಡುವ ಪ್ರಧಾನ ಹೆಜ್ಜೆಗಳಾಗಿವೆ. ಬೌದ್ಧಿಕವಾದ ಊಹೆ ಅರ್ಥವತ್ತಾದ ಒಂದು ಬೋಧನ ಕ್ರಮವಾಗಿದೆ. ಇದನ್ನು ಪ್ರೋತ್ಸಾಹಿಸಬೇಕು. ಹಲವಾರು ಬಾರಿ ತಮ್ಮ ದೈನಂದಿನ ಅನುಭವಗಳಿಂದ ಅಥವಾ ಮಾಧ್ಯಮ ಸಂಪರ್ಕದಿಂದ ಮಕ್ಕಳ ಮನಸ್ಸಿನಲ್ಲಿ ಕೆಲವು ಆಶಯಗಳು ರೂಪುಗೊಂಡಿರಬಹುದು. ಆದರೆ ಅಧ್ಯಾಪಕರು ನಿರೀಕ್ಷಿಸುವ ಮಾತುಗಳಲ್ಲಿ ಅವುಗಳನ್ನು ಅವರಿಗೆ ಪ್ರಕಟಿಸಲು ಸಾಧ್ಯವಾಗದು. ತಿಳಿದಿರುವುದು ಮತ್ತು ತಿಳಿಯದಿರುವುದರ ಮಧ್ಯೆ ಹೊಸ ಜ್ಞಾನದ ಸೃಷ್ಟಿಯಾಗುತ್ತದೆ. ಶಾಲೆಯ ಹೊರಗೆ ಮನೆ ಅಥವಾ ಸಮಾಜದಲ್ಲಿ ಬೆಳೆಸುವ ಕರಕೌಶಲ್ಯದ ರೂಪದಲ್ಲಿ ಇಂತಹ ಜ್ಞಾನ ಸೃಷ್ಟಿಯಾಗುವುದು. ಇಂತಹ ಎಲ್ಲ ತಿಳುವಳಿಕೆಗಳನ್ನು ಗೌರವಿಸಬೇಕು. ತಿಳುವಳಿಕೆ ಮತ್ತು ಸಂವೇದನಶೀಲತೆಯಿರುವ ಅಧ್ಯಾಪಕರು ಈ ಕುರಿತು ಪ್ರಜ್ಞಾವಂತರಾಗಿರುತ್ತಾರೆ. ಮಕ್ಕಳ ವಿಕಾಸ ಸಾಧ್ಯತೆಯನ್ನು ಮನಗಂಡು, ಚಟುವಟಿಕೆಗಳನ್ನು ಒದಗಿಸಿ ಹಾಗೂ ಪ್ರಶ್ನೆಗಳನ್ನು ಕೇಳಿ ಅವರನ್ನು ಮುನ್ನಡೆಸಲು ಅಧ್ಯಾಪಕರಿಗೆ ಸಾಧ್ಯ.*

*ಅನ್ವೇಷಣೆ, ನಿರೀಕ್ಷಣೆ, ಪ್ರಶ್ನೆಗಳನ್ನು ಕೇಳುವುದು, ಚರ್ಚಾಕೂಟಗಳು ಇವುಗಳ ಮೂಲಕ ಸಿದ್ಧಾಂತ ರೂಪೀಕರಣ ಮತ್ತು ಆಶಯ ಸೃಷ್ಟಿಗಳಾಗುತ್ತವೆ. ಇವುಗಳು ಸಕ್ರಿಯ ಭಾಗವಹಿಸುವಿಕೆಯ ಭಾಗವಾಗಿವೆ. ಶಾಲೆಗಳು ಪ್ರಶ್ನೆಗಳನ್ನು ಕೇಳುವುದಕ್ಕೂ ಚರ್ಚಿಸುವುದಕ್ಕೂ ಶೋಧಿಸುವುದಕ್ಕೂ ವಿಶ್ಲೇಷಿಸುವುದಕ್ಕೂ ನಿಗಮನವನ್ನು ಕಂಡುಕೊಳ್ಳಲೂ ಅವಕಾಶವನ್ನು ಒದಗಿಸಬೇಕು.*

*ಎನ್.ಸಿ.ಎಫ್. 2005 ಪುಟ. 41,42*

- ಕಲಿಕಾನುಭವಗಳನ್ನು ಸಕ್ರೀಯವಾಗಿ (spiralling) ಮಂಡಿಸುವ ಮೂಲಕ ಕಲಿಕೆಯು ಸಾಕಷ್ಟು ಫಲಕಾರಿಯಾಗುತ್ತದೆ.
- ಕಲಿಕಾ ಚಟುವಟಿಕೆಗಳಿಗೆ ಯೋಗ್ಯವಾದ ನಮನೀಯತೆ (Flexibility), ಹೊಂದಾಣಿಕೆ (Adaptations), ಕಲಿಕಾ ಚಟುವಟಿಕೆಗಳ ಆಯ್ಕೆ (Selection) ಇವುಗಳನ್ನು ನಡೆಸುವ ಮೂಲಕ ವಿಭಿನ್ನ ಅಭಿರುಚಿಯ ಕಲಿಕೆಯ ಆಸಕ್ತರನ್ನು ಪರಿಗಣಿಸಬಹುದು.
- ಸಾಕಷ್ಟು ಕಲಿಕಾನುಭವಗಳು ಪ್ರತಿಯೊಬ್ಬ ವಿದ್ಯಾರ್ಥಿಗೆ ದೊರಕಿದಾಗಲೇ ಕಲಿಕಾ ಸಾಧನೆ (Learning outcome) ದೃಢವಾಗುವುದು.
- ಕಲಿಕೆ ಮತ್ತು ಮೌಲ್ಯನಿರ್ಣಯ ಪ್ರಕ್ರಿಯೆಗಳು ನಿರಂತರವಾಗಿ ನಡೆಯಬೇಕಾಗಿರುವುದು.
- ವಿಷಯಾಧಾರಿತ ವಸ್ತು, ವಿದ್ಯಾರ್ಥಿಯ ಕಲಿಕೆಯ ಅಗತ್ಯ ಇವುಗಳನ್ನು ಹೊಂದಿಕೊಂಡು ವಿವಿಧ ಕಲಿಕಾ ಬೋಧನ ತಂತ್ರಗಳನ್ನು ಬಳಸಿಕೊಂಡರೆ ಎಲ್ಲರಿಗೂ ಕಲಿಕಾ ಸಾಧನೆ (Learning Outcome) ಯನ್ನು ಗಳಿಸಿಕೊಳ್ಳಲು ಸಾಧ್ಯ.
- ಪ್ರತಿಯೊಂದು ಮಗುವಿನ ಸಮಗ್ರ ಪ್ರಗತಿಯನ್ನು (Allround development) ಉದ್ದೇಶ ವಾಗಿರಿಸಿಕೊಂಡು ಕಲಿಕಾ ಪ್ರಕ್ರಿಯೆಗಳನ್ನು ನಿರ್ಧರಿಸಬೇಕು.

## 1.4 ಕಲಿಕಾ ಸಾಧನೆಗಳು (Learning Outcomes)

ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ನೀಡಲಾಗುವ ಕಲಿಕಾ ಚಟುವಟಿಕೆಗಳ ಫಲವಾಗಿ ಜ್ಞಾನ, ಕೌಶಲ್ಯ, ಮನೋಭಾವ, ಮೌಲ್ಯಗಳು ಮಗುವಿನಲ್ಲಿ ರೂಪುಗೊಳ್ಳುತ್ತವೆ. ಇವುಗಳಲ್ಲಿ ಕೆಲವನ್ನು ಸ್ವಲ್ಪ ಕಾಲದಲ್ಲಿ ಸಂಪಾದಿಸಬಹುದು ಮತ್ತು ಕೆಲವಕ್ಕೆ ದೀರ್ಘಕಾಲ ಬೇಕಾಗುವುದು. ಹೀಗೆ ಮಗುವಿನಲ್ಲಿ ಉಂಟಾಗುವ ಬದಲಾವಣೆಗಳನ್ನು ನಮಗೆ ಮುಂಚಿತವಾಗಿ ನಿರ್ಧರಿಸಲು ಸಾಧ್ಯವಿದೆ. ಪಠ್ಯಕ್ರಮವನ್ನು ಸಿದ್ಧಪಡಿಸುವಾಗ ಶಾಲಾ ಶಿಕ್ಷಣದ ವಿವಿಧ ಹಂತಗಳಲ್ಲಿ ಮಗು ಸಾಧಿಸಬೇಕಾದ ಗುರಿಗಳನ್ನು ನಾವು ಕಲಿಕಾ ಸಾಧನೆಗಳೆಂದು ಹೇಳುತ್ತೇವೆ. ಕೆಲವು ಕಲಿಕಾ ಚಟುವಟಿಕೆಗಳ ಸರಣಿಯ ಮೂಲಕ ಪ್ರತಿಯೊಂದು ಘಟಕದಲ್ಲಿಯೂ ವಿದ್ಯಾರ್ಥಿ ಸಾಧಿಸುವ ಕಲಿಕಾ ಸಾಧನೆಗಳು ವಿಕಾಸಗೊಂಡು ತರಗತಿಯ ಕೊನೆಯಲ್ಲಿ ಗಳಿಸುವ ಕಲಿಕಾ ಸಾಧನೆಗಳಾಗುತ್ತವೆ. ಅನಂತರ ನಿಗದಿತ ಶಿಕ್ಷಣ ಕಾಲಾವಧಿಯ ಕಲಿಕಾ ಸಾಧನೆಗಳಾಗಿ ಅವು ಬೆಳೆಯುತ್ತವೆ. ಕಲಿಕಾ ಸಾಧನೆಗಳನ್ನು ನಿರೀಕ್ಷಣೆ ಮಾಡಲೂ (observable) ಅಳೆಯಲೂ (measurable) ಸಾಧ್ಯವಿರುವುದು ಅದರ ವೈಶಿಷ್ಟ್ಯವಾಗಿದೆ. ಪ್ರತಿಯೊಂದು ಘಟಕದ, ತರಗತಿಯ, ಅವಧಿಯ ಕೊನೆಯಲ್ಲಿ ಮಗು ಗಳಿಸಬೇಕಾದ ಜ್ಞಾನ ಕೌಶಲ್ಯ, ಮೌಲ್ಯ, ಮನೋಭಾವಗಳನ್ನು ಗಳಿಸಲಾಗಿದೆಯೇ ಎಂದು ಮೌಲ್ಯಮಾಪನ ಮಾಡಲು ಕಲಿಕಾಸಾಧನೆಗಳ ವಿಶ್ಲೇಷಣೆಯಿಂದ ಸಾಧ್ಯ. ಪಠ್ಯಕ್ರಮದ ಸರಿಯಾದ ವಿನಿಮಯದ ಮೂಲಕ ಎಲ್ಲ ಮಕ್ಕಳ ಕಲಿಕಾ ಸಾಧನೆಗಳನ್ನು ದೃಢಪಡಿಸಲು ನಮಗೆ ಸಾಧ್ಯವಾಗಬೇಕು.

**ಕಲಿಕಾ ಸಾಧನೆಗಳ ವೈಶಿಷ್ಟ್ಯಗಳನ್ನು ಹೀಗೆ ಸಂಗ್ರಹಿಸಬಹುದು.**

- ವಿಷಯನಿಷ್ಠವಾದ ಕಲಿಕೆಯ ಮೂಲಕ ವಿದ್ಯಾರ್ಥಿ ಗಳಿಸಿಕೊಳ್ಳಬೇಕಾದ ಜ್ಞಾನ (knowledge), ಕೌಶಲ್ಯ (skills), ಮನೋಭಾವ ಮತ್ತು ಮೌಲ್ಯ (attitude and value)ಗಳನ್ನು ಕಲಿಕಾ ಸಾಧನೆ ಒಳಗೊಂಡಿರುತ್ತದೆ.
- ಕಲಿಕಾ ಸಾಧನೆಗಳನ್ನು ನಿರೀಕ್ಷಣೆ ಮಾಡಲೂ, ಅಳೆಯಲೂ ಸಾಧ್ಯವಿದೆ.
- ಹೃಸ್ವ ಮತ್ತು ದೀರ್ಘಕಾಲದಲ್ಲಿ ಗಳಿಸುವ ವಿಭಿನ್ನ ಕಲಿಕಾ ಸಾಧನೆಗಳಿವೆ.

## 1.5 ಕಲಿಕಾ ಸಂಪನ್ಮೂಲಗಳು ಮತ್ತು ಕಲಿಕಾ ವ್ಯವಸ್ಥೆಗಳು

ಪಠ್ಯಕ್ರಮವನ್ನು ವಿನಿಮಯ ಮಾಡಲು ಬಳಸುವ ವಿವಿಧ ಘಟಕಗಳೇ ಕಲಿಕಾ ಸಂಪನ್ಮೂಲಗಳು. ಕಲಿಕಾ ಪ್ರಕ್ರಿಯೆಯ ಪೂರ್ಣತೆಗೆ ಕಲಿಕಾ ಸಂಪನ್ಮೂಲಗಳನ್ನು ಉಪಯೋಗಿಸಿಯೇ ತೀರಬೇಕು.

- ಗ್ರಂಥಾಲಯ
- ಪ್ರಯೋಗಾಲಯ (ಭಾಷೆ, ಗಣಿತ, ವಿಜ್ಞಾನ)
- ಕಲಿಕೋಪಕರಣಗಳು
- ಡಿಸ್‌ಪ್ಲೇ ಫಲಕಗಳು
- ಕಂಪ್ಯೂಟರ್ ಲ್ಯಾಬ್
- ಬಹುಮಾಧ್ಯಮ ಉಪಕರಣಗಳು

ಇದರ ಹೊರತಾಗಿ ಮಕ್ಕಳ ಕಲಿಕಾ ಸಾಮರ್ಥ್ಯವನ್ನು ಪ್ರಕಟಿಸುವ ಅನೇಕ ವೇದಿಕೆಗಳು ಶಾಲೆಗಳಲ್ಲಿವೆಯಲ್ಲವೇ? ಇವುಗಳನ್ನು ಕಲಿಕಾ ಸಾಧನೆಗಳನ್ನು ಗಳಿಸಿಕೊಳ್ಳಲು ಬಳಸಿಕೊಳ್ಳಬಹುದು.

- ಬಾಲಸಭೆ
- ಅಸೆಂಬ್ಲಿ
- ಕ್ಲಬ್‌ಗಳು
- ಚರ್ಚಾ ಕೂಟಗಳು
- ಶೈಕ್ಷಣಿಕ ಪ್ರವಾಸಗಳು
- ಸ್ವಯಂ ಸೇವಾ ಸಂಸ್ಥೆಗಳು (SPC, NSS, Scout, NCC)

ಮಕ್ಕಳ ಪರಿಪೂರ್ಣವಾದ ಬೆಳವಣಿಗೆಗೆ ಇಂತಹ ಘಟಕಗಳು ಅತಿ ಅಗತ್ಯವಾಗಿವೆ.

## 1.6 ಕಲೆ ಮತ್ತು ವೃತ್ತಿಪರಿಚಯ ಕಲಿಕೆ

### ಕಲೆಯ ಕಲಿಕೆ

ಸೃಜನಶೀಲತೆ, ನಿರೀಕ್ಷಣ ಸಾಮರ್ಥ್ಯ ಮತ್ತು ಬುದ್ಧಿಮತ್ತೆಯನ್ನು ಮಕ್ಕಳಲ್ಲಿ ಬೆಳೆಸಲು ಕಲೆಯ ಕಲಿಕೆ ಅತಿ ಅಗತ್ಯವಾಗಿದೆ. ಹೊಸ ಪಠ್ಯಕ್ರಮದಲ್ಲಿ ಸಾಮಾನ್ಯ ವಿಷಯಗಳೊಂದಿಗೆ ಕಲೆಯ ಕಲಿಕೆಗೂ ಮಹತ್ವವನ್ನು ನೀಡಲಾಗಿದೆ. ಶಾಲಾ ಪಠ್ಯಕ್ರಮದಲ್ಲಿ ಕಲೆಯ ಕಲಿಕೆಯ ವ್ಯಾಪ್ತಿಯಲ್ಲಿ ಸಂಗೀತ, ನೃತ್ಯ, ಚಿತ್ರರಚನೆ, ಶಿಲ್ಪರಚನೆ, ನಾಟಕ, ಸಿನಿಮಾ ಮೊದಲಾದ ಪ್ರಕಾರಗಳನ್ನು ಸೇರಿಸಿಕೊಳ್ಳಲಾಗಿದೆ. ಮಕ್ಕಳ ಪ್ರತಿಭೆಗಳನ್ನು ಗುರುತಿಸಿ, ಪ್ರೋತ್ಸಾಹವನ್ನು ನೀಡುವುದು ಅಗತ್ಯವಾಗಿದೆ.

### ಕಲೆಯ ಕಲಿಕೆಯ ಸಾಮಾನ್ಯ ಉದ್ದೇಶಗಳು

- ವಿದ್ಯಾರ್ಥಿಯ ಸಹಜವಾದ ಕಲೆಯ ಅಭಿರುಚಿಗಳನ್ನು ಪ್ರೋತ್ಸಾಹಿಸುವುದು.
- ವಿವಿಧ ಕಲೆಗಳನ್ನು ತಿಳಿದುಕೊಂಡು, ಮಕ್ಕಳ ಅಭಿರುಚಿಗೆ ಹೊಂದಿಕೊಂಡು ಕಲೆಗಳನ್ನು ಅಭ್ಯಾಸ ಮಾಡಲು ಅವಕಾಶಗಳನ್ನು ಒದಗಿಸುವುದು.
- ವಿವಿಧ ಕಲೆಗಳನ್ನು ಆಸ್ವಾದಿಸಿ, ಕಲೆಯ ಸೌಂದರ್ಯವನ್ನು ತಿಳಿದುಕೊಳ್ಳುವುದು.
- ಕಲೆಯ ಆಸ್ವಾದನೆ ಮಾಡಿ ಸಮಾಜ ಜೀವನದಲ್ಲಿ ಮಾನವೀಯ ದೃಷ್ಟಿಕೋನಗಳನ್ನು ಮೂಡಿಸುವುದು.
- ಸಾಂಸ್ಕೃತಿಕ ವೈವಿಧ್ಯವನ್ನು ಅರಿತುಕೊಂಡು ಸಂಸ್ಕೃತಿ ಪ್ರೇಮವನ್ನು ಬೆಳಸುವುದು.
- ಕಲೆಯ ಸತ್ವವನ್ನು ಅರಿತುಕೊಂಡು ಹೊಸ ಚಿಂತನೆಗಳನ್ನು ಮಾಡುವುದು ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸುವುದು.
- ಕಲೆಯನ್ನು ಬಳಸಿ ಇತರ ವಿಷಯಗಳ ಕಲಿಕೆಯನ್ನು ಫಲಪ್ರದಗೊಳಿಸುವುದು (Art applied learning)

- ಬಹುಮುಖವಾದ ಬೌದ್ಧಿಕ ವಿಕಾಸದ ಸಾಧ್ಯತೆಗಳನ್ನು ಉತ್ತಮ ಪಡಿಸುವುದು.
- ವಿಭಿನ್ನ ಕೌಶಲ್ಯಗಳಿರುವ ವಿದ್ಯಾರ್ಥಿಗಳನ್ನು ಕಲಿಕಾ ಚಟುವಟಿಕೆಗಳಿಗೆ ಆಕರ್ಷಿಸುವುದು.
- ಮಕ್ಕಳ ಆಸ್ವಾದನೆಯ ಮಟ್ಟವನ್ನು ಉತ್ತಮಪಡಿಸುವುದು.

### ವೃತ್ತಿ ಪರಿಚಯ

ಭಾವನಾತ್ಮಕ ಮತ್ತು ವಿಜ್ಞಾನ ಕ್ಷೇತ್ರಗಳ ಸಮನ್ವಯ ಹಾಗೂ ಪ್ರಗತಿಗಾಗಿ ವೃತ್ತಿ ಪರಿಚಯ ಶಿಕ್ಷಣ ಅನಿವಾರ್ಯವಾಗಿದೆ. ಪ್ರತಿಯೊಂದು ವೃತ್ತಿ ಪರಿಚಯ ತರಗತಿಯ ಅಡಿಪಾಯವು ಮಾನವ ಸಂಪನ್ಮೂಲದ ಪ್ರಗತಿಯಾಗಬೇಕು. ಎಲ್ಲ ಪ್ರಜೆಗಳ ಸಾಮರ್ಥ್ಯಗಳನ್ನೂ, ಕೌಶಲ್ಯಗಳನ್ನೂ ರಾಷ್ಟ್ರ ನಿರ್ಮಾಣಕ್ಕಾಗಿ ಬಳಸುವಂತೆ ಬೆಳೆಸುವುದೇ ಮಾನವ ಸಂಪನ್ಮೂಲ ಪ್ರಗತಿಯ ಉದ್ದೇಶವಾಗಿದೆ. ವೃತ್ತಿಯಲ್ಲಿ ಆಸಕ್ತಿ ಮೂಡಿಸುವುದು, ವ್ಯಕ್ತಿಗಳನ್ನು ಹೊಸ ವೃತ್ತಿ ಸಂಸ್ಕೃತಿಯ ವಕ್ತಾರರನ್ನಾಗಿ ಮಾಡುವುದು ವೃತ್ತಿ ಕಲಿಕೆಯ ಪ್ರಮುಖ ಉದ್ದೇಶಗಳಾಗಿವೆ.

- ಮಾನವ ಸಂಪನ್ಮೂಲದ ಅಭಿವೃದ್ಧಿ
- ರಾಷ್ಟ್ರೀಯ ಅಭಿವೃದ್ಧಿ
- ವೃತ್ತಿ ಸನ್ನದ್ಧತೆ
- ಉತ್ಪಾದನ ವಲಯದಲ್ಲಿ ಸ್ವಾಯತ್ತತೆ
- ಸಂತುಲಿತ ವ್ಯಕ್ತಿತ್ವ ವಿಕಾಸ
- ಮೌಲ್ಯ ಹಾಗೂ ಮನೋಭಾವಗಳ ಬೆಳವಣಿಗೆ

ಕಲೆ ಮತ್ತು ವೃತ್ತಿ ಕಲಿಕೆಗೆ ಪ್ರಾಧಾನ್ಯವನ್ನು ನೀಡಿ ಪಠ್ಯಕ್ರಮವನ್ನು ರೂಪಿಸಬೇಕು. ಇವುಗಳ ಸಾಧ್ಯತೆಗಳನ್ನು ಉಳಿಸಿಕೊಂಡು ವಿಭಿನ್ನ ವಿಷಯಗಳೊಂದಿಗೆ ವಿನಿಮಯ ಮಾಡುವುದು ಅಗತ್ಯವಾಗಿದೆ.

## 1.7 ಆರೋಗ್ಯ ಮತ್ತು ಕ್ರೀಡಾ ಶಿಕ್ಷಣ

ಪ್ರಾಥಮಿಕ ಶಾಲಾ ಹಂತವು ಮಕ್ಕಳ ದೈಹಿಕ, ಮಾನಸಿಕ ಬೆಳವಣಿಗೆಯ ಮುಖ್ಯ ಹಂತವಾಗಿದೆ. ಆದುದರಿಂದ ಈ ಹಂತದಲ್ಲಿ ಎಲ್ಲ ಮಕ್ಕಳಿಗೆ ಆರೋಗ್ಯ ಮತ್ತು ಕ್ರೀಡಾ ಶಿಕ್ಷಣದ ಅನುಭವಗಳು ಲಭಿಸುತ್ತವೆ ಎಂಬುದನ್ನು ದೃಢಗೊಳಿಸಬೇಕು. ಮಗುವಿನ ಆರೋಗ್ಯ ಮತ್ತು ಕ್ರೀಡಾ ಮನೋಭಾವವನ್ನು ಪೋಷಿಸುವುದು, ಆರೋಗ್ಯಕರ ಜೀವನ ಶೈಲಿಯನ್ನು ರೂಪಿಸುವುದು ಈ ಕಲಿಕೆಯ ಪ್ರಧಾನ ಉದ್ದೇಶವಾಗಿದೆ. ಆರೋಗ್ಯ ಮತ್ತು ಕ್ರೀಡಾ ಶಿಕ್ಷಣದ ಸಾಧ್ಯತೆಗಳನ್ನು ಉಳಿಸಿಕೊಂಡು ವಿಭಿನ್ನ ವಿಷಯಗಳನ್ನು ವಿನಿಮಯ ಮಾಡುವುದು ಅಗತ್ಯವಾಗಿದೆ.

### ಆರೋಗ್ಯ ಮತ್ತು ಕ್ರೀಡಾ ಕಲಿಕೆಯ ಪ್ರಧಾನ ಉದ್ದೇಶಗಳು

- ವಿವಿಧ ಸಂದರ್ಭಗಳಲ್ಲಿ ಯೋಗ್ಯವಾದ ರೀತಿಯಲ್ಲಿ ದೇಹವನ್ನು ಚಲಿಸುವಂತೆ ಮಾಡುವ ಕೌಶಲ್ಯವನ್ನು ಸಂಪಾದಿಸುವುದು.
- ದೇಹದ ಚಲನೆಯನ್ನು ನಿಯಂತ್ರಿಸುವ ವಿವಿಧ ಹಂತಗಳನ್ನು ತಿಳಿದುಕೊಂಡು, ಅವುಗಳನ್ನು ಸೃಜನಾತ್ಮಕ ಚಲನೆಗಳ ಮಾಧ್ಯಮವಾಗಿ ಅಭಿವೃದ್ಧಿಪಡಿಸುವುದು.
- ಸಾಮಾಜಿಕವಾದ ಜವಾಬ್ದಾರಿಗಳನ್ನು ಅರಿತುಕೊಂಡು, ಪ್ರಜಾಪ್ರಭುತ್ವ ರೀತಿಯ ಜೀವನ ಶೈಲಿಯನ್ನು ರೂಢಿಸಿಕೊಳ್ಳುವುದು ಮತ್ತು ಆಸ್ವಾದಿಸುವುದು.
- ಮಗುವಿನ ಸರ್ವತೋಮುಖ ಬೆಳವಣಿಗೆಯನ್ನು ದೃಢಪಡಿಸುವುದು.

## 1.8 ಒಳಗೊಂಡಿರುವ ಶಿಕ್ಷಣ

## (Inclusive Education)

*ಶಾಲೆಯಲ್ಲಿ ಉತ್ತಮ ಪ್ರದರ್ಶನವನ್ನು ನೀಡುವ ತಮ್ಮ ಸಹಪಾಠಿಗೆ ವಾಸವಾಗಲು ಮನೆಯಿಲ್ಲವೆಂದೂ, ರಸ್ತೆ ಬದಿಯ ಪೈಪಿನಡಿಯಲ್ಲಿ ಕಟ್ಟಿದ ಡೇರೆಯೇ ಅವನ ಮನೆಯೆಂದೂ ತಿಳಿದಾಗ ಅದು ಚರ್ಚೆಗೆ ಗ್ರಾಸವಾಯಿತು. ಕಷ್ಟಗಳನ್ನು ಪರಸ್ಪರ ಹಂಚಿಕೊಳ್ಳುವುದರಿಂದ ಮಾತ್ರ ಪರಿಹಾರ ಉಂಟಾಗುವುದಿಲ್ಲ ಎಂದು ಅರಿತುಕೊಂಡ ವಿದ್ಯಾರ್ಥಿಗಳು ಅಧ್ಯಾಪಕರ ಸಹಾಯದೊಂದಿಗೆ ಹಣವನ್ನು ಸಂಗ್ರಹಿಸಿ ಗೆಳೆಯನಿಗೆ ಮನೆ ನಿರ್ಮಿಸಿಕೊಟ್ಟು ಮಾದರಿಯಾದರು.*

*(ಒಂದು ಶಾಲೆಯ ಅನುಭವ)*

ತರಗತಿ ಕೋಣೆಯಲ್ಲಿ ಎಲ್ಲರನ್ನೂ ಒಂದುಗೂಡಿಸುವ, ಯಾರನ್ನೂ ಹೊರ ಹಾಕದ ಕಲಿಕೆಯ ಒಂದು ವಾತಾವರಣವನ್ನು ಸೃಷ್ಟಿಸಬೇಕಾಗಿದೆ. ನಮ್ಮ ಶಾಲೆಗಳಲ್ಲಿ ಮುಖ್ಯವಾಗಿ ಎರಡು ವಿಭಾಗಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನೂ, ಸಹಾಯವನ್ನೂ ನೀಡಿ ನ್ಯಾಯಯುತವಾದ ಗುಣಮಟ್ಟದ ಶಿಕ್ಷಣವನ್ನು (Equitable Quality Education) ದೃಢಗೊಳಿಸಬೇಕಾಗಿದೆ.

**ವಿಶೇಷ ಗಮನ, ಕಲಿಕಾ ಸಹಾಯ ಮತ್ತು ರಕ್ಷಣೆ ಅಗತ್ಯವಿರುವುದು ಯಾರಿಗೆ?**

(ಎ) ಸಾಮಾಜಿಕ ಮತ್ತು ಆರ್ಥಿಕ ಕಾರಣಗಳಿಗಾಗಿ ಹೊರಹಾಕಲ್ಪಟ್ಟವರ ಮಕ್ಕಳು

- ವಿಭಿನ್ನ ಮತ್ತು ವೈವಿಧ್ಯಪೂರ್ಣವಾದ ಸಾಮಾಜಿಕ, ಸಾಂಸ್ಕೃತಿಕ, ಕೌಟುಂಬಿಕ ಹಿನ್ನೆಲೆಯಲ್ಲಿ ತಾರತಮ್ಯವನ್ನು ಅನುಭವಿಸುವ ಮಕ್ಕಳು, ತೀವ್ರ ಬಡತನವನ್ನು ಎದುರಿಸುವವರು, ಬುಡಕಟ್ಟು ಆದಿವಾಸಿಗಳು, ಹೆಣ್ಮಕ್ಕಳು, ಪರಿಶಿಷ್ಟ ಜಾತಿ, ಪಂಗಡಗಳಿಗೆ ಸೇರಿದವರು, ಬೇರೆ ರಾಜ್ಯಗಳಿಂದ ವಲಸೆ ಬಂದವರು, ಖಾಯಂ ಮನೆಗಳಿಲ್ಲದವರು–ಹೀಗೆ ಅನೇಕ ಸಂಕಷ್ಟಗಳನ್ನು ಎದುರಿಸುವವರು ಈ ವಿಭಾಗದಲ್ಲಿ ಸೇರುತ್ತಾರೆ.

  ವಿಭಿನ್ನತೆಗಳನ್ನು, ಪರಿಮಿತಿಗಳನ್ನು ಅರಿತುಕೊಂಡು, ಅವರನ್ನು ಗುರುತಿಸಿ ಗೌರವಿಸಬೇಕಾದುದು ನಮ್ಮ ಸಮೀಪನವಾಗಿರಬೇಕು. ಶಾಲೆಯ ಒಗ್ಗಟ್ಟಿನ ಕಾರ್ಯ ಚಟುವಟಿಕೆಗಳ ಮೂಲಕ ಇಂಥವರ ಅನೇಕ ಸಮಸ್ಯೆಗಳನ್ನು ಪರಿಹರಿಸಬಹುದು.

(ಬಿ) ದೈಹಿಕ ಹಾಗೂ ಮಾನಸಿಕ ಸವಾಲುಗಳನ್ನು ಎದುರಿಸುವವರು

ದೈಹಿಕ ಹಾಗೂ ಮಾನಸಿಕ ಸವಾಲುಗಳನ್ನು ಎದುರಿಸುವವರಿಗೂ, ಕಲಿಕೆಯಲ್ಲಿ ಕಷ್ಟವನ್ನು ಅನುಭವಿಸುವ ಮಕ್ಕಳಿಗೂ ಪ್ರತ್ಯೇಕವಾದ ಕಲಿಕಾ ವಿಧಾನದ ಅಗತ್ಯಗಳಿವೆ (special educational needs). ಕಿವುಡುತನ, ದೃಷ್ಟಿದೋಷ, ಬೌದ್ಧಿಕ ಮತ್ತು ಚಲನೆಯ ಪರಿಮಿತಿಗಳು, ಓಟಿಸಂ, ಸೆರೆಬ್ರಲ್ ಪಾಲ್ಸಿ, ಬಹುಮುಖವಾದ ವೈಕಲ್ಯಗಳು, ಭಾವನಾತ್ಮಕವಾದ ಅಸಮತೋಲನವಿರುವ ಮಕ್ಕಳು, ಗಮನಹರಿಸುವಲ್ಲಿ ಪರಿಮಿತಿಗಳಿರುವ ಮಕ್ಕಳು ಮುಂತಾದವರು ವಿಭಾಗದಲ್ಲಿ ಸೇರುತ್ತಾರೆ.

**ಪಠ್ಯಕ್ರಮದ ವಿನಿಮಯ ಹಾದಿಯಲ್ಲಿ ನಾವು ಏನನ್ನು ಅನುಸರಿಸಬೇಕು?**

- ಕಲಿಕೆಯ ಅಗತ್ಯಗಳು, ಅಭಿರುಚಿ ಇವುಗಳನ್ನು ಪರಿಗಣಿಸಿ ಕಲಿಕಾ ಚಟುವಟಿಕೆಗಳ ಯೋಜನೆಗಳು.
- ಕಲಿಕಾ ಚಟುವಟಿಕೆಗಳಲ್ಲಿ ಎಲ್ಲರ ಭಾಗವಹಿಸುವಿಕೆ ಇರುವಂತೆ ಪಾಠಯೋಜನೆಯಲ್ಲಿ ಹೊಂದಾಣಿಕೆ.
- ವಿಭಿನ್ನವಾದ ಕಲಿಕಾ ವೇಗ, ಕಲಿಕಾ ಶೈಲಿ ಇವುಗಳನ್ನು ಪರಿಗಣಿಸಿಕೊಂಡು ವಿವಿಧ ಇಂದ್ರಿಯಾಧಾರಿತ ಸಮೀಪನ (multisensory approach) ಅನುಷ್ಠಾನ.

- ಪರಿಹಾರ ಚಟುವಟಿಕೆಗಳು (Remedial Practices), ಪೋಷಕ ಚಟುವಟಿಕೆಗಳು (Enrichment Practice) ಇವುಗಳನ್ನು ಪ್ರತಿಯೊಬ್ಬ ಮಗುವಿನ ಅಗತ್ಯವನ್ನು ಅನುಸರಿಸಿ ಅನುಷ್ಠಾನಗೊಳಿಸುವುದು.
- ವಿವಿಧ ಮೌಲ್ಯಮಾಪನ ಸಾಧ್ಯತೆಗಳನ್ನು ಜಾರಿಗೊಳಿಸುವುದು.
- ಸಂಪನ್ಮೂಲ ಅಧ್ಯಾಪಕರ ಹಾಗೂ ಇತರ ತಜ್ಞರ ಸಹಾಯವನ್ನು ದೃಢಪಡಿಸುವುದು.
- ಮಗುವಿನ ಕಲಿಕೆ, ಸಂರಕ್ಷಣೆ ಮೊದಲಾದ ವಿಷಯಗಳಲ್ಲಿ ಹೆತ್ತವರ ನಿರಂತರ ಬೆಂಬಲವನ್ನು ದೃಢಪಡಿಸುವುದು.

ಈ ಎರಡು ವಿಭಾಗದ ಮಕ್ಕಳಲ್ಲದೆ, ವಿಶೇಷ ಗಮನ ಹಾಗೂ ಪರಿಗಣನೆ ನೀಡಬೇಕಾದ ಪ್ರತ್ಯೇಕ ಅಭಿರುಚಿ ಮತ್ತು ಸಾಮರ್ಥ್ಯಗಳಿರುವ ಮಕ್ಕಳೂ (Gifted Childrens) ಇದ್ದಾರೆ. ಹೀಗೆ ಎಲ್ಲ ವಿಭಾಗದ ಮಕ್ಕಳನ್ನು ಒಳಗೊಳ್ಳುವ ರೀತಿಯಲ್ಲಿ ಶಾಲೆಯ ಚಟುವಟಿಕೆಗಳನ್ನೂ ಭೌತಿಕ ಹಿನ್ನೆಲೆಗಳನ್ನೂ ಶಾಸ್ತ್ರೀಯವಾಗಿ ರೂಪಿಸಬೇಕಾಗಿದೆ.

## 1.9 ಮಾಹಿತಿ ತಂತ್ರಜ್ಞಾನ – ಸಾಧ್ಯತೆ

ಮಾಹಿತಿ ವಿನಿಮಯಕ್ಕೆ ಅನೇಕ ವ್ಯವಸ್ಥೆಗಳು ಇಂದು ಬಳಕೆಯಲ್ಲಿವೆ ಅಲ್ಲವೇ? **ICT** ಬಳಕೆಯು ಇವುಗಳಲ್ಲಿ ತುಂಬ ಪ್ರಯೋಜನಕರವಾದುದು. ಮಕ್ಕಳು ಇದರ ತಂತ್ರಜ್ಞಾನವನ್ನು ಹೆಚ್ಚು ಕಡಿಮೆ ತಿಳಿದವರೇ ಆಗಿದ್ದಾರೆ. ಈ ತಿಳುವಳಿಕೆಯನ್ನು ತರಗತಿಯ ಕಲಿಕೆಗೆ ಬಳಸಿಕೊಳ್ಳಬೇಕಾಗಿದೆ. ಕಲಿಕೆಯನ್ನು ಅನಾಯಾಸಕರ ಹಾಗೂ ಸಂತೋಷದಾಯಕವನ್ನಾಗಿಸಲು ಇದರಿಂದ ಸಾಧ್ಯ.

### ಅಗತ್ಯ

ಪಠ್ಯಕ್ರಮ ವಿನಿಮಯದ ನಿರ್ದಿಷ್ಟ ಹಂತದಲ್ಲಿ ಯೋಗ್ಯವಾದ **ICT** ಸಾಮಗ್ರಿಗಳನ್ನು ಅಗತ್ಯವಾದರೆ ಮಾತ್ರ ಬಳಸಿದರೆ ಸಾಕು. ಮುದ್ರಣ ಮಾಧ್ಯಮದಲ್ಲಿರುವ ಪಾಠಪುಸ್ತಕಗಳ ಮಿತಿಗಳಾದ ಚಲನಶೀಲತೆ, ಶಬ್ದಗಳನ್ನು ಕೇಳಿಸಲು ಆಗದಿರುವುದು ಮೊದಲಾದ ಕೊರತೆಗಳನ್ನು **ICT** ಸಾಧ್ಯತೆಗಳ ಮೂಲಕ ಪರಿಹರಿಸಬಹುದು. **ICT** ಬಳಕೆಯ ಅಗತ್ಯ ಯಾವ ಯಾವ ಸಂದರ್ಭಗಳಲ್ಲಿ ಬೇಕಾಗಿದೆ ಎಂದೂ ಅದರ ಪ್ರಯೋಜನವನ್ನು ಹೇಗೆ ಪಡೆಯಬಹುದೆಂದೂ ನಿರ್ಧರಿಸಲು ಅಧ್ಯಾಪಕರಿಗೆ ಸಾಧ್ಯವಾಗಬೇಕು.

### ಹೊಂದಾಣಿಕೆ

ಮಗುವಿನ ಬುದ್ಧಿಯನ್ನೂ ಪ್ರತಿಭೆಯನ್ನೂ ಪ್ರಚೋದಿಸುವ **ICT** ಸಾಧ್ಯತೆಗಳು ಬೇಕಾಗಿವೆ. ಜಿಜ್ಞಾಸೆ ಮತ್ತು ಆಕಾಂಕ್ಷೆಯೊಂದಿಗೆ ಪಠ್ಯ ವಿಷಯದ ಬಗ್ಗೆ ಆಸಕ್ತಿ ಮೂಡುವಂತೆ **ICT** ಯನ್ನು ಬಳಸಬೇಕು. ಇಂದ್ರಿಯ ವೈಕಲ್ಯವುಳ್ಳವರಿಗೆ ಇದರ ಪ್ರಯೋಜನ ಹೆಚ್ಚು. ಶಬ್ದ ಹಾಗೂ ದೃಶ್ಯಗಳಿಂದ ವಿಷಯಗಳನ್ನು ಅನುಭವಕ್ಕೆ ತರಲು **ICT** ಪ್ರಯೋಜನಕಾರಿಯಾಗಿದೆ. ವಿಭಿನ್ನವಾದ ಕಲಿಕೆಯ ಶೈಲಿಗಳನ್ನು ಅಳವಡಿಸಿಕೊಂಡಿರುವ ಕಲಿಕೆಯ ಅನುಭವಗಳನ್ನು ಒದಗಿಸಲು ಇದು ಸಹಾಯಕವಾಗಿದೆ.

### ವಿಶ್ವಸನೀಯತೆ

ಕಲಿಕಾ ಸಾಮಗ್ರಿಗಳ ಬಗೆಗಿನ ವಿಶ್ವಸನೀಯತೆಯನ್ನು ದೃಢಪಡಿಸಬೇಕು. ಸರಕಾರಿ ಇಲಾಖೆಗಳ ಸೈಟುಗಳು, ಶೈಕ್ಷಣಿಕ ವೆಬ್‌ಸೈಟುಗಳು, ಪೋರ್ಟಲುಗಳು, ಬ್ಲಾಗುಗಳು, ಸಾಮಾಜಿಕ ಜಾಲ ತಾಣಗಳು ಮೊದಲಾದವುಗಳಿಂದ ಮಾಹಿತಿಗಳನ್ನು ಸಂಗ್ರಹಿಸುವಾಗ ಅದು ಅಧಿಕೃತವೇ ಎಂದು ದೃಢಪಡಿಸಬೇಕು. ತರಗತಿ ಕೋಣೆಯಲ್ಲಿ ಬಳಸುವ ಸಾಮಗ್ರಿಗಳ ಪ್ರಾಯೋಗಿಕ ನೆಲೆಯನ್ನು ದೃಢಪಡಿಸಬೇಕು. ಇಂತಹ ಸಾಮಗ್ರಿಗಳು ಕಾರ್ಯ ನಿರ್ವಹಿಸುವುದಕ್ಕೆ ಯೋಗ್ಯವಾದ ಸೋಫ್ಟ್‌ವೇರ್‌ಗಳು ಸುಲಭದಲ್ಲಿ ದೊರಕುವರಥದ್ದೂ, ಉಪಯೋಗಕ್ಕೆ ಸಿಗುವಂಥದ್ದೂ ಆಗಿರಬೇಕು. **ICT** ಸಾಧ್ಯತೆಗಳು ಮಗುವಿನ ವಯಸ್ಸು, ಮಾನಸಿಕ ಸ್ಥಿತಿ ಇವುಗಳಿಗೆ ಹೊಂದಿಕೆಯಾಗುವಂತಿರಬೇಕು.

## 1.10 ಮೌಲ್ಯಗಳು, ಮನೋಧರ್ಮಗಳು, ಕಾಳಜಿ ಇವುಗಳನ್ನು ಬೆಳೆಸುವ ವಲಯಗಳು

ವಿದ್ಯಾರ್ಥಿಯಲ್ಲಿ ಮಾನವೀಯ ಮೌಲ್ಯ ಹಾಗೂ ಸಾಂವಿಧಾನಿಕ ಮೌಲ್ಯಗಳ ಕುರಿತು ಅರಿವು ಮೂಡಿಸುವುದು, ಸಾಮಾಜಿಕ ಜೀವನವನ್ನು ಬಲಗೊಳಿಸುವ ಮನೋಧರ್ಮವನ್ನು ಮೂಡಿಸುವುದು, ಸಾಮಾಜಿಕ ಕಾಳಜಿಯನ್ನು ಬೆಳೆಸುವುದು ಮೊದಲಾದವು ಪಠ್ಯ ಕ್ರಮದ ಪ್ರಥಮ ಪರಿಗಣನೆಯ ವಿಷಯಗಳಾಗಿವೆ. ಇವುಗಳನ್ನು ಬೆಳೆಸಲು ಸೂಚಿಸಲಾದ ಆಶಯ ವಲಯಗಳನ್ನು ಕೆಳಗೆ ನೀಡಲಾಗಿದೆ.

### ಪ್ರಜಾಪ್ರಭುತ್ವ ಪ್ರಜ್ಞೆ

ವಿವಿಧ ವಿಷಯಗಳನ್ನು ಆಯ್ಕೆ ಮಾಡುವಾಗ ಪ್ರಜಾಪ್ರಭುತ್ವ ವ್ಯವಸ್ಥೆಗೆ ಸಂಬಂಧಿಸಿದ ದೃಷ್ಟಿಕೋನಗಳನ್ನು ಪರಿಗಣಿಸಬೇಕು. ಕಲಿಕಾ ಚಟುವಟಿಕೆಗಳ ಯೋಜನೆಯಲ್ಲಿಯೂ ವಿನಿಮಯ ಪ್ರಕ್ರಿಯೆಯಲ್ಲಿಯೂ ಪ್ರಜಾಪ್ರಭುತ್ವದ ಸಮೀಪನ ಇರಬೇಕಾಗಿದೆ. ಪ್ರಜಾಪ್ರಭುತ್ವ ರೀತಿಯ ತರಗತಿ, ಶಾಲಾ ಪ್ರದೇಶಗಳು (ಪ್ರಜಾಪ್ರಭುತ್ವ ರೀತಿಯ ವೇದಿಕೆಗಳು), ಪ್ರಜಾಪ್ರಭುತ್ವ ಜೀವನ ಸಮೀಪನ ಮೊದಲಾದವುಗಳಿಂದ ಈ ಪ್ರಜ್ಞೆಯನ್ನು ಬೆಳೆಸುವುದು ಪಠ್ಯಕ್ರಮದ ಉದ್ದೇಶವಾಗಿದೆ.

### ಸಾಂವಿಧಾನಿಕ ಮೌಲ್ಯಗಳು

ನಮ್ಮ ಸಂವಿಧಾನವು ಎತ್ತಿ ಹಿಡಿದಿರುವ ಮೌಲ್ಯಗಳನ್ನೂ ಗುರಿಗಳನ್ನೂ ಪಠ್ಯಕ್ರಮವು ಪ್ರತಿಫಲಿಸುವಂತಿರಬೇಕು. ಸಾಂವಿಧಾನಿಕ ಮೌಲ್ಯಗಳನ್ನು ಸಾಧಿಸುವುದಕ್ಕಾಗಿ ವಿದ್ಯಾರ್ಥಿಗಳನ್ನು ಸಮರ್ಥರನ್ನಾಗಿಸುವ ಪಾಠಗಳನ್ನೂ ವಿನಿಮಯ ಪ್ರಕ್ರಿಯೆಗಳನ್ನೂ ಆಯ್ಕೆ ಮಾಡುವತ್ತ ಗಮನಿಸಬೇಕು.

### ಜಾತ್ಯತೀತ ಮನೋಭಾವ

ಜಾತ್ಯತೀತ ಮನೋಧರ್ಮವನ್ನು ಬೆಳೆಸುವಂಥ ವಿಷಯಗಳನ್ನು ಪಾಠಪುಸ್ತಕದಲ್ಲಿ ಅಳವಡಿಸಿಕೊಂಡು, ಯೋಗ್ಯವಾದ ಕಲಿಕಾ ರೀತಿಯನ್ನು ಸ್ವೀಕರಿಸಬೇಕು.

### ಸಹಿಷ್ಣುತೆ

ಭಿನ್ನಾಭಿಪ್ರಾಯವುಳ್ಳವರನ್ನೂ ಸಹನೆಯಿಂದ ಕಾಣುವುದು ಎಂಬ ಮೂಲ ತತ್ವವನ್ನು ಪಠ್ಯಕ್ರಮವು ಗುರಿಯಾಗಿಸಬೇಕು.

### ಕ್ರಿಯಾಶೀಲ – ಸೃಜನಶೀಲ ಚಿಂತನೆ

ವಿದ್ಯಾರ್ಥಿಗಳಲ್ಲಿ ಕ್ರಿಯಾಶೀಲವೂ ಸೃಜನಶೀಲವೂ ಆಗಿರುವ ಚಿಂತನೆಗಳನ್ನೂ, ಸಂಶೋಧನ ಬುದ್ಧಿಯನ್ನೂ ಬೆಳೆಸಬೇಕಾಗಿದೆ. ಪಠ್ಯಕ್ರಮದ ಪಠ್ಯ ವಿಷಯಗಳಲ್ಲಿ ಹಾಗೂ ಕಲಿಕಾ ತಂತ್ರಗಳಲ್ಲಿ ಸೃಜನಶೀಲ ಹುಡುಕಾಟಕ್ಕೆ ಅವಕಾಶವಿರಬೇಕು. ಬಹುಮುಖ ಬೌದ್ಧಿಕತೆ (multiple intelligence) ಯ ಹಂತಗಳನ್ನು ಇದಕ್ಕಾಗಿ ಪರಿಗಣಿಸಬೇಕು.

### ಸಂಸ್ಕೃತಿ ಹಾಗೂ ಪರಂಪರೆಯನ್ನು ಗೌರವಿಸುವುದು

ನಮ್ಮ ಸಾಂಸ್ಕೃತಿಕ ಪರಂಪರೆ ಹಾಗೂ ಇತಿಹಾಸವನ್ನು ಗೌರವಿಸುವ ಮನೋಧರ್ಮದ ನಿರ್ಮಾಣ ಎಂಬುದು ಪಠ್ಯಕ್ರಮವು ಪೂರೈಸಬೇಕಾದ ಮುಖ್ಯ ಗುರಿಗಳಲ್ಲಿ ಒಂದಾಗಿದೆ.

### ಸಮತ್ವ ಎಂಬ ಆಶಯ

ಬೇರೆ ಬೇರೆ ಸಂದರ್ಭಗಳಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಸಮಾನತೆ, ಸಮತ್ವ ಮೊದಲಾದವುಗಳನ್ನು ದೃಢಪಡಿಸಬೇಕಾದುದು ಅನಿವಾರ್ಯವಾಗಿದೆ.

## ನಾಯಕತ್ವಗುಣ

ಹೊಸ ಸಹಸ್ರಮಾನದ ಸವಾಲುಗಳನ್ನು ಎದುರಿಸಲೂ, ಸಾಧ್ಯತೆಗಳನ್ನು ವಿನಿಯೋಗಿಸಲೂ ಸಮರ್ಥರಾದ ನಾಯಕರನ್ನು ಸೃಷ್ಟಿಸಲು ಯೋಗ್ಯವಾದ ಕಲಿಕಾ ತಂತ್ರಗಳನ್ನು ಅಭಿವೃದ್ಧಿ ಪಡಿಸಬೇಕಾಗಿದೆ. ತರಗತಿಯ ಚಟುವಟಿಕೆಗಳಲ್ಲಿ ಎಲ್ಲ ವಿದ್ಯಾರ್ಥಿಗಳ ಭಾಗವಹಿಸುವಿಕೆಯನ್ನು ದೃಢಗೊಳಿಸಿ, ನಾಯಕತ್ವ ಗುಣಗಳನ್ನು ಅಭಿವೃದ್ಧಿ ಪಡಿಸುವ ಪರಿಸರವನ್ನು ಸೃಷ್ಟಿಸಬೇಕಾದ ಅಗತ್ಯವಿದೆ.

## ಜೀವನ ಕೌಶಲ್ಯ ಶಿಕ್ಷಣ

ದೈನಂದಿನ ಬದುಕಿನಲ್ಲಿ ವ್ಯಕ್ತಿಗಳು ಅನುಭವಿಸುವ ಸಮಸ್ಯೆ ಹಾಗೂ ಸವಾಲುಗಳನ್ನು ಫಲಪ್ರದವಾಗಿ ಎದುರಿಸಲು ಸಹಾಯಕವಾದ ಸ್ವಭಾವಗಳನ್ನು ಗಳಿಸಿಕೊಳ್ಳುವ ಸಾಮರ್ಥ್ಯವೇ ಜೀವನ ಕೌಶಲ್ಯಗಳು. ತನ್ನನ್ನು ತಾನು ಅರಿತುಕೊಳ್ಳುವುದು, ಇತರರನ್ನು ಅರಿತುಕೊಳ್ಳುವುದು, ವಿಚಾರ ವಿನಿಮಯ ಸಾಮರ್ಥ್ಯ, ವ್ಯಕ್ತಿಗಳ ನಡುವಿನ ಸಂಬಂಧ, ಸೃಜನಶೀಲ ಚಿಂತನೆ, ವಿಮರ್ಶಾತ್ಮಕ ಚಿಂತನೆ, ತೀರ್ಮಾನಗಳನ್ನು ಕೈಗೊಳ್ಳುವ ಸಾಮರ್ಥ್ಯ, ಸಮಸ್ಯೆಗಳ ಪರಿಹಾರ, ಭಾವನಾತ್ಮಕ ಸಮತೋಲನ, ಒತ್ತಡದ ನಿಭಾಯಿಸುವಿಕೆ ಮೊದಲಾದವು ಜೀವನಕೌಶಲ್ಯಗಳಾಗಿವೆ. ಮಕ್ಕಳ ಪರಿಸರವನ್ನು ಹೊಂದಿಕೊಂಡು ಈ ವಲಯಗಳ ಘಟಕಗಳನ್ನು ಪಠ್ಯಕ್ರಮದಲ್ಲಿ ಅಳವಡಿಸಬೇಕಾಗಿದೆ. ಬದುಕಿನಲ್ಲಿ ಆತ್ಮವಿಶ್ವಾಸದೊಂದಿಗೆ ಮುಂದುವರಿಯಲು ಇಂತಹ ಕೌಶಲ್ಯಗಳು ವಿದ್ಯಾರ್ಥಿಗೆ ಸಹಾಯಕವಾಗುತ್ತವೆ.

## ಪೌರಧರ್ಮ

ರಾಷ್ಟ್ರಗಳು ಪ್ರಜೆಗಳಿಗೆ ಹೇಗೋ ಹಾಗೆಯೇ ಪ್ರಜೆಗಳು ರಾಷ್ಟ್ರಕ್ಕೆ ಸಲ್ಲಿಸಬೇಕಾದ ಕೆಲವು ಧರ್ಮಗಳೂ, ಕರ್ತವ್ಯಗಳೂ ಇವೆ. ಒಂದು ರಾಷ್ಟ್ರದ ಅಭಿವೃದ್ಧಿ ಎಂದರೆ ಮಾನವ ಸಂಪನ್ಮೂಲದ ಅಭಿವೃದ್ಧಿ ಎಂದು ತಿಳಿಯುವ ಈ ಕಾಲದಲ್ಲಿ ಪೌರಪ್ರಜ್ಞೆಯಿರುವ ಜನರನ್ನು ಸೃಷ್ಟಿಸುವುದು ಶಿಕ್ಷಣದ ಪ್ರಧಾನ ಕರ್ತವ್ಯವಾಗಿದೆ. ಸ್ವತಂತ್ರವಾದ ಸಮಾಜ ಸೃಷ್ಟಿಯೊಂದಿಗೆ ಜವಾಬ್ದಾರಿ ಮತ್ತು ಶಿಸ್ತಿನಿಂದ ಕೂಡಿದ ಪ್ರಜೆಗಳನ್ನು ಸೃಷ್ಟಿಸುವುದು ಶಿಕ್ಷಣ ವ್ಯವಸ್ಥೆಯ ಗುರಿಯಾಗಿದೆ.

## ಮಾನವ ಹಕ್ಕುಗಳು

ಮಾನವ ಎಂಬ ನೆಲೆಯಲ್ಲಿ ಈ ಭೂಮಿಯಲ್ಲಿ ಗೌರವದಿಂದ ಬದುಕುವ ವ್ಯಕ್ತಿಯ ಹಕ್ಕುಗಳೇ ಮಾನವ ಹಕ್ಕುಗಳು. ಸಂಯುಕ್ತರಾಷ್ಟ್ರ ಸಂಘದ ಮಾನವ ಹಕ್ಕುಗಳ ಘೋಷಣೆಯಲ್ಲಿ ಸಾರ್ವತ್ರಿಕವಾಗಿ ಅಂಗೀಕಾರ ಲಭಿಸಿದ ಮಾನವ ಹಕ್ಕು ಗಳಿಗೆ ಪಠ್ಯಕ್ರಮದಲ್ಲಿಯೂ ಪಾಠವಿನಿಮಯ ಪ್ರಕ್ರಿಯೆಯಲ್ಲಿಯೂ ಸೂಕ್ತ ಪ್ರಾಧಾನ್ಯವನ್ನು ನೀಡಬೇಕಾಗಿದೆ.

## ಮಕ್ಕಳ ಹಕ್ಕುಗಳು

ಮಕ್ಕಳ ಎಲ್ಲ ರೀತಿಯ ಹಕ್ಕುಗಳನ್ನು ಸಂರಕ್ಷಿಸಬೇಕಾದ ಜವಾಬ್ದಾರಿ ನಮ್ಮ ಕರ್ತವ್ಯವಾಗಿದೆ.

## ಪ್ರಕೃತಿ – ಪ್ರಕೃತಿ ಸಂಪನ್ಮೂಲ ಸಂರಕ್ಷಣೆ, ಪರಿಸರ ಶುಚಿತ್ವ

ಪ್ರಕೃತಿ ಸಂಪನ್ಮೂಲಗಳ ಸಂರಕ್ಷಣೆ, ಪರಿಸರ ಶುಚಿತ್ವ, ಪ್ರಕೃತಿ ಮತ್ತು ಪ್ರಾಕೃತಿಕ ಸಂಪನ್ಮೂಲಗಳ ಕುರಿತು ಪ್ರಾಥಮಿಕ ದೃಷ್ಟಿಕೋನಗಳನ್ನು ಪ್ರಾಥಮಿಕ ತರಗತಿಗಳಿಂದಲೇ ಅಳವಡಿಸಿಕೊಳ್ಳಬೇಕು. ವ್ಯಕ್ತಿ ಶುಚಿತ್ವದಂತೆಯೇ ಪರಿಸರ ಶುಚಿತ್ವವೂ ಅಗತ್ಯ ಎಂಬ ಶುಚಿತ್ವದ ಪ್ರಜ್ಞೆಯನ್ನು ವಿದ್ಯಾರ್ಥಿಗಳಲ್ಲಿ ಮೂಡಿಸಬೇಕಾಗಿದೆ. ಪ್ರಕೃತಿ ಮತ್ತು ಪ್ರಾಕೃತಿಕ ಸಂಪನ್ಮೂಲಗಳು ಕೇವಲ ಮಾನವನಿಗೆ ಮಾತ್ರ ಸೇರಿದ್ದಲ್ಲ ಮತ್ತು ಪ್ರಕೃತಿಯ ಸಮತೋಲನವನ್ನು ಕಾಪಾಡದಿದ್ದರೆ ವ್ಯಾಪಕವಾದ ದುರಂತಗಳಿಗೆ ಕಾರಣವಾಗುವುದು ಎಂಬ ಮನೋಭಾವವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಬೇಕು. ಪ್ರಾಕೃತಿಕ ಸಂಪನ್ಮೂಲ ಸಂರಕ್ಷಣೆ ಹಾಗೂ ಪರಿಸರ ಶುಚಿತ್ವವನ್ನು ಒಂದು ಜೀವನ ಮೌಲ್ಯವಾಗಿ ಮತ್ತು ಮನೋಧರ್ಮವಾಗಿ ಬದಲಾಯಿಸುವ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಬೇಕು.

## ಶಾಂತಿಯ ಶಿಕ್ಷಣ

ವೈಯುಕ್ತಿಕವಾಗಿಯೂ ಸಾಮಾಜಿಕವಾಗಿಯೂ ಶಾಂತಿ ಮತ್ತು ಸಮಾಧಾನವನ್ನು ಕಾಪಾಡುವ ಸಾಮರ್ಥ್ಯ ಮತ್ತು ಮನೋಭಾವಗಳನ್ನು ಬೆಳೆಸುವುದು ಶಾಂತಿ ಶಿಕ್ಷಣದ ಮುಖ್ಯ ಗುರಿ. ಸಂಘರ್ಷಗಳು ಹಾಗೂ ಅವುಗಳಿಗೆ ಕಾರಣವಾಗುವ ಹಿನ್ನೆಲೆಗಳನ್ನು ಬಿಟ್ಟು ಶಾಂತಿ, ಸೌಹಾರ್ದ ಹಾಗೂ ಸಮಾಧಾನದ ಸಾಧ್ಯತೆಗಳನ್ನು ಪಠ್ಯಕ್ರಮದ ವಿವಿಧ ವಿಷಯಗಳಲ್ಲಿ ಅಳವಡಿಸಬೇಕಾದುದು ಈ ಶಿಕ್ಷಣ ನೀತಿಯ ಅಗತ್ಯವಾಗಿದೆ.

## ಕಾನೂನು ಸಾಕ್ಷರತೆ

ಕಾನೂನು ಸಂಬಂಧವಾದ ತಿಳುವಳಿಕೆಯು ಪ್ರಜಾಪ್ರಭುತ್ವ ದೇಶದ ಪ್ರಜೆಗಳಿಗೆ ಅತಿ ಅಗತ್ಯವಾಗಿದೆ. ಕಾನೂನು ಸಾಕ್ಷರತೆಯನ್ನು ದೃಢಪಡಿಸುವ ಪಾಠಭಾಗಗಳನ್ನು ವಿಷಯಕ್ಕೆ ಹೊಂದಿಕೊಂಡು ಅಳವಡಿಸಬೇಕಾದುದು ಕಾಲದ ಅಗತ್ಯವಾಗಿದೆ. ಕಾನೂನು ಸಹಾಯ ವೇದಿಕೆ, ಕಾನೂನು ಕ್ಲಬ್‌ಗಳು, ಕಾನೂನು ಕ್ಲಿನಿಕ್‌ಗಳು, ಕಾನೂನು ತಿಳುವಳಿಕಾ ಶಿಬಿರಗಳು ಮೊದಲಾದ ವಿಭಿನ್ನ ಚಟುವಟಿಕೆಗಳನ್ನು ಆಯೋಜಿಸಬಹುದು.

## ಸೈಬರ್ ಅಪರಾಧಗಳ ಕುರಿತಾಗಿರುವ ತಿಳುವಳಿಕೆ

ಮಾಹಿತಿ ತಂತ್ರಜ್ಞಾನದ ಬಳಕೆಯಿರುವ ಸಮಕಾಲೀನ ಜಗತ್ತಿನಲ್ಲಿ ಪ್ರತಿದಿನವೆಂಬಂತೆ ಸೈಬರ್ ದುರುಪಯೋಗ ಮತ್ತು ಅಪರಾಧ ಚಟುವಟಿಕೆಗಳು ಹೆಚ್ಚುತ್ತಿವೆ. ಮಕ್ಕಳನ್ನು ಇಂತಹ ಚಟುವಟಿಕೆಗಳಿಂದ ದೂರವಿರಿಸುವ ತಿಳುವಳಿಕೆಯನ್ನು ಪಠ್ಯಕ್ರಮದಲ್ಲಿ ಅಳವಡಿಸಬೇಕು. ಇ–ಮೈಲ್, ಇಂಟರ್‌ನೆಟ್, ಸಾಮಾಜಿಕ ಜಾಲತಾಣಗಳು ಮೊದಲಾದವುಗಳ ಉಪಯೋಗವನ್ನು ಕುರಿತು ಸ್ಪಷ್ಟವಾದ ತಿಳುವಳಿಕೆಯನ್ನೂ ಅವುಗಳ ಬಳಕೆಯ ಗುಣ ದೋಷಗಳನ್ನೂ ಮಕ್ಕಳಿಗೆ ಒದಗಿಸಬೇಕು. ಸೈಬರ್ ಅಪರಾಧಗಳಿಗಿರುವ ಶಿಕ್ಷೆ ಹಾಗೂ ಇಂಟರ್‌ನೆಟ್ ಬಳಕೆಯ ನೈತಿಕತೆಯನ್ನು ಪಠ್ಯಕ್ರಮದ ಮೂಲಕ ತಿಳಿಸಬೇಕು.

## ಮಾಧ್ಯಮ ತಿಳುವಳಿಕೆ

ಪತ್ರಿಕೆ ಹಾಗೂ ದೃಶ್ಯಮಾಧ್ಯಮಗಳಿಗೆ ನಮ್ಮ ಸಮಾಜದಲ್ಲಿ ಬಹಳ ಪ್ರಾಧಾನ್ಯವಿದೆ. ದೃಶ್ಯಮಾಧ್ಯಮಗಳು ಮಕ್ಕಳ ಮೇಲೆ ಬೀರುವ ಪರಿಣಾಮ ಅಪಾರ. ಹೀಗೆ ಮಾಧ್ಯಮ ಸಂಬಂಧಿ ಮಾಹಿತಿಗಳನ್ನು ನೀಡುವ ಘಟಕಗಳನ್ನು ಪಠ್ಯಕ್ರಮದಲ್ಲಿ ಸೇರ್ಪಡೆಗೊಳಿಸುವುದು ಅಗತ್ಯವಾಗಿದೆ.

## ಶಾಶ್ವತ ಅಭಿವೃದ್ಧಿ ದೃಷ್ಟಿಕೋನ

ಈ ಭೂಮಿಯು ಮಾನವನಿಗೆ ಮಾತ್ರ ಸೇರಿದ್ದಲ್ಲ ಎಂಬ ಪರಿಸರ ಪ್ರಜ್ಞೆಯನ್ನು ಪಠ್ಯಕ್ರಮವು ಒದಗಿಸಬೇಕಾಗಿದೆ. ಪರಿಸರ ಸಂಬಂಧವಾದ ಸವಾಲುಗಳು, ಪರಿಸರ ನಾಶಕ್ಕೆ ಕಾರಣವಾಗುವ ಮಾನವನ ಕೈವಾಡಗಳು ಹಾಗೂ ಪರಿಸರವನ್ನು ದುರಂತಗಳಿಂದ ಪಾರುಮಾಡುವ ದಾರಿಗಳ ಕುರಿತು ಪ್ರಜ್ಞೆಯನ್ನು ಮೂಡಿಸಬೇಕಾದುದು ಇಂದಿನ ಅಗತ್ಯವಾಗಿದೆ. ಪರಿಸರ ಮತ್ತು ಅಭಿವೃದ್ಧಿಯನ್ನು ಸಂಯೋಜಿಸುವುದು ಹೇಗೆ ಎಂಬುದನ್ನೂ ಶಾಶ್ವತವಾದ ಅಭಿವೃದ್ಧಿಯ ದೃಷ್ಟಿಕೋನಗಳನ್ನೂ ಸಂಶೋಧನೆಗಳನ್ನೂ ಪಠ್ಯಕ್ರಮದಲ್ಲಿ ಅಳವಡಿಸಬೇಕು. ಸಮಗ್ರವಾದ ಪರಿಸರ ಪ್ರಜ್ಞೆಯನ್ನು ಹುಟ್ಟಿಸುವುದು ಪಠ್ಯಕ್ರಮದ ಮುಖ್ಯ ಉದ್ದೇಶಗಳಲ್ಲಿ ಒಂದು.

## ಬಾಲ್ಯ ಶಿಕ್ಷಣ

ಮಕ್ಕಳ ಮನಶಾಸ್ತ್ರಜ್ಞರು, ಆರೋಗ್ಯ ಕಾರ್ಯಕರ್ತರು, ವೈದ್ಯರು ಹಾಗೂ ಅಧ್ಯಾಪಕರ ಸಂಯುಕ್ತ ಪರಿಶ್ರಮಗಳ ಮೂಲಕ ಬಾಲ್ಯ ಶಿಕ್ಷಣಕ್ಕೆ ಯೋಗ್ಯವಾದ ಘಟಕಗಳನ್ನು ಪಠ್ಯಕ್ರಮದಲ್ಲಿ ಅಳವಡಿಸಲು ಪರಿಗಣಿಸಬೇಕು. ವಿದ್ಯಾರ್ಥಿಗಳ ಆರೋಗ್ಯ, ಶುಚಿತ್ವ ಇವುಗಳಿಗೆ ಸಂಬಂಧಿಸಿದ ಸಂಶಯಗಳನ್ನು ಪರಿಹರಿಸಲು ವೈಜ್ಞಾನಿಕವಾದ ಮಾಹಿತಿಗಳನ್ನು ಪರಿಗಣಿಸುವುದು ಅಗತ್ಯವಾಗಿದೆ.

## ಉಪಭೋಗ ಸಂಸ್ಕೃತಿ–ದುಷ್ಪರಿಣಾಮಗಳು

ಉಪಭೋಗ ಸಂಸ್ಕೃತಿಯ ದುಷ್ಪರಿಣಾಮಗಳ ಕುರಿತಾದ ಸತ್ಯಾಂಶಗಳನ್ನು ಪ್ರಾಥಮಿಕ ಶಾಲಾ ಮಟ್ಟದಿಂದಲೇ ಪಠ್ಯಕ್ರಮದಲ್ಲಿ ಅಳವಡಿಸಬೇಕು. ಬಳಕೆದಾರ ಎಂಬ ನೆಲೆಯಲ್ಲಿ ನಮ್ಮ ಹಕ್ಕುಗಳನ್ನೂ, ಬಳಕೆದಾರರಿಗೆ ನೆರವಾಗುವ ಕಾನೂನುಗಳನ್ನೂ ಮಕ್ಕಳಿಗೆ ತಿಳಿಸಿಕೊಡಬೇಕು.

## ಮಾದಕ ದ್ರವ್ಯ ವಿರೋಧಿ ನಿಲುವು

ಮದ್ಯ, ಮಾದಕ ವಸ್ತುಗಳು, ಹೊಗೆ ಸೊಪ್ಪು ಹಾಗೂ ಇತರ ಮಾದಕ ದ್ರವ್ಯಗಳ ಬಳಕೆಯು ಹೊಸ ತಲೆಮಾರಿನ ಆರೋಗ್ಯವನ್ನು ಕೆಡಿಸುತ್ತದೆ ಎಂಬ ಅರಿವು ನಮ್ಮದಾಗಬೇಕು. ಮುಂದಿನ ತಲೆಮಾರನ್ನು ಇವುಗಳಿಂದ ಮುಕ್ತಗೊಳಿಸಿ ರಕ್ಷಿಸಬೇಕು. ಅದಕ್ಕಾಗಿ ಮಾದಕದ್ರವ್ಯಗಳ ಉಪಯೋಗದಿಂದ ಉಂಟಾಗುವ ದೈಹಿಕ ಮಾನಸಿಕ ತೊಂದರೆಗಳನ್ನು ತಿಳಿಸುವ ಚಿತ್ರಗಳು, ಲಘು ಬರಹಗಳು, ದೃಶ್ಯಗಳನ್ನು ಪಠ್ಯಕ್ರಮದ ವಿಷಯಗಳಲ್ಲಿ ಅಳವಡಿಸಬೇಕು. ಮಾದಕ ದ್ರವ್ಯ ವಿರೋಧಿ ನಿಲುವನ್ನು ಸೃಷ್ಟಿಸುವುದು ಇವುಗಳ ಮುಖ್ಯ ಗುರಿಯಾಗಿರಬೇಕು.

## ಲಿಂಗ ಸಮಾನತೆ

ಪಠ್ಯಕ್ರಮವು ಲಿಂಗ ಸಮಾನತೆಯನ್ನು ದೃಢಪಡಿಸುವಂತಿರಬೇಕು. ಗಂಡು – ಹೆಣ್ಣು ಎಂಬ ಭೇದಭಾವಗಳು ಪಠ್ಯಕ್ರಮದಲ್ಲಿ ನುಸುಳಬಾರದು. ಪಾಠಪುಸ್ತಕಗಳ ಚಿತ್ರಗಳಲ್ಲಿ ಕೂಡಾ ಲಿಂಗ ಸಮಾನತೆಯ ದೃಷ್ಟಿಕೋನವಿರಬೇಕು. ಕಲಿಕಾ ಚಟುವಟಿಕೆಗಳ ಸಂದರ್ಭಗಳಲ್ಲಿಯೂ ಈ ಲಿಂಗ ಸಮಾನತೆಯನ್ನು ದೃಢಪಡಿಸಬೇಕಾದುದು ಅಧ್ಯಾಪಕರ ಕರ್ತವ್ಯವಾಗಿದೆ.

## ಮಿತವ್ಯಯ ಗುಣ

ಪ್ರಾಥಮಿಕ ಶಾಲಾ ಹಂತದಲ್ಲಿಯೇ ಮಿತವ್ಯಯ ಗುಣವನ್ನು ಮಕ್ಕಳಿಗೆ ಕಲಿಸಬೇಕು. ಮಿತವ್ಯಯ ಗುಣದ ಅಗತ್ಯ ಮತ್ತು ಮಹತ್ವವನ್ನು ತಿಳಿಸಿಕೊಡಬೇಕು. ಮಿತವ್ಯಯವನ್ನು ಪ್ರಾಯೋಗಿಕ ಚಟುವಟಿಕೆಗಳ ಮೂಲಕ ತಿಳಿಸಿಕೊಡಬೇಕು.

## ರಸ್ತೆ ಸುರಕ್ಷೆ

ರಸ್ತೆಯಲ್ಲಿ ಪಾಲಿಸಬೇಕಾದ ನಿಮಯಗಳು, ರಸ್ತೆ ಅಪಘಾತಗಳನ್ನು ತಪ್ಪಿಸಲು ಇರುವ ಪ್ರಾಯೋಗಿಕ ಸೂಚನೆಗಳು, ಚಟುವಟಿಕೆಗಳು ಮೊದಲಾದವು ರಸ್ತೆ ಸುರಕ್ಷೆಯ ಘಟಕಗಳಾಗಿವೆ. ರಸ್ತೆಯು ಸಾರ್ವಜನಿಕ ಸ್ಥಳವೆಂದೂ, ನಮ್ಮ ಹಾಗೆ ಇತರರಿಗೂ ರಸ್ತೆಯನ್ನು ಬಳಸುವ ಸ್ವಾತಂತ್ರ್ಯವಿದೆ ಎಂದೂ ಪೌರಪ್ರಜ್ಞೆಯನ್ನು ಹುಟ್ಟಿಸಬೇಕು. ರಸ್ತೆ ಸುರಕ್ಷತೆಯ ಸಂಬಂಧವಾಗಿ ಚಟುವಟಿಕೆಗಳಿಗೆ ಪ್ರಾಧಾನ್ಯ ನೀಡಬೇಕು.

ಪಠ್ಯಕ್ರಮದ ಸ್ವಾಭಾವಿಕವಾದ ವಿನಿಮಯದಲ್ಲಿ ಈ ಘಟಕಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ಕಲಿಕಾ ಸಾಧನೆಗಳನ್ನು ದೃಢಪಡಿಸಬೇಕು. ವಿವಿಧ ವಿಷಯಗಳ ಒಳ ಹೂರಣದ ಆಶಯಗಳ ಆಯ್ಕೆಯಲ್ಲಿಯೂ ಕಲಿಕಾ ಚಟುವಟಿಕೆಗಳನ್ನು ಕ್ರಮೀಕರಿಸುವಾಗಲೂ ಸಾಕಷ್ಟು ಪರಿಗಣನೆಯನ್ನು ನೀಡಬೇಕಾಗಿದೆ. ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಗಳಲ್ಲಿ ಸಾಗುವಾಗ ಇಂತಹ ಆಶಯಗಳಿಗೆ ಸಂಬಂಧಿಸಿದ ತಿಳುವಳಿಕೆ, ಕೌಶಲ್ಯ, ಮನೋಭಾವ ಇವುಗಳಿಗೆ ಒತ್ತು ನೀಡಬೇಕು. ನಿರಂತರ ಮೌಲ್ಯಮಾಪನ ಪ್ರಕ್ರಿಯೆಗಳ ಮೂಲಕ ಈ ಗುರಿಗಳನ್ನು ಈಡೇರಿಸಲು ಸಾಧ್ಯವಾಗಿದೆಯೇ ಎಂದು ಪರಿಶೋಧಿಸಲು ಸಾಧ್ಯವಾಗಬೇಕು. ವಿವಿಧ ಕ್ಲಬ್‌ಗಳ ಚಟುವಟಿಕೆಗಳು, SPC, NCC, Scouts & Guides, JRC, ವಿದ್ಯಾರಂಗ ಕಲಾ ಸಾಹಿತ್ಯವೇದಿಕೆ, ಗಾಂಧೀದರ್ಶನ ಮೊದಲಾದ ವ್ಯವಸ್ಥೆಗಳು ಮೌಲ್ಯಗಳನ್ನೂ ಮನೋಧರ್ಮಗಳನ್ನೂ ಕಾಳಜಿಯನ್ನೂ ಬೆಳೆಸುವ ವೇದಿಕೆಗಳಾಗಬೇಕು.

## 1.11 ಹಕ್ಕು ಆಧಾರಿತ ಶಿಕ್ಷಣ (Right based Education)

ಮಕ್ಕಳ ಹಕ್ಕುಗಳನ್ನು ನಿರ್ಣಯಿಸಿ ಜಗತ್ತಿನಾದ್ಯಂತ ಅನುಷ್ಠಾನಗೊಳಿಸಲು ಯುನೆಸ್ಕೋ ನೇತೃತ್ವ ವಹಿಸಿದೆ. ಈ ಹಿನ್ನೆಲೆಯಲ್ಲಿ ವಿವಿಧ ದೇಶಗಳಲ್ಲಿ ಮಕ್ಕಳ ಹಕ್ಕುಗಳ ಸಂರಕ್ಷಣೆಗಾಗಿ ಅನೇಕ ಕಾನೂನುಗಳನ್ನು ರಚಿಸಲಾಗಿದೆ. ಭಾರತದಲ್ಲಿ ರಾಷ್ಟ್ರೀಯ ಶಿಕ್ಷಣ ಹಕ್ಕು ನಿಯಮ– 2009 ಕಾರ್ಯಗತವಾಗಿರುವುದು ಈ ನಿಟ್ಟಿನಲ್ಲಿ ಒಂದು ಮೈಲಿಗಲ್ಲು. ಮಕ್ಕಳ ಎಲ್ಲ ರೀತಿಯ ಹಕ್ಕುಗಳನ್ನು ಸಂರಕ್ಷಿಸುವ ಜವಾಬ್ದಾರಿಯು ಹಿರಿಯರಾದ ನಮ್ಮ ಕರ್ತವ್ಯವಾಗಿದೆ. ಶಿಕ್ಷಣ ಹಕ್ಕುಗಳ ಕುರಿತು ಹೇಳುವಾಗ ಅವುಗಳನ್ನು ಮೂರು ಮುಖ್ಯ ಘಟಕಗಳಾಗಿ ವಿಂಗಡಿಸಬಹುದು.

- ಭಾಗವಹಿಸುವಿಕೆ (Participation)
- ಲಭ್ಯತೆ (Provision)
- ಸಂರಕ್ಷಣೆ (Protection)

ತನಗೆ ಲಭ್ಯವಾದ ಹಕ್ಕುಗಳ ಕುರಿತು ಕೂಡಾ ಆಲೋಚಿಸುವುದು ಹೇಗಿರಬಹುದು?

### ಭಾಗವಹಿಸುವಿಕೆ (Participation)

- ಮಕ್ಕಳಿಗೆ ಸಂಬಂಧಿಸಿದ ಎಲ್ಲ ತೀರ್ಮಾನಗಳಲ್ಲಿ ನನ್ನ ಅಭಿಪ್ರಾಯವನ್ನು ಕೇಳುತ್ತಾರೆ.
- ತೀರ್ಮಾನಗಳಲ್ಲಿ ನನ್ನ ಅಭಿಪ್ರಾಯಕ್ಕೆ ಮುಖ್ಯ ಪರಿಗಣನೆ ಇದೆ.
- ನನ್ನ ಸಾಮರ್ಥ್ಯ ಹಾಗೂ ಮಿತಿಗಳಿಗೆ ಹೊಂದಿಕೊಂಡು ನೀಡಲಾಗುವ ಚಟುವಟಿಕೆಗಳಲ್ಲಿ ಭಾಗವಹಿಸಲು ನನಗೆ ಅವಕಾಶ ಲಭಿಸುತ್ತದೆ.
- ನನ್ನ ಸಾಮರ್ಥ್ಯಗಳನ್ನು ಪೋಷಿಸಲೂ ಮಿತಿಗಳನ್ನು ದಾಟಲೂ ಯೋಗ್ಯವಾದ ಕಲಿಕಾ ಪ್ರಕ್ರಿಯೆಗಳ ಮೂಲಕ ಸಾಗಲು ಸಾಧ್ಯವಾಗುತ್ತದೆ.
- ತರಗತಿಯಲ್ಲಿ ನಡೆಯುವ ಚಟುವಟಿಕೆಗಳಲ್ಲಿ ನನಗೂ ಸಹಪಾಠಿಗಳಿಗೂ ಕ್ರಿಯಾಶೀಲವಾದ ಭಾಗವಹಿಸುವಿಕೆ ಲಭಿಸುತ್ತಿದೆ.
- ನನ್ನ ಸಾಮರ್ಥ್ಯಗಳನ್ನು ಪ್ರದರ್ಶಿಸಲು ನನಗೆ ಅವಕಾಶ ಸಿಗುತ್ತದೆ.

### ಲಭ್ಯತೆ (Provision)

- ಸರಿಯಾದ ಶೈಕ್ಷಣಿಕ ಯೋಗ್ಯತೆಯಿರುವ, ಜ್ಞಾನವನ್ನು ಕಾಲಕ್ಕನುಸರಿಸಿ ನವೀಕರಿಸುವ ಅಧ್ಯಾಪಕರ ಸೇವೆ ನನಗೆ ಲಭಿಸುತ್ತಿದೆ.
- ನಿರ್ದಿಷ್ಟ ಸಮಯದಲ್ಲಿ ಕಲಿಕಾನುಭವಗಳು ಸರಿಯಾದ ಕಾಲಕ್ಕೆ ಸಿಗುತ್ತಿವೆ.
- ದೈಹಿಕ, ಮಾನಸಿಕ ಬೆಳವಣಿಗೆಗೆ ಪೂರಕವಾಗಿರುವ ತರಗತಿ ಪರಿಸರ ನನಗೆ ಲಭಿಸುತ್ತಿದೆ.
- ಕಲಿಕಾ ಚಟುವಟಿಕೆಗಳಿಗೆ ಅಗತ್ಯವಾದ ಕಲಿಕೋಪಕರಣಗಳನ್ನು ಯಥಾಕಾಲಕ್ಕೆ ಒದಗಿಸಿಕೊಡಲು ನನ್ನ ಅಧ್ಯಾಪಕರಿಗೆ ಸಾಧ್ಯವಾಗುತ್ತದೆ.
- ಕಲೆ ಮತ್ತು ಕ್ರೀಡೆಯ ಬೆಳವಣಿಗೆಗೆ ಅಗತ್ಯವಾದ ಉಪಕರಣಗಳೂ ಅವಕಾಶಗಳೂ ನನಗೆ ಸಿಗುತ್ತಿವೆ.

**RTE 2009 ಹೀಗೆ ಹೇಳುತ್ತದೆ**

- 1 ರಿಂದ 5 ರ ವರೆಗಿನ ತರಗತಿಗಳಲ್ಲಿ ಕಲಿಯುವ ಮಕ್ಕಳಿಗೆ 200 ಕಲಿಕೆಯ ದಿವಸಗಳೂ 800 ಗಂಟೆಗಳ ಬೋಧನ ಸಮಯವೂ ಲಭಿಸಬೇಕು.
- 6 ರಿಂದ 8 ರ ವರೆಗಿನ ತರಗತಿಗಳಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ 220 ಕಲಿಕೆಯ ದಿವಸಗಳೂ 1000 ಗಂಟೆಗಳ ಬೋಧನ ಸಮಯವೂ ಲಭಿಸಬೇಕು.

### ಸಂರಕ್ಷಣೆ (Protection)

- ಶಾಲೆಯಲ್ಲಿ ಹಾಗೂ ಹೊರಗೆ ಯಾವುದೇ ಭೇದಭಾವವನ್ನು ನಾನು ಅನುಭವಿಸುವುದಿಲ್ಲ.
- ನನ್ನನ್ನು ಯಾರೂ ಕೂಡಾ ಯಾವುದೇ ರೀತಿಯಲ್ಲಿ ಕಡೆಗಣಿಸುವುದಿಲ್ಲ.
- ಯಾರೂ ಕೂಡಾ ದೈಹಿಕ ಅಥವಾ ಮಾನಸಿಕ ದೌರ್ಜನ್ಯವೆಸಗುವುದಿಲ್ಲ.
- ಅಧ್ಯಾಪಕರಲ್ಲಿ ನಿರ್ಭೀತಿಯಿಂದ ವ್ಯವಹರಿಸಲು ನನಗೆ ಸಾಧ್ಯವಾಗುತ್ತದೆ.
- ಮಗುವಾದರೂ ನನಗೆ ಖಾಸಗಿತನವಿದೆ. ನನ್ನನ್ನು ಎಲ್ಲರೂ ಅಂಗೀಕರಿಸುತ್ತಾರೆ.
- ಶಾಲೆಯಲ್ಲಿಯೂ ಮನೆಯಲ್ಲಿಯೂ ನಾನು ಸುರಕ್ಷಿತನಾಗಿದ್ದೇನೆ ಎಂಬ ಭರವಸೆ ನನಗಿದೆ.

**ಕೇರಳ ರಾಜ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**

2002 ಮೇ ತಿಂಗಳಲ್ಲಿ ಸೇರಿದ ಸಂಯುಕ್ತ ರಾಷ್ಟ್ರ ಸಭೆಯು ಮಕ್ಕಳಿಗಾಗಿರುವ ವಿಶೇಷ ಸಮ್ಮೇಳನವು 'ಮಕ್ಕಳಿಗೆ ಯೋಗ್ಯವಾದ ಒಂದು ಜಗತ್ತು' ಎಂಬ ಶೀರ್ಷಿಕೆಯಲ್ಲಿ ನಿರ್ಣಯವೊಂದನ್ನು ಅಂಗೀಕರಿಸಿತು. ಇದರ ಆಧಾರದಲ್ಲಿ ಕೇಂದ್ರ ಸರಕಾರವು ನಿರ್ಮಿಸಿದ 2005ರ ಬಾಲಕರ ಹಕ್ಕು ಸಂರಕ್ಷಣ ಆಯೋಗ ಕಾಯಿದೆಯ ಹಾಗೂ 2012ರ ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ನಿಯಮಗಳ ಆಧಾರದಲ್ಲಿ 'ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಆಯೋಗ' ಕಾರ್ಯಾಚರಿಸುತ್ತಿದೆ. ನಮ್ಮ ಸಂವಿಧಾನವು ಹೇಳುವ ಮೂಲಭೂತ ಹಕ್ಕುಗಳನ್ನು ಹಾಗೂ ಮಕ್ಕಳ ಹಕ್ಕುಗಳನ್ನು ಸಂರಕ್ಷಿಸುವುದು ಆಯೋಗದ ಕೆಲಸವಾಗಿದೆ.

ಈ ಮಕ್ಕಳ ಹಕ್ಕುಗಳನ್ನು ದೃಢಪಡಿಸಲು ತಾನು ಏನು ಮಾಡಿದೆನೆಂದೂ ಇನ್ನು ಏನು ಮಾಡಬಹುದೆಂದೂ ಪ್ರತಿಯೊಬ್ಬ ಅಧ್ಯಾಪಕನೂ ಯೋಚಿಸಬೇಕಾಗಿದೆ.

## 1.12 ಮೆಂಟರಿಂಗ್

ರಾಷ್ಟ್ರೀಯ ಶಿಕ್ಷಣ ಹಕ್ಕು ಕಾಯ್ದೆಯು ಅಧ್ಯಾಪಕ/ಅಧ್ಯಾಪಿಕೆಯನ್ನು ಮೆಂಟರ್ (mentor) ಎಂಬುದಾಗಿ ಪರಿಗಣಿಸುತ್ತದೆ. ಸಮಗ್ರ ಶಾಲಾ ಅಭಿವೃದ್ಧಿ ವಲಯದಲ್ಲಿ ಮೆಂಟರಿಂಗ್‌ಗೆ ಬಹಳಷ್ಟು ಪ್ರಾಧಾನ್ಯವಿದೆ. ಕಲಿಕೆಯ ಸಾಧನೆಗಳನ್ನು ರುಜುವಾತುಪಡಿಸಲು ಸಮಗ್ರವಾದ ಮಾರ್ಗಸೂಚಿಗಳು ಅತಿ ಅವಶ್ಯಕ.

ಶಿಕ್ಷಣ ಪ್ರಕ್ರಿಯೆಯ ಮುಖ್ಯ ಘಟಕವಾದ ಅಧ್ಯಾಪಕ – ವಿದ್ಯಾರ್ಥಿ ಸಂಬಂಧದಲ್ಲಿ ಇಂದು ಬಹಳಷ್ಟು ವ್ಯತ್ಯಾಸಗಳಾಗಿವೆ. ವಿದ್ಯಾರ್ಥಿಗೆ ಜ್ಞಾನವನ್ನು ಹಸ್ತಾಂತರಿಸುವ ವ್ಯಕ್ತಿ ಮಾತ್ರವಲ್ಲದೆ ವಿದ್ಯಾರ್ಥಿಗಳಿಗೆ ಜ್ಞಾನವನ್ನು ಗಳಿಸಲಿರುವ ವೈವಿಧ್ಯಪೂರ್ಣ ಅವಕಾಶಗಳನ್ನು ಒದಗಿಸಿಕೊಡುವ ವ್ಯಕ್ತಿಯಾಗಿಯೂ ಅಧ್ಯಾಪಕ/ಅಧ್ಯಾಪಿಕೆ ಕಾರ್ಯನಿರ್ವಹಿಸಬೇಕಾಗಿದೆ.

ಮನೆಯನ್ನು ಹೊರತುಪಡಿಸಿದರೆ ವಿದ್ಯಾರ್ಥಿಗೆ ಶಾಲೆ ಎಂಬುದು ಮತ್ತೊಂದು ಮನೆಯಿದ್ದಂತೆ. ಶಾಲೆ ಮನೆಯೇ ಆದಾಗ ವಿದ್ಯಾರ್ಥಿಗೆ ಅಧ್ಯಾಪಕ ವೃಂದವು ಮನೆಯ ಸದಸ್ಯರೇ ಆಗುತ್ತಾರೆ. ವಿದ್ಯಾರ್ಥಿಗೆ ಮನೆಯಿಂದ ಲಭಿಸುವ ಪ್ರೀತಿ, ಕಾಳಜಿ, ರಕ್ಷಣೆ, ಅಂಗೀಕಾರ ಮುಂತಾದವುಗಳು ಗರಿಷ್ಠ ಅಥವಾ ಕನಿಷ್ಠ ಮಟ್ಟದಲ್ಲಿ ಲಭಿಸುತ್ತಿವೆ ಎಂಬುದನ್ನು ಪ್ರತಿಯೊಬ್ಬ ಅಧ್ಯಾಪಕ ಅಥವಾ ಅಧ್ಯಾಪಿಕೆ ಮನದಟ್ಟು ಮಾಡಿಕೊಳ್ಳಬೇಕು. ಇದನ್ನು ತಿಳಿದಾದ ಬಳಿಕ ಪ್ರತಿಯೊಂದು ಮಗುವಿಗೂ ಅವಶ್ಯಕವಾದ ರೀತಿಯಲ್ಲಿ ಇವುಗಳನ್ನು ನೀಡುವ ಹೊಣೆಗಾರಿಕೆ ಅಧ್ಯಾಪಕರಿಗಿದೆ. ಹೀಗಾದಾಗ ಮಾತ್ರ ಶಾಲೆಯೂ ಮನೆಯೆನಿಸಿಕೊಳ್ಳುವುದು.

ಪ್ರತಿಯೊಂದು ಮಗುವಿನ ವ್ಯಕ್ತಿಗತವಾದ ಮತ್ತು ಕೌಟುಂಬಿಕವಾದ ಹಿನ್ನೆಲೆಗಳನ್ನು ಅರ್ಥಮಾಡಿಕೊಳ್ಳಲು ಅಧ್ಯಾಪಕರು ಈ ಕೆಳಗಿನ ವಿಷಯಗಳನ್ನು ಗಮನಿಸಬೇಕಾಗುತ್ತದೆ.

- ಗೃಹ ಸಂದರ್ಶನ
- ಹೆತ್ತವರೊಂದಿಗಿನ ಆಶಯ ವಿನಿಮಯ
- ಮಗುವಿನ ನಿರಂತರ ನಿರೀಕ್ಷಣೆ
- 

ಹೀಗೆ ಮಗುವಿಗೆ ಪ್ರೀತಿ, ಅಂಗೀಕಾರ ಮತ್ತು ಸಂರಕ್ಷಣೆ ಇತ್ಯಾದಿಗಳನ್ನು ನೀಡಿ, ನಾವು ಅಧ್ಯಾಪಕರು ಮಗುವಿನ ಸಹರಕ್ಷಕರಾಗಿ ಜವಾಬ್ದಾರಿ ವಹಿಸಿಕೊಂಡಾಗ ಮಾತ್ರ ಹೊಸ ಕಾಲಮಾನದ ಅಧ್ಯಾಪಕ/ಅಧ್ಯಾಪಿಕೆಯಾಗಿ ನಾವು ಗುರುತಿಸಿಕೊಳ್ಳಬಹುದು.

ಮೆಂಟರಿಂಗ್ ಮೂಲಕ ಮಾರ್ಗದರ್ಶನ, ಸಲಹೆ, ಬೆಂಬಲ, ಜ್ಞಾನವನ್ನು ಉತ್ತಮಪಡಿಸಲು ಬೇಕಾದ ಅವಕಾಶ ಮುಂತಾದುವುಗಳನ್ನು ಅಧ್ಯಾಪಕರು ಮಗುವಿಗೆ ಒದಗಿಸಿಕೊಡುತ್ತಾರೆ. ಅನುಭವಿಯಾದ ನೇತಾರ ಎಂಬ ನೆಲೆಯಲ್ಲಿಯೂ ಅನುಕರಣೀಯ ಆದರ್ಶ ವ್ಯಕ್ತಿ ಎಂಬ ನೆಲೆಯಲ್ಲಿಯೂ ಮೆಂಟರಿಂಗ್‌ನ ಕಾರ್ಯಚಟುವಟಿಕೆಗಳು ಮುಂದುವರಿಯಬೇಕು. ಬೋಧನೆಗೆ ಬೇಕಾದ ಸೂಚನೆಗಳು, ಕೌನ್ಸಿಲಿಂಗ್ ಇತ್ಯಾದಿಗಳೆಲ್ಲ ಇದರ ಭಾಗಗಳಾಗಿವೆ. ವಿದ್ಯಾರ್ಥಿಯ ಒಳಗೆ ಸುಪ್ತವಾಗಿರುವ ಪ್ರತಿಭೆಯನ್ನು ಹೊರಗೆ ತರಲು ಸಮರ್ಥ ಮೆಂಟರ್‌ನಿಂದ ಮಾತ್ರ ಸಾಧ್ಯ.
.

### ಮೆಂಟರಿಂಗ್ ಮೂಲಕ

- ಅಧ್ಯಾಪಕ ಹಾಗೂ ವಿದ್ಯಾರ್ಥಿಗೆ ಉತ್ತಮ ಶಿಕ್ಷಣ ಅನುಭವಗಳು ಲಭಿಸುತ್ತವೆ.
- ಅಧ್ಯಾಪಕ ಹಾಗೂ ವಿದ್ಯಾರ್ಥಿಯ ಜ್ಞಾನ ವಲಯ ವಿಸ್ತಾರಗೊಳ್ಳುತ್ತದೆ.
- ವಿದ್ಯಾರ್ಥಿ ಮತ್ತು ಶಾಲೆಯ ಪರಸ್ಪರ ಸಂಬಂಧ ಗಟ್ಟಿಗೊಳ್ಳುತ್ತದೆ.
- ವಿದ್ಯಾರ್ಥಿಯ ಕಲಿಕೆಯಲ್ಲಿ ಪ್ರಗತಿ ಹಾಗೂ ವ್ಯಕ್ತಿತ್ವ ವಿಕಾಸ ಉಂಟಾಗುತ್ತದೆ.
- ಚಟುವಟಿಕೆಗಳ ಮೂಲಕ ಸಾಮಾಜಿಕ ಪ್ರಜ್ಞೆ ಬೆಳೆಸಲು ಮತ್ತು ತೀರ್ಮಾನಗಳನ್ನು ಕೈಗೊಳ್ಳಲು ಸಾಧ್ಯವಾಗುವುದು.
- ಹೆತ್ತವರು ಹಾಗೂ ಶಾಲೆಯ ಪರಸ್ಪರ ಸಂಬಂಧ ಗಟ್ಟಿಗೊಳ್ಳುವುದಲ್ಲದೆ ವಿದ್ಯಾರ್ಥಿಯ ಕಲಿಕೆಯ ಗುಣಮಟ್ಟದ ಕುರಿತು ತಿಳಿಯಲು ಸಾಧ್ಯವಾಗುತ್ತದೆ.

- ಕಲೆ, ಕ್ರೀಡೆ, ಆರೋಗ್ಯ, ವೃತ್ತಿ ಪರಿಚಯ ಮೊದಲಾದ ಕಲಿಕಾ ವಲಯಗಳಲ್ಲಿ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆ ಮತ್ತು ಮೌಲ್ಯಮಾಪನವನ್ನು ಗಟ್ಟಿಗೊಳಿಸುತ್ತದೆ.

ಮೆಂಟರಿಂಗ್‌ಗೆ ಸಾಧ್ಯವಿರುವ ರೀತಿಯಲ್ಲಿ ನಕಾಶೆಗಳನ್ನು ರೂಪಿಸಿ, ಇದೊಂದು ಪರಿಹಾರ ಬೋಧನೆ ಪ್ರಕ್ರಿಯೆಯಾಗಿಯೂ ನಿರಂತರ ಮೌಲ್ಯನಿರ್ಣಯ ಮತ್ತು ವಿದ್ಯಾರ್ಥಿಯ ವ್ಯಕ್ತಿತ್ವ ವಿಕಾಸಕ್ಕೆ ಸಹಾಯಕವಾಗುವ ಪ್ರಕ್ರಿಯೆಯನ್ನಾಗಿಯೂ ರೂಪುಗೊಳಿಸಬೇಕಾಗಿದೆ.

ಶಾಲೆಯ ಎಲ್ಲಾ ಅಧ್ಯಾಪಕರನ್ನು 'ಮೆಂಟರ್ಸ್' ಎಂಬುದಾಗಿಯೂ ವಿದ್ಯಾರ್ಥಿಗಳನ್ನು 'ಮೆಂಟಿ' ಗಳನ್ನಾಗಿಯೂ ಪರಿಗಣಿಸುವ ಮೂಲಕ ಮೆಂಟರಿಂಗ್ ರೂಪುಗೊಳ್ಳಬೇಕು. ತರಗತಿಯ ಎಲ್ಲಾ ವಿದ್ಯಾರ್ಥಿಗಳನ್ನು ಸಣ್ಣ ಸಣ್ಣ ಗುಂಪುಗಳೆಂದು ಭಾವಿಸಿಕೊಂಡು, ಪ್ರತಿಯೊಂದು ಗುಂಪಿನ ಪ್ರಗತಿಯನ್ನು ಸಮರ್ಪಕ ರೀತಿಯಲ್ಲಿ ತಿಳಿಯಲು ಆಯಾ ತರಗತಿಯಲ್ಲಿ ಕಲಿಸುವ ಅಧ್ಯಾಪಕರಿಗೆ ಗುಂಪಿನ ಜವಾಬ್ದಾರಿಯನ್ನು ನೀಡಬಹುದು.

## 1.13 ಅಧ್ಯಾಪಕರು ಪಾಲಿಸಬೇಕಾದ ಪ್ರಮುಖ ವೃತ್ತಿಪರ ನೀತಿಸಂಹಿತೆ (Code of Professional Ethics for School Teachers)

### 1. ವಿದ್ಯಾರ್ಥಿಗಳೊಂದಿಗಿರುವ ಜವಾಬ್ದಾರಿಗಳು

*1.1* *ಎಲ್ಲ ವಿದ್ಯಾರ್ಥಿಗಳೊಂದಿಗೆ ಪ್ರೀತಿ, ವಾತ್ಸಲ್ಯದಿಂದ ವರ್ತಿಸುವುದು.*

- ಎಲ್ಲ ವಿದ್ಯಾರ್ಥಿಗಳೊಂದಿಗೆ ಸಮಾನ ರೀತಿಯಿಂದ ವರ್ತಿಸುವುದು.
- ಕಲಿಕೆಯಲ್ಲಿ ಹಿಂದಿರುವ ವಿದ್ಯಾರ್ಥಿಗಳಿಗೆ ವಿಶೇಷ ಪರಿಗಣನೆ ನೀಡುವುದು.
- ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ, ಆಸಕ್ತಿ ಮುಂತಾದುವುಗಳನ್ನು ಮೂಡಿಸುವ ರೀತಿಯಲ್ಲಿ ವ್ಯವಹರಿಸುವುದು.

*1.2* *ಜಾತಿ, ಮತ, ವರ್ಗ, ವರ್ಣ, ಆರ್ಥಿಕ ಸ್ಥಿತಿಗತಿ, ಭಾಷೆ, ಲಿಂಗ, ಜನ್ಮಸ್ಥಳ ಎಂಬೀ ವಿಷಯಗಳಲ್ಲಿ ಭೇದಭಾವವಿಲ್ಲದೆ, ನಿಷ್ಪಕ್ಷಪಾತ ಹಾಗೂ ನ್ಯಾಯಯುತವಾದ ಮೌಲ್ಯಗಳನ್ನು ಗೌರವಿಸುವುದು.*

- ಪ್ರಜಾಪ್ರಭುತ್ವ ತತ್ವಸಿದ್ಧಾಂತಗಳಲ್ಲಿ, ಸಹಿಷ್ಣುತೆಯ ವಿಷಯಗಳಲ್ಲಿ, ಸಾಮಾಜಿಕ ವಿಚಾರಗಳಲ್ಲಿ ಅಧ್ಯಾಪಕರಿಗಿರುವ ನಂಬಿಕೆ ಮತ್ತು ವಿಶ್ವಾಸವನ್ನು ವಿದ್ಯಾರ್ಥಿಗಳಲ್ಲಿಯೂ ಮೂಡಿಸುವುದು.
- ಅಧ್ಯಾಪಕರ ವ್ಯಕ್ತಿಗತವಾದ ನಂಬಿಕೆಗಳು ಸಂವಿಧಾನದ ತತ್ವಗಳಿಗೆ ವಿರುದ್ಧವಾದರೆ ಅದು ಶಾಲೆಯ ಒಟ್ಟು ವ್ಯವಸ್ಥೆಯ ಮೇಲೆ ಗಂಭೀರ ಪರಿಣಾಮ ಬೀರಬಹುದು.

*1.3* *ವಿದ್ಯಾರ್ಥಿಯ ದೈಹಿಕ, ಬೌದ್ಧಿಕ, ಭಾವನಾತ್ಮಕ, ಸಾಮಾಜಿಕ ಮತ್ತು ಸದಾಚಾರಗಳ ಬೆಳವಣಿಗೆಗಳಿಗೆ ಸೂಕ್ತ ವಾತಾವರಣದ ಸೃಷ್ಟಿ.*

- ಶಾಲಾ ಶಿಕ್ಷಣವು ವಿದ್ಯಾರ್ಥಿಯ ಶಾರೀರಿಕ ಮತ್ತು ಬೌದ್ಧಿಕವಾದ ಕೌಶಲ್ಯಗಳನ್ನು ಪರಿಪೂರ್ಣತೆಯತ್ತ ಕೊಂಡೊಯ್ಯುವ ಕಾಲಘಟ್ಟವಾಗಿದೆ.
- ಶಿಕ್ಷಣವು ವಿದ್ಯಾರ್ಥಿಯ ಬೌದ್ಧಿಕ ಬೆಳವಣಿಗೆಗೆ ಮಾತ್ರ ಸೀಮಿತವಾಗಿರಬಾರದು.
- ವಿದ್ಯಾರ್ಥಿಯ ಸರ್ವಾಂಗೀಣ ಅಭಿವೃದ್ಧಿಯು ಶಿಕ್ಷಣದ ಮುಖ್ಯ ಲಕ್ಷ್ಯವಾಗಿರಬೇಕು.

*1.4* *ಶಾಲಾ ಶಿಕ್ಷಣದ ಎಲ್ಲಾ ಘಟ್ಟಗಳಲ್ಲಿಯೂ ವಿದ್ಯಾರ್ಥಿಯ ವ್ಯಕ್ತಿತ್ವವು ಗೌರವಿಸಲ್ಪಡಬೇಕು.*

- ವ್ಯಕ್ತಿ ಎಂಬ ನೆಲೆಯಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗಿರುವ ಪ್ರಜಾಪ್ರಭುತ್ವ ಪರವಾದ ಹಕ್ಕುಗಳು ಹಾಗೂ ಸ್ಥಾನಮಾನಗಳನ್ನು ಗಮನಿಸಬೇಕು.
- ಅಧ್ಯಾಪಿಕೆಯ ಭಾಗದಿಂದ ಬರಬಹುದಾದ ಯಾವುದೇ ಪ್ರತಿಕೂಲ ಅಭಿಪ್ರಾಯಗಳು ವಿದ್ಯಾರ್ಥಿಯ ಸ್ವಾಭಿಮಾನವನ್ನು ಘಾಸಿಗೊಳಿಸುವುದಲ್ಲದೆ ಅವು ಆತನ ಕಲಿಕೆಯ ಮೇಲೆ ದುಷ್ಪರಿಣಾಮವನ್ನುಂಟು ಮಾಡಬಹುದು.

- ಶಾಲೆಯ ಎಲ್ಲಾ ಕಾರ್ಯಚಟುಟಿಕೆಗಳಲ್ಲಿಯೂ ಎಲ್ಲ ವಿದ್ಯಾರ್ಥಿಗಳ ಸಕ್ರಿಯವಾದ ಪಾಲ್ಗೊಳ್ಳುವಿಕೆಗೆ ಪ್ರೋತ್ಸಾಹ ನೀಡಬೇಕು.
- ಸಂಯುಕ್ತ ರಾಷ್ಟ್ರ ಸಂಘ ಅಂಗೀಕರಿಸಿದ ಹಾಗೂ ಭಾರತವು ಒಪ್ಪಿರುವ ಮತ್ತು ಪಾಲಿಸಿಕೊಂಡು ಬಂದಿರುವ ಮಕ್ಕಳ ಹಕ್ಕು ಕಾಯ್ದೆಗಳನ್ನು ಹಾಗೂ ಮಕ್ಕಳ ಹಕ್ಕು ಸಂರಕ್ಷಣಾ ಸಮಿತಿಯ ವರದಿಗಳನ್ನು ಅಧ್ಯಾಪಕರು ಗಮನದಲ್ಲಿಟ್ಟು ವ್ಯವಹರಿಸಬೇಕಾಗಿದೆ.
- ಶಾಲೆಯ ಶಿಸ್ತುಕ್ರಮ ಪಾಲನೆಗಾಗಿ ರೂಪಿಸುವ ನಿಯಮಾವಳಿಗಳು ವಿದ್ಯಾರ್ಥಿಯ ಮಾನವೀಯ ಹಕ್ಕುಗಳಿಗೆ ಧಕ್ಕೆಯನ್ನುಂಟುಮಾಡಬಾರದು.

*1.5 ವಿದ್ಯಾರ್ಥಿಯಲ್ಲಿ ಸುಪ್ತವಾಗಿರುವ ಕೌಶಲ್ಯ ಮತ್ತು ಪ್ರತಿಭೆಯು ಪ್ರಕಟಗೊಳ್ಳಲು ಸೂಕ್ತವಾದ ಹಾಗೂ ಅಚ್ಚುಕಟ್ಟಾದ ಯೋಜನೆಗಳನ್ನು ರೂಪಿಸಬೇಕು.*

- ಶೈಕ್ಷಣಿಕ ಸಾಧನೆ ಮಾತ್ರವಲ್ಲದೆ ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿರುವ ವಿಶೇಷ ಕೌಶಲ್ಯ ಮತ್ತು ಪ್ರತಿಭೆಯನ್ನು ಗುರುತಿಸುವುದು ಅಧ್ಯಾಪಿಕೆಯ ಬಹುಮುಖ್ಯ ಕರ್ತವ್ಯವಾಗಿದೆ.
- ವಿದ್ಯಾರ್ಥಿಯ ಎಲ್ಲಾ ವಿಧದ ಕೌಶಲ್ಯಗಳನ್ನು ಬೆಳೆಸುವ ಚಟುವಟಿಕೆಗಳು ಇರಬೇಕು.

*1.6 ಪಠ್ಯಕ್ರಮವು ಸಂವಿಧಾನವು ತಿಳಿಸುವ ಮೌಲ್ಯಗಳು ಮತ್ತು ವಿಚಾರಧಾರೆಗಳನ್ನು ಒಳಗೊಂಡಿರಬೇಕು.*

- ಪ್ರಜಾಪ್ರಭುತ್ವ, ಜಾತ್ಯತೀತತೆ, ಸಮತ್ವ, ನೈತಿಕತೆ, ಸ್ವಾತಂತ್ರ್ಯ ಮುಂತಾದ ಸಂವಿಧಾನದ ಮೌಲ್ಯಗಳು ಪಠ್ಯಕ್ರಮ ಯೋಜನೆಯ ಪ್ರಧಾನ ಅಂಶಗಳಾಗಿರಬೇಕು.
- ಪೌರರ ಕರ್ತವ್ಯಗಳ ಕುರಿತು ಹೇಳಿರುವ ಸಂವಿಧಾನದ ಪರಿಚ್ಛೇದ (ಆರ್ಟಿಕಲ್) 51 ಎ ಯನ್ನು ಅರ್ಥಮಾಡಿಕೊಂಡು, ಅದರಲ್ಲಿನ 'ಎ' ಯಿಂದ 'ಕೆ' ವರೆಗಿನ ಆಶಯಗಳನ್ನು ಗಮನದಲ್ಲಿಟ್ಟುಕೊಂಡು ವ್ಯವಹರಿಸಬೇಕು.

*1.7 ವಿದ್ಯಾರ್ಥಿಗಳ ಅಗತ್ಯಗಳಿಗನುಸಾರ ಅಧ್ಯಾಪಿಕೆಯ/ಅಧ್ಯಾಪಕನ ಬೋಧನ ರೀತಿಯನ್ನು ಪರಿಷ್ಕರಿಸಬೇಕು.*

- ನಿರಂತರ ಮೌಲ್ಯನಿರ್ಣಯದ ಆಧಾರದಲ್ಲಿ ವಿದ್ಯಾರ್ಥಿಯ ಸ್ವಭಾವ, ಗಳಿಸಿದ ಜ್ಞಾನ, ಅಭಿರುಚಿ, ಕಲಿಕೆಯ ರೀತಿ ಮುಂತಾದುವುಗಳನ್ನು ಪರಿಗಣಿಸಿ, ಬೋಧನೆಯ ವಿಧಾನಗಳಲ್ಲಿ ಅಗತ್ಯವಾದ ಪರಿಷ್ಕಾರವನ್ನು ನಿರಂತರ ನಡೆಸುತ್ತಿರಬೇಕು.

*1.8 ವಿದ್ಯಾರ್ಥಿಗಳು ನೀಡುವ ಅವರ ವ್ಯಕ್ತಿಗತವಾದ ವಿಚಾರಗಳ ಗೌಪ್ಯತೆಯನ್ನು ಕಾಪಾಡುವುದು ಮತ್ತು ಇಂತಹ ವಿಷಯಗಳನ್ನು ಕಾನೂನುಬದ್ಧವಾಗಿ ಯಾರಿಗೆ ತಿಳಿಸಬಹುದೋ ಅವರಿಗೆ ಮಾತ್ರ ತಿಳಿಸುವುದು.*

- ಕೌನ್ಸಿಲರ್ ಕೂಡಾ ಆಗಿರುವ ಅಧ್ಯಾಪಿಕೆಗೆ ವಿದ್ಯಾರ್ಥಿಯ ವ್ಯಕ್ತಿಗತವಾದ ವಿಷಯಗಳನ್ನು ತಿಳಿಯಲು ಸಾಧ್ಯ.
- ಈ ವಿವರಗಳನ್ನು ವಿದ್ಯಾರ್ಥಿಯ ಒಳಿತಿಗಾಗಿ ವಿವೇಕದಿಂದ ಉಪಯೋಗಿಸತಕ್ಕದ್ದು.

*1.9 ವಿದ್ಯಾರ್ಥಿಗಳನ್ನು ಗದರಿಸುವುದು, ಆತಂಕಕ್ಕೀಡುಮಾಡುವುದು, ಶಾರೀರಿಕವಾಗಿ, ಮಾನಸಿಕವಾಗಿ, ಭಾವನಾತ್ಮಕವಾಗಿ ದೌರ್ಜನ್ಯವೆಸಗುವುದು ಮುಂತಾದುವುಗಳನ್ನು ಮಾಡಬಾರದು.*

- ಲೈಂಗಿಕ ದೌರ್ಜನ್ಯದಿಂದ, ಕಡೆಗಣಿಸುವಿಕೆಯಿಂದ, ಶೋಷಣೆಯಿಂದ ವಿದ್ಯಾರ್ಥಿಯನ್ನು ಸಂರಕ್ಷಿಸುವ ಜವಾಬ್ದಾರಿ ಅಧ್ಯಾಪಕರಿಗಿದೆ.
- ಉತ್ತಮ ಕಲಿಯುವಿಕೆಗೆ ಶಿಕ್ಷೆ ಸಹಕಾರಿ ಎಂಬ ತಪ್ಪು ಕಲ್ಪನೆ ದೂರವಾಗಬೇಕು.
- ಇಂತಹ ಸನ್ನಿವೇಶಗಳಲ್ಲಿ ವಿದ್ಯಾರ್ಥಿಗೆ ಲಭಿಸುವ ಕಾನೂನು ರಕ್ಷಣೆಗಳ ಕುರಿತು ಅಧ್ಯಾಪಕರು ತಿಳಿದಿರಬೇಕು.

*1.10 ಯಾವುದೇ ರೀತಿಯ ಲೈಂಗಿಕ ಶೋಷಣೆಯಿಂದ ವಿದ್ಯಾರ್ಥಿಯನ್ನು ಸಂರಕ್ಷಿಸುವುದು.*

- ಯಾವುದೇ ರೀತಿಯ ಲೈಂಗಿಕ ಶೋಷಣೆ, ದೈಹಿಕ ಗಾಯಗಳು ಮಾತ್ರವಲ್ಲದೆ, ದೀರ್ಘಕಾಲ ಉಳಿದುಕೊಳ್ಳುವ ಮಾನಸಿಕ ಆಘಾತವೂ ವಿದ್ಯಾರ್ಥಿಯನ್ನು ಅಧೀರನನ್ನಾಗಿಸುತ್ತದೆ.

ಉದ್ಯೋಗ ಸ್ಥಳಗಳಲ್ಲೂ, ಶಾಲೆಗಳಲ್ಲೂ ನಡೆಯುವ ಲೈಂಗಿಕ ಶೋಷಣೆಯ ವಿರುದ್ಧ ಭಾರತದ ಗೌರವಾನ್ವಿತ ಸುಪ್ರೀಂ ಕೋರ್ಟ್ ಮತ್ತು ಎನ್.ಸಿ.ಪಿ. ನೀಡಿದ ಮಾರ್ಗಸೂಚಿಗಳನ್ನು ಅಧ್ಯಾಪಕರು ಪಾಲಿಸಬೇಕಾಗಿದೆ.

## 2. ರಕ್ಷಕರು ಮತ್ತು ಸಮಾಜದೊಂದಿಗೆ ಇರಬೇಕಾದ ಜವಾಬ್ದಾರಿಗಳು

*22.1 ತಂದೆ–ತಾಯಿಯರೊಂದಿಗೆ ಮತ್ತು ರಕ್ಷಕರೊಂದಿಗೆ ವಿನಯಪೂರ್ವಕವಾದ ವರ್ತನೆ ಇರಬೇಕು.*

- ವಿದ್ಯಾರ್ಥಿಗಳ ಕುರಿತು ಹೆಚ್ಚು ತಿಳಿಯುವುದಕ್ಕಾಗಿ ಅವರ ಹೆತ್ತವರೊಂದಿಗೂ ಗೆಳೆಯರೊಂದಿಗೂ ಉತ್ತಮ ಸಂಪರ್ಕ ಇಟ್ಟುಕೊಳ್ಳುವುದು ಅಗತ್ಯ.
- ಅಧ್ಯಾಪಿಕೆ ಮತ್ತು ಹೆತ್ತವರ ಬಾಂಧವ್ಯವು ವಿದ್ಯಾರ್ಥಿ ಮತ್ತು ಅಧ್ಯಾಪಿಕೆಯ ಸಂಬಂಧವನ್ನು ಹೆಚ್ಚು ನಿಕಟಗೊಳಿಸುತ್ತದೆ.
- ತಮ್ಮ ಮಕ್ಕಳ ಶಾಲೆಯೊಳಗಿನ ಮತ್ತು ಹೊರಗಿನ ಚಟುವಟಿಕೆಗಳ ಕುರಿತು ಅಧ್ಯಾಪಕರಿಂದ ತಿಳಿಯಲು ಹೆಚ್ಚಿನ ಹೆತ್ತವರು ಬಯಸುತ್ತಾರೆ.
- ಬೆಳವಣಿಗೆಯ ಸಂದರ್ಭದಲ್ಲಿ ವಿದ್ಯಾರ್ಥಿಗೆ ಉಂಟಾಗುವ ಪ್ರಮಾದಗಳನ್ನು ಹೆತ್ತವರೊಂದಿಗೆ ಚರ್ಚಿಸುವುದರಿಂದ ಮುಂದೆ ಸಂಭವಿಸಬಹುದಾದ ಹೊಸ ದುರಂತಗಳನ್ನು ತಪ್ಪಿಸಲು ಸಾಧ್ಯವಾಗಬಹುದು.

*2.2 ವಿದ್ಯಾರ್ಥಿಯ ಸ್ವಾಭಿಮಾನಕ್ಕೆ ಧಕ್ಕೆ ತರುವ ಚಟುವಟಿಕೆಗಳಿಂದ ದೂರವಿರುವುದು.*

- ಇತರ ವಿದ್ಯಾರ್ಥಿಗಳ ಮುಂದೆ ವಿದ್ಯಾರ್ಥಿಯ ಸ್ವಾಭಿಮಾನಕ್ಕೆ ಧಕ್ಕೆ ಉಂಟಾಗುವ ರೀತಿಯಲ್ಲಿ ಮಾತನಾಡುವುದನ್ನು ಬಿಟ್ಟುಬಿಡಬೇಕು.
- ಅದೇ ರೀತಿಯಲ್ಲಿ ಹೆತ್ತವರ ಸ್ವಾಭಿಮಾನವನ್ನು ಪ್ರಶ್ನಿಸಬಾರದು.
- ಯಾವುದಾದರೂ ಒಂದು ವಿಭಾಗದ ವಿದ್ಯಾರ್ಥಿಗಳನ್ನು ಮಾತ್ರ ಹಿನ್ನೆಲೆಯಾಗಿರಿಸಿ (ಜಾತಿ, ಮತ, ಆರ್ಥಿಕ ಸ್ಥಿತಿ, ...) ಹೊಗಳುವುದರಿಂದ ಉಳಿದ ವಿದ್ಯಾರ್ಥಿಗಳಲ್ಲಿ ದ್ವೇಷ ಮನೋಭಾವ ಉಂಟಾಗುವುದು.

*2.3 ಭಾರತದ ಸಾಂಸ್ಕೃತಿಕ ಪರಂಪರೆಯ ಕುರಿತು ವಿದ್ಯಾರ್ಥಿಗಳಿಗೆ ಆದರ ಹಾಗೂ ಗೌರವ ಉಂಟಾಗುವಂತೆ ಮಾಡುವುದು.*

- ಭಾರತವು ವಿವಿಧ ಸಂಸ್ಕೃತಿ, ಭಾಷೆ, ಮತ, ನಂಬಿಕೆಗಳ ದೇಶ. ಈ ವೈವಿಧ್ಯವನ್ನು ಪ್ರತಿಯೊಂದು ತರಗತಿಗಳಲ್ಲೂ ಕಾಣಬಹುದು.
- ಭಾರತದಲ್ಲಿ ವಿವಿಧತೆಯಲ್ಲಿ ಏಕತೆಯಿದೆ.
- ಪ್ರತಿಯೊಬ್ಬನಲ್ಲೂ ಪರಸ್ಪರ ಸಹಿಷ್ಣುತೆ ಮತ್ತು ಎಲ್ಲಾ ಸಂಸ್ಕೃತಿಗಳನ್ನು ಗೌರವಿಸುವ ಮನೋಭಾವ ಇರಬೇಕು.
- ಈ ಮನೋಭಾವ ಅಥವಾ ತತ್ವಗಳನ್ನು ಪಠ್ಯಕ್ರಮದ ಮೂಲಕ ಬೆಳೆಸುವ ಪ್ರಜ್ಞಾಪೂರ್ವಕ ಪ್ರಯತ್ನ ಅಗತ್ಯವಾಗಿದೆ.

*2.4 ವಿವಿಧ ಜನಸಮುದಾಯಗಳೊಳಗೆ ಪರಸ್ಪರ ದ್ವೇಷ, ಹಗೆತನವನ್ನು ಬೆಳೆಸುವ ರೀತಿಯ ಕಾರ್ಯಚಟುವಟಿಕೆಗಳಿಗೆ ಕಡಿವಾಣ ಹಾಕಬೇಕು.*

- ಎಲ್ಲ ಮತ, ನಂಬಿಕೆ ಮತ್ತು ಭಾಷೆಗಳಲ್ಲಿ ಸಮಾನ ಗೌರವವನ್ನು ಉಂಟುಮಾಡುವ ರೀತಿಯ ಚಟುವಟಿಕೆಗಳು ತರಗತಿಯಲ್ಲಿ ನಡೆಯಬೇಕು.

- ರಾಷ್ಟ್ರೀಯ ಭಾವೈಕ್ಯದ ದೃಷ್ಟಿಯಿಂದ ಪ್ರತಿಯೊಬ್ಬನೂ ಮೊದಲಿಗೆ ಭಾರತೀಯ. ಬಳಿಕ ಮಾತ್ರವೇ ಒಂದು ಸಮುದಾಯದ ಸದಸ್ಯ ಎಂಬುದು ಮುಖ್ಯ ವಿಷಯವಾಗಬೇಕು.
- ಯಾವುದಾದರೂ ಒಂದು ನಿರ್ದಿಷ್ಟ ಗುಂಪಿನ ಪ್ರಚಾರಕ್ಕಾಗಿ ಶಾಲೆ/ತರಗತಿಯನ್ನು ಬಳಸಬಾರದು.
- ಸಮಕಾಲೀನ ಸಾಮಾಜಿಕ, ರಾಜಕೀಯ ಬೆಳವಣಿಗೆಗಳನ್ನು ಚರ್ಚೆ ಮಾಡುವಾಗ ಅಧ್ಯಾಪಕ/ಅಧ್ಯಾಪಿಕೆ ಯಾವುದಾದರೂ ಒಂದು ಪಕ್ಷದ ಪರವಾಗಿ ಮಾತನಾಡಬಾರದು.

**3. ಅಧ್ಯಾಪನ ವೃತ್ತಿಯಲ್ಲಿ ಹಾಗೂ ಸಹೋದ್ಯೋಗಿಗಳೊಡನೆ ಇರಬೇಕಾದ ಜವಾಬ್ದಾರಿಗಳು**

*3.1 ವೃತ್ತಿ ಪರಿಣತಿಯನ್ನು ಬೆಳೆಸಲು ನಿರಂತರ ಪ್ರಯತ್ನಿಸುವುದು.*

- ಒಬ್ಬ ವಿದ್ಯಾರ್ಥಿಯನ್ನು ನಿರಂತರ ಕಲಿಕೆಯವನನ್ನಾಗಿ ಮಾಡುವುದರೊಂದಿಗೆ ಅಧ್ಯಾಪಕನು ತಾನೂ ಕಲಿಯುತ್ತಿರಬೇಕು.
- ನಿರಂತರವಾಗಿ ಬೆಳೆಯುತ್ತಿರುವ ಜ್ಞಾನ ವಲಯಗಳ ಕುರಿತು, ಅಧ್ಯಾಪನ ರೀತಿಯ ಕುರಿತು ಜ್ಞಾನವನ್ನು ಸಂಪಾದಿಸಲೂ ಅದನ್ನು ಕಾರ್ಯರೂಪಕ್ಕೆ ತರಲೂ ಸಾಧ್ಯವಾಗಬೇಕು.
- ಯಾವ ಯಾವ ಮೂಲಗಳಿಂದ ತನಗೆ ಹೊಸ ಅರಿವು ಲಭಿಸಬಹುದೆಂಬ ಹುಡುಕಾಟ ಅಧ್ಯಾಪಕನ ಕರ್ತವ್ಯವಾಗಿರಬೇಕು.

*3.2 ಸಹೋದ್ಯೋಗಿಗಳೊಂದಿಗೆ ಹಾಗೂ ಇತರರೊಂದಿಗೆ ಪರಸ್ಪರ ಆಶಯ ವಿನಿಮಯ ಮಾಡುವುದರಿಂದ ಹೊಸತಾದ ಜ್ಞಾನ ವಲಯ ಸೃಷ್ಟಿಯಾಗುವುದು.*

- ಶಾಲೆಯಲ್ಲಿ ಶೈಕ್ಷಣಿಕ ಜಾಗೃತಿಯನ್ನು ಮೂಡಿಸುವುದು ಮತ್ತು ಎಲ್ಲ ಅಧ್ಯಾಪಕರಿಗೆ ತಮ್ಮದೇ ಆದ ಕೊಡುಗೆ ನೀಡುವ ಅವಕಾಶವನ್ನು ಕಲ್ಪಿಸಿ ಉತ್ತಮ ವಾತಾವರಣವನ್ನು ಉಂಟುಮಾಡುವುದು.
- ಇಂತಹ ಸನ್ನಿವೇಶವುಂಟಾಗಲು ಪೂರ್ವಯೋಜನೆ ಮತ್ತು ಫಲಪ್ರದವಾದ ಸಹಕಾರ ಮನೋಭಾವ ಎಲ್ಲ ಅಧ್ಯಾಪಕರಲ್ಲೂ ನಿರ್ಮಾಣವಾಗಬೇಕು.
- ಶಾಲೆಯ ಯಾವುದೇ ರೀತಿಯ ಸಮಸ್ಯೆಗಳನ್ನು ಪರಿಹಾರ ಮಾಡುವಲ್ಲಿ ಎಲ್ಲ ಅಧ್ಯಾಪಕರ ಒಗ್ಗಟ್ಟು, ಚರ್ಚೆ, ಕ್ರಿಯಾತ್ಮಕ ಮಾರ್ಗದರ್ಶನ ಹಾಗೂ ಫಲಪ್ರದ ಕಾರ್ಯಚಟುವಟಿಕೆ ಇರಬೇಕು.
- ಅಧ್ಯಾಪಕರನ್ನು ಮಾತ್ರವಲ್ಲದೆ ಶಾಲೆಯ ವಿಷಯಗಳಲ್ಲಿ ಮುತುವರ್ಜಿಯಿರುವ ಎಲ್ಲರನ್ನು ಇಂತಹ ಕ್ರಿಯಾಚಟುವಟಿಕಗಳಲ್ಲಿ ಪಾಲ್ಗೊಳ್ಳುವಂತೆ ಮಾಡಲು ಅಧ್ಯಾಪಕನಿಗೆ ಸಾಧ್ಯವಾಗಬೇಕು.

*3.3 ಸಹೋದ್ಯೋಗಿಗಳೊಡನೆ ಗೌರವಾದರಗಳೊಂದಿಗೆ ವ್ಯವಹರಿಸಬೇಕು.*

- ಶಾಲೆಯ ಎಲ್ಲ ಅಧ್ಯಾಪಕರೊಡನೆ ಅವರ ವಿದ್ಯಾಭ್ಯಾಸ ಯೋಗ್ಯತೆ, ಅವರು ಯಾವ ವಿದ್ಯಾರ್ಥಿಗಳಿಗೆ ಕಲಿಸುತ್ತಿದ್ದಾರೆ ಎಂಬುದನ್ನು ನೋಡದೆ ಅವರೊಂದಿಗೆ ಗೌರವಾದರಗಳಿಂದ ವ್ಯವಹರಿಸಬೇಕು.

*3.4 ಅಧ್ಯಾಪಕರು ಖಾಸಗಿಯಾಗಿ ಟ್ಯೂಶನ್ ತರಗತಿಗಳನ್ನು ನಡೆಸುವುದು ಅಥವಾ ಇತರ ಖಾಸಗಿ ಶಿಕ್ಷಣ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಸಮರ್ಪಕವಲ್ಲ.*

- ಅಧ್ಯಾಪಕರು ಖಾಸಗಿಯಾಗಿ ಟ್ಯೂಶನ್ ನಡೆಸುವುದರಿಂದ ಅಧ್ಯಾಪಕನ ಶಾಲಾ ಚಟುವಟಿಕೆಗಳ ಮೇಲೆ ಕೆಟ್ಟ ಪರಿಣಾಮ ಉಂಟಾಗಬಹುದು.
- ಖಾಸಗಿ ಟ್ಯೂಶನ್ ನಡೆಸುವುದರಿಂದ ಶಾಲೆಯ ನೈತಿಕ ತತ್ವ ಸಿದ್ಧಾಂತಗಳಿಗೆ ಧಕ್ಕೆಯುಂಟಾಗುವಂಥ ವ್ಯವಹಾರಗಳಿಗೆ ಕಾರಣವಾಗುವುದು.

*3.5 ತನ್ನ ಚಟುವಟಿಕೆಗಳು ಮತ್ತು ತೀರ್ಮಾನಗಳು ಪರರ ಪ್ರಭಾವಕ್ಕೊಳಗಾಗದಂತೆ ನೋಡಿಕೊಳ್ಳಲು ಯಾವುದೇ ವಿಧವಾದ ಉಡುಗೊರೆ ಅಥವಾ ಇತರ ಸಹಾಯಗಳನ್ನು ಸ್ವೀಕರಿಸುವುದಿಲ್ಲ.*

- ಯಾವುದೇ ರೀತಿಯ ಸೌಲಭ್ಯಗಳನ್ನು ನಿರೀಕ್ಷಿಸಿಕೊಂಡು ಕೊಡಮಾಡುವ ಬೆಲೆಬಾಳುವ ಉಡುಗೊರೆಗಳನ್ನು ಅಧ್ಯಾಪಕರು ವಿದ್ಯಾರ್ಥಿಯಿಂದ ಅಥವಾ ಹೆತ್ತವರಿಂದ ಸ್ವೀಕರಿಸಬಾರದು.

*3.6 ಸಹೋದ್ಯೋಗಿಗಳಿಗೆದುರಾಗಿ ಮತ್ತು ಮೇಲಿನ ಅಧಿಕಾರಿಗಳಿಗೆದುರಾಗಿ ಅನಗತ್ಯವಾದ ಆರೋಪಗಳನ್ನು ಮಾಡುವುದಿಲ್ಲ.*

- ಪರಸ್ಪರ ತಪ್ಪು ಹೊರಿಸುವ ಗುಂಪುಗಾರಿಕೆ ಅಧ್ಯಾಪಕರಲ್ಲಿ ಇರಬಾರದು.
- ಸಾಕ್ಷ್ಯಗಳಿಲ್ಲದೆ ಸಹೋದ್ಯೋಗಿಗಳ ಮೇಲೆ ಆರೋಪ ಮಾಡಬಾರದು.
- ಯಾವುದಾದರೂ ಸಹೋದ್ಯೋಗಿ/ಸಹೋದ್ಯೋಗಿಗಳಲ್ಲಿ ಗಂಭೀರವಾದ ಅಪರಾಧ ಕಂಡುಬಂದರೆ ಅದನ್ನು ಹಿರಿಯ ಅಧ್ಯಾಪಕರ ಗಮನಕ್ಕೆ ತರಬೇಕು.

*3.7 ಸಹೋದ್ಯೋಗಿಗಳ, ವಿದ್ಯಾರ್ಥಿಗಳ ಅಥವಾ ಹೆತ್ತವರ ಎದುರಲ್ಲಿ ಸಹೋದ್ಯೋಗಿಯೊಬ್ಬನ ಮೇಲೆ ದೋಷಾರೋಪಣೆ ಮಾಡಬಾರದು.*

- ಅಧ್ಯಾಪಕರ ಬಗ್ಗೆ ವಿಭಿನ್ನ ರೀತಿಯ ಅಭಿಪ್ರಾಯಗಳಿರಬಹುದು. ಅವುಗಳನ್ನು ಯೋಗ್ಯ ರೀತಿಯಲ್ಲಿ ವ್ಯಕ್ತಪಡಿಸಬೇಕು.
- ಸಹೋದ್ಯೋಗಿಯ ಅಧ್ಯಾಪನ ರೀತಿಯನ್ನು ಅಪಹಾಸ್ಯ ಮಾಡುವ ರೀತಿಯಲ್ಲಿ ಮಾತನಾಡಬಾರದು.

*3.8 ಸಹೋದ್ಯೋಗಿಗಳ ಬೋಧನ ಗುಣಮಟ್ಟವನ್ನು ಗೌರವಿಸುವುದು.*

- ಅಧ್ಯಾಪನದಲ್ಲಿ ಉತ್ತಮ ಸಾಧನೆ ಮಾಡಿದವರ ಚಟುವಟಿಕೆಗಳನ್ನು ಶ್ಲಾಘಿಸಬೇಕು. ಮಾತ್ರವಲ್ಲದೆ ಅಂತಹ ಸಾಧನೆಯನ್ನು ಮಾಡಲು ಪ್ರಯತ್ನಿಸಬೇಕು. ಆದರೆ ಅದು ಅಂಧಾನುಕರಣೆಯಾಗಲೇಬಾರದು.

*3.9 ಸಹೋದ್ಯೋಗಿಗಳ ಕುರಿತು ತಿಳಿದಿರುವ ವೈಯಕ್ತಿಕ ವಿವರಗಳನ್ನು ಗೌಪ್ಯವಾಗಿಡಬೇಕು. ಅಗತ್ಯವಾದಾಗ ಮಾತ್ರ ಕಾನೂನು ಪ್ರಕಾರ ತಿಳಿಯಪಡಿಸುವುದು.*

- ಯಾವುದಾದರೂ ಅಗತ್ಯಕ್ಕಾಗಿ ಸಂಗ್ರಹಿಸಲ್ಪಟ್ಟ ಸಹೋದ್ಯೋಗಿಗಳ ವೈಯಕ್ತಿಕ ವಿವರಗಳು ಗೌಪ್ಯವಾಗಿಡುವಂಥವುಗಳಾಗಿದ್ದಲ್ಲಿ ಅವುಗಳನ್ನು ಕಾನೂನುಬದ್ಧವಾದ ಕಾರ್ಯಗಳಿಗೆ ಮಾತ್ರ ತಿಳಿಯಪಡಿಸತಕ್ಕದ್ದು.

## 1.14 ಟೀಚಿಂಗ್ ಮ್ಯಾನುವೆಲ್

ಕಲಿಕಾ ಸಾಧನೆಗಳನ್ನು ಉದ್ದೇಶವಾಗಿಟ್ಟು ತಮ್ಮ ಕಾರ್ಯಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಪ್ರತಿಯೋರ್ವ ಅಧ್ಯಾಪಕನಿಗೂ ಸಾಧ್ಯವಾಗಬೇಕು. ಪಠ್ಯಪುಸ್ತಕದಲ್ಲಿ ಮತ್ತು ಅಧ್ಯಾಪಕರ ಪಠ್ಯದಲ್ಲಿ ನೀಡಿರುವ ಚಟುವಟಿಕೆಗಳನ್ನು ತರಗತಿಯ ಮಕ್ಕಳಿಗೆ ಅನುಕೂಲವಾದ ರೀತಿಯಲ್ಲಿ ತಿದ್ದಿಕೊಳ್ಳುವ ಅಥವಾ ಸೇರಿಸಿಕೊಳ್ಳುವ ಯೋಜನೆಯಿರಬೇಕು. ಪ್ರತಿಯೊಂದು ಕಲಿಕಾಸಾಧನೆ ಈಡೇರಲು ಬೇಕಾಗುವಷ್ಟು ಕಾರ್ಯಚಟುವಟಿಕೆಗಳು ಯೋಜನೆಯಲ್ಲಿರಬೇಕು.

ಕಲಿಕಾ ಚಟುವಟಿಕೆಗಳ ಜೊತೆಗೆ ಮೌಲ್ಯನಿರ್ಣಯವನ್ನೂ ಒಳಗೊಂಡಿರುವ ಯೋಜನೆಗಳು ಪಾಠಪ್ರಕ್ರಿಯೆಯ ಪುಟದಲ್ಲಿರಬೇಕು. ನಿರಂತರ ಮೌಲ್ಯಮಾಪನದಲ್ಲಿ ಲಭಿಸುವ ವಿವರಗಳ ದಾಖಲಾತಿಯು ಮೌಲ್ಯನಿರ್ಣಯ ಪುಟದಲ್ಲಿರಬೇಕು.

ಮುಂದಿನ ಒಂದು ವಾರಕ್ಕೆ ಬೇಕಾಗಿ ತಯಾರಿಸುವ ಟೀಚಿಂಗ್ ಮ್ಯಾನುವೆಲ್, ಸ್ಕೂಲ್ ರಿಸೋರ್ಸ್ ಗ್ರೂಪ್ (SRG) ನಲ್ಲಿ / ವಿಷಯ ಸಮಿತಿಗಳಲ್ಲಿ (Subject Councils) ಮಂಡಿಸುವುದು ಉತ್ತಮ. ಒಂದು ವಾರದ ಮೌಲ್ಯಮಾಪನ ಪುಟದ ವಿವರಗಳನ್ನು ಆಧಾರವಾಗಿಟ್ಟುಕೊಂಡು ಅಧ್ಯಾಪಕನು ಸರಳವಾದ ಅವಲೋಕನ ಟಿಪ್ಪಣಿ (Reflection Note) ತಯಾರಿಸಿ, **SRG/SC** ಯಲ್ಲಿ ಚರ್ಚೆ ಮಾಡಬಹುದು. ಈ ಟಿಪ್ಪಣಿಯ ಆಧಾರದಲ್ಲಿ ಅಧ್ಯಾಪಕನ ಮುಂದಿನ ಯೋಜನಾ ಟಿಪ್ಪಣಿಗಳು ತಯಾರಾಗಬೇಕು.

ಟೀಚಿಂಗ್ ಮ್ಯಾನುವೆಲ್‌ನ ನಮೂನೆಯನ್ನು ಕೊಡಲಾಗಿದೆ.

## ಟೀಚಿಂಗ್ ಮ್ಯಾನುವೆಲ್

ಪಾಠದ ಹೆಸರು :
ದಿನಾಂಕ :
ಸಮಯ :
ವಿಷಯ (Theme) :
ಕಲಿಕಾ ಸಾಧನೆಗಳು :
ಆಶಯಗಳು :
ಕೌಶಲ್ಯಗಳು :
ಭಾಷಾ ಸತ್ಯಾಂಶಗಳು (ಭಾಷೆಗೆ ಮಾತ್ರ) :
ವ್ಯವಹಾರ ರೂಪಗಳು (ಭಾಷಾ ವಿಷಯಕ್ಕೆ ಮಾತ್ರ) :
ಮೌಲ್ಯಗಳು – ಮನೋಭಾವಗಳು :
ಕಲಿಕೋಪಕರಣಗಳು :
ಉತ್ಪನ್ನಗಳು :

| ಪ್ರಕ್ರಿಯೆ | ಮೌಲ್ಯನಿರ್ಣಯ |
|---|---|
| ಚಟುವಟಿಕೆ ಮತ್ತು ಮೌಲ್ಯಮಾಪನಗಳನ್ನೊಳಗೊಂಡ ಪ್ರಕ್ರಿಯೆ | (ಮೌಲ್ಯನಿರ್ಣಯದ ವಿವರಗಳನ್ನು ಇಲ್ಲಿ ದಾಖಲಿಸಬೇಕು) |

ಮುಖ್ಯೋಪಾಧ್ಯಾಯನಿ/ಮುಖ್ಯೋಪಾಧ್ಯಾಯರ ಸಹಿ

ಅಧ್ಯಾಪಕ/ಅಧ್ಯಾಪಿಕೆಯ ಸಹಿ

## ಅವಲೋಕನ ಟಿಪ್ಪಣಿ (Reflections)

**ನನ್ನ ನಿಗಮನಗಳು ಮತ್ತು ಹೊಸ ಅರಿವುಗಳು**

(ಕಲಿಕಾ ಚಟುವಟಿಕೆಗಳು ಮತ್ತು ಮೌಲ್ಯನಿರ್ಣಯ ಪ್ರಕ್ರಿಯೆಗಳಿಂದ ಲಭಿಸಿದ ಮಾಹಿತಿಗಳ ಆಧಾರದಲ್ಲಿ)

- 
- 
- 
- 

ಮುಂದುವರಿದ ಚಟುವಟಿಕೆಗಳು ಮತ್ತು ಪರಿಹಾರ ಚಟುವಟಿಕೆಗಳು

- 
- 
- 
- 

## ಅವಲೋಕನ ಟಿಪ್ಪಣಿ (Reflection note) ಯಾಕೆ?

ನಿರ್ದಿಷ್ಟ ಕಲಿಕಾ ಸಾಧನೆಗಳಿಗನುಸಾರವಾಗಿ ನಡೆಸಲಾದ ಕಲಿಕಾ ಚಟುವಟಿಕೆಗಳು ಪೂರ್ತಿಯಾದ ಬಳಿಕ ಅವಲೋಕನ ಟಿಪ್ಪಣಿ ತಯಾರಿಸಬೇಕು.

- ಈ ಟಿಪ್ಪಣಿಗಳನ್ನು ಪ್ರತಿವಾರದ SRG ಸಭೆಯಲ್ಲಿ ಮಂಡಿಸಬೇಕು.
- ಮುಂದಿನ ಯೋಜನೆಗಳಿಗೆ ಸೂಕ್ತ ಮಾರ್ಗದರ್ಶನ ನೀಡಲು.
- ಒಂದು ಅವಧಿಯ C.E. ಕ್ರೋಡೀಕರಿಸುವುದಕ್ಕಾಗಿ.

# 2. ಕಲೆಯ ಕಲಿಕೆ – ಅಗತ್ಯ ಮತ್ತು ಪ್ರಾಧಾನ್ಯ

**ಪ್ರ**ಪಂಚದ ಯಾವುದೇ ಭಾಗದಲ್ಲಿರುವವರಿಗೆ ಆಶಯ ವಿನಿಮಯ ನಡೆಸಲು ಸಾಧ್ಯವಾಗುವ ಭಾಷೆಯ ಕಲೆ, ಕಲೆಯ ಮೂಲಕ ವ್ಯಕ್ತಿಯು ತನ್ನನ್ನು ತಾನು ತಿಳಿದುಕೊಂಡು ಪ್ರಪಂಚದಲ್ಲಿ ತನಗಿರುವ ಸ್ಥಾನವನ್ನು ಅರ್ಥಮಾಡಿಕೊಂಡು ಜೀವನದ ಅರ್ಥವನ್ನು ಕಂಡುಹಿಡಿಯುವರು. ಆದ್ದರಿಂದ ಕಲೆಯ ಕಲಿಕೆ ಎನ್ನುವರು. ಆತ್ಮ ಸಾಕ್ಷಾತ್ಕಾರಕ್ಕಿರುವ ಒಂದು ದಾರಿಯೆಂದು ತಿಳಿಯಬಹುದು.

ಕೇವಲ ಸುಖಲೋಲುಪ ಬದುಕಿನ ಹೊರತಾಗಿ ತನ್ನ ಸುತ್ತಮುತ್ತಲಿರುವ ಸೌಂದರ್ಯ ಪ್ರಪಂಚಕ್ಕೆ ಮಗುವನ್ನು ಕೊಂಡೊಯ್ಯಲು ಕಲಾಕಲಿಕೆಯು ಅತಿ ಪ್ರಧಾನವಾದ ಜವಾಬ್ದಾರಿಯನ್ನು ನಿರ್ವಹಿಸಬೇಕಾಗಿದೆ. ವೈಯಕ್ತಿಕ ಮತ್ತು ಗುಂಪು ಚಟುವಟಿಕೆಗಳ ಮೂಲಕ ವಿವಿಧ ಸಾಮಾಜಿಕ ಜೀವನ ನೈಪುಣ್ಯಗಳಿಗೆ ಮಗುವನ್ನು ಕೈಹಿಡಿದು ಮುನ್ನಡೆಸಲು ಕಲೆಯಕಲಿಕೆ ಸಹಾಯಕವಾಗಿದೆ. ಸಾಂಸ್ಕೃತಿಕ ಪ್ರಜ್ಞೆ, ಮೌಲ್ಯಗಳ ಅರಿವು, ಆತ್ಮವಿಶ್ವಾಸ ಎಂಬಿವುಗಳನ್ನು ನೀಡಲು ಕಲೆಯ ಕಲಿಕೆ ಪ್ರಯೋಜನಕಾರಿಯಾಗಿದಗೆ.

ವ್ಯಕ್ತಿಯ ಸಮಗ್ರ ವಿಕಾಸವು ಶಿಕ್ಷಣದ ಮುಖ್ಯ ಗುರಿಯಾಗಿದೆ. ಶಾಸ್ತ್ರೀಯ ಮತ್ತು ಮಾನಸಿಕ ವಲಯದಂತೆ ಮಗುವಿನ ಭಾವನಾತ್ಮಕ ವಲಯವೂ, ವಿಕಾಸ ಹೊಂದಬೇಕೆಂದು ಮನಃಶಾಸ್ತ್ರದ ಸಿದ್ಧಾಂತಗಳು ಜಗತ್ತಿಗೆ ಸಾರಿವೆ. ಆ ಮೂಲಕ ಕಲೆಯ ಕಲಿಕೆಯ ಮಹತ್ವವನ್ನು ತಿಳಿದು ವಿವಿಧ ರಾಷ್ಟ್ರಗಳ ಪಠ್ಯಕ್ರಮಗಳಲ್ಲಿ ಅದು ನಿರ್ಣಾಯಕವಾದ ಸ್ಥಾನವನ್ನು ಗಳಿಸಿತು. ಬಹುಮುಖಬುದ್ಧಿ ಸಿದ್ಧಾಂತಗಳ ಪ್ರತಿಪಾದಿಸುವಂತೆ ಬುದ್ಧಿಯ ಭಿನ್ನಸ್ತರಗಳನ್ನು ಬೆಳೆಸಲು ಯೋಗ್ಯವಾದ ಮಾಧ್ಯಮವೇ ಕಲೆ., ಸಂಗೀತ, ಪ್ರಕೃತಿಪರ, ದೃಶ್ಯಸ್ಥಳಪರ, ಶಾರೀರಿಕ ಚಲನಾಪರ, ವ್ಯಕ್ತ್ಯಾಂತರ, ಆಂತರಿಕ ವೈಯಕ್ತಿಕ ಎಂಬೀ ಬೌದ್ಧಿಕ ಘಟಕಗಳಿಗೆ ಗಣ್ಯವಾದ ವಿಕಾಸ ಸಾಧ್ಯತೆಗಳನ್ನು ಕಲೆಯಕಲಿಕೆಯು ನೀಡುವುದು. ಇದರೊಂದಿಗೆ ಭಾಷಿಕ ಮತ್ತು ಗಣಿತ ಸಂಬಂಧವಾದ ಬೌದ್ಧಿಕ ವಿಕಾಸಕ್ಕೆ ಅನುವಂಶಿಕವಾದ ಅವಕಾಶಗಳನ್ನು ಇದು ಒದಗಿಸುವುದು.

ಮನುಷ್ಯ ಮನಸ್ಸನ್ನು ನಿರ್ಮಲಗೊಳಿಸಿ ಜೀವನದಲ್ಲಿ ಹೊಸ ಉತ್ತೇಜನವನ್ನು ನೀಡುವುದಕ್ಕೆ ಕಲೆಗಳಿಗೆ ಸಾಮರ್ಥ್ಯವಿದೆ. ಶಾಲೆಯಿಂದ ಕಲೆಯನ್ನು ಬೇರ್ಪಡಿಸಿದರೆ ನಾವು ಸೃಷ್ಟಿಸುವುದು ರಾಮರಾಜ್ಯಕ್ಕೆ ಬದಲಾಗಿ ರಾವಣರಾಜ ವಾಗಿರಬಹುದು ಎಂದು ಹೇಳಿದ ಶ್ರೇಷ್ಠ ಅಧ್ಯಾಪಕ ಚಿಂತಕ ಡಾ. ಎಸ್. ರಾಧಾಕೃಷ್ಣ ಅವರ ಅಭಿಪ್ರಾಯವು ಹೆಚ್ಚು ಪುಸ್ತಕವಾಗಿದೆ. ಮಕ್ಕಳನ್ನು ಕ್ರಿಯಾಶೀಲರಾಗಿಯೂ, ಉತ್ಸಾಹಶೀಲರಾಗಿಯೂ ಮಾಡುವ ಅಧಿಕ ಚೈತನ್ಯವನ್ನು ಸರಿಯಾದ ದಿಕ್ಕಿಗೆ ಬಿಡದಿದ್ದಲ್ಲಿ ಅದು ವಿನಾಶಕಾರಿಯಾಗಿ ಪರಿಣಮಿಸಬಹುದು. ಮಕ್ಕಳ ಈ ರೀತಿಯ ಅಧಿಕ ಚೈತನ್ಯವನ್ನು ಕಲೆಯ ಆಸ್ವಾದನೆ

ಹಾಗೂ ಕಲೆಯ ಪ್ರಯೋಗದ ಕಡೆಗೆ ಕೊಂಡೊಯ್ಯಬೇಕು. ಅದು ಅವರಿಗೆ ಸಮಾಜದಲ್ಲಿ ಸಂಪನ್ಮೂಲವಾಗಿ ಪರಿಣಮಿಸುವುದು.

ಅತ್ಯಂತ ಸಂಪನ್ನವೂ, ವಿಪುಲವೂ, ವೈವಿಧ್ಯಪೂರ್ಣವೂ ಆದ ಕಲಾಸಾಂಸ್ಕೃತಿಕ ಹಿನ್ನೆಲೆಯು ಭಾರತಕ್ಕಿದೆ. ಸಂಗೀತ ನೃತ್ಯ ಶಿಲ್ಪ, ನಾಟಕ ಮೊದಲಾದ ಕಲೆಗಳು ಭಾರತೀಯ ಜೀವನದಲ್ಲಿ ಹಾಸುಹೊಕ್ಕಾಗಿದೆ. "ನಾಟ್ಯ ಶಾಸ್ತ್ರ" ದಂತಹ ಶ್ರೇಷ್ಠ ಕೃತಿಗಳು ಭಾರತದಲ್ಲಿ ಸೃಷ್ಟಿಯಾಗಿರುವುದು ಇಲ್ಲಿನ ಕಲೆಯ ಕಲಿಕೆ ಹಾಗೂ ಚಿಂತನೆಗಳಿಗೆ ಪ್ರಮಾಣ ಭೂತವಾಗಿವೆ. ಗುರು ಕುಲ ಶಿಕ್ಷಣ ಪದ್ಧತಿಯಲ್ಲಿ ಹಾಗೂ ಬೌದ್ಧ ಧರ್ಮ ಕಾಲಘಟ್ಟದ ವಿಶ್ವವಿದ್ಯಾಲಯಗಳ ಪಠ್ಯಕ್ರಮಗಳಲ್ಲಿ ಅಗತ್ಯ ಅಂಶಗಳಾಗಿ ಕಲೆಯ ಕಲಿಕೆಯೂ ಸೇರಿತ್ತು. ಭಾರತದಲ್ಲಿ ಆಧುನಿಕ ಶಿಕ್ಷಣವು ಪ್ರಚಾರ ಪಡೆದಾಗ ಪಠ್ಯಕ್ರಮದಲ್ಲಿ ಕಲೆಗಳಿಗೆ ಸ್ಥಾನ ಲಭಿಸಿತ್ತು. ಗಾಂಧೀಜಿಯವರು ಅನುಷ್ಠಾಣಕ್ಕೆ ತಂದ ಮೂಲವಿದ್ಯಾಭ್ಯಾಸದಲ್ಲಿಯೂ ಕರಕೌಶಲ್ಯಕ್ಕೆ ಹೊರತಾಗಿ ಲಲಿತಕಲೆಗಳಿಗೂ ಅವಕಾಶವಿತ್ತು. ಸ್ವಾತಂತ್ರ್ಯಾ ನಂತರದ ಭಾರತದಲ್ಲಿ ವಿವಿಧ ಪಠ್ಯಕ್ರಮ ಪರಿಷ್ಕರಣೆಯ ಹಂತಗಳಲ್ಲಿ ಕಲೆಯ ಕಲಿಕೆಯು ಸೇರಿಕೊಂಡಿದ್ದರೂ, ವಿನಿಮಯ ಹಂತದಲ್ಲಿ ಕಡೆಗಣಿಸಲ್ಪಟ್ಟಿತು. ಕೇರಳದ ಸಾಮಾಜಿಕ ಜೀವನದಲ್ಲಿಯೂ  ಕಲೆಯೊಂದಿಗಿರುವ ಜೈವಿಕ ಸಂಬಂಧವನ್ನು ಕಾಣಬಹುದು. ಕೃಷಿ ಹಾಗೂ ಇತರ ಉದ್ಯೋಗ ವಲಯಗಳ  ವಿಧಿಯಾಚರಣೆಗಳಿಗೆ ಸಂಬಂಧಿಸಿದ ಕಲೆಗಳು ಗುರುಕುಲ ಸಂಪ್ರದಾಯದ ಕಲೆಯ ಅಭ್ಯಾಸದ ರೀತಿಯಲ್ಲಿ ತಲೆಮಾರಿನಿಂದ ತಲೆಮಾರಿಗೆ ದಾಟಿ ಬಂದಿರುವುದು ಇತಿಹಾಸ.

ಆಧುನಿಕ ಶಿಕ್ಷಣವು ವ್ಯಾಪಿಸುವ ವರೆಗೆ ಗುರುಕುಲ ಕಲೆಯ ಕಲಿಕೆಯಲ್ಲಿ ಜ್ಯಾರಿಯಲ್ಲಿತ್ತು. ಅರುವತ್ತರ ದಶಕದಲ್ಲಿ ಅನುಷ್ಠಾನಗೊಂಡ ಪಠ್ಯಕ್ರಮದಲ್ಲಿ 1 ರಿಂದ 8 ರ ವರೆಗಿನ ತರಗತಿಗಳ ವಿದ್ಯಾರ್ಥಿಗಳಿಗೆ ವರ್ಣ ಚರಿತ್ರೆ, ಮಾಡೆಲಿಂಗ್, ಸಂಗೀತ ಮೊದಲಾದ ವಲಯಗಳಲ್ಲಿ ಕಲಿಕಾನುಭವಗಳನ್ನು  ನೀಡಲು ನಿರ್ದೇಶಿಸಲಾಗಿತ್ತು. ರಾಷ್ಟ್ರೀಯ ಶಿಕ್ಷಣ ನೀತಿಯ ಭಾಗವಾಗಿ ರೂಪಿಸಿದ ಪಠ್ಯ ಕ್ರಮದಲ್ಲಿ ವಿವಿಧ ತರಗತಿಗಳಿರುವ ವಿಸ್ತತವಾದ ಪಾಠಭಾಗಳನ್ನು ಅಳವಡಿಸಲಾಗಿತ್ತು. ಆದರೆ ಬೇಕಾದಷ್ಟು ಅಧ್ಯಾಪಕರಿಲ್ಲದಿರುವುದು, ಇರುವವರಿಗೆ ಪಠ್ಯಕ್ರಮ ವಿನಿಮಯಕ್ಕೆ ಅಗತ್ಯವಾದ ತರಬೇತಿ ಲಭಿಸದಿರುವುದು, ಈ ವಲಯದ ಅವಗಣನೆಗೆ ಕಾರಣವಾಯಿತು. ಕಲಾ ಕಲಿಕೆಯನ್ನು  ಸರಿಯಾಗಿ ಮೌಲ್ಯನಿರ್ಣಯ ಮಾಡುವುದೋ, ಕಲಿಕಾಸಾಧನೆಗಳನ್ನು ಹೆತ್ತವರೊಂದಿಗೆ ಹಂಚಿಕೊಳ್ಳುವುದೋ,ಸರಿಯಾಗಿ ನಡೆಯಲ್ಲಿಲ್ಲ. ಇದರಿಂದಾಗಿ ಸಮಾಜವೂ ಈ  ವಲಯವನ್ನು ಕಲಿಕೆಯ ಭಾಗ ಎಂದು ಪರಿಗಣಿಸದ ಸ್ಥಿತಿಯುಂಟಾಯಿತು. ಜಾಗತಿಕವಾಗಿ ಕಲೆಯ ಕಲಿಕೆಗೆ ನೀಡಬೇಕಾದ ಮಹತ್ವವನ್ನು ಯುನೆಸ್ಕೊ ಮೊದಲಾದ ಸಂಸ್ಥೆಗಳು ಬಿತ್ತಿ ಹೇಳಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬೇಕಾಗಿದೆ. ಭಾರತದ ವಿವಿಧ ಶಿಕ್ಷಣ ಆಯೋಗಗಳು ಶೈಕ್ಷಣಿಕ ನೀತಿನಿಯಮಗಳು ಕಲೆಯ ಕಲಿಕೆಯ ಪ್ರಧಾನ್ಯವನ್ನು ಎತ್ತಿ ಹೇಳಿವೆ. ಈ ಹಿನ್ನಲೆಯಲ್ಲಿ ಕೇರಳದ ಕಲಾಶಿಕ್ಷಣ ಪಠ್ಯಕ್ರಮವನ್ನು ಕಾಲೋಚಿತವಾದ ಪರಿಷ್ಕರಣೆಗೆ ಒಳಪಡಿಸಲಾಗುತ್ತಿದೆ.

## ಕಲಾಶಿಕ್ಷಣ–ವಿವಿಧ ನಿರೀಕ್ಷಣೆಗಳು

ಕಲಾಶಿಕ್ಷಣದ ಮಹತ್ವದ ಕುರಿತು ಅಂತರಾಷ್ಟ್ರೀಯ ಮಟ್ಟದಲ್ಲೂ ರಾಷ್ಟ್ರ ಮಟ್ಟದಲ್ಲೂ ವಿವಿಧ ಸಂಸ್ಥೆಗಳು ಆಯೋಗ ಉಚಿತವಾದ ಅನೇಕ ನಿರೀಕ್ಷಣೆಗಳನ್ನು ನಡೆಸಿವೆ. ಮಕ್ಕಳಲ್ಲಿ ಆತ್ಮವಿಶ್ವಾಸ, ಆತ್ಮಸಂಬಂಧ ಇತರರನ್ನು ಅಂಗೀಕರಿಸುವುದು ಎಂಬ ಗುಣಗಳನ್ನು ಬೆಳೆಸಲು ಕಲೆಗಿರುವ ಸಾಧ್ಯತೆಯನ್ನು ಯುನೆಸ್ಕೊ ಎತ್ತಿ ಹೇಳುತ್ತದೆ. ಕಲಾಕಲಿಕೆಯೊಂದಿಗೆ ಮಕ್ಕಳಲ್ಲಿ ಭಾವನಾತ್ಮಕವೂ ಸಾಮಾಜಿಕವೂ ಆದ

ಬೆಳವಣಿಗೆ ಸಾಧ್ಯವಾಗುವದೆಂದು ಯುನೆಸ್ಕೊ ಬಯಸುತ್ತದೆ.

ಮಕ್ಕಳ ಸರ್ವತೋಮುಖವಾದ ಅಭಿವೃದ್ಧಿಯಲ್ಲಿ ಕಲಾಶಿಕ್ಷಣಕ್ಕೆ ಪ್ರಧಾನವಾದ ಸ್ಥಾನವಿದೆಯೆಂದು ಭಾರತದ ವಿವಿಧ ಶಿಕ್ಷಣ ಆಯೋಗಗಳು ವ್ಯಕ್ತಪಡಿಸಿವೆ.

**ಮೊದಲಿಯಾರ್ ಕಮಿಷನ್ ರಿಪೋರ್ಟ್ (1952-53) ಹೀಗೆ ಹೇಳುತ್ತದೆ –**

ಚಿತ್ರರಚನೆ ಕರಕೌಶಲ, ಸಂಗೀತ, ನೃತ್ಯ, ನಾಟಕ ಮೊದಲಾದವುಗಳಿಗೆ ಶಾಲಾ ಪಠ್ಯಕ್ರಮದಲ್ಲಿ ಪ್ರಧಾನವಾದ ಸ್ಥಾನವನ್ನು ನೀಡಬೇಕೆಂದು ಆಯೋಗವು ಸೂಚಿಸುತ್ತದೆ.

**ಕೊಠಾರಿ ಕಮಿಷನ್ ರಿಪೋರ್ಟಿನಲ್ಲಿ (1962-64) ಹೀಗೆ ಹೇಳುತ್ತದೆ –**

ಕೊಠಾರಿ ಕಮಿಷನ್ ಸೂಚನೆಗಳ ಆಧಾರದಲ್ಲಿ ಕಲಾಕಲಿಕೆಯ ಸ್ಥಿತಿಗತಿಗಳನ್ನು ಅಧ್ಯಯನ ಮಾಡುವುದಕ್ಕಾಗಿ ಪ್ರತ್ಯೇಕ ತಜ್ಞರ ಸಮಿತಿಯನ್ನು ನಂತರ ರಚಿಸಲಾಯಿತು.

1986 ರ ರಾಷ್ಟ್ರೀಯ ಶಿಕ್ಷಣ ನೀತಿಯ ಭಾಗವಾಗಿ 1992 ರಲ್ಲಿ ರೂಪೀಕರಿಸಿದ ಚಟುವಟಿಕಾ ಕಾರ್ಯಕ್ರಮ (POA) ಕಾಲಾಶಿಕ್ಷಣವನ್ನು ಹೀಗೆ ಗ್ರಹಿಸಿದೆ.

An illustrated view on the cultural perspective inter linking education and culture in order to promote the process of child personality development particularly in terms of discovering the inherent potentialities of the child.

ಈ ರೀತಿಯಲ್ಲಿ ಪ್ರಿ-ಪ್ರೈಮರಿ ಯಿಂದ ಉನ್ನತ ಶಿಕ್ಷಣದ ಹಂತದವರೆಗೆ ಪಠ್ಯಕ್ರಮ ಪರಿಷ್ಕರಣೆ ಮಾಡಲು ನಿರ್ದೇಶಿಸಲಾಗಿತ್ತು.

ಎನ್.ಸಿ.ಇ.ಆರ್.ಟಿ ತಯಾರಿಸಿದ ಪಠ್ಯಕ್ರಮ ಚೌಕಟ್ಟುಗಳಲ್ಲಿ ಕಲಾಕಲಿಕೆಯ ಪ್ರಧಾನ್ಯತೆಯ ಕುರಿತು ವಿವರಿಸಲಾಗಿದೆ. 2005 ರ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಕಲಾ ಕಲಿಕೆಗೆ ಸಂಬಂಧಿಸಿ ತಿಳುವಳಿಕೆಯನ್ನು ಪುನಃ ನಿರ್ವಚಿಸಿ ಅದರ ಸಾಧ್ಯತೆಗಳನ್ನು ವಿವಿಧ ರೀತಿಯಲ್ಲಿ ಮಂಡಿಸಿದೆ.

- ಕಲಾ ಶಿಕ್ಷಣವನ್ನು ಗಣಿತ, ವಿಜ್ಞಾನ ಎಂಬಿವುಗಳೊಡನೆ ಮೂಲ ಪಠ್ಯ ವಿಷಯವಾಗಿ ಅಂಗೀಕರಿಸಲಾಗಿದೆ.
- ಕಲೆಗಳ ಶೈಕ್ಷಣಿಕ ವಿಷಯಗಳೊಂದಿಗೆ ಸೇರಿ ಜ್ಞಾನ ಸಂಪಾದನೆಯ ಪ್ರಕ್ರಿಯೆಗಳನ್ನು ತ್ವರಿತಗೊಳಿಸಲು ಸಹಾಯ ಮಾಡುವುದು ಎಂಬ ಸಾಂಪ್ರದಾಯಿಕದ ತಿಳುವಳಿಕೆಯನ್ನು ತಿದ್ದಿ ಸರಿಪಡಿಸಲಾಗಿದೆ.
- ಕಲೆ ಎಂಬುವುದು ಜ್ಞಾನದಸ್ತರ, ಭಾವನಾಸ್ತರ, ಆಸ್ವಾದನಾಸ್ತರ ಎಂಬಿವುಗಳ ಮೂಲಕ ಮಕ್ಕಳಲ್ಲಿ ಉಂಟಾಗುವ ಪ್ರಕ್ರಿಯೆಯಾಗಿ ಬದಲಾಗಿದೆ.
- ಹೊಸ ಕಲಿಕಾ ಪ್ರಕ್ರಿಯೆಗಳನ್ನು ಅಭಿವೃದ್ಧಿಗೊಳಿಸುವ ಒಂದು ವಲಯವೇ ಕಲೆಯ ಕಲಿಕೆ ಎಂಬ ದೃಷ್ಟಿಕೋನಕ್ಕೆ ಒತ್ತು ನೀಡುವುದು.
- ಮಕ್ಕಳ ಕಲಾಸಂಬಂಧವಾದ ಬೆಳವಣಿಗೆಯೂ ವಿಕಾಸವೂ ಚೆನ್ನಾಗಿ ಪ್ರತಿಫಲಿಸಲು ಸಹಾಯಕವಾದ ಮೌಲ್ಯನಿರ್ಣಯ ತಂತ್ರಗಳನ್ನು ಅವಿಷ್ಕರಿಸಲಾಗಿದೆ.

ಇದರೊಂದಿಗೆ ಕಲಿಕೆ ಪ್ರೈಮರಿ ಮತ್ತು ಸೆಕೆಂಡರಿ ಹಂತಗಳಲ್ಲೂ ಕಡ್ಡಾಯಗೊಳಿಸಬೇಕೆಂದು ಶಿಫಾರಸು ಮಾಡಲಾಗಿದೆ.

ಜ್ಞಾನ ನಿರ್ಮಾಣ ಪ್ರಕ್ರಿಯೆಯಲ್ಲಿ ಸ್ವಂತ ಸಾಮರ್ಥ್ಯಗಳು ಹಾಗೂ ಅಭಿರುಚಿಗಳನ್ನು ಪ್ರಕಟಪಡಿಸಲು ವಿದ್ಯಾರ್ಥಿಯನ್ನು ಸಮರ್ಥವಾಗಿಸಲು ಕಲಾಶಿಕ್ಷಣಕ್ಕಿರುವ ಮಹತ್ವದ ಬಗ್ಗೆ 2007–ರ ಕೇರಳ ಪಠ್ಯಕ್ರಮ ಚೌಕಟ್ಟು ಎತ್ತಿ ಹೇಳುತ್ತದೆ.

ಈ ಸೂಚನೆಗಳ ಆಧಾರದಲ್ಲಿ ನಡೆದ ಪ್ರತಿಯೊಂದು ಪಠ್ಯಕ್ರಮ ಪರಿಷ್ಕರಣೆಯಲ್ಲೂ, ಹೆಚ್ಚಿನ ವಿದ್ಯಾಭ್ಯಾಸ ವಿನಿಮಯ ಪ್ರಕ್ರಿಯೆಗಳಲ್ಲೂ ಕಲಾಶಿಕ್ಷಣಕ್ಕೆ ನಿರೀಕ್ಷಿಸಿದ ಪ್ರಗತಿ ಗಳಿಸಲು ಸಾಧ್ಯವಾಗಲಿಲ್ಲ, ಕೇವಲ ಉದ್ಯೋಗ ಸಂಪಾದನೆಯ ಸಾಧ್ಯತೆಗಳನ್ನು ಮಾತ್ರ ಮುಂದಿರಿಸಿಕೊಂಡು, ಶಾಲಾ ಶಿಕ್ಷಣವು ಸಾಗುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ ಮಕ್ಕಳು ಸಾಮಾಜಿಕ ಪಿಡುಗುಗಳಿಗೆ ಬಲಿಯಾಗಿ,,ಸಾಮಾಜಿಕ ಮೌಲ್ಯದ ಕುಸಿತದ ಕಡೆಗೆ ಸಾಗುತ್ತಿರುವುದು ಕಾಣಬಹುದು.

ಕಲೆಯ ಮೂಲಕ ಮಕ್ಕಳು ಗಳಿಸಬೇಕಾದ ಸಾಮಾಜಿಕ ಜೀವನದ ಪ್ರಧಾನ ಅಂಶಗಳಾದ ಸಾಂಸ್ಕೃತಿಕ ತಿಳುವಳಿಕೆ ಹಾಗೂ ಸೃಜನಾತ್ಮಕತೆಯ ವಿಕಾಸವನ್ನೂ ಪರಿಗಣಿಸದಿರುವುದು, ಈ ಮೌಲ್ಯಗಳ ಕುಸಿತಕ್ಕೆ ಕಾರಣವಾಗಬಹುದು. ಈ ಸಂದರ್ಭದಲ್ಲಿ ಇತರ ವಿಷಯಗಳಂತೆ ಕಲಾಕಲಿಕೆಯು ವೈಜ್ಞಾನಿಕ ವಲಯಗಳ ಒಂದು ವಿಷಯವಾಗಿ ಪರಿಗಳಿಸಿಕೊಂಡು ಸಮತೋಲನ ಶಿಕ್ಷಣ ರೀತಿಯನ್ನು ಕಾರ್ಯರೂಪಕ್ಕೆ ತರಬೇಕಾಗಿದೆ.

2009 ರ ಶಿಕ್ಷಣ ಹಕ್ಕು ನಿಯಮವು ಭಾರತೀಯ ಶಿಕ್ಷಣ ಚರಿತ್ರೆಯ ಇನ್ನೊಂದು ಮೈಲಿಗಲ್ಲಾಗಿ ಪರಿಗಣಿತವಾಗಿದೆ. ಮಕ್ಕಳ ಸಮಗ್ರವಾದ ಅಭಿವೃದ್ಧಿಯು ಅವನ ಮೌಲಿಕ ಹಕ್ಕುಗಳಾಗಿ ಬದಲಾಯಿತು ಎಂಬುದು ಎತ್ತಿ ಹೇಳಬೇಕಾದವ ವಿಷಯ. ಈ ವಿಶೇಷವಾದ ಹಿನ್ನೆಲೆಯಲ್ಲಿ ಕಲಾಕಲಿಕೆಯನ್ನೊಳಗೊಂಡ ವಿಷಯಗಳನ್ನು ಧೃಡಪಡಿಸಲು ಅಗತ್ಯವಾದ ಕ್ರಮಗಳನ್ನು ದೃಢಪಡಿಸಬೇಕಾದುದು ಈ ಕಾಲಘಟ್ಟದ ಅಗತ್ಯವಾಗಿದೆ.

# 3. ಕಲಾಕಲಿಕೆ – ಕಲಿಕಾ ಸಮೀಪನ

ಕಲಾಕಲಿಕೆಯು ಪಠ್ಯಕ್ರಮದ ಅಗತ್ಯವಾದ ಭಾಗವಾಗಿ ಅಂಗೀಕೃತವಾದ ಹಿನ್ನೆಲೆಯಲ್ಲಿ ಕಲಿಕಾಸಮೀಪನಗಳು ಯಾವುದಾಗಿರಬೇಕು ಎಂಬ ಸ್ಪಷ್ಟವಾದ ತಿಳುವಳಿಕೆ ಇರಬೇಕಾಗಿದೆ. ಹಿಂದೆ ವಿಜ್ಞಾನಕ್ಕೆ ಹೊರತಾದ ವಲಯ ಎಂಬ ನಿಟ್ಟಿನಲ್ಲಿ ಕಲೆಯಕಲಿಕೆಯನ್ನು ಕಾಣಲಾಗಿತ್ತು. ಆಧುನಿಕ ಮನಃ ಶಾಸ್ತ್ರದಂತೆ ವ್ಯಕ್ತಿಯ ಸಮಗ್ರ ವಿಕಾವೆನ್ನುವುದು ಬುದ್ಧಿಯ ವಿಭಿನ್ನ ಮಟ್ಟಗಳ ವಿಕಾಸವೇ ಆಗಿದೆ ಎಂದು ತಿಳಿದು ಬಂದಿದೆ. ವೈಜ್ಞಾನಿಕ ವಿಕಾಸದ ವಿವಿಧ ಹಂತಗಳನ್ನು ಗಾಢವಾಗಿ ಪ್ರಭಾವಿಸುವ ಪಾರಂಪರಿಕ ಹಿನ್ನೆಲೆಯುಳ್ಳ ಕಲೆಗಳು ವ್ಯಕ್ತಿತ್ವ ರೂಪೀಕರಣದಲ್ಲಿ ನಿರ್ಣಾಯಕವಾದ ಪಾತ್ರವನ್ನು ವಹಿಸುತ್ತದೆ. ಪ್ರಿ–ಪ್ರೈಮರಿಯಿಂದ ಹೈಯರ್ ಸೆಕೆಂಡರಿ ವರೆಗಿರುವ ಶಾಲಾ ಶಿಕ್ಷಣ ಹಂತಗಳಲ್ಲಿ ಒಂದು ಪ್ರಮುಖ ಪಠ್ಯವಿಷಯವೆಂಬ ನಿಟ್ಟಿನಲ್ಲಿ ಕಲಾಕಲಿಕೆಯನ್ನು ಸಮೀಪಿಸಬೇಕಾಗಿದೆ.

ನಮ್ಮ ಶಿಕ್ಷಣದಲ್ಲಿ ಕಲೆಗಳ ಕಲಿಕೆಯನ್ನು ಪ್ರೋತ್ಸಾಹಿಸುವುದಿಲ್ಲ ಮಾತ್ರವಲ್ಲ ಮಕ್ಕಳನ್ನು ಕಲೆಯಕಲಿಕೆಯಿಂದ ನಿರುತ್ಸಾಹಗೊಳಿಸುತ್ತಾರೆ ಎಂಬುದನ್ನು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ (2005) ನಿರೀಕ್ಷಣೆಯು ಹೆಚ್ಚು ಪುಸ್ತಕವಾಗಿದೆ. ಕಲೋತ್ಸವ ಸ್ಪರ್ಧೆಗಳ ಸಿದ್ಧತೆ ಹಾಗೂ ಆ ಮೂಲಕ ಶಾಲೆಗಳಿಗೆ ಲಭಿಸುವ ಬಹುಮಾನಗಳು ಎಂಬ ಗುರಿಗೆ ಕಲೆಯ ಕಲಿಕೆ ಸೀಮಿತವಾಗಿದೆ. ಶಾಲೆಗೆ ಪ್ರವೇಶ ಪಡೆಯುವ ಎಲ್ಲಾ ಮಕ್ಕಳನ್ನು ದೃಷ್ಟಿಯಲ್ಲಿರಿಸಿಕೊಂಡು ಇರುವ ಕಲಿಕಾ ಸಮೀಪನವನ್ನು ಸ್ವೀಕರಿಸಬೇಕಾಗಿದೆ. ಅದೇ ಸಂದರ್ಭದಲ್ಲಿ ಪ್ರತಿಯೊಬ್ಬ ಮಗುವಿನಲ್ಲಿರುವ ವಿಶೇಷವಾದ ಕಲಾಭಿರುಚಿಗಳನ್ನು ಪರಿಗಣಿಸಬೇಕಾಗಿದೆ.

ಶಿಶುಕೇಂದ್ರಿತ ಪಠ್ಯಕ್ರಮವು ಸಾಮಾನ್ಯವಾಗಿ ಅಂಗೀಕ್ರತವಾಗಿದ್ದರೂ ಕಲಾಕಲಿಕೆಯ ವಿಷಯದಲ್ಲಿ ಅದೇ ಪ್ರಮಾಣದಲ್ಲಿ ಸ್ವೀಕೃತವಾಗಿಲ್ಲ. ಪ್ರತಿಯೊಬ್ಬ ಮಗುವಿನ ಸಾಮರ್ಥ್ಯಗಳನ್ನು ಸಾಧ್ಯತೆಗಳನ್ನು ಗುರುತಿಸಿಕೊಂಡು ಸೃಜನಶೀಲ ವಿಕಾಸಕ್ಕೆ ಅಗತ್ಯವಾದ ರೀತಿಯಲ್ಲಿ ಕಲಿಕಾಪ್ರಕ್ರಿಯೆ ರೂಪುಗೊಳ್ಳುವಾಗ ಮಾತ್ರ ಶಿಶುಕೇಂದ್ರಿತ ಸಮಿಪನವು ಯಶಸ್ವಿಯಾಗುವುದು. ಶಿಶುಕಲೆ ಎನ್ನುವುದು ಹಲವಾರು ವೈಶಿಷ್ಟ್ಯಗಳಿಂದ ಕೂಡಿದ್ದಾಗಿದ್ದು, ಮಗುವಿನ ಭಾವನೆಯಲ್ಲಿ ವಸ್ತುಗಳ ನಿಜವಾದ ಚಿತ್ರಗಳೋ, ಭಾವನೆಗಳೋ, ರೂಪಗಳೋ ಅಥವಾ ಶಬ್ಧಗಳೋ ಅದೇ ರೀತಿಯಲ್ಲಿ ಮೂಡಿಬರಬೇಕೆಂದಿಲ್ಲ ಪ್ರತಿಯೊಂದು ವಿಷಯವನ್ನು ಮಗುವಿನ ದೃಷ್ಟಿಯಿಂದ ನೋಡಲು ಅಧ್ಯಾಪಿಕೆಗೆ ಸಾಧ್ಯವಾಗಬೇಕು. ಬಾಲಭಾವನೆಗಳನ್ನು ಅರ್ಥಮಾಡಿಕೊಳ್ಳುವುದೇ ಶಿಶುಕೇಂದ್ರಿತ ಕಲಾಕಲಿಕೆಯ ತಿರುಳು. ಯಾವಾಗಲೂ ಕಲಾಕಲಿಕೆ ಮಗುವಿನ ಅನುಭವ ಪರಿಸರದಿಂದ ಆರಂಭವಾಗುವುದು. ಪರಿಚಿತವಾದ ಜಾನಪದ ಗೀತೆಗಳೋ ಸಿನೆಮಾಹಾಡುಗಳೋ ಆಚರಣಾತ್ಮಕ ಹಾಡುಗಳೆಲ್ಲಾ ವಿದ್ಯಾರ್ಥಿಯ ಸಂಗೀತ

ಸಂಬಂಧವಾದ ಅನುಭವ ಪರಿಸರವಾಗಿದೆ. ಈ ರೀತಿಯ ಹಾಡು ಹಾಗೂ ಬಾಯಿತಾಳಗಳಿಗೆ ಹೊಂದಿಕೊಂಡಿರುವ ತಾಳಬದ್ಧ ಚಲನೆಗಳೇ ಮಗುವಿನ ನೃತ್ಯಜ್ಞಾನದ ಅಡಿಪಾಯವಾಗಿರಬಹುದು. ಇತರರ ಪ್ರೇರಣೆ ಇಲ್ಲದ ಮಗು ಸ್ವಯಂ ಸುರಿದುಕೊಳ್ಳುವ, ಪ್ರತ್ಯಕ್ಷವಾಗಿ ಅಪೂರ್ಣವೂ, ಅಸಮತೋಲನವೂ ಆಗಿದೆ ಎಂದು ಹಿರಿಯರು ಭಾವಿಸುವ ಚಿತ್ರಗಳೇ ಚಿತ್ರಕಲೆಯಲ್ಲಿ ಅವರ ಅಡಿಪಾಯವಾಗಿದೆ.

ಹೀಗೆ ಸಹಜವಾಗಿ ಬಂದಿರುವ ಕಲಾ ಪ್ರಜ್ಞೆಯನ್ನು ಅಧ್ಯಾಪಕರು ಪ್ರೋತ್ಸಾಹಿಸಿ, ಬೆಳೆಸಿ ಉತ್ತಮ ಪ್ರದರ್ಶನದ ಕಡೆಗೆ ಕೊಂಡೊಯ್ಯಬೇಕು ಇದರೊದಿಗೆ ಆಯಾ ಪ್ರದೇಶದ ಸಾಂಸ್ಕೃತಿಕ ಇತಿಹಾಸವೆಂಬ ನಿಟ್ಟಿನಲ್ಲಿ ಅಭಿವೃದ್ಧಿ ಪಡಿಸಿದ ಸಂಗೀತ ನೃತ್ಯ ನಾಟಕವೇ ಮೊದಲಾದ ಕಲೆಗಳು, ಕಲೆಯ ಅಂಶವನ್ನು ಅಳವಡಿಸಿಕೊಂಡಿರುವ ಕೈಕೆಲಸಗಳು ಮಗುವಿನ ಅನುಭವ ಪರಿಸರವಾಗಿ ಅಧ್ಯಾಪಕರು ಅರ್ಥಮಾಡಿಕೊಳ್ಳಬೇಕಾಗಿದೆ. ಮಗುವು ಪ್ರಪಂಚವನ್ನು ತನ್ನ ಜ್ಞಾನೇಂದ್ರಿಯಗಳ ಮೂಲಕ ತಿಳಿಯುವುದು. ದರ್ಶನ, ಸ್ಪರ್ಶ, ಶ್ರವಣಗಳ ಮೂಲಕ ಪ್ರಕೃತಿಯ ಸಮಗ್ರತೆಯನ್ನು ಸ್ವಾಂಶೀಕರಿಸುವಾಗ ಕಲಿಕೆಗೆ ಕಲಾಪ್ರದರ್ಶನಗಳಲ್ಲಿ ಹಿರಿಮೆಯುಂಟಾಗುವುದು. ಇಂತಹ ವಿಷಯಗಳು ದೈನಂದಿನ ಜೀವನದಲ್ಲಿ ಕಲೆಯ ಕಲಿಕೆಯ ಮೂಲಕ ಗಳಿಸುವ ನಿರೀಕ್ಷಣಾ ಸಾಮರ್ಥ್ಯವು ಹೆಚ್ಚಿಸಲು ಪ್ರಯೋಜನಕಾರಿಯಾಗಿದೆ.

ಶಾಲೆಗಳಲ್ಲಿ ಕಲಾಸಂಬಂಧವಾದ ಪ್ರದರ್ಶನಕ್ಕೆ ಹೆಚ್ಚು ಮಹತ್ವ ಲಭಿಸುವುದು. ವಾಸ್ತವವಾಗಿ ದೃಶ್ಯ ಶ್ರಾವ್ಯ ಸೌಂದರ್ಯಗಳನ್ನು ಗುರುತಿಸಿಕೊಂಡು ಆಸ್ವಾದಿಸುವುದೆಂಬುದು ಕಲೆಯ ಕಲಿಕೆಯಲ್ಲಿ ಸ್ವೀಕರಿಸಬೇಕಾದ ಸಮೀಪನವಾಗಿದೆ. ಪ್ರತಿಯೊಬ್ಬ ವ್ಯಕ್ತಿಯು ವ್ಯತ್ಯಸ್ತ ಸಾಮರ್ಥ್ಯ ವಿರುವವರಾದುದರಿಂದ ಆಸ್ವಾದನೆಯಲ್ಲೂ, ಪ್ರದರ್ಶನದಲ್ಲೂ ಅಂತರವಿರುವುದು ಸಹಜವಾಗಿರುವುದು. ಪ್ರತಿಯೊಬ್ಬ ಮಗುವಿಗೂ ಗರಿಷ್ಟವಾದ ಮಟ್ಟಕ್ಕೆ ವೈಯುಕ್ತಿಕವಾಗಿ ತಲುಪಲು ಅವಕಾಶ ನೀಡಬೇಕು. ನೈಸರ್ಗಿಕವಾದ ಬೆಳವಣಿಗೆಯೆಂಬ ಆಧುನಿಕ ಕಲ್ಪನೆಯೂ ಪುನರಾವರ್ತನ ಕಲಿಕೆಯೂ ತಮ್ಮೊಳಗೆ ಹೊಂದಿಕೊಳ್ಳುವುದಿಲ್ಲ ಕಲೆಯ ಕಲಿಕೆಯನ್ನು ಸ್ವೀಕರಿಸುವಾಗ ಮಕ್ಕಳ ಸೃಜನಾತ್ಮಕತೆಯನ್ನು ಗರಿಷ್ಟವಾಗಿ ಪರಿಗಣಿಸಿಕೊಂಡು ಸಹಜವಾದ ಬೆಳವಣಿಗೆಯತ್ತ ಕೊಂಡೊಯ್ಯಬೇಕು. ಇದಕ್ಕಾಗಿ ಸಂಯೋಜಿತ ಕಲಿಕಾ ರೀತಿಯನ್ನು ಮೊದಲ ಹಂತದಲ್ಲಿ ಸ್ವೀಕರಿಸಬೇಕು. ಆದರೆ ಆರಂಭದಿಂದಲೇ ಕಲೆಯಕಲಿಕೆಗೆ ನವೀನವಾದ ಅಸ್ಥಿತ್ವವಿದೆ ವಿಷಯ ಬಂದಿತವಾದ ಸಂಯೋಜಿತ ಸಾಧ್ಯತೆಗಳನ್ನು ಉಪಯೊಗಪಡಿಸುವುದರೊಂದಿಗೆ ಕಲೆಯ ವಿವಿಧ ಹಂತಗಳನ್ನು ತಮ್ಮೊಳಗೆ ಅಳವಡಿಸಿಕೊಂಡಿರುವುದು.

ಕಲೆಯ ಕಲಿಕೆಯಲ್ಲಿ ಸಂಗೀತ, ನೃತ್ಯ, ಚಿತ್ರರಚನೆ, ನಾಟಕ ಎಂಬೀ ವಿಭಾಗಗಳನ್ನು ಅಳವಡಿಸಲಾಗಿದೆ.

ಪ್ರಿ–ಪ್ರೈಮರಿ ಮಕ್ಕಳು (3–5 ವರ್ಷ) ಅತೀವ ಜಿಜ್ಞಾಸೆಯುಳ್ಳವರು, ಅತ್ಯಧಿಕ ಚೈತನ್ಯ ಇರುವವರು ಆಗಿದ್ದಾರೆ. ಮಕ್ಕಳ ಈ ಸ್ವಭಾವವನ್ನು ವಿವಿಧ ಸೃಜನಾತ್ಮಕ ಚಟುವಟಿಕೆಗಳ ಮೂಲಕ ಕಲಿಕೆಗೆ ಪ್ರಯೋಜನ ಪಡಿಸಬೇಕು. ಒಂದು ಮತ್ತು ಎರಡನೇ ತರಗತಿಗಳಲ್ಲಿ ಪೂರ್ಣವಾಗಿ ಸಂಯೋಜಿತ ಸಮೀಪನವನ್ನು ಸ್ವೀಕರಿಸಬೇಕಾಗಿದೆ. ಮುಂದಿನ ಹಂತಗಳಲ್ಲೂ ವಿವಿಧ ರೂಪಗಳ ಮೂಲಕ ಮಗುವಿನ ಆಂತರಿಕ ಪ್ರತಿಭೆಗಳನ್ನು ಪ್ರದರ್ಶಿಸಲು ಅವಕಾಶ ನೀಡಬೇಕು. ವಿವಿಧ ಕಲಾವಲಯಗಳಲ್ಲಿ ಪ್ರಾವೀಣ್ಯವನ್ನು ಅಧ್ಯಾಪಕ ಕರಬೇತಿ ಪಡೆದಿರುವ ಜನರ ಸೇವೆಯನ್ನು ಎಲ್ಲಾ ಹಂತಗಳಲ್ಲೂ ದೃಡಪಡಿಸಬೇಕು.

ಹೈಯರ್ ಸೆಕೆಂಡರಿ ಹಂತದವರೆಗೆ ಪ್ರದರ್ಶನಾತ್ಮಕ ಕಲೆಗಳು ಹಾಗೂ ದೃಶ್ಯಕಲೆಗಳನ್ನು ಕಲಿಕಾ ಮಾಧ್ಯಮವೆಂಬ ನಿಟ್ಟಿನಲ್ಲಿ ಉಪಯೋಗಪಡಿಸಬೇಕು. ಆದರೆ ಇದನ್ನು ಅಸಹಜ ರೀತಿಯಲ್ಲಿ ಆಗದಂತೆ ನೋಡಿಕೊಳ್ಳಬೇಕು. ದೇಶಿಯ ಪಠ್ಯಕ್ರಮ ಚೌಕಟ್ಟು–2005 ಕಲೆಯ ಕಲಿಕೆ ಪೊಸಿಷನ್ ಪೇಪರ್ ನೀಡುವ ಸೂಚನೆ ಇಲ್ಲಿ ಪುಸ್ತಕವಾಗಿದೆ.

ವಿವಿಧ ಸ್ಥಳಗಳ ತರಗತಿಗಳಲ್ಲಿ ನಡೆಸಿರುವ ಕಲಿಕೆಗಳು ಸೂಚಿಸುವುದೇನೆಂದರೆ , ಕಲಿಕಾರ್ಥಿಗಳಿಗೆ ಸ್ವತಂತ್ರ ಅವಕಾಶಗಳನ್ನು ನೀಡುವಾಗ ಕಲಾ ಸಂಬಂಧವಾದ ಹೆಚ್ಚು ಉತ್ತಮಪಡಿಸಿದ ಪ್ರದರ್ಶನಗಳು ಹೊರಹೊಮ್ಮಬಹುದು. ಮಗುವಿನ ಮನೋಧರ್ಮದ ಪ್ರದರ್ಶನಕ್ಕೆ ತಟಸ್ಥ ವಾಗದಂತೆ, ಸೃಜನಾತ್ಮಕವಾಗಿ ಪ್ರೋತ್ಸಾಹಿಸುವ ಸಮೀಪನವನ್ನು ಆರಂಭದಿಂದಲೇ ಸ್ವೀಕರಿಸುವುದು ಪ್ರಧಾನವಾಗಿದೆ ಎಂದು ಇದು ಮಂಡಿಸಿದೆ.

ಕಲಿಕೆಯಲ್ಲಿ ಅಧ್ಯಾಪಕನೊಂದಿಗೆ ರಕ್ಷಕರ ಪಾತ್ರವು ಅಂಗೀಕರಿಸಲ್ಪಡುತ್ತಿದೆಯಲ್ಲವೇ? ಕಲೆಯಕಲಿಕೆಯ ಮಹತ್ವವನ್ನು ಸಮಾಜವು ಇನ್ನೂ ಗುರುತಿಸಿಕೊಂಡಿಲ್ಲ. ಆದ್ದರಿಂದ ರಕ್ಷಕರ ಸಾನಿಧ್ಯ ಸಹಕಾರವು, ಭಾಗವಹಿಸುವಿಕೆಯು ದೃಡಪಡಿಸಲಿರುವ ಮಾರ್ಗೋಪಾಯಗಳನ್ನು ತಿಳಿಯಬೇಕಾಗಿದೆ. ಪ್ರಾದೇಶಿಕ ತಜ್ಞರನ್ನು (Local Resources) ಕಂಡುಹಿಡಿದು ಅವರ ಸಹಕಾರದಿಂದ ಕಲೆಯಕಲಿಕೆಯನ್ನು ಹೆಚ್ಚು ಕಾರ್ಯಕ್ಷಮಗೊಳಿಸಲಿರುವ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಬೇಕು.

## ಕಲಾಶಿಕ್ಷಣ–ವಿವಿಧ ನಿರೀಕ್ಷಣೆಗಳು

ವೈಯುಕ್ತಿಕವಾದ ಅನುಭವವೇ ಕಲೆ. ಕಲಿಕಾರ್ಥಿಗೆ ಕಲಾಸಂಬಂಧವಾದ ವ್ಯಕ್ತಿತ್ವ ವಿಕಾಸಕ್ಕೆ ಅಗತ್ಯವಾದ ಪ್ರಚೋದನೆ, ಚಟುವಟಿಕೆಗಳು, ಮಾರ್ಗನಿರ್ದೇಶನಗಳು, ಸಹಾಯವೂ ಕಲೆಯಕಲಿಕಾ ತರಗತಿಗಳಿಂದ ದೊರಕಬೇಕು. ಅದಕ್ಕಾಗಿ ಬಣ್ಣ, ಆಕೃತಿ, ರೂಪ, ಚಲನೆ, ತಾಳ, ಶಬ್ಧ ಎಂಬಿವುಗಳ ಮೂಲಕ ಸೌಂದರ್ಯವನ್ನು ಕಂಡುಕೊಂಡು ಅವುಗಳೊಂದಿಗೆ ಪ್ರಕ್ರಿಯಿಸಲಿರುವ ಆಸ್ವಾದನಾ ಸಾಮರ್ಥವನ್ನು ಸೃಷ್ಟಿಸಿ ಬೆಳೆಸಲಿರುವ, ವೈವಿಧ್ಯವಾದ ಕಲಿಕಾನುಭವಗಳನ್ನು ಕಲಾಕಲಿಕೆ ತರಗತಿಗಳಲ್ಲಿ ಅಳವಡಿಸಬೇಕಾಗಿದೆ. ಸಂಗೀತ, ನೃತ್ಯ, ಚಿತ್ರರಚನೆ,ಶಿಲ್ಪಕಲೆ, ನಾಟಕ ಸಿನೆಮಾ ಮೊದಲಾದ ವಿವಿಧ ಮಲಯಗಳಲ್ಲಾಗಿ ಅವಕಾಶವನ್ನು ನೀಡಬೇಕು.

ಒಂದು ಪಠ್ಯವಿಷಯವೆಂಬ ನಿಟ್ಟಿನಲ್ಲಿ ಕಲೆಯಕಲಿಕೆಯ ಗುರಿಗಳು ಹಾಗೂ ಉದ್ದೇಶಗಳನ್ನು ನಾವು ಈ ಕೆಳಗಿನ ರೀತಿಯಲ್ಲಿ ನಿರ್ಣಯಿಸಬಹುದು.

- ಕಲಿಕಾರ್ಥಿಯ ನೈಸರ್ಗಿಕವಾದ ಕಲಾಭಿರುಚಿಗಳನ್ನು ಗುರುತಿಸಿಕೊಂಡು ಬೆಳೆಸಬೇಕು.
- ವಿವಿಧ ಕಲೆಗಳನ್ನು ಆಸ್ವಾದಿಸಲು ಕಲೆಯ ಸೌಂದರ್ಯವನ್ನು ಅಳವಡಿಸಿಕೊಳ್ಳಲು.
- ಕಲೆಗಳ ಆಸ್ವಾದನೆಯನ್ನೊಳಗೊಂಡ ಸಮಾಜದಲ್ಲಿ ಮಾನವೀಯ ದೃಷ್ಟಿಕಾನವನ್ನು ರೂಪೀಕರಿಸಲು.
- ಸಾಂಸ್ಕೃತಿಕ ವೈವಿಧ್ಯತೆಯನ್ನು ಗುರುತಿಸಿಕೊಂಡು ಸಾಂಸ್ಕೃತಿಕ ತಿಳುವಳಿಕೆಯನ್ನು ಬೆಳೆಸಲು.
- ಕಲೆಯ ಚೈತನ್ಯವನ್ನೊಳಗೊಂಡು ನವೀನವಾದ ಚಿಂತನೆಗಳಲ್ಲಿ ತೊಡಗಿಸಿಕೊಂಡು ಸಮತೋಲನವಾದ ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸಲು.

- ಕಲೆಯನ್ನು ಉಪಯೋಗಿಸಿಕೊಂಡು ಇತರ ವಿಷಯಗಳ ಕಲಿಕೆಯನ್ನು ಫಲಪ್ರದಗೊಳಿಸಲು (Art applied learning).
- ಬಹುಮುಖ ಪ್ರತಿಭೆಗಳ ವಿಕಾಸದ ಸಾಧ್ಯತೆಗಳನ್ನು ಪ್ರಯೋಜನಪಡಿಸಲು.
- ವಿಭಿನ್ನ ಮಟ್ಟದ ವಿದ್ಯಾರ್ಥಿಗಳನ್ನು ಏಕರೀತಿಯಲ್ಲಿ ಕಲಿಕಾ ಚಟುವಟಿಕೆಗಳಲ್ಲಿ ಆಸಕ್ತಿ ಮೂಡಿಸುವುದು.
- ಅಮೂರ್ತವಾದ ಅನುಭವಗಳನ್ನು ಮೂರ್ತವಾದ ಪ್ರತಿಬಿಂಬಗಳಾಗಿ ಪರಿವರ್ತಿಸುವುದರ ಮೂಲಕ ಮಾನಸಿಕ ಉಲ್ಲಾಸ ಪಡೆಯಲು.
- ವಿವಿಧ ಕಲಿಕಾ ಚಟುವಟಿಕೆಗಳಲ್ಲಿ ಅನುರೂಪೀಕರಣ ಸಾಧ್ಯತೆಗಳನ್ನು ಕಂಡುಹಿಡಿದು ಸದುಪಯೋಗಪಡಿಸಿಕೊಳ್ಳಲು.
- ಮಕ್ಕಳ ಆಸ್ವಾದನಾ ಮಟ್ಟವನ್ನು ಹೆಚ್ಚಿಸಲು.
- ವಿವಿಧ ಕಲೆಗಳಲ್ಲಿ ಪ್ರತ್ಯೇಕ ಅಭಿರುಚಿಯಿರುವ ಮಕ್ಕಳ ಸೃಜನಾತ್ಮಕತೆಯ ಬೆಳವಣಿಗೆಗೆ.
- ವಿವಿಧ ಕಲೆಗಳಲ್ಲಿ ಆಸಕ್ತಿ ಮೂಡಿಸಲು.
- ಕಲಾಗಾರರನ್ನು ತಿಳಿಯಲೂ, ಅವರ ಕೊಡುಗೆಗಳನ್ನು ಗುರುತಿಸಿ ಗೌರವಿಸಲು.
- ತಾನು ಗಳಿಸಿದ ಕಲೆಗಳ ಬಗ್ಗೆ ಇರುವ ಜ್ಞಾನವನ್ನು ಹೊಸ ಸಂದರ್ಭದಲ್ಲಿ ಪ್ರಯೋಗಿಸಲು.
- ಸಾಮಾಜಿಕ ಪರಿಷ್ಕರಣೆಯನ್ನು ಗುರಿಯಾಗಿಸಿಕೊಂಡು ವಿವಿಧ ಕಲೆಗಳನ್ನು ಸದುಪಯೋಗ ಪಡಿಸಲು
- ವಿವಿಧ ಕಲೆಗಳ ಸಾಂಕೇತಿಕ ಅಂಶಗಳನ್ನು ಗುರುತಿಸಲೂ ಉಪಯೋಗಪಡಿಸಲು.

# 4. ಕಲೆಯ ಕಲಿಕೆ – ವಿವಿಧ ವಲಯಗಳು

**ಕ**ಲೆಗಳು ಮಾನವನ ಬೆಳವಣಿಗೆಯ ಜೊತೆಗೆ ಅಭಿವೃದ್ಧಿ ಹೊಂದಿದವುಗಳಾಗಿವೆ. ಸುತ್ತಮುತ್ತಲಿರುವ ಪ್ರಕೃತಿಯಿಂದ ಸಿಗುವ ಇಂದ್ರಿಯಾನುಭವಗಳು, ಮನಸ್ಸಿನಲ್ಲಿ ಉಂಟುಮಾಡಿದ ಅನುಕರಣೆಗಳು ಕಲೆಗಳಾಗಿ ಆವಿಷ್ಕರಿಸಲ್ಪಡುತ್ತದೆ. ಆದ್ದರಿಂದ ಕಲೆಯು ಜೀವನದ ಒಂದು ಅವಿಭಾಜ್ಯ ಅಂಗವಾಗಿದೆ. ಪ್ರಕೃತಿಯ ಸಹಜ ಸ್ಥಿತಿಗಳು ,ವ್ಯತ್ಯಸ್ತ ಭಾವನೆಗಳು, ಮನುಷ್ಯನಲ್ಲಿ ಉಂಟುಮಾಡಿದ ಭಾವನಾತ್ಮಕವಾದ ಸಂಬಂಧಗಳು ಕಲೆಗಳಲ್ಲೂ ಪ್ರತಿಫಲಿಸುವುದನ್ನು ಕಾಣಬಹುದು. ಇಂದ್ರಿಯಾನುಭವಗಳೊಂದಿಗೆ, ದೃಶ್ಯಗಳೊಂದಿಗೆ, ಶಬ್ಧಗಳೊಂದಿಗೆ, ಚಲನೆಯೊಂದಿಗೆ, ಹಾಗೂ ವರ್ತನೆಯೊಂದಿಗೆ ಇರುವ ಉದಾತ್ತೀಕರಣದ ಪ್ರತೀಕಗಳಾಗಿರುವುದೇ ಯಥಾಕ್ರಮದಲ್ಲಿರುವ ಚಿತ್ರಕಲೆಯಾಗಿಯೂ, ಸಂಗೀತವಾಗಿಯೂ, ನೃತ್ಯವಾಗಿಯೂ, ನಾಟಕಮಾಗಿಯೂ ಪರಿಣಮಿಸಿದೆ. ಆದ್ದರಿಂದ ಈ ಕಲೆಗಳಲ್ಲಿ ತೊಡಗಿಸಿಕೊಳ್ಳಲು ಆಸ್ವಾದಿಸಲಿರುವ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಬೇಕಾದುದು ಜೀವನದ ವಿಜಯಕ್ಕೆ ಅನಿವಾರ್ಯವಾಗಿದೆ.

ಈ ನಾಲ್ಕು ವಲಯಗಳಲ್ಲಾಗಿ ಕಲಾಶಿಕ್ಷಣವು ಪರಿವರ್ತಿಸುವುದು. ಇವುಗಳ ಕಲಿಕೆಯೊಂದಿಗೆ ನಿರ್ದಿಷ್ಟವಾದ ಪ್ರತಿಭೆ ಹಾಗೂ ಸಾಮರ್ಥ್ಯಗಳ ವಿಕಾಸವನ್ನು ಗುರಿಯಾಗಿರಿಸಿಕೊಳ್ಳುವುದು. ವಿವಿಧ ತರಗತಿಗಳಲ್ಲಿ ಪ್ರತಿಯೊಂದು ವಲಯಗಳ ವ್ಯತ್ಯಸ್ತ ಮಟ್ಟದಲ್ಲಿರುವ ಕಲಿಕಾಚಟುವಟಿಕೆಗಳು ನಡೆಯುವ ರೀತಿಯಲ್ಲಿ ಆಯಾವಲಯಗಳ ಕಲಿಕಾ ಸಾಧನೆಗಳು ನಿಶ್ಚಯಿಸಲ್ಪಟ್ಟಿದೆ. ವಲಯಗಳ ಸ್ವಭಾವಕ್ಕೂ ಮಕ್ಕಳ ಮಕ್ಕಳ ಮಟ್ಟಕ್ಕೆ ಸುರಿಸಿ ಪ್ರತಿಯೊಂದು ತರಗತಿಗೂ ಪ್ರತ್ಯೇಕವಾಗಿ ತಯಾರಿಸಲಾಗಿದೆ. ಪ್ರತಿವಲಯಕ್ಕೂ ಸಂಬಂಧಿಸಿದ ಕೆಲವು ವಿವರಗಳನ್ನು ಇಲ್ಲಿ ಸೇರಿಸಿದೆ.

## 4.1 ಚಿತ್ರಕಲೆ

ಚಿತ್ರಕಲೆಯಲ್ಲಿ ಗೆರೆಗಳ ಹಾಗೂ ಬಣ್ಣಗಳ ಸಮಂಜಸವಾದ ಕೂಡುವಿಕೆಯು ಪ್ರತಿಬಿಂಬಿಸುವುದು. ದ್ವಿಮಾನ ಮೇಲ್ಮೈಯಲ್ಲಿ ಬೆಳಕನ್ನೂ ನೆರಳನ್ನು ಯೋಗ್ಯವಾಗಿ ಸಮ್ಮಿಳಿಸಿ ಸೃಷ್ಟಿಸಲ್ಪಡುವ ರೂಪಗಳು ಸೃಷ್ಟಿಸುವ ಭಾವನೆಗಳನ್ನು ಆಸ್ವಾದಕನಿಗೆ ತಲುಪಿಸುವುದಾಗಿದೆ. ರೇಖೆಗಳು ಹಾಗೂ ಬಣ್ಣಗಳು ಚಿತ್ರಗಾರನ ಸಂಪತ್ತುಗಳಾಗಿವೆ. ಸುತ್ತಮುತ್ತಲಿರುವವುಗಳ ನಿರೀಕ್ಷಣೆಯ ಮೂಲಕ ಮನಸ್ಸಿನಲ್ಲಿ ಅಚ್ಚೊತ್ತುವ ದೃಶ್ಯಗಳನ್ನು ತನ್ನದೇ ಆದ ದೃಷ್ಟಿಕೋನದಲ್ಲಿ ರಚಿಸುತ್ತಾರೆ. ಅದಕ್ಕಾಗಿ ಯೋಗ್ಯವೆಂದು ತೋರುವ ಮಾಧ್ಯಮಗಳನ್ನು ಚಿತ್ರಗಾರನು ಸ್ವೀಕರಿಸುತ್ತಾನೆ.

ಚಿತ್ರರಚನೆಯ ವ್ಯತ್ಯಸ್ತ ಮಟ್ಟಗಳನ್ನು ಪ್ರತಿಯೊಂದು ಹಂತಗಳಾಗಿ ಪರಿಚಯಪಡಿಸಿಕೊಂಡು , ತರಬೇತಿ ನೀಡುವದಾಗಿದೆ. ಚಿತ್ರಕಲೆಕಲಿಕೆಯ ಪ್ರಧಾನವಾದ ಉದ್ದೇಶವಾಗಿದೆ. ಮನುಷ್ಯನು ಗುಹೆಗಳಲ್ಲಿ

ಕಳೆದಿದ್ದಂತಹ ಕಾಲದಿಂದಲೇ ಬೆಳೆದು ಅಭಿವೃದ್ಧಿ ಹೊಂದಿದ ಚರಿತ್ರೆ ಚಿತ್ರಕಲೆಗಿದೆ. ಚರಿತ್ರೆ ಹಾಗೂ ಜೀವನ ಸಂಸ್ಕೃತಿಯ ಅಭೇದ್ಯವಾದ ಸಂಬಂಧವನ್ನು ಒಳಗೊಡಿರುವುದು ಚಿತ್ರಕಲಾಕಲಿಕೆಯ ಭಾಗವಾಗಿದೆ.

**ಕಲಿಕೆಯ ಉದ್ದೇಶಗಳು**

- ಚಿತ್ರರಚನೆಯ ವಿವಿಧ ಹಂತಗಳನ್ನು ಅರ್ಥಮಾಡಿಕೊಳ್ಳಲು, ಚಿತ್ರ ರಚನೆಯಲ್ಲಿ ತೊಡಗಲು ಹಾಗೂ ಸೃಜನಾತ್ಮಕ ಸಾಮರ್ಥ್ಯವನ್ನು ಬೆಳೆಸುವುದು.
- ವಿವಿಧ ರೀತಿಯ ಚಿತ್ರರಚನಾರೀತಿಗಳನ್ನು ಪರಿಚಯಿಸಲು, ತಿಳುವಳಿಕೆಗಳನ್ನು ಗಳಿಸುವುದು.
- ಚಿತ್ರರಚನೆಯ ಮೂಲಕ ವೈಜ್ಞಾನಿಕ ನವೋಲ್ಲಾಸ ಪಡೆಯುವುದು (Infotainment) ಚಿತ್ರರಚನೆಯ ಸಾಧ್ಯತೆಗಳನ್ನು ಪ್ರಯೋಜನಪಡಿಸಿ ಜ್ಞಾನದ ಗಳಿಕೆ (Edutainment) ಯ ಮೂಲಕ ಸಂತೋಷವಾಗಿರುವುದು.
- ಚಿತ್ರಕಾರರನ್ನು ತಿಳಿಯಲು, ಚರಿತ್ರೆ ಸಂಬಂಧವಾದ ತಿಳುವಳಿಕೆಗಳನ್ನು ರೂಪೀಕರಿಸುವುದು.
- ಇತರ ವಿಷಯಗಳ ಕಲಿಕೆಯಲ್ಲಿ ಚಿತ್ರರಚನೆಯು ಸಾಧ್ಯತೆಗಳನ್ನು ಪ್ರಯೋಗಿಸುವ ತಿಳುವಳಿಕೆಯನ್ನು ಗಳಿಸುವುದು.
- ಚಿತ್ರಗಳನ್ನು ನಿರೀಕ್ಷಣೆ ಮಾಡಲು ಮತ್ತು ಆಸ್ವಾದನಾ ಮನೋಭಾವ ಬೆಳೆಸುವುದು.
- ವಿವಿಧ ಶಿಲ್ಪಗಳನ್ನು ನಿರೀಕ್ಷಿಸಲು ನಿರ್ಮಾಣದಲ್ಲಿ ತೊಡಗಿಸಿಕೊಳ್ಳುವುದು.
- ಶಿಲ್ಪಕಲಾಕೇಂದ್ರಗಳನ್ನು ಸಂದರ್ಶಿಸಲು ಅವುಗಳ ಸಾಂಸ್ಕೃತಿಕ ಪ್ರಧಾನ್ಯವನ್ನು ಅಳವಡಿಸಿಕೊಳ್ಳುವುದು.
- ಶಿಲ್ಪಕಲೆಗಳ ಚರಿತ್ರೆ ಸಂಬಂಧವಾದ ಮಾಹಿತಿಗಳನ್ನು ಸಂಗ್ರಹಿಸಲು ಹೊಸ ಸಂಶೋಧನೆಗಳೆಡೆಗೆ ಕೊಂಡೊಯ್ಯುವುದು.

**ವಿವಿಧ ವಿಭಾಗಗಳು**

- ಪೆನ್ಸಿಲ್, ಕ್ರಯೋನ್, ಬಣ್ಣದ ಪೆನ್ಸಿಲುಗಳು, ಆಕ್ರಿಲಿಕ್ ಎಂಬಿವುಗಳನ್ನು ಉಪಯೋಗಿಸಿ ರಚಿಸುವ ಚಿತ್ರಗಳು , ಜಲವರ್ಣಚಿತ್ರಗಳು, ತೈಲವರ್ಣ ಚಿತ್ರಗಳು ಎಂಬಿವುಗಳ ಮೂಲಕ ರಚಿಸುವ ಪೈಟಿಂಗ್‌ಗಳು ಹೀಗೆ ಹಲವು ರೀತಿಯಲ್ಲಿ ರಚನೆಗಳನ್ನು ನಿರ್ವಹಿಸಲಾಗುತ್ತದೆ.
- ರೇಖಾಚಿತ್ರಗಳು, ಪೈಟಿಂಗ್‌ಗಳು,ಬಿತ್ತಿಚಿತ್ರಗಳು,ಅಲಂಕಾರಿಕ ಚಿತ್ರಗಳು, ಕಾರ್ಟೂನ್‌ಗಳು, ಕ್ಯಾರಿಕೇಚರ್‌ಗಳು ಹಾಗೆ ಹಲವು ವಿಭಾಗದಲ್ಲಿರುವ ಚಿತ್ರಗಳಿವೆ.
- ವಿವಿಧ ಮೇಲ್ಮೈಗಳಲ್ಲಿ ವಿವಿದ ಉಪಕರಣಗಳನ್ನು ಉಪಯೋಗಿಸಿ ಚಿತ್ರಗಳನ್ನು ರಚಿಸಲಾಗುತ್ತದೆ.

## 4.2 ಸಂಗೀತ

ಪ್ರಕೃತಿಯ ಇಂಪಾದ ಶಬ್ಧಗಳೇ ನಾದಗಳು. ನಾದಗಳು ಕ್ರಮಗತವಾಗಿ ಸೇರಿಸಿದರೆ ಸಂಗೀತವಾಗುವುದು. ಆದಿಕಾಲದಿಂದಲೇ ಸಂಗೀತವಿದೆ. ಮನುಷ್ಯನು ಪರಿಷ್ಕರಣೆ ಹೊಂದುವುದಕ್ಕೆ ಅನುಸರಿಸಿ ಸಂಗೀತವು ಪರಿಷ್ಕರಣೆಗೊಳ್ಳತೊಡಗಿತು. ಶಬ್ದ, ಮಾತು,ಚಲನೆ ಎಂಬಿವುಗಳ ಒಂದುಗೂಡುವಿಕೆಯೇ ಸಂಗೀತ. ಅದು ಒಂದೇ ಸಮಯದಲ್ಲಿ ಕಲೆಯೂ ಶಾಸ್ತ್ರವೂ ಆಗಿದೆ. ಮಾನವೀಯ ಭಾವನೆಗಳನ್ನು ಭಾಷಾತೀತವಾಗಿ ಪ್ರಕಟಿಸಲು ಸಾಧ್ಯವಾಗುವುದೇ ಸಂಗೀತದ ವಿಶೇಷತೆಯಾಗಿದೆ.

ಮಕ್ಕಳ ಮನಸ್ಸನ್ನು ಸಂಸ್ಕರಿಸಿ ಸತ್ ಸ್ವಭಾವವನ್ನು ದೃಡಗೊಳಿಸುವುದರಲ್ಲಿ ಸಂಗೀತಕ್ಕೆ ಹೆಚ್ಚಿನ ಪ್ರಾಧಾನ್ಯವಿದೆ. ಸಂಗೀತದ ಕಲೆಯಿಂದ ಮನಸ್ಸನ್ನು ಶುದ್ಧೀಕರಿಸಿ, ಬುದ್ಧಿಯನ್ನು ಉದ್ದೀಪನಗೊಳಿಸುವುದರ ಮೂಲಕ ಭಾವನೆಯನ್ನು ಉತ್ತೇಜಿಸಲು ಸೃಜನಾತ್ಮಕತೆಯನ್ನು ಗಳಿಸಲು ಸಾಧ್ಯವಾಗುವುದು. ಸಂಗೀತದ ಕಲಿಕೆಯಿಂದ ಬೌದ್ಧಕ ವಿಕಾಸವೂ ಮಾನಸಿಕ ಉಲ್ಲಾಸವೂ ಲಭಿಸಬಹುದು. ವಿವಿಧ ಹಂತಗಳ ಮೂಲಕ ಮಗುವಿನಲ್ಲಿ ಸಂಗೀತಾಭ್ಯಾಸದ ಪ್ರಗತಿಯು ಸಾಧ್ಯವಾಗುವುದು.

ನಿಖರತೆ ಹಾಗೂ ಸೂಕ್ಷ್ಮತೆಯಿಂದ ಕೂಡಿದ ನಿರೀಕ್ಷಣೆ ಆಶಯ ವಿನಿಮಯ ಸಂಶೋಧನೆ, ಆಸ್ವಾದನೆ, ಪ್ರದರ್ಶನ ಎಂಬಿವುಗಳು ಆ ಹಂತಗಳಾಗಿವೆ. ತಾಳದ ಜ್ಞಾನ ಶಬ್ಧಸ್ವಾಧೀನವೂ ಕ್ರಮೀಕರಣವು ಸಂಗೀತಕಲಿಕೆಗೆ ಅಗತ್ಯವಾಗಿದೆ. ಸಂಗೀತದ ಕಲಿಕಾ ಪ್ರಕ್ರಿಯೆಯಲ್ಲಿ ಮಗುವಿನ ವಿಷಯಾಸಕ್ತಿಯನ್ನು ಉತ್ತೇಜಿಸಿ ಜ್ಞಾನವು ಲಭಿಸುವಂತೆ ಮಾಡಬೇಕು. ಮಕ್ಕಳ ಪ್ರತಿಭೆಗಳನ್ನು ಗುರುತಿಸಲು, ಸ್ವೀಕರಿಸಲು, ಆಸ್ವಾದಿಸಲು, ಪ್ರೋತ್ಸಾಹಿಸಲು ಹಿರಿಯರು ತಯಾರಾಗುವಾಗಲೇ ಅದು ಪೂರ್ಣವಾಗಿ ಅಭಿವೃದ್ಧಿಹೊಂದುವುದು. ಇನ್ನಿತರ ವಿಷಯಗಳಂತೆ ಸಂಗೀತವನ್ನು ತಿಳಿಯಲು ಅನುಭವಿಸಲು ಪ್ರಕಟಿಸಲು ಅವಕಾಶವನ್ನು ನೀಡಬೇಕು.

ಇತರ ವಿಷಯಗಳ ಕಲಿಕಾಚಟುವಟಿಕೆಗಳೊಂದಿಗೆ ಸಂಗೀತದ ಕಲಿಕಾ ಸಾಧ್ಯತೆಗಳನ್ನು ಉಪಯೋಗಪಡಿಸಲು ಶ್ರದ್ಧೆವಹಿಸಬೇಕು. ಮಕ್ಕಳ ಸಂಗೀತಪರವಾದ ಸಾಮರ್ಥ್ಯಗಳನ್ನು ಸಾಧನೆಗಳನ್ನು ಸಮಾಜಕ್ಕೆ ತಿಳಿಯಪಡಿಸಲು ಪ್ರಯೋಜನಪಡಿಸಲು ಸಾಧ್ಯವಾಗಬೇಕು.

## 4.3 ನೃತ್ಯ ಕಲೆ

ಶರಿರವು ನೃತ್ಯದ ಮಾಧ್ಯಮವಾಗಿದೆ. ಅಂಗ, ಪ್ರತ್ಯಂಗ, ಉಪಾಂಗ ಎಂಬ ಎಲ್ಲಾ ಅವಯವಗಳು ಶರೀರ ಚಲನೆಯಲ್ಲಿ ಒಳಗೊಂಡಿರುತ್ತದೆ. ಇವುಗಳೆಲ್ಲಾ ಸೇರಿದ ಭಾವಪೂರ್ಣ ಅಭಿನಯವು ನೃತ್ಯವಾಗಾದರೆ

ನೃತ್ಯದ ಮೂಲಕ ಭಾವನಾತ್ಮಕವಾದ ಅನುಭೂತಿಯು ಉಂಟಾಗುತ್ತದೆ. ನೃತ್ಯವು ಆತ್ಮದ ಭಾವಪೂರ್ಣ ಅಭಿನಯವಾದುದರಿಂದ ನರ್ತಕರೂ ಅದನ್ನು ನೋಡುವವರೂ ಒಂದೇ ರೀತಿಯ ಆನಂದವನ್ನು ಅನುಭವಿಸುತ್ತಾರೆ.

ಸೌಂದರ್ಯದ ಆರಾಧನೆಯನ್ನು ಬೆಳೆಸಲು ವ್ಯಕ್ತಿಜೀವನದಲ್ಲೂ, ಸಾಮಾಜಿಕ ಜೀವನದಲ್ಲೂ ಶಿಸ್ತನ್ನು ಬೆಳೆಸಲು, ಶಾಸ್ತ್ರೀಯವಾದ ತಾಳ ನೈಪುಣ್ಯತೆ ಉಂಟಾಗಲೂ ನೃತ್ಯ ಕಲಿಕೆ ಸಹಾಯ ಮಾಡುತ್ತದೆ. ಅನುರೂಪೀಕರಣ ಸಾಧ್ಯತೆಯನ್ನು ಕಂಡುಹಿಡಿಯಲು ಮಾನಸಿಕ ಉಲ್ಲಾಸವು ಸಾಮಾಜಿಕ ಹೊಂದಾಣಿಕೆಗೂ ನೃತ್ಯಕಲಿಕೆಯು ಸಹಕರಿಸುತ್ತದೆ.

ಎಲ್ಲಾ ಮಕ್ಕಳಲ್ಲೂ ನೃತ್ಯದ ಆಸ್ವಾದನೆಯನ್ನು ಹೆಚ್ಚಿಸಲು ಶಾಲೆಗಳಲ್ಲಿ ನೃತ್ಯ ಕಲಿಕೆಯು ಗುರಿಯಾಗಿರಿಸಿಕೊಂಡಿದೆ. ಪ್ರತಿಭಾವಂತ ಮಕ್ಕಳಿಗೆ ಪ್ರತಿಭೆಯನ್ನು ಪ್ರದರ್ಶಿಸಲು ಮತ್ತು ಬೆಳೆಸಲು ನೃತ್ಯ ಕಲೆಯ ತರಬೇತಿ ಅನಿವಾರ್ಯವಾಗಿದೆ. ವಿವಿಧ ರೀತಿ ನೃತ್ಯಶೈಲಿಗಳು ಮುದ್ರೆ(ಸಂಕೇತ)ಗಳನ್ನು ಪರಿಚಯಪಡಲು ಭಾರತೀಯವೂ ಮತ್ತು ಕೇರಳೀಯವೂ ಆದ ನೃತ್ಯರೂಪಗಳ ಮಹತ್ವವನ್ನು ತಿಳಿಯುವುದು ಈ ಕಲಿಕೆಯ ಲಕ್ಷ್ಯವಾಗಿದೆ.

**ಕಲಿಕೋದ್ದೇಶಗಳು**

- ಚತುರ್ವಿದಾಭಿನಯಗಳ ಕುರಿತು ತಿಳುವಳಿಕೆಯನ್ನು ರೂಪೀಕರಿಸುವುದು.
- ವಿವಿಧ ರೀತಿಯ ನೃತ್ಯರೂಪಗಳನ್ನು ಪರಿಚಯಿಸುವುದು.
- ನೃತ್ಯವನ್ನು ನೋಡಿ ಆನಂದಿಸುವುದು, ನೃತ್ಯ ಪ್ರದರ್ಶನಗಳಲ್ಲಿ ಪಾಲ್ಗೊಳ್ಳುವುದು.
- ವಿವಿಧ ರೀತಿಯ ನೃತ್ಯ ರೂಪಗಳ ಸಾಂಸ್ಕೃತಿಕ ಪ್ರಾಮುಖ್ಯತೆಯನ್ನು ತಿಳಿಯುವುದು.
- ನೃತ್ಯದ ಚರಿತ್ರೆ ಸಂಬಂಧವಾದ ತಿಳುವಳಿಕೆಗಳನ್ನು ರೂಪೀಕರಿಸುವುದು.
- ಕಲಾರೂಪಗಳ ಬಗ್ಗೆ ಇನ್ನೂ ಅಧಿಕ ಸಂಶೋಧನೆಗಳನ್ನು ನಡೆಸುವುದು.
- ದೃಶ್ಯಾವಿಷ್ಕಾರಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಕಲಿಕೆಯನ್ನು ಆಸ್ವಾದಿಸುವುದು.

**ವಿವಿಧ ವಿಭಾಗಗಳು**

- ಜಾನಪದ ನೃತ್ಯಗಳು
- ಶಾಸ್ತ್ರೀಯ ನೃತ್ಯಗಳು
- ಪ್ರಾದೇಶಿಕ ನೃತ್ಯಗಳು

## 4.4 ನಾಟಕ

ನಾಟಕವು ಒಂದು ಕ್ರಿಯಾಪ್ರಧಾನವಾದ ಕಲೆಯಾಗಿದೆ. ಶಾಸ್ತ್ರೀಯ ರೀತಿಯಲ್ಲಿ ಒಂದುಗೂಡಿದ ಅಂತರ್‌ಕ್ರಿಯಾ ವಿಕಸನ ಪ್ರದರ್ಶನದ ಬಾಹ್ಯ ಆವಿಷ್ಕಾರವು ನಾಟಕವಾಗಿದೆ. ಅಭಿನಯವೂ, ಭಾವನೆಯ ಪ್ರಕಟನೆಯು ಪಾರ್ಣವೂ ಶಕ್ತವೂ ಆದ ಕ್ರಿಯೆಯಾಗಿದೆ. ಬಾಹ್ಯವಾಗಿ ಕಾಣುವುದೆಲ್ಲವೂ ಆಂತರಿಕ ಕ್ರಿಯೆಯ ಬೆಳವಣಿಗೆಗೆ ಅನುಗುಣವಾಗಿರುತ್ತದೆ. ಪ್ರತಿಯೊಂದು ನಾಟಕಕ್ಕೂ ಆದರದ್ದೇ ಆದ ಒಳಾರ್ಥಗಳು ಇರುವುದು. ಅದನ್ನು ನಾಟಕ ವೀಕ್ಷಕರಲ್ಲಿಗೆ ತಲುಪಿಸಲು ನಾಟಕ ಕರ್ತೃ, ನಾಟಕ ನಿರ್ದೇಶಕ, ನಾಟಕ ನಟರು ಎಲ್ಲರೂ ಸೇರಿ ಒಟ್ಟಿಗೆ ಪ್ರಯತ್ನಿಸುತ್ತಾರೆ.

ನಾಟಕದ ಕಥೆಗೆ ಪೂರಕವಾದ ಹೊರಗಿನಿಂದ ಕೆಲವು ಪ್ರತ್ಯೇಕ ರಂಗಸಜ್ಜಿಕೆಗಳನ್ನು ಹಾಸ್ಯಗಳನ್ನು ಸೇರಿಸಿ ನಾಟಕಾವಿಷ್ಕಾರ ಮಾಡುತ್ತಾರೆ. ಕಥೆಯ ಗುರಿ (premise) ಕಥಾ ಪಾತ್ರ(character) ಸಂಘರ್ಷ (conflict) ಸಂಭಾಷಣೆ (dialogue) ಈ ನಾಲ್ಕು ಭದ್ರ ತಳಹದಿಯ ಪರಸ್ಪರ ಸಂಯೋಜನೆಯಿಂದ ನಾಟಕ ಉಂಟಾಗುತ್ತದೆ. ಚಿತ್ರ, ಶಿಲ್ಪಕಲೆ, ಸಂಗೀತ, ಅಭಿನಯ, ನೃತ್ಯ ಎಂಬಿತ್ಯಾದಿ ಕಲೆಗಳು ನಾಟಕದಲ್ಲಿ ಒಳಗೊಂಡಿರುತ್ತದೆ.

**ಕಲಿಕೆಯ ಉದ್ದೇಶಗಳು**

- ವಿವಿಧ ನಾಟಕಗಳನ್ನು ನೋಡುವುದು ಮತ್ತು ಸಾಮಾಜಿಕ ಪ್ರಾಧಾನ್ಯತೆಯನ್ನು ತಿಳಿಯುವುದು.
- ಸರಳ ನಾಟಕಗಳಲ್ಲಿ ತೊಡಗಿಸಿಕೊಂಡು ಅಭಿನಯ ಕಲೆಯ ಸಿದ್ಧಿಯನ್ನು ಬೆಳೆಸುವುದು.
- ನಾಟಕಗಳನ್ನು ರಚಿಸಲು ಮತ್ತು ನಿರ್ದೇಶನದಲ್ಲಿ ತೊಡಗಿಸಿಕೊಳ್ಳುವ ಆಸಕ್ತಿಯನ್ನು ಬೆಳೆಸುವುದು.

- ನಾಟಕದ ತಂತ್ರಜ್ಞಾನವನ್ನು ತಿಳಿಯುವುದು, ನಾಟಕವನ್ನು ಪ್ರದರ್ಶಿಸುವುದು.
- ನಾಟಕಕ್ಕೆ ಸಂಬಂಧಿಸಿದ ವಿವಿಧ ಹಂತಗಳನ್ನು (ರಂಗಸಜ್ಜಿಕೆ, ಸಂಭಾಷಣೆ, ಅಭಿನಯ, ಸಂಗೀತ, ವಸ್ತ್ರಾಲಂಕಾರ, ವರ್ಣಾಲಂಕಾರ, ಧ್ವನಿ, ಬೆಳಕು, ನಿರ್ವಹಣೆ) ತಿಳಿಯುವುದು ಮತ್ತ ನಾಟಕ ಪ್ರದರ್ಶನದ ಮೂಲಕ ಆಸ್ವಾದನೆ, ಕಲಾರೂಪಗಳ ಬಗ್ಗೆ ಹೆಚ್ಚಿನ ಸಂಶೋಧನೆಯತ್ತ ಕೊಂಡೊಯ್ಯುವುದು.
- ವಿವಿಧ ನಾಟಕ ರೂಪಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ಅದರಲ್ಲಿ ಭಾಗಿಯಾಗುವುದು.
- ನಾಟಕದ ಸಾಂಸ್ಕೃತಿಕ ಹಿನ್ನೆಲೆಯನ್ನು ತಿಳಿಯುವುದು.
- ವಿವಿಧ ವಿಷಯಗಳ ಕಲಿಕೆಗೆ ನಾಟಕದ ಸಾಧ್ಯತೆಗಳನ್ನು ತಿಳಿಯುವುದು ಮತ್ತು ಪ್ರಯೋಗಿಸುವುದು. ಕಲಿಕೆಯನ್ನು ಸಂತೋಷಕರವಾಗಿಸುವುದು
- ಸಾಮಾಜಿಕ ಬೆಳವಣಿಗೆಯಲ್ಲಿ ನಾಟಕಗಳು ವಹಿಸಿದ ಪಾತ್ರವನ್ನು ತಿಳಿಯುವುದು.

**ವಿವಿಧ ವಿಭಾಗಗಳು**

- ಏಕಾಂತ ನಾಟಕಗಳು
- ಏಕಪಾತ್ರಾಭಿನಯ ನಾಟಕಗಳು
- ಬೀದಿ ನಾಟಕಗಳು
- ಪೂರ್ಣಕಾಲಿಕ ನಾಟಕಗಳು (Full lengthed plays)

# 5. ಕಲೆಯ ಕಲಿಕೆ – ಮೌಲ್ಯನಿರ್ಣಯ

**ಕ**ಲೆಯು ವಿದ್ಯಾರ್ಥಿಯ ಆಸ್ವಾದನಾ ಸಾಮರ್ಥ್ಯವನ್ನು ಸದಾ ಅಭಿವೃದ್ಧಿಪಡಿಸುತ್ತಿರುವುದು ಪ್ರಧಾನ ಘಟಕವಾಗಿದೆ. ಪ್ರದರ್ಶನಕ್ಕೆ (Performance) ಹೆಚ್ಚಿನ ಪ್ರಧಾನ್ಯತೆಯುಳ್ಳ ವಿಷಯವು ಕಲೆಯಾಗಿದೆ. ಬೆಳೆದು ಬರುತ್ತಿರುವ ಹೊಸ ತಲೆಮಾರಿನ ಮಕ್ಕಳ ಮಾನಸಿಕ ಸಂಕಷ್ಟಗಳು ಮತ್ತು ಉದ್ವಿಗ್ನತೆಗಳನ್ನು ಕಡಿಮೆಗೊಳಿಸಲು ಕಲಾಶಿಕ್ಷಣದ ಸಾಧ್ಯತೆಗಳನ್ನು ತಿಳಿಯಬೇಕಾಗಿದೆ. ಶಾಲಾ ಮಟ್ಟದಲ್ಲಿ ಕಲಾಶಿಕ್ಷಣದ ವಿಭಾಗದಲ್ಲಿ ಚಿತ್ರಕಲೆ (drawing) ಸಂಗೀತ (music) ನೃತ್ಯ (dance) ನಾಟಕ (drama) ಎಂಬೀ ನಾಲ್ಕು ಶಾಖೆಗಳು ಒಳಗೊಂಡಿರುತ್ತವೆ. ಈ ನಾಲ್ಕು ಶಾಖೆಗಳಲ್ಲಿರುವ ಸಾಮಾನ್ಯಜ್ಞಾನ ಪಾಠ್ಯಪದ್ಧತಿಯಲ್ಲಿ ಒಳಗೊಂಡಿರುತ್ತದೆ. ಕಲಾಶಿಕ್ಷಣಕ್ಕೆ ಸಂಬಂಧಿಸಿದ ವಿವಿಧ ತರಗತಿಗಳಲ್ಲಿ ವಿದ್ಯಾರ್ಥಿ ಪಡೆಯಬೇಕಾದ ಕಲಿಕಾ ಸಾಧನೆಗಳನ್ನು (Learning outcomes) ಮೊದಲೇ ತಯಾರಿಸಲಾಗಿದೆ. ಶಾಲಾ ಪಠ್ಯಪದ್ಧತಿಯಲ್ಲಿನ ಸಾಮಾನ್ಯ ವಿಷಯಗಳಾದ ಭಾಷೆ, ಗಣಿತ, ವಿಜ್ಞಾನ, ಪರಿಸರ ವಿಜ್ಞಾನ ಮೊದಲಾದ ವಿಷಯಗಳನ್ನು ಕಲಿಯುವ ರೀತಿಯಲ್ಲಿಯೇ ಕಲಾಶಿಕ್ಷಣವನ್ನು ಕಲಿಯಲು ವಿದ್ಯಾರ್ಥಿಗೆ ಅವಕಾಶವನ್ನು ಒದಗಿಸಬೇಕು. ಕಲಾಶಿಕ್ಷಣದ ಎಲ್ಲಾ ವಲಯಗಳಲ್ಲೂ ಲಭಿಸುವ ಜ್ಞಾನವನ್ನು ಹೆಚ್ಚಿಸಲು ಮಕ್ಕಳ ಅಭಿರುಚಿಯನ್ನು ಕಂಡುಹಿಡಿಯಲು, ಹಿರಿಮೆಯನ್ನು ಪ್ರದರ್ಶಿಸುವ ವಿಭಾಗದಲ್ಲಿ ಮಕ್ಕಳನ್ನು ಮುಂದುವರಿಯುವಂತೆ ಪ್ರೋತ್ಸಾಹಿಸಲು ಇದರಿಂದ ಸಾಧ್ಯ.

ಕಲಿಕೆ ಮತ್ತು ಭೋದನಾ ಪ್ರಕ್ರಿಯೆಗಳ ಅವಿಭಾಜ್ಯ ಘಟಕವು ಮೌಲ್ಯನಿರ್ಣಯವಾಗಿದೆ. ಕಲೆಗೆ ಸಂಬಂಧಿಸಿ ರೂಪಕಲ್ಪನೆ ಮಾಡಿದ ಕಲಿಕಾ ಸಾಧನೆಗಳು ಎಷ್ಟು ಮಾತ್ರ ತೃಪ್ತಿಕರವಾಗಿ ನಿರ್ವಹಿಸಲ್ಪಟ್ಟಿವೆ, ಮಕ್ಕಳ ಅಭಿರುಚಿಯನ್ನು ಕಂಡುಹಿಡಿಯಲು, ಕಲಿಕೆಯನ್ನು ಆಹ್ಲಾದಕರವಾಗಿಸಲು ಸಾಧ್ಯವಾಗಿದೆಯೋ? ಮುಂತಾದವುಗಳನ್ನು ಮೌಲ್ಯನಿರ್ಣಯಗಳ ಮೂಲಕ ತಿಳಿಯಬೇಕು. ಕಲಾಶಿಕ್ಷಣದ ಮೌಲ್ಯನಿರ್ಣಯಕ್ಕೆ ಸಂಬಂಧಿಸಿದ ವಿಷಯಗಳನ್ನು ಇಲ್ಲಿ ಚರ್ಚಿಸಲಾಗಿದೆ.

**ಮೌಲ್ಯನಿರ್ಣಯ ಎಂದರೇನು?**

ಕಲೆಗೆ ಸಂಬಂಧಿಸಿ ಶಾಲೆಯ ಒಳಗಿನಿಂದ ಮತ್ತು ಹೊರಗಿನಿಂದ ವಿದ್ಯಾರ್ಥಿ ಗಳಿಸಿದ ವಿವಿಧ ಸಾಮರ್ಥ್ಯಕಗಳು, ನೈಪುಣ್ಯತೆಗಳು ಮತ್ತು ಇವುಗಳನ್ನು ಎಷ್ಟರ ಮಟ್ಟಿಗೆ ತನ್ನದಾಗಿಸಲು ಸಾಧ್ಯವಾಗಿದೆ ಎಂಬ ಸಂಶೋಧನೆಯೇ ಮೌಲ್ಯಮಾಪನ. ಕಲಿಕಾಸಾಧನೆಗಳಿಗೆ ಪ್ರಾಧಾನ್ಯತೆಯನ್ನು ನೀಡುವ ರೀತಿಯಲ್ಲಿರುವ ಮೌಲ್ಯಮಾಪನ ಇಲ್ಲಿ ಅತ್ಯಗತ್ಯ. ಮೌಲ್ಯಮಾಪನವು ಕಲಾಶಿಕ್ಷಣದ ಪುರೋಗತಿಯ ಮೌಲ್ಯನಿರ್ಣಯ ಆಗಿರಬೇಕು. ಸ್ವತಃ ತಿದ್ದಿಕೊಂಡು ವಿದ್ಯಾರ್ಥಿಗೆ ಎಷ್ಟರ ಮಟ್ಟಿಗೆ ಮುಂದುವರಿಯಲು ಸಾಧ್ಯವಾಗಿದೆ ಎಂಬುವುದರ ಮೌಲ್ಯನಿರ್ಣಯವಾಗಿರಬೇಕು.

**ಮೌಲ್ಯನಿರ್ಣಯ ಹೇಗೆ?**

ಕಲಿಕಾಸಾಧನೆಗಳಿಗೆ ಪ್ರಾಧಾನ್ಯತೆಯನ್ನು ಕಲ್ಪಿಸುವ ಪಾಠ್ಯಪದ್ಧತಿಯನ್ನು 2013 ರಲ್ಲಿ ಆವಿಷ್ಕರಿಸಿ ಜ್ಯಾರಿಗೆ ತರಲಾಯಿತು. ಆದುದರಿಂದ ಮೌಲ್ಯನಿರ್ಣಯ ನಡೆಸುವಾಗ ಕಲಿಕಾಸಾಧನೆಗಳಿಗೆ ಒತ್ತು ನೀಡಬೇಕಾಗಿದೆ. ಕಲಾಶಿಕ್ಷಣಕ್ಕೆ ಸಂಬಂಧಿಸಿದ ಕಲಿಕಾಸಾಧನೆಗಳು ಎಷ್ಟರ ಮಟ್ಟಿಗೆ ತೃಪ್ತಿಕರವಾಗಿ ಗಳಿಸಲು ಸಾಧ್ಯವಾಯಿತು ಎಂಬುವುದರ ಮೌಲ್ಯನಿರ್ಣಯವನ್ನು ಅಧ್ಯಾಪಕರು ನಡೆಸಬೇಕಾಗಿದೆ.

ಅದಕ್ಕಾಗಿ ನಿರಂತರವೂ ಸಂಪೂರ್ಣವೂ ಆದ ಮೌಲ್ಯನಿರ್ಣಯ ರೀತಿಯನ್ನು ಕಾರ್ಯರೂಪಕ್ಕೆ ತರಬೇಕು. ಈ ರೀತಿಯ ಮೌಲ್ಯನಿರ್ಣಯ ರೀತಿಯನ್ನು ಕಾರ್ಯರೂಪಕ್ಕೆ ತರುವಾಗ ಕಲಾಶಿಕ್ಷಣದ

ಪ್ರತಿಯೊದು ವಿಭಾಗಗಳನ್ನೂ ಒಂದುಗೂಡಿಸಿ ಎರಡು ರೀತಿಯ ಮೌಲ್ಯನಿರ್ಣಯಕ್ಕೆ ಅವಕಾಶವನ್ನು ನೀಡಬೇಕು.

- ತರಗತಿಯೊಳಗಿನ ಕಲಿಕಾಪ್ರಕ್ರಿಯೆಯೊಂದಿಗೆ ಮೌಲ್ಯನಿರ್ಣಯ.
- ಪ್ರದರ್ಶನ (Performance)ಗಳ ಮೌಲ್ಯನಿರ್ಣಯ ಮತ್ತು ವೈಜ್ಞಾನಿಕ ಮೌಲ್ಯನಿರ್ಣಯ.

ಈ ಪ್ರತಿಯೊಂದು ವಿಷಯಕ್ಕೆ ಸಂಬಂಧಿಸಿ ಪ್ರತ್ಯೇಕವಾಗಿ ಪರಿಶೀಧಿಸುವುದು.

## 1. ತರಗತಿಯೊಳಗಿನ ಕಲಿಕಾಪ್ರಕ್ರಿಯೆಯೊಂದಿಗಿನ ಮೌಲ್ಯನಿರ್ಣಯ

(ನಿರಂತರ ಮೌಲ್ಯನಿರ್ಣಯ)

**ಪ್ರಕ್ರಿಯಾ ಮೌಲ್ಯನಿರ್ಣಯ**

ಕಲಿಕಾ ಪ್ರಕ್ರಿಯೆ ನಿರ್ವಹಿಸುವಾಗ ಅಧ್ಯಾಪಕನ ನಿರೀಕ್ಷಣೆ– ತರಗತಿ ಕೋಣೆಯೊಳಗಿನ ವಿದ್ಯಾರ್ಥಿಯ ಪ್ರದರ್ಶನ, ಕಲಾಶಿಕ್ಷಣಕ್ಕೆ ಸಂಬಂಧಿಸಿದ ಮಾಹಿತಿ ಸಂಗ್ರಹ, ಕಲಾಶಿಕ್ಷಣ–ಡೈರಿ–ಪೋರ್ಟ್‌ಪೋಲಿಯೋ ಯುನಿಟ್ ಮೌಲ್ಯನಿರ್ಣಯ ಮೊದಲಾದವುಗಳನ್ನು ಅಸ್ಪದವಾಗಿರಿಸಿ ಕಲಿಕಾ ಪ್ರಕ್ರಿಯೆಯೊಂದಿಗಿನ ಮೌಲ್ಯನಿರ್ಣಯವನ್ನು ಮಡೆಸಬಹುದಾಗಿದೆ. ಪ್ರಕ್ರಿಯೆಯ ಮೌಲ್ಯನಿರ್ಣಯ ಮಾಡಲು ಕೆಳಗೆ ಕೊಟ್ಟಿರುವ ಸೂಚನೆಗಳನ್ನು ಉಪಯೋಗಿಸಬಹುದಾಗಿದೆ.

- ಚಟುವಟಿಕೆಗಳಲ್ಲಿ ಭಾಗವಹಿಸುವಿಕೆ
- ತಿಳುವಳಿಕೆ
- ಸಾಮರ್ಥ್ಯಗಳನ್ನು ಗಳಿಸುವಿಕೆ
- ಪ್ರದರ್ಶನ/ನಿರೂಪಣೆ
- ದಾಖಲಾತಿ ತಯಾರಿ.

ಸಾಮಾಜಿಕ, ಭಾವನಾತ್ಮಕ ವಲಯಗಳ ನೈಪುಣ್ಯತೆಗಳನ್ನು ಪ್ರಕ್ರಿಯಾ ಮೌಲ್ಯನಿರ್ಣಯದ ಭಾಗವಾಗಿ ಮೌಲ್ಯನಿರ್ಣಯ ನಡೆಸಬೇಕು.

ಕೆಳಗೆ ನೀಡಿರುವ ನೈಪುಣ್ಯತೆಗಳನ್ನು ಆಯಾ ಸೂಚಕಗಳನ್ನು ಪರಿಗಣಿಸುವ ಸಮಯದಲ್ಲಿ ಮೌಲ್ಯನಿರ್ಣಯ ನಡೆಸಿ ಟೀಚಿಂಗ್ ಮಾನ್ವಲಿನಲ್ಲಿ ದಾಖಲಿಸಬೇಕು.

| ಸೂಚನೆಗಳು | ನೈಪುಣ್ಯತೆಗಳು |
|---|---|
| ಚಟುವಟಿಕೆಗಳಲ್ಲಿ ಭಾಗವಹಿಸುವಿಕೆ | ಸ್ವಯಂತಿಳುವಳಿಕೆ, ಮುಖಂಡತ್ವ, ವ್ಯಕ್ತಾಂತರ ನೈಪುಣ್ಯ, ಜವಾಬ್ದಾರಿಯ ನೇತೃತ್ವ. |
| ಆಶಯ ತಿಳುವಳಿಕೆ. | ಕಲಿಕಾ ನೈಪುಣ್ಯತೆಗಳು. |
| ಸಾಮರ್ಥ್ಯಗಳ ಗಳಿಸುವಿಕೆ. | ತೀರ್ಮಾನಿಸುವುದು, ಪ್ರಶ್ನೆ ಪರಿಹಾರ ಸಾಮರ್ಥ್ಯ, ಸೃಜನಾತ್ಮಕ ಸಾಮರ್ಥ್ಯ. |
| ಪ್ರದರ್ಶನ/ ಮಂಡನೆ. | ಆಶಯ ವಿನಿಮಯ ಸಾಮರ್ಥ್ಯ. |
| ದಾಖಲಾತಿ/ತಯಾರಿ. | ವಿಮರ್ಶನಾತ್ಮಕ ಚಿಂತನೆ. |

- **ಮಕ್ಕಳ ಕಲಾಶಿಕ್ಷಣದ ದಿನಚರಿ (Diary)** : ಮಕ್ಕಳ ಕಲಾಶಿಕ್ಷಣ ದಿನಚರಿ/ನೋಟ್‌ಬುಕ್‌ಗಳು ಪ್ರಕ್ರಿಯೆಗಳ ಮೌಲ್ಯನಿರ್ಣಯಕ್ಕಿರುವ ಪುರಾವೆಯಾಗಿ ಉಪಯೋಗಿಸಬಹುದು. ಇದನ್ನು ಸಮಯ ಬಂಧಿತವಾಗಿ ಪರಿಶೋಧಿಸಿ ಸೂಚನೆಗಳನ್ನು ನೀಡಬೇಕು. ಇದಕ್ಕೆ ಸಂಬಂಧಿಸಿದ ಸೂಚನೆಗಳನ್ನು ಟೀಚಿಂಗ್ ಮಾನ್ವಲಿನಲ್ಲಿ ದಾಖಲಿಸಬೇಕು.

- **ಪೋರ್ಟ್ ಪೋಲಿಯೋ ಮೌಲ್ಯನಿರ್ಣಯ :** ಪೋರ್ಟ್‌ಪೋಲಿಯೋವು ಸಂಬಂಧಿಸಿ ಮಗುವಿಗೆ, ರಕ್ಷಕರಿಗೆ, ಅಧ್ಯಾಪಿಕೆಗೆ ಫೀಡ್‌ಬ್ಯಾಕ್ ನೀಡುವ ಕೆಲಸವನ್ನು ಮಾಡುತ್ತದೆ. ಇದು ಕಲಿಕೆಯನ್ನು ಪ್ರೋತ್ಸಾಹಿಸುತ್ತದೆ. ಕಲಿಕಾ ಚಟುವಟಿಕೆಗಳ ಮೂಲಕ ಮುಂದುವರಿಯುವಾಗ ಉಂಟಾಗುವ ಉತ್ಪನ್ನಗಳನ್ನು ಪೋರ್ಟ್‌ಪೋಲಿಯೋದಲ್ಲಿ ಸೇರಿಸಿ ಮೌಲ್ಯನಿರ್ಣಯ ಮಾಡಬೇಕು. ವಿಷಯ ಬಂಧಿತವಾದ ಕಲಿಕಾ ಪುರಾವೆಗಳು ಇದರಲ್ಲಿ ಒಳಗೊಂಡಿರುತ್ತದೆ.

ಪೋರ್ಟ್‌ಪೋಲಿಯೋದಲ್ಲಿ ಒಳಗೊಂಡಿರುವವುಗಳು

- ಕಲೆಯ ಕಲಿಕೆಯು ಡೈರಿ। ನೋಟ್‌ಬುಕ್
- ಇತರ ರಚನೆಗಳು
- ಚಿತ್ರಗಳು। ಸಂಗ್ರಹಗಳು
- ವರ್ಕ್‌ಶೀಟ್‌ಗಳು.

ಈ ರೀತಿಯ ಮೌಲ್ಯನಿರ್ಣಯದಲ್ಲಿ ಅತ್ಯುತ್ತಮ / ಉತ್ತಮ /ಸರಾಸರಿ/ ಇನ್ನೂ ಉತ್ತಮಪಡಿಸಬೇಕು ಎಂಬ ರೀತಿಯಲ್ಲಿ ವಿಂಗಡಿಸಿ ಕ್ರಮವಾಗಿ 4/3/2/1 ಅಂಕಗಳನ್ನು ನೀಡಬೇಕು.

ಟೀಚಿಂಗ್ ಮ್ಯಾನ್ವಲ್ (TM) : ಪ್ರಕ್ರಿಯೆಗಳ ಮೌಲ್ಯನಿರ್ಣಯಕ್ಕೆ ಟೀಚಿಂಗ್ ಮ್ಯಾನ್ವಲ್ (TM) ಉಪಯೋಗಿಸಬಹುದು ಟೀಚಿಂಗ್ ಮ್ಯಾನ್ವಲ್‌ನ ಮೌಲ್ಯನಿರ್ಣಯ ಪುಟದಲ್ಲಿ ದಾಖಲಿಸಿದ ಪ್ರತಿಫಲನ ಟಿಪ್ಪಣಿಗಳನ್ನು ಇದಕ್ಕೆ ಉಪಯೋಗಿಸಬಹುದು.

- **ಘಟಕ ಮಟ್ಟದ ಮೌಲ್ಯನಿರ್ಣಯ :** ಘಟಕಕ್ಕೆ ಸಂಬಂಧಿಸಿದ ವಾಚಿಕ ಮೌಲ್ಯನಿರ್ಣಯ, ಪ್ರದರ್ಶನ ಮೌಲ್ಯನಿರ್ಣಯ, ಘಟಕದ ತಿಳುವಳಿಕೆಯ ಮೌಲ್ಯನಿರ್ಣಯ ಮಾಡಬಹದಾದ ರಸಪ್ರಶ್ನೆಸ್ಪರ್ಧೆಗಳ ಮೌಲ್ಯನಿರ್ಣಯಗಳಿಂದ ಘಟಕದ ಮೌಲ್ಯನಿರ್ಣಯ ನಡೆಸಬಹುದು.

## ನಿರಂತರ ಮೌಲ್ಯನಿರ್ಣಯ (CE) ಗ್ರೇಡಿಂಗ್

ಕಲೆಯಲ್ಲಿ ಮಗುವಿನ ಪ್ರದರ್ಶನ ಮೌಲ್ಯನಿರ್ಣಯ (ಕಲೆಯ ಕಲಿಕಾಡೈರಿ, ಟೀಚಿಂಗ್ ಮ್ಯಾನ್ವಲ್ ಅಧ್ಯಾಪಕನ ನಿರೀಕ್ಷಣೆ ಎಂಬಿತ್ಯಾದಿಗಳ ಆಧಾರದಲ್ಲಿ) ಪೋರ್ಟ್ ಪೋಲಿಯೋದ ಮೌಲ್ಯನಿರ್ಣಯ, ಯೂನಿಟ್ ಮೌಲ್ಯನಿರ್ಣಯಗಳಲ್ಲಿ ಪ್ರತಿಯೊಂದರ ಅಂಕವನ್ನು 10 ರಲ್ಲಿ ಕಂಡುಹಿಡಿದು ಅವುಗಳ ಮೊತ್ತವನ್ನು ಕಂಡುಹಿಡಿಯಿರಿ. ಈ ಮೊತ್ತಕ್ಕೆ ಸರಯಾದ ಗ್ರೇಡ್ ನೀಡಿರಿ ಇದಕ್ಕಾಗಿ ಕೆಳಗೆ ನೀಡಿರುವ ಪಟ್ಟಿಯನ್ನು ಉಪಯೋಗಿಸಬಹುದು.

| ಅಂಕ (30 ರಲ್ಲಿ) | ಶೇಕಡಾಮಾನ | ಗ್ರೇಡ್ |
|---|---|---|
| 23 - 30 | 75 - 100 | A |
| 18 - 22 | 60 - 74 | B |
| 14 - 17 | 45 - 59 | C |
| 10 - 13 | 33 -44 | D |
| 10 ಕ್ಕಿಂತ ಕಡಿಮೆ | 33 ಕ್ಕಿಂತ ಕಡಿಮೆ | E |

ಉದಾಹರಣೆಗಾಗಿ ಒಂದು ಮಗುವಿಗೆ ಕಲೆಯ ಕಲಿಕಾಪ್ರಕ್ರಿಯೆ, ಪೋರ್ಟ್‌ಪೋಲಿಯೋ ಘಟಕ ಮೌಲ್ಯನಿರ್ಣಯ ಎಂಬಿವುಗಳ ಅಂಕಗಳು 10 ರಲ್ಲಿ ಕ್ರಮವಾಗಿ 8,7,7 ಎಂದಾಗಿರಲಿ. ಹಾಗಾದರೆ ಒಂದು ಅಂಕ 8+7+7=22 ಆಯಿತು. ಪಟ್ಟಿಯನ್ನು ಆಧಾರವಾಗಿರಿಸಿಕೊಂಡು ಮಗುವಿನ CE ಗ್ರೇಡ್ B ಆಗಿರುವುದು.

- **ಪ್ರದರ್ಶನ ಮೌಲ್ಯನಿರ್ಣಯ ಹಾಗೂ ಶಾಸ್ತ್ರೀಯ ಮೌಲ್ಯನಿರ್ಣಯ (ಟರ್ಮ್ ಮೌಲ್ಯನಿರ್ಣಯ)**
  ಕಲೆಯ ಕಲಿಕೆಯಲ್ಲಿ ಪ್ರದರ್ಶನ ಮೌಲ್ಯನಿರ್ಣಯಕ್ಕೆ ಹೆಚ್ಚಿನ ಮಹತ್ವವಿದೆ.

ಪ್ರತಿಯೊಂದು ಮಲಯಗಳನ್ನು ಸೇರಿಸಿಕೊಂಡು ತರಗತಿಗೆ ಸಂಬಂಧಿಸಿದ ಪ್ರದರ್ಶನದ ಸಾಧ್ಯತೆಗಳನ್ನು ಕಲಿಕಾಸಾಧನೆಗಳಿಗೆ ಒತ್ತು ನೀಡಿ ಕಂಡುಹಿಡಿಯಬೇಕು. ವಿಷಯಗಳಿಗೆ ಸಂಬಂಧಿಸಿ ಅಗತ್ಯವಾಗಿ ತಿಳಿದಿರಬೇಕಾದ ಮೂಲಭೂತ ಶಾಸ್ತ್ರೀಯ ತಿಳುವಳಿಕೆಗಳನ್ನು ಕೂಡಾ ಇದರ ಜೊತೆಗೆ ಪರೀಕ್ಷಿಸಬೇಕಾಗಿದೆ.

ಈ ರೀತಿಯ ಪ್ರದರ್ಶನದ ಶಾಸ್ತ್ರೀಯ ಮೌಲ್ಯನಿರ್ಣಯದ ಮಾದರಿಗಳನ್ನು SCERT ಯು ಅಭಿವೃದ್ಧಿ ಪಡಿಸಿ ನೀಡುವುದು.

**ಮೌಲ್ಯನಿರ್ಣಯದ ಫೋರ್ಮೇಟ್**

ನಿರಂತರ ಮೌಲ್ಯನಿರ್ಣಯ (C E) ಹಾಗೂ ಟರ್ಮ್ ಮೌಲ್ಯನಿರ್ಣಯ (T E) ಗಳನ್ನು ಪ್ರತಿ ಟರ್ಮ್‌ನಲ್ಲೂ ದಾಖಲಿಸಲು ಇರುವ ಫೋರ್ಮೇಟ್.

ಟರ್ಮ್ : 1/2/3

ವಿಷಯ : ತರಗತಿ: ಡಿವಿಷನ್ :

| ಕ್ರಮ ಸಂಖ್ಯೆ | ವಿದ್ಯಾರ್ಥಿಯ ಹೆಸರು | CE ವಿಭಾಗ | | | CE ಗ್ರೇಡ್ | TE ಗ್ರೇಡ್ | ಷರಾ |
|---|---|---|---|---|---|---|---|
| | | ಪ್ರಕ್ರಿಯೆ | ಪೋರ್ಟ್ ಪೋಲಿಯೋ | ಘಟಕ ಮೌಲ್ಯನಿರ್ಣಯ | | | |
| | | | | | | | |

## ಗ್ರೇಡಿಂಗ್ ರೀತಿ

ಪ್ರಾಥಮಿಕ ಹಂತದಲ್ಲಿ ನಿರಂತರ ಮೌಲ್ಯನಿರ್ಣಯಕ್ಕೆ ಹಾಗೂ ಟರ್ಮ್ ಮೌಲ್ಯನಿರ್ಣಯಕ್ಕೆ ಪ್ರತ್ಯೇಕ ಗ್ರೇಡ್ ನೀಡುವ ರೀತಿಯನ್ನು ಬಳಸಬೇಕು. ಅದಕ್ಕಾಗಿ ಕೆಳಗೆ ನೀಡಿರುವ ಪಟ್ಟಿಯನ್ನು ಉಪಯೋಗಿಸಬೇಕು.

| ಅಂಕಗಳ ಶೇಕಡಾಮಾನ | ಗ್ರೇಡ್ |
|---|---|
| 75 - 100 | A |
| 60 - 74 | B |
| 45 - 59 | C |
| 33 -44 | D |
| 33 ರಿಂದ ಕಡಿಮೆ | E |

**ಮೌಲ್ಯನಿರ್ಣಯದ ವಾರ್ಷಿಕ ಕ್ರೋಡೀಕರಣ**

ಟರ್ಮ್‌ಗಳ CE ಅಂಕಗಳು /ಗ್ರೇಡುಗಳನ್ನು ಪರಿಗಣಿಸುವಾಗ ಮೂರು ಟರ್ಮ್‌ಗಳಲ್ಲಿ ಮಗುವಿಗೆ ಲಭಿಸಿದ ಅತ್ಯಧಿಕ ಅಂಕ/ಗ್ರೇಡ್‌ನ್ನು CE ಯ ವಾರ್ಷಿಕ ಓವರೋಲ್ ಗ್ರೇಡ್ ಆಗಿದೆ.

**TE ಗ್ರೇಡ್**

T E ಗ್ರೇಡ್, ಮೂರನೇ ಟರ್ಮ್‌ನಲ್ಲಿ ವಿದ್ಯಾರ್ಥಿಯು ಗಳಿಸಿದ ಗ್ರೇಡ್ ಆಗಿದೆ.

CE ಗ್ರೇಡ್, TE ಗ್ರೇಡ್‌ಗಳನ್ನು ಮೇಲಿನ ರೀತಿಯಲ್ಲಿ ದಾಖಲಿಸುವುದರೊಂದಿಗೆ ಸಾಮಾಜಿಕ ಭಾವನಾತ್ಮಕ ಮಲಯಗಳಲ್ಲಿ ಗುಣಾತ್ಮಕವಾದ ದಾಖಲಿಸುವಿಕೆಗಳನ್ನು ಕೂಡಾ ವಾರ್ಷಿಕ ಫೋರ್ಮೇಟಿನಲ್ಲಿ ದಾಖಲಿಸಬೇಕು.

ಸಾಮಾಜಿಕ ಭಾವನಾತ್ಮಕ ವಲಯಗಳಲ್ಲಿ ವಿದ್ಯಾರ್ಥಿಯ ಹಿರಿಮೆಗೆ ಸಂಬಂಧಿಸಿದ ಧನಾತ್ಮಕವಾದ ಅಂಶಗಳನ್ನು ಕಂಡುಹಿಡಿದು ದಾಖಲಿಸಿದರೆ ಸಾಕು. ಋಣಾತ್ಮಕ ಅಂಶಗಳನ್ನು ದಾಖಲಿಸುವ ಅಗತ್ಯವಿಲ್ಲ.

| ಕ್ರಮ ಸಂಖ್ಯೆ | ವಿದ್ಯಾರ್ಥಿಯ ಹೆಸರು | *CE* ವಿಭಾಗ | | | | *CE* ಗ್ರೇಡ್ | *TE* | | ಷರಾ |
|---|---|---|---|---|---|---|---|---|---|
| | | ಪ್ರಕ್ರಿಯೆ *(20)* | ಪೋರ್ಟ್ ಫೋಲಿಯೋ *(20)* | ಘಟಕ ಮೌಲ್ಯನಿರ್ಣಯ *(20)* | ಒಟ್ಟು *(60)* | | ಸ್ಕೋರ್ *(100)* | ಗ್ರೇಡ್ | |
| | | | | | | | | | |

# 6. ಕಲೆಯ ಕಲಿಕೆ – ಬೆಂಬಲ ವ್ಯವಸ್ಥೆ

**ಅ**ತಿ ಹೆಚ್ಚಿನ ಪ್ರೋತ್ಸಾಹ, ಸಹಕಾರ, ಸಹಾಯದಿಂದ ಮಾತ್ರವೇ ಕಲೆಯ ಕಲಿಕೆಯು ಫಲಪ್ರದವಾಗುವುದು.

**ವಿವಿಧ ವಿಭಾಗಗಳು**

**1. ಶಾಲಾ ಮಟ್ಟ/ ತರಗತಿ ಮಟ್ಟ**

ಶಾಲಾ ಮಟ್ಟದಲ್ಲಿ ಎಸ್.ಎಂ.ಸಿ ಹಾಗೂ ಪಿ.ಟಿ.ಎ ಗಳು ಇಂದು ಅತಿ ಶಕ್ತವಾಗಿವೆ. ತರಗತಿ ಮಟ್ಟದಲ್ಲಿ ಎಂ.ಪಿ.ಟಿ.ಎ ಕಾರ್ಯಾಚರಿಸುತ್ತಿದೆ. ಈ ಸಮಿತಿಗಳಿಗೆ ಕಲಾಶಿಕ್ಷಣದ ಮಹತ್ವವನ್ನು ಮನವರಿಕೆ ಮಾಡಿಕೊಡಬೇಕು. ಮಗುವಿನ ಕಲಿಕಾಸಾಧನೆಗಳನ್ನು ಚರ್ಚಿಸಬೇಕು. ಕಲಾಶಿಕ್ಷಣಕ್ಕೆ ಅಗತ್ಯವಾದ ತರಗತಿ ಕೋಣೆಗಳ ಸೌಕರ್ಯಗಳು, ಉಪಕರಣಗಳು,ಪ್ರದರ್ಶನ ಹಾಗೂ ಪ್ರಚಾರಕ್ಕೆ ಅಗತ್ಯವಾದ ಮೂಲಭೂತ ಭೌತಿಕ ಸೌಕರ್ಯಗಳನ್ನು ಒದಗಿಸಲು ಈ ರೀತಿಯ ಅನುಕೂಲತೆಗಳನ್ನು ಅತ್ಯಧಿಕವಾಗಿ ಉಪಯೋಗಿಸಿಕೊಳ್ಳಬೇಕು. ಪ್ರಾದೇಶಿಕ ಕಲಾವಿದರೊಂದಿಗೆ ಬೆರೆಯಲು, ಕಲಾಸೃಷ್ಟಿಗಳ ಆಸ್ವಾದನೆಗೆ ಶಾಲಾ ಮಟ್ಟದಲ್ಲಿ ಸಾಧ್ಯವಾಗಬೇಕು.

**2. ಪಂಚಾಯತ್/ಸಿ.ಆರ್.ಸಿ ಮಟ್ಟ**

ಈಗ ಜ್ಯಾರಿಯಲ್ಲಿರುವ ಕ್ಲಸ್ಟರ್ ಕೇಂದ್ರಗಳನ್ನು ಕೇಂದ್ರೀಕರಿಸಿಕೊಂಡು ಸಂಪನ್ಮೂಲಗಳ ಸಂಗ್ರಹ ಮತ್ತು ವಿನಿಮಯ ಸಾಧ್ಯವಾಗಬೇಕು. ಸಿ.ಆರ್.ಸಿಗಳ ಹಾಗೂ ಪಂಚಾಯತುಗಳ ಸಹಾಯದಿಂದ ಕಲಾಶಿಕ್ಷಣವನ್ನು ಇನ್ನೂ ಅಧಿಕ ದಕ್ಷತೆಯಿಂದ ಕಾರ್ಯಗತಗೊಳಿಸಬೇಕು. ಅದಕ್ಕಾಗಿ ಬೇಕಾದ ಮೂಲಭೂತ ಸೌಕರ್ಯಗಳನ್ನು ವರ್ಧಿಸಲು ಮತ್ತು ಸಂಪನ್ಮೂಲ ವ್ಯಕ್ತಿಗಳ ಸೇವೆಯನ್ನು ಕ್ರಮೀಕರಿಸಲು ಸಾಧ್ಯವಾಗಬೇಕು.

**3. ಉಪಜಿಲ್ಲೆ /ಬಿ ಆರ್.ಸಿ ವಿಭಾಗ**

ಬಿ.ಆರ್.ಸಿ. ಗಳಲ್ಲಿ ಇತರ ವಿಷಯಗಳಿಗೆ ನೀಡುವಂತೆ ಕಲಾಶಿಕ್ಷಣಕ್ಕೂ ಸಹಾಯಕವಾದ ಸೌಕರ್ಯಗಳು ಮತ್ತು ಸಂಪನ್ಮೂಲ ಸಂಗ್ರಹಕ್ಕೆ ಅಗತ್ಯವಾದ ಸಾಮಾಗ್ರಿಗಳು ಅಗತ್ಯವಾಗಿದೆ. ಬಿ. ಆರ್. ಸಿ ಮಟ್ಟದಲ್ಲಿ ಕಲಾಶಿಕ್ಷಕರಿಗೆ ಅಗತ್ಯವಾದ ತರಬೇತಿಗಳನ್ನು ನಿಶ್ಚಿತ ಸಮಯಗಳಲ್ಲಿ ನೀಡಬೇಕಾಗಿದೆ.

**4. ಜಿಲ್ಲಾ ಮಟ್ಟ**

ಜಿಲ್ಲಾ ಮಟ್ಟದಲ್ಲಿ ಕಲಾಶಿಕ್ಷಕರ ಒಂದು ರಿಸೋರ್ಸ್‌ಪೂಲ್ ಒಂದು ಡಿ.ಆರ್.ಜಿ. ಯನ್ನು ರೂಪೀಕರಿಸುವುದು ಅತ್ಯಗತ್ಯವಾಗಿದೆ.

# 7. ಕಲೆಯ ಕಲಿಕೆ – ಅನುಕ್ರಮಣಿಕೆ ವಿಷಯದ ಮಂಡಲಗಳು

## 7.1



# ಚಿತ್ರಕಲೆ



# ಚಿತ್ರಕಲೆ

## ಮುನ್ನುಡಿ

ಚಿತ್ರರಚನೆಯ ಮೂಲಕ ಒಂದು ಮೇಲ್ಮೈಯನ್ನು (Space) ಪ್ರತ್ಯೇಕವಾಗಿ ಗುರುತಿಸಲಾಗುವುದು ಚಿತ್ರವನ್ನು ನೋಡುವಾಗ ನಮ್ಮ ದೃಷ್ಟಿಯನ್ನು ವಿಶಿಷ್ಟವಾದ ಒಂದು ಸನ್ನಿವೇಶಕ್ಕೆ ಕೊಂಡೊಯ್ಯುವ ಮೂಲಕ ಮನಸ್ಸಿನಲ್ಲಿ ವಿಭಿನ್ನವಾದ ದೃಶ್ಯಾನುಭವಗಳು ರೂಪೀಕರಿಸಲ್ಪಡುತ್ತವೆ. ಬೆಳಕಿನ ಕ್ರಮೀಕರಣವೇ ಚಿತ್ರರಚನೆಯ ತಳಹದಿ ಅದು ಪ್ರೇಕ್ಷಕನೊಂದಿಗೆ ನೇರವಾಗಿ ಸಂವಹನ ನಡೆಸುತ್ತದೆ. ಚಿತ್ರರಚನೆ ಮತ್ತು ಚಿತ್ರದ ನೋಟ ಮನಸ್ಸನ್ನು ಮುದಗೊಳಿಸುವುದಲ್ಲದೆ ಹುರುಪನ್ನೂ ನೀಡುತ್ತದೆ. ಆದುದರಿಂದಲೇ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸಕ್ಕೆ ಚಿತ್ರಕಲೆಯ ಕಲಿಕೆಯು ಹೆಚ್ಚು ಸಹಾಯಕರವಾಗುವುದು.

ಮಕ್ಕಳು ಗೆರೆಗಳು ಮತ್ತು ಬಣ್ಣಗಳ ವಿಸ್ಮಯವನ್ನು ಅತಿಯಾದ ಕುತೂಹಲದಿಂದ ನೋಡಿ ಆಸ್ವಾದಿಸುವರು. ಬೆರಳುಗಳನ್ನು ಜೋಡಿಸಿ ಉಪಯೋಗಿಸುವುದಕ್ಕಿಂತ ಮೊದಲೇ ಅವರು ಚಿತ್ರ ರಚಿಸಲು ಆರಂಭಿಸುವರು. ಬಣ್ಣ ಉಂಟುಮಾಡುವ ಯಾವುದೇ ವಸ್ತುವನ್ನು ಉಪಯೋಗಿಸಿ ಅವರು ನೆಲದಲ್ಲಿಯೂ ಗೋಡೆಯಲ್ಲಿಯೂ ಚಿತ್ರ ಬಿಡಿಸುವರು. ಬುದ್ಧಿಶಕ್ತಿಯ ಬೆಳವಣಿಗೆಯ ಮೊದಲ ಹಂತದಲ್ಲಿ ಮನಸ್ಸಿನಲ್ಲಿ ಮೂಡಿ ಬರುವ ವಿಚಾರಗಳನ್ನು ರಚಿಸಿಯೂ ಅಭಿನಯಿಸಿಯೂ, ಹಾಡಿಯೂ ಪ್ರತಿಬಿಂಬಿಸುವುದರ ಭಾಗವಾಗಿ ಮಕ್ಕಳು ಈ ರೀತಿಯ ಕಾರ್ಯಗಳಲ್ಲಿ ನಿರತರಾಗುವುದು. ಅದನ್ನು ಮುಂದುವರಿಸುವ ಹಾಗೂ ವ್ಯಕ್ತಿತ್ವ ವಿಕಾಸದ ಭಾಗವಾಗಿ ಕ್ರಮೀಕರಿಸುವ ಕಾರ್ಯ ಶಿಕ್ಷಣಕ್ಕಿದೆ.

ಗೆರೆಗಳು ಮತ್ತು ಬಣ್ಣಗಳು ಚಿತ್ರಕಲೆಯ ಮೂಲ ಘಟಕಗಳು. ಬಣ್ಣಗಳು ಪ್ರಕೃತಿಯಲ್ಲಿರುವುದಾದರೆ ಗೆರೆಗಳು ಚಿತ್ರಕಲಾವಿದನಿಂದ ಸೃಷ್ಟಿಸಲ್ಪಡುತ್ತವೆ. ಎಳೆಯ ಪ್ರಾಯದ ಮಕ್ಕಳು ಸಹಜವಾಗಿಯೇ ರೇಖೆಗಳನ್ನು ರಚಿಸುವಾಗ ಬಾಹ್ಯಹಸ್ತಕ್ಷೇಪದಿಂದ ಅದಕ್ಕೆ ಅಡ್ಡಿಯಾಗದಂತೆ ಚಿತ್ರಕಲಾ ಶಿಕ್ಷಣದ ಮೊದಲ ಹಂತದಲ್ಲಿ ನೋಡಿಕೊಳ್ಳಬೇಕು. ಆದರೆ ಬಣ್ಣಗಳ ವಿನ್ಯಾಸದ ಕುರಿತಾದ ತಿಳುವಳಿಕೆಯನ್ನು ನೀಡುವುದರೊಂದಿಗೆ ಅವುಗಳ ಸಂಯೋಜನೆಯಿಂದಿರುವ ಸೌಂದರ್ಯ ಸಾಕ್ಷಾತ್ಕಾರಕ್ಕೂ ಅವಕಾಶ ಒದಗಿಸಬೇಕು. ಬಣ್ಣಗಳನ್ನು ಇಚ್ಛಾನುಸಾರವಾಗಿ ಸ್ವತಃ ಉಪಯೋಗಿಸಲು ಮತ್ತು ಬಿಂಬ ಕಲ್ಪನೆ ಮಾಡಲು ಅವಕಾಶ ನೀಡಬೇಕು.

ಬಿಂಬಗಳ ಕುರಿತು ಮಕ್ಕಳು ಕಲ್ಪನೆಯು ಹಿರಿಯರಿಗಿಂತ ಭಿನ್ನವಾಗಿರುವುದು. ರೂಪದ ಅಳತೆಗಳಲ್ಲಿ ಅವರು ಹಿರಿಯರಿಗಿಂತ ಭಿನ್ನವಾಗಿ ಕಾಣುವ ನಿಷ್ಪತ್ತಿಯು ಅವರು ರಚಿಸುವ ಗೆರೆಗಳಲ್ಲಿ ಪ್ರಕಟವಾಗುವುದು. ಮಕ್ಕಳಿಗೆ ಗೆರೆಗಳ ಕುರಿತು ಕಲಿಸುವಾಗ ಅದನ್ನು ಮೊದಲು ತಿಳಿದುಕೊಳ್ಳಬೇಕು. ಹೀಗೆ ಅವರು ಸ್ವತಃ ಕಂಡುಕೊಂಡ ಬಿಂಬದ ರಚನೆಯ ಸಹಜತೆ ನಷ್ಟವಾಗದಂತೆ ಅದನ್ನು ಉತ್ತಮಗೊಳಿಸುವ ರೀತಿಯಲ್ಲಿ. ಚಿತ್ರಕಲಾ ಶಿಕ್ಷಣವು ವಿಕಾಸಗೊಳ್ಳಬೇಕು. ಎಲ್.ಪಿ ಮಟ್ಟದ ಚಿತ್ರಕಲಾ ಶಿಕ್ಷಣದಲ್ಲಿ ತಂತ್ರಜ್ಞಾನವನ್ನು ಸಾಧ್ಯವಾದಷ್ಟು ದೂರವಿರಿಸಲು ಗಮನಿಸಬೇಕು. ಸುತ್ತಮುತ್ತಲೂ ಇರುವವುಗಳನ್ನು ಚೆನ್ನಾಗಿ ನಿರೀಕ್ಷಣೆ ಮಾಡಲು, ಇಷ್ಟಾನುಸಾರವಾಗಿ ರಚಿಸಲು, ಚಿತ್ರಗಳನ್ನು ನೋಡಿ ಆಸ್ವಾದಿಸಲು ಅವಕಾಶಗಳನ್ನು ಧಾರಾಳವಾಗಿ ಒದಗಿಸುವ ಅಗತ್ಯವಿದೆ.

## ಕಲಿಕಾ ಸಾಧನೆಗಳು

**ಒಂದನೇ ತರಗತಿ**

- ಪ್ರಕೃತಿಗೆ ಸಂಬಂಧಿಸಿದ ಚಿತ್ರವನ್ನು ರಚಿಸುವುದು
- ಮೂಲ ರೂಪಗಳನ್ನು ಉಪಯೋಗಿಸಿ ಪರಿಚಿತ ರೂಪಗಳನ್ನು ರಚಿಸುವುದು
- ಕೊಲಾಷ್ ತಯಾರಿಸುವುದು.
- ತ್ರಿಮಾನ ರೂಪದ ವಸ್ತುಗಳನ್ನು ತಯಾರಿಸುವುದು.
- ಇಷ್ಟವಿರುವ ಆಶಯಗಳನ್ನು ಆಧಾರವಾಗಿರಿಸಿ ಚಿತ್ರ ರಚಿಸಿ ಬಣ್ಣ ನೀಡುವುದು.

**ಎರಡನೇ ತರಗತಿ**

- ಹೊರಾಂಗಣ ಚಿತ್ರೀಕರಣ ನಡೆಸುವುದು.
- ಚಿತ್ರಗಳು, ಶಿಲ್ಪಗಳನ್ನು ಸಂಗ್ರಹಿಸುವುದು.
- ಮೂಲ ರೂಪಗಳನ್ನು (shapes) ಉಪಯೋಗಿಸಿ ಪರಿಚಿತ ರೂಪಗಳನ್ನು ರಚಿಸುವುದು.
- ವಿವಿಧ ಮಾಧ್ಯಮಗಳನ್ನು ಚಿತ್ರ ರಚನೆಗಾಗಿ ಉಪಯೋಗಿಸುವುದು.
- ಕೊಲಾಷ್ ತಯಾರಿಸಲು ವಿವಿಧ ವಸ್ತುಗಳನ್ನು ಉಪಯೋಗಿಸುವುದು.
- ತ್ರಿಮಾನ ರೂಪದ ವಸ್ತುಗಳನ್ನು ತಯಾರಿಸುವುದು.
- ಆಶಯ ಪ್ರಕಟನೆಗೆ ಚಿತ್ರವನ್ನು ಉಪಯೋಗಿಸಲು ಸಾಧ್ಯವಾಗಿಸುವುದು.
- ತರಕಾರಿಗಳು ಮತ್ತು ಎಲೆಗಳನ್ನು ಉಪಯೋಗಿಸಿ ಹಲವು ಬಣ್ಣಗಳಿರುವ ಮಾದರಿಗಳನ್ನು (ಪೇಟರ್ನ್) ತಯಾರಿಸುವುದು.

**ಮೂರನೇ ತರಗತಿ**

- ಪ್ರಕೃತಿಯ ದೃಶ್ಯಗಳನ್ನು ನಿರೀಕ್ಷಣೆ ಮಾಡಿ ಚಿತ್ರ ರಚಿಸಿ ಬಣ್ಣ ಕೊಡುವುದು.
- ತ್ರಿಮಾನ ರೂಪದ ವಸ್ತುಗಳನ್ನು (ಶಿಲ್ಪಗಳನ್ನು ) ತಯಾರಿಸುವುದು.
- ನೆರಳು ಚಿತ್ರಗಳನ್ನು ತಯಾರಿಸುವುದು. ಸಾರ್ವಜನಿಕ ಸಮಸ್ಯೆಗಳು, ಪ್ರಸ್ತುತ ಘಟನೆಗಳು, ಆಶಯ ವಲಯಗಳು ಎಂಬಿವುಗಳನ್ನು ಕೇಂದ್ರೀಕರಿಸಿ ಪೋಸ್ಟರ್ ತಯಾರಿಸುವುದು.
- ಎಲೆಗಳನ್ನು ಅಂಟಿಸಿ ಮೃಗ ಪಕ್ಷಿಗಳ ರೂಪಗಳನ್ನು ನಿರ್ಮಿಸುವುದು.
- ಕತೆ, ಕವಿತೆ ಎಂಬಿವುಗಳನ್ನು ಓದಿ ಆಶಯ ಸಂದರ್ಭ ಚಿತ್ರೀಕರಣವನ್ನು ನಡೆಸುವುದು.
- ತರಕಾರಿಗಳು, ಎಲೆಗಳು, ಗಡ್ಡೆ ಗೆಣಸುಗಳು ಎಂಬಿವುಗಳನ್ನು ಉಪಯೋಗಿಸಿ ವಿನ್ಯಾಸಗಳನ್ನು ರಚಿಸುವುದು.

**ನಾಲ್ಕನೇ ತರಗತಿ**

- ಪ್ರಕೃತಿಯ ದೃಶ್ಯಗಳನ್ನು ರಚಿಸಿ ಬಣ್ಣ ಕೊಡುವುದು.
- ಚಿತ್ರ, ಶಿಲ್ಪ ಎಂಬಿವುಗಳನ್ನು ಸಂಗ್ರಹಿಸುವುದು.
- ಕಥೆ, ಕವಿತೆಗಳಲ್ಲಿರುವ ಕಥಾಪಾತ್ರಗಳ ಸ್ವಭಾವ ಚಿತ್ರಣ ಮತ್ತು ಆಶಯಾಧಾರಿತ ಚಿತ್ರಣ ನಡೆಸುವುದು.
- ಕೊಲಾಷ್ ತಯಾರಿಸುವುದು.
- ಆಶಯಾಧಾರಿತ ಪೋಸ್ಟರ್ ತಯಾರಿಸುವುದು (ಪ್ರಸ್ತುತ ಘಟನೆಗಳು–ಸಾರ್ವಜನಿಕ ಸಮಸ್ಯೆಗಳು)
- ಶುಭಾಶಯ ಪತ್ರಗಳನ್ನು ತಯಾರಿಸುವುದು
- ಆವೆ ಮಣ್ಣು ಉಪಯೋಗಿಸಿ ತ್ರಿಮಾನ ರೂಪಗಳನ್ನು ತಯಾರಿಸುವುದು.
- ಕಾರ್ಟೂನುಗಳನ್ನು ರಚಿಸುವುದು.

# ಒಂದನೇ ತರಗತಿ

## ಯೂನಿಟ್–1 : ಪ್ರಕೃತಿ ಮನೋಹರ

ಮನೆಯ ಹಾಗೂ ಊರಿನ ದೃಶ್ಯಗಳನ್ನು ಕಂಡು, ಕೇಳಿ, ಅನುಭವಿಸಿ ಗಳಿಸಿದ ತಿಳುವಳಿಕೆಗಳೊಂದಿಗೆ ಮಕ್ಕಳು ಒಂದನೇ ತರಗತಿಗೆ ಬರುತ್ತಾರೆ. ಈ ತಿಳುವಳಿಕೆಗಳ ಮುಂದುವರಿಕೆ ಹಾಗೂ ಬೆಳವಣಿಗೆ ನಡೆಯುವ ರೀತಿಯಲ್ಲಿ ತರಗತಿಯಲ್ಲಿಯೂ ತರಗತಿಯ ಹೊರಗೂ ಚಟುವಟಿಕೆಗಳನ್ನು ರೂಪೀಕರಿಸಬೇಕು.

ಕಲಿಕಾ ಚಟುವಟಿಕೆಗಳ ಮೂಲಕ ಪ್ರಕೃತಿಯೊಂದಿಗೆ ಇನ್ನಷ್ಟು ಹೊಂದಿಕೊಳ್ಳುವ ಪ್ರಕೃತಿಯೊಂದಿಗೆ ಬಾಂಧವ್ಯ ಬೆಸೆಯುವ ಹಾಗೂ ಪ್ರಕೃತಿಯನ್ನು ಪ್ರೀತಿಸುವ ಮನೋಭಾವ ಮಗುವಿನಲ್ಲಿ ರೂಪುಗೊಳ್ಳಬೇಕು.

### ಕಲಿಕಾ ಸಾಧನೆಗಳು

ಪ್ರಕೃತಿಗೆ ಸಂಬಂಧಿಸಿದ ಚಿತ್ರವನ್ನು ರಚಿಸುವುದು.

### ಆಶಯ ತಿಳುವಳಿಕೆ

ಪ್ರಕೃತಿಯನ್ನು ಸೂಕ್ಷ್ಮವಾಗಿ ನಿರೀಕ್ಷಣೆ ಮಾಡುವುದು. ಪ್ರಕೃತಿಯ ದೃಶ್ಯಗಳು, ನೋಡಿದ ದೃಶ್ಯಗಳು, ಎಂಬಿವುಗಳನ್ನು ಚಿತ್ರರೂಪದಲ್ಲಿ ಆವಿಷ್ಕರಿಸುವುದು. ಇಷ್ಟವಿರುವ ಬಣ್ಣ ನೀಡುವುದು.

### ಕಲಿಕಾ ಚಟುವಟಿಕೆಗಳು

**ಆರಂಭದ ಚಟುವಟಿಕೆ**

- ಅಧ್ಯಾಪಕರು ತರಗತಿಕೋಣೆಯಲ್ಲಿ ಮಕ್ಕಳಿಗೆ ಚಿರಪರಿಚಿತವಾದ ಆಮೆ ಮತ್ತು ಮೊಲದ ಕತೆಯನ್ನು ಪ್ರಸ್ತುತಪಡಿಸುವರು.
- ಆಮೆ ಮತ್ತು ಮೊಲದ ( ಸ್ಪರ್ದೆಗೆ ಸಿದ್ಧರಾಗಿರುವ ) ಚಿತ್ರಗಳನ್ನು ಬೋರ್ಡಿನಲ್ಲಿ ಮುಂಚಿತವಾಗಿ ರಚಿಸಬಹುದು.
- ಕತೆಯನ್ನು ಹೇಳಿದ ಬಳಿಕ ಅಧ್ಯಾಪಕರು ಮಕ್ಕಳಲ್ಲಿ ಕೆಲವು ಪ್ರಶ್ನೆಗಳನ್ನು ಕೇಳುವರು.
  - ❖ ಆಮೆ ಮತ್ತು ಮೊಲದ ಕತೆಯಲ್ಲಿ ಅವರು ಸಂಚರಿಸಿದ ದಾರಿಯ ಬದಿಗಳಲ್ಲಿ ಯಾವ ಯಾವ ವಸ್ತುಗಳಿದ್ದುವು?
  - ❖ ಆ ವಸ್ತುಗಳ ಬಣ್ಣಗಳು ಯಾವುವು?
  - ❖ ಕಂಡ ವಸ್ತುಗಳ ರೂಪ ಮತ್ತು ಗಾತ್ರ ಒಂದೇ ಆಗಿತ್ತೇ?

- ತರಗತಿಯಲ್ಲಿ ಸಮಗ್ರವಾದ ಚರ್ಚೆ ನಡೆಸುವುದು.
- ಉತ್ತರಗಳಿಗೆ ಸಂಬಂಧಿಸಿದ ಸಂಶಯಗಳನ್ನು ನಿವಾರಿಸಲು ಪ್ರಕೃತಿಯನ್ನು ನಿರೀಕ್ಷಿಸಲು ತೀರ್ಮಾನಿಸಿ ಅಧ್ಯಾಪಕರು ಮಕ್ಕಳನ್ನು ಗುಂಪುಗಳಾಗಿ ತರಗತಿಯಿಂದ ಹೊರಗೆ ಕರೆದೊಯ್ಯುವರು.
- ಸೂಕ್ಷ್ಮ ನಿರೀಕ್ಷಣೆ ಅವಕಾಶ ನೀಡುವರು.
- ಮಕ್ಕಳು ಪ್ರಕೃತಿಯಲ್ಲಿರುವ ವಸ್ತುಗಳನ್ನು ನೋಡಿ, ಕೇಳಿ, ಸ್ಪರ್ಶಿಸಿ ಹಾಗೂ ಮೂಸಿ ನೋಡಿ ನಿರೀಕ್ಷಣೆ ಮಾಡುವರು.
- ತರಗತಿಗೆ ಹಿಂದಿರುಗಿದ ಬಳಿಕ ಇನ್ನೊಮ್ಮೆ ಪ್ರಶ್ನೆಗಳನ್ನು ಆವರ್ತಿಸಿ ಉತ್ತರಗಳಲ್ಲಿ ಹೊಸತಾದುವುಗಳನ್ನು ಸೇರಿಸುವರು.

## ಮೌಲ್ಯಮಾಪನ

- ನಿರೀಕ್ಷಣಾ ಸಾಮರ್ಥ್ಯ, ಚರ್ಚೆಯಲ್ಲಿ ಪಾಲ್ಗೊಳ್ಳುವಿಕೆ, ಮಂಡನೆಯ ಶೈಲಿ, ಎಂಬಿವುಗಳಿಗೆ ಒತ್ತು ನೀಡುವ ಮೌಲ್ಯಮಾಪನ
  - ❖ ಸೂಕ್ಷ್ಮ ನಿರೀಕ್ಷಣೆ ನಡೆಸಿದವರು ಯಾರೆಲ್ಲ?
  - ❖ ಚರ್ಚೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದವರು ಯಾರು?
  - ❖ ಇನ್ನೂ ಉತ್ತಮಗೊಳ್ಳಬೇಕಾದವರು ಯಾರು?

**ಚಟುವಟಿಕೆ : 1**

“ನೀವು ಪ್ರಕೃತಿಯಲ್ಲಿ ನೋಡಿದ ವಸ್ತುಗಳಲ್ಲಿ ನಿಮಗೆ ಇಷ್ಟವಾದುದನ್ನು ರಚಿಸಬಹುದೇ?” ಅಧ್ಯಾಪಕರು ಪ್ರಶ್ನೆ ಕೇಳುವರು. ಮಕ್ಕಳು ಚಿತ್ರವನ್ನು ಸ್ವತಃ ರಚಿಸುವರು. (ಪೆನ್ಸಿಲ್, ವೇಕ್ಸ್ ಕ್ರಯೋನ್ಸ್, ಸ್ಕೆಚ್ ಪೆನ್ ಮುಂತಾದ ಮಾಧ್ಯಮಗಳನ್ನು ಉಪಯೋಗಿಸಬಹುದು.)

*ಬಳಿಕ*

- ಚಿತ್ರ ಪ್ರದರ್ಶನ– ಮಕ್ಕಳು ರಚಿಸಿದ ಚಿತ್ರಗಳು ತರಗತಿಯಲ್ಲಿ ಪ್ರದರ್ಶಿಸುವುದು.
  - ❖ ಚಿತ್ರಗಳನ್ನು ಪರಸ್ಪರ ನೋಡುವ ಸಂದರ್ಭಗಳನ್ನು ಒದಗಿಸುವುದು. ಮಕ್ಕಳು ಚಿತ್ರಗಳನ್ನು ನೋಡುವರು. ಚಿತ್ರಾನುಭವಗಳನ್ನು ಪರಸ್ಪರ ಹಂಚಿಕೊಳ್ಳುವರು.
  - ❖ ನಿಮಗೆ ಇಷ್ಟವಾದ ಚಿತ್ರಗಳು ಯಾವುವು?
  - ❖ ಆ ಚಿತ್ರಗಳು ಇಷ್ಟವಾಗಲು ಕಾರಣವೇನು?
- ಚರ್ಚಿಸುವರು.

***ಚಟುವಟಿಕೆ 2***

ಇತರ ವಿದ್ಯಾರ್ಥಿಗಳು ರಚಿಸಿದ ಚಿತ್ರಗಳನ್ನು ನೋಡಿದ ಬಳಿಕ ನಿಮ್ಮ ಚಿತ್ರ ಉತ್ತಮಗೊಳಿಸಬೇಕೆಂದು ತೋರುವುದಿಲ್ಲವೇ?

- ಪುನಃ ಚಿತ್ರ ಬಿಡಿಸುವರು.
- ಹೊಸ ಪೇಪರಿನಲ್ಲಿ ಮೊದಲು ರಚಿಸಿದ ಚಿತ್ರವನ್ನು ಪುನಃ ರಚಿಸುವರು.

- ಪ್ರಕೃತಿಯನ್ನು ಪುನಃ ನಿರೀಕ್ಷಣೆ ಮಾಡಬೇಕೆ? ಬೇಕಿದ್ದರೆ ಅದಕ್ಕೆ ಅವಕಾಶ ನೀಡಬೇಕು.

**ಸ್ವ ಮೌಲ್ಯಮಾಪನ**

- ಮಗು ಮೊದಲು ರಚಿಸಿದ ಚಿತ್ರ ಹಾಗೂ ಅನಂತರ ರಚಿಸಿದ ಚಿತ್ರಗಳನ್ನು ಹೋಲಿಸಲು ಅವಕಾಶ ನೀಡುವುದು.

  ಬಳಿಕ ಚರ್ಚೆ

  - ಉತ್ತಮವಾಗಿ ಚಿತ್ರ ರಚಿಸಿದವರು ಯಾರೆಲ್ಲ?

- ಅವರ ಪ್ರತಿಭೆಗೆ ಪ್ರತ್ಯೇಕ ಅಭಿನಂದನೆಗಳು. ಚಿತ್ರ ರಚಿಸಿದ ಎಲ್ಲರಿಗೂ ಅಭಿನಂದನೆಗಳು

**ಅಧ್ಯಾಪಕರ ಮಾಲ್ಯಮಾಪನ**

ಚಿತ್ರದ ಪೂರ್ಣತೆ, ಬಣ್ಣ ನೀಡಿದ ರೀತಿ ಎಂಬಿವುಗಳ ಧನಾತ್ಮಕ ಅಂಶಗಳನ್ನು ಪರಿಗಣಿಸಿದ ಮೌಲ್ಯಮಾಪನ

- ಮೇಲ್ಮೈಗೆ ಬಣ್ಣ ಬಳಿದು ಚಿತ್ರವನ್ನು ಪೂರ್ತಿಗೊಳಿಸಿದವರು ಯಾರೆಲ್ಲ?
- ಭಾಗಿಕವಾಗಿ ಚಿತ್ರ ರಚಿಸಿದವರು.
- ಇನ್ನೂ ಉತ್ತಮಗೊಳ್ಳಬೇಕಾದವರು.

**ಮುಂದುವರಿದ ಚಟುವಟಿಕೆ**

- ಮುಂದುವರಿದ ಚಟುವಟಿಕೆಯಾಗಿ ನೀವು ರಚಿಸಿದ ಚಿತ್ರದಲ್ಲಿರುವ ಹಾಗೂ ಮನೆಯ ವಸ್ತುಗಳಲ್ಲಿರುವ ಆಯತ, ತ್ರಿಕೋನ, ವೃತ್ತ ಮುಂತಾದ ಆಕಾರದಲ್ಲಿರುವವುಗಳನ್ನು ನಿರೀಕ್ಷಣೆ ಮಾಡಿ ಬರಲು ಹೇಳುವುದು.
- ಮಕ್ಕಳು ರಚಿಸುವ ಎಲ್ಲ ಚಿತ್ರಗಳೂ ಉತ್ತಮವಾದವುಗಳು ಎಂಬ ಅರಿವನ್ನು ತರಗತಿಯಲ್ಲಿ ನೀಡುವುದು ಚಿತ್ರಗಳನ್ನು ಪುನಃ ರಚಿಸುವಂತೆ ಮಗುವನ್ನು ಪ್ರೇರೇಪಿಸುವುದು
- ಚಿತ್ರ ರಚಿಸಲು ಹಾಗೂ ಬಣ್ಣ ಬಳಿಯಲು ಅವಕಾಶ ನೀಡುವುದು ಅತ್ಯಂತ ಪ್ರಧಾನವಾದ ವಿಚಾರವಾಗಿದೆ.

**ಗಳಿಸಬಹುದಾದ ಕಲಿಕಾ ಹಿರಿಮೆಗಳು**

*ಕೆಳಗೆ ಕೊಟ್ಟಿರುವ ಕಲಿಕಾ ಹಿರಿಮೆಗಳನ್ನು ಗಳಿಸಲು ಎಷ್ಟರ ಮಟ್ಟಿಗೆ ಸಾಧ್ಯವಾಯಿತು?*

- ತನ್ನ ಸುತ್ತುಮುತ್ತಲೂ ಇರುವ ವಸ್ತುಗಳನ್ನು ಸೂಕ್ಷ್ಮವಾಗಿ ನಿರೀಕ್ಷಣೆ ಮಾಡುವುದರ ಮೂಲಕ ನಿರೀಕ್ಷಣಾ ಕೌಶಲ್ಯ ಹೆಚ್ಚುವುದು.
- ಪ್ರಕೃತಿಯೊಂದಿಗೆ ಮಮತೆ ಹೆಚ್ಚಲು ಸಾಧ್ಯವಾಗುವುದು.
- ಚಿತ್ರ ರಚಿಸುವ ಸಾಮರ್ಥ್ಯಗಳನ್ನು ಹೆಚ್ಚಿಸಲು ಸಾಧ್ಯವಾಗುವುದು.
- ಮಕ್ಕಳ ಭಾವನಾ ಸಾಮರ್ಥ್ಯ ವಿಕಾಸಗೊಳ್ಳುವುದು.
- ತನ್ನ ಆಶಯಗಳನ್ನು ಚಿತ್ರೀಕರಿಸಲು ಸಾಧ್ಯವಾಗುವುದು.
- ಮಕ್ಕಳ ಒಗ್ಗಟ್ಟು ಹೆಚ್ಚುವುದು.
- ಇತರರ ಸಾಮರ್ಥ್ಯಗಳನ್ನು ಅಂಗೀಕರಿಸುವರು, ಅಭಿನಂದಿಸುವರು.

# ಯೂನಿಟ್–2 : ಆಕೃತಿಗಳನ್ನು ರಚಿಸೋಣ

ಪ್ರಕೃತಿಯಲ್ಲಿ ವಿವಿಧ ಗಾತ್ರ ಮತ್ತು ಆಕಾರದಲ್ಲಿರುವ ವಸ್ತುಗಳಿವೆ. ಇವು ಪ್ರಕೃತಿದತ್ತವಾದವುಗಳೋ ಮನುಷ್ಯ ನಿರ್ಮಿತ ವಾದವುಗಳೋ ಆಗಿರಬಹುದು. ಈ ಆಕೃತಿಗಳನ್ನು ನಿರೀಕ್ಷಣೆ ಮಾಡಿದರೆ ಅವುಗಳಲ್ಲಿ ಕೆಲವು ಮೂಲರೂಪಗಳನ್ನು ಕಾಣಬಹುದು. ತ್ರಿಕೋನ, ಆಯತ, ವೃತ್ತ ಎಂಬಿವುಗಳು ಮೂಲ ರೂಪಗಳಾಗಿವೆ. ಇವುಗಳನ್ನು ಪ್ರತ್ಯೇಕವಾಗಿ ಸೂಕ್ತವಾದ ರೀತಿಯಲ್ಲಿ ಒಟ್ಟು ಸೇರಿಸಿ ಪರಿಚಿತವಾದ ಆಕೃತಿಗಳನ್ನು ರಚಿಸಲು ಮಗುವಿಗೆ ಸಾಧ್ಯವಾಗಬೇಕು.

## ಕಲಿಕಾ ಸಾಧನೆ

ಮೂಲ ರೂಪಗಳನ್ನು ಉಪಯೋಗಿಸಿ ಪರಿಚಿತ ಆಕೃತಿಗಳನ್ನು ರಚಿಸುವುದು.

## ಆಶಯ, ತಿಳುವಳಿಕೆ

ನಮ್ಮ ಸುತ್ತಲೂ ಇರುವ ವಸ್ತುಗಳನ್ನು ನಿಕ್ಷಣೆ ಮಾಡಿ ಅವುಗಳಲ್ಲಿ ರಚನಾತ್ಮಕವಾಗಿ ಕಂಡುಬರುವ ಆಕೃತಿಗಳು ಯಾವುವು ಎಂದು ಕಂಡುಹಿಡಿಯಿರಿ. ಈ ಮೂಲರೂಪಗಳಾದ ತ್ರಿಕೋನ, ಆಯತ, ವೃತ್ತ ಎಂಬಿವುಗಳನ್ನು ಉಪಯೋಗಿಸಿ ವಿವಿಧ ಮಾದರಿಗಳು, ನಮೂನೆಗಳು (ಪೇಟರ್ನ್‌ಗಳು) ಆಕೃತಿಗಳು ಎಂಬಿವುಗಳನ್ನು ಭಾವನೆಗೆ ಅನುಸಾರವಾಗಿ ಚಿತ್ರಿಸಿರಿ.

## ಕಲಿಕಾ ಚಟುವಟಿಕೆಗಳು

***ಆರಂಭದ ಚಟುವಟಿಕೆ***

- ಮಕ್ಕಳಲ್ಲಿ ಉತ್ಸಾಹ ಉಂಟುಮಾಡುವ ಒಂದು ಚಟುವಟಿಕೆಯನ್ನು ಆಯ್ದು ನೀಡಬಹುದು. ಉದಾ: ಹರಿವೆ ಬೀಜ ಬಿತ್ತುವುದು ಉರುಟು ಗುಂಡಿ ತೆಗೆದೋ ಉದ್ದಕ್ಕೆ ಸಾಲು ತೆಗೆದೋ? ಎಂಬೀ ರೀತಿಯಲ್ಲಿ ರೂಪಗಳು, ಆಕೃತಿಗಳು ಎಂಬಿವುಗಳು ಆಶಯಗಳಾಗಿ ಬರುವ ವಾಕ್ಯಗಳನ್ನು ಆರಿಸಬಹುದು.


  *ಮಂಡನೆಯಲ್ಲಿ ಮಕ್ಕಳ ಪೂರ್ಣ ಸಹಭಾಗಿತ್ವವನ್ನು ಖಚಿತಪಡಿಸಬೇಕು.*

- ವೃತ್ತ, ಆಯತ, ತ್ರಿಕೋನ ಎಂಬೀ ಆಕೃತಿಗಳಲ್ಲಿ ಮಗು ಮೊದಲು ಕಾಣುವ ಆಕೃತಿಗಳು ಯಾವುದಾಗಿರಬಹುದು?<br>ಉದಾ: ಅಮ್ಮನ ಕಣ್ಣಿನ ಪ್ಯೂಪಿಲ್, ಬಳೆ

- ಬೆಳೆಯುವುದಕ್ಕನುಸಾರವಾಗಿ ಆಯತ ಹಾಗೂ ತ್ರಿಕೋನದ ಆಕೃತಿಯಲ್ಲಿರುವ ರೂಪಗಳನ್ನು ನೋಡುವುದು.<br>ಉದಾ: ಸ್ಟೂಲ್, ಟೀಪಾಯಿ, ಮೇಜು, ಪಾತ್ರೆಗಳು, ಕಾಗದ.

***ಚಟುವಟಿಕೆ–1***

ನಮ್ಮ ಸುತ್ತಲೂ ಕಂಡುಬರುವ ವಸ್ತುಗಳಲ್ಲಿ (ಕಟ್ಟಡಗಳಲ್ಲಿ, ತರಗತಿಯಲ್ಲಿ, ಮನೆಯಲ್ಲಿ ) ಆಯತ, ವೃತ್ತ ಹಾಗೂ ತ್ರಿಕೋನಾಕೃತಿಯಲ್ಲಿರುವವುಗಳು ಎಲ್ಲೆಲ್ಲಿ ಕಂಡುಬರುತ್ತವೆ?



ಮಕ್ಕಳು ನಿರೀಕ್ಷಣೆ ಮಾಡಿ ಪ್ರತಿಕ್ರಿಯಿಸಲಿ

ಉದಾ: ಬೋರ್ಡ್ – ಆಯತಾಕೃತಿ
ಕಿಟಿಕಿ – ಆಯತಾಕೃತಿ
ಗಡಿಯಾರ – ವೃತ್ತಾಕೃತಿ

ಹೀಗೆ ಸಾಧ್ಯವಾದಷ್ಟು ಉದಾಹರಣೆಗಳನ್ನು ಹೇಳಲು ಅವಕಾಶ ನೀಡಬೇಕು. ಚರ್ಚೆ ಅಧ್ಯಾಪಕರ ಕ್ರೋಢೀಕರಣ

***ಚಟುವಟಿಕೆ 2***

- ನಿರೀಕ್ಷಣೆ ಮಾಡಿದ ಆಕೃತಿಗಳ ಚಿತ್ರ ಬಿಡಿಸುವರು.
- ಸಾಧ್ಯವಾದಷ್ಟು ಆಕೃತಿಗಳನ್ನು ಮಕ್ಕಳು ಸ್ವತಃ ರಚಿಸಲಿ.

***ನಿರಂತರ ಮೌಲ್ಯಮಾಪನ***

- ಉತ್ತಮವಾಗಿ ರಚಿಸಿದವರು ಯಾರು?
- ಸಹಾಯ ಅಗತ್ಯವಿರುವವರು ಯಾರು?
- ನಿಧಾನವಾಗಿ ರಚಿಸುವವರು ಯಾರು?

***ಚಟುವಟಿಕೆ 3***

ವಿದ್ಯಾರ್ಥಿಗಳು ರಚಿಸಿದವುಗಳನ್ನು ತರಗತಿಯಲ್ಲಿ ಪ್ರದರ್ಶಿಸುವರು. ಅತ್ಯುತ್ತಮವಾದವುಗಳು ಯಾವುವು? ಯಾಕೆ? ಅವರನ್ನು ಪ್ರತ್ಯೇಕವಾಗಿ ಅಭಿನಂದಿಸುವರು. ಎಲ್ಲ ವಿದ್ಯಾರ್ಥಿಗಳನ್ನು ಅಭಿನಂದಿಸುವರು.

*ಕ್ರೋಢೀಕರಣ*


- ಆಯತ, ತ್ರಿಕೋನ, ವೃತ್ತ ಎಂಬಿವುಗಳು ಮೂಲ ಆಕೃತಿ ಗಳಾಗಿವೆ. ಚಿತ್ರ ರಚಿಸಲು ಈ ಆಕೃತಿ ಅಥವಾ ರೂಪಗಳು ಸಹಾಯಕವಾಗುತ್ತವೆ. ಎಂದರೆ ಉಪಕರಣಗಳ ಸಹಾಯವಿಲ್ಲದೆಯೇ ಸ್ವತಃ ರಚಿಸಬಹುದು.

***ಚಟುವಟಿಕೆ 4***

ವಿವಿಧ ಮೂಲ ಆಕೃತಿಗಳನ್ನು ಉಪಯೋಗಿಸಿ ಪರಿಚಿತವಾದ ರೂಪಗಳನ್ನು ನಿರ್ಮಿಸಬಹುದು. ಇದಕ್ಕೆ ಮುಂಚಿತವಾಗಿ ಕಿರು ಚರ್ಚೆಯೊಂದನ್ನು ಆಯೋಜಿಸುವರು.

- ವಿವಿಧ ಆಕೃತಿಗಳನ್ನು ಪರಸ್ಪರ ಸೇರಿಸಿ ರಚಿಸಲು ಸಾಧ್ಯವಿದೆಯೇ?
- ಹೊಸ ಆಕೃತಿಗಳನ್ನು ಕಂಡುಹುಡುಕಬಹುದೇ?

ಕೆಲವು ರೂಪಗಳನ್ನು ಅಧ್ಯಾಪಕರು ಪರಿಚಯಿಸುವರು ಬಳಿಕ ವಿದ್ಯಾರ್ಥಿಗಳು ರೂಪಗಳನ್ನು ರಚಿಸುವರು.



ವಿದ್ಯಾರ್ಥಿಗಳ ಮೌಲ್ಯಮಾಪನ (ಗುಂಪು)


ಒಂದು ಗುಂಪಿನಲ್ಲಿ ಐದು ಮಂದಿ. ಒಂದು ಗುಂಪಿನ ಮಕ್ಕಳು ರಚಿಸಿದ ಉತ್ಪನ್ನಗಳನ್ನು ಇನ್ನೊಂದು ಗುಂಪಿನವರು ಪರಿಶೀಲಿಸುವರು. ಉತ್ತಮವಾದ ಚಿತ್ರಗಳು ಯಾವುವು? ಉತ್ತಮಗೊಳಿಸಬೇಕಾದವುಗಳು ಯಾವುವು?

ಗುಂಪಿನ ರಿಪೋರ್ಟಿಂಗ್ . ಬಳಿಕ ಚಿತ್ರಗಳ ಪ್ರದರ್ಶನ – ಮಕ್ಕಳು ರಚಿಸಿದ ಚಿತ್ರಗಳನ್ನು ತರಗತಿಯಲ್ಲಿ ಪ್ರದರ್ಶಿಸುವರು.

**ಮೌಲ್ಯಮಾಪನ**

ಮೂಲ ಆಕೃತಿಗಳನ್ನು (ಚೌಕ, ತ್ರಿಕೋನ, ವೃತ್ತ) ಉಪಯೋಗಿಸಿ ಕೆಳಗೆ ಕೊಟ್ಟಿರುವ ರೂಪಗಳನ್ನು ಚಿತ್ರಿಸಿರಿ.

ಯಾವ ಮೂಲ ಆಕೃತಿಗಳನ್ನು ಉಪಯೋಗಿಸಬೇಕು ಎಂದು ಸೂಚಿಸಬೇಕು.



**ಗಳಿಸಬಹುದಾದ ಕಲಿಕಾ ಹಿರಿಮೆಗಳು**

***ಕೆಳಗೆ ಕೊಟ್ಟಿರುವ ಕಲಿಕಾ ಹಿರಿಮೆಗಳನ್ನು ಗಳಿಸಲು ಎಷ್ಟರ ಮಟ್ಟಿಗೆ ಸಾಧ್ಯವಾಗಿದೆ.***

- ಪ್ರಕೃತಿಯಲ್ಲಿ ಕಂಡುಬರುವ ವಿವಿಧ ಆಕೃತಿಗಳ ಕುರಿತು ಜ್ಯಾಮಿತಿಯನ್ನು ಆಧಾರವಾಗಿರಿಸಿ ವಿವರಿಸುವುದರಿಂದ ಆಶಯ ಸ್ಪಷ್ಟತೆ ಉಂಟಾಗುವುದು.
- ನಮೂನೆಗಳು ಮತ್ತು ಮಾದರಿಗಳಿಗೆ ಸೂಕ್ತವಾದ ಬಣ್ಣಗಳನ್ನು ನೀಡಿ ಆಕರ್ಷಕಗೊಳಿಸುವುದರ ಮೂಲಕ ಮಕ್ಕಳಿಗೆ ಕಲಿಕೆಯು ಉಲ್ಲಾಸದಾಯಕವಾಗುವುದು.
- ವಿವಿಧ ಮಾದರಿಗಳನ್ನು ನಮೂನೆಗಳನ್ನು ರೂಪೀಕರಿಸಲು ಪ್ರಯತ್ನಿಸುವುದರಿಂದ ಆಸ್ವಾದನಾ ಸಾಮರ್ಥ್ಯ ಹೆಚ್ಚುವುದು.
- ಚಿತ್ರ ರಚನಾ ಸಾಮರ್ಥ್ಯ ಹೆಚ್ಚುವುದು.
- ಚಿತ್ರಗಳನ್ನು ಮೌಲ್ಯಮಾಪನ ಮಾಡುವ ಸಾಮರ್ಥ್ಯವನ್ನು ಗಳಿಸುವನು.

# ಯೂನಿಟ್–3 : ಚಿತ್ರ ರಚನೆಯನ್ನು ಪೂರ್ತಿಗೊಳಿಸೋಣ

ಭಾವನೆಯಿಂದ ಆಕೃತಿಗಳನ್ನು ಸೃಷ್ಟಿಸುವ ಸಾಮರ್ಥ್ಯ ಎಳೆಯ ಪ್ರಾಯದ ಮಕ್ಕಳಿಗೆ ಪರಿಮಿತವಾಗಿರುವುದು. ಆದ್ದರಿಂದ ಅಪೂರ್ಣವಾದ ಚಿತ್ರದ ಪೂರ್ಣರೂಪವನ್ನು ಕಲ್ಪಿಸುವ ಚಟುವಟಿಕೆಗಳ ಮೂಲಕ ಲಭಿಸಿದ ಅನುಭವಗಳಿಂದ ಮಾತ್ರ ಪೂರ್ಣ ರೂಪದ ಚಿತ್ರವನ್ನು ಕಲ್ಪನೆಮಾಡಿ ರಚಿಸುವತ್ತ ಕೊಂಡೊಯ್ಯಲು ಸಾಧ್ಯ. ಅಪೂರ್ಣವಾಗಿದ್ದರೂ ಸಾಧ್ಯವಾದಷ್ಟು ಸರಳವಾದ ರೂಪಗಳನ್ನು ಆರಂಭದ ಹಂತದಲ್ಲಿ ನೀಡಬೇಕು.

## ಕಲಿಕಾ ಸಾಧನೆ

ಭಾವನೆಯಿಂದ ಹೊಸ ರೂಪಗಳನ್ನು ಒಟ್ಟು ಸೇರಿಸಿ ಅಪೂರ್ಣವಾದ ಚಿತ್ರವನ್ನು ಪೂರ್ತಿಗೊಳಿಸುವರು. (ಚಿತ್ರವನ್ನು ಪೂರ್ತಿಗೊಳಿಸುವಿಕೆ)

## ಆಶಯ, ತಿಳುವಳಿಕೆ

ಪ್ರಕೃತಿ ವಿಕೋಪಗಳಿಂದ ಪ್ರಕೃತಿಯಲ್ಲಿರುವ ಹಲವಾರು ವಸ್ತುಗಳಿಗೆ ಹಾನಿ ಉಂಟಾಗುವುದಿದೆ. ಅವುಗಳನ್ನು ಪೂರ್ವ ಸ್ಥಿತಿಗೆ ತರುವ ಪ್ರಯತ್ನಗಳನ್ನು ಸಾಮಾನ್ಯವಾಗಿ ನಾವು ಮಾಡುವುದೂ ಇದೆ. ಅದೇ ರೀತಿ ಚಿತ್ರ ರಚನೆಯಲ್ಲಿಯೂ ಅಪೂರ್ಣವಾದ ಚಿತ್ರಗಳನ್ನು ಪೂರ್ತಿಗೊಳಿಸುವ ಹಾಗೂ ಬಿಟ್ಟು ಹೋದ ಗೆರೆಗಳನ್ನು ಜೋಡಿಸಿ ಚಿತ್ರವನ್ನು ಉತ್ತಮಗೊಳಿಸುವ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಬಹುದು.

## ಕಲಿಕಾ ಚಟುವಟಿಕೆಗಳು

***ಆರಂಭದ ಚಟುವಟಿಕೆ***

- ನಾಲ್ಕು ವಿದ್ಯಾರ್ಥಿಗಳು ಮನೆಯ ಆಕೃತಿಯಲ್ಲಿ ನಿಲ್ಲುವರು
- ಕೆಲವು ವಿದ್ಯಾರ್ಥಿಗಳು ಕಾರಿನಂತೆ ನಿಲ್ಲುವರು.
- ಬಾಕಿ ಉಳಿದವರೆಲ್ಲರೂ ಒಂದೊಂದು ಕಥಾಪಾತ್ರಗಳಾಗುವರು.


ಉದಾ: ಕೋಳಿ, ಸಿಂಹ, ನಾಯಿ, ಮರ, ದನ, ಪಾತ್ರೆ, ಬೆಟ್ಟ, ಹಂಸ, ಮೀನು, ಹುಲಿ, ಕಪ್ಪೆ ಇತ್ಯಾದಿ.


- ಮನೆಯಾಗಿ ಪಾತ್ರವಹಿಸುವ ನಾಲ್ಕು ವಿದ್ಯಾರ್ಥಿಗಳೂ ಒಟ್ಟಿಗೆ ಹಾಡುವರು.
- ನನ್ನ ಜೊತೆ ಸೇರುವವರು ಯಾರು ನನ್ನ ಗೆಳೆಯರೇ (ಪುನರಾವರ್ತಿಸುವರು)

ಇದೇ ರೀತಿ ಕಾಡು ಹಾಗೂ ನದಿಯಾಗಿರುವ ಪಾತ್ರಗಳು ಸೂಕ್ತವಾದ ಸ್ಥಾನಗಳಲ್ಲಿ ನಿಂತರೆ ಕೆಲವರಾದರೂ ತಪ್ಪಾದ ಸ್ಥಾನಗಳಲ್ಲಿ ನಿಲ್ಲಬಹುದು. ಅವರನ್ನು ಉಳಿದವರು ಸರಿಯಾದ ಸ್ಥಾನಗಳಿಗೆ ಕಳುಹಿಸಿ ಪೂರ್ಣಗೊಳಿಸಲು ಸಹಾಯ ಮಾಡುವರು. (ಅಗತ್ಯ ಸಂದರ್ಭಗಳಲ್ಲಿ ಅಧ್ಯಾಪಕರು ನೆರವಾಗುವರು.)

***ಚಟುವಟಿಕೆ–1***

- ಮೂರು ಗುಂಪುಗಳನ್ನು ಮಾಡಿ, ಮೂರು ಚಾರ್ಟ್ ಪೇಪರುಗಳಲ್ಲಿ ಪ್ರತಿಯೊಂದರಲ್ಲಿಯೂ ಕ್ರಮ ಪ್ರಕಾರವಾಗಿ ಒಂದು ಹೂ, ಒಂದು ಕಾಯಿ, ಒಂದು ಎಲೆ ಎಂಬಿವುಗಳನ್ನು ಅಪೂರ್ಣವಾಗಿ ರಚಿಸುವುದು.





- ಮಕ್ಕಳು ಸೂಕ್ತವಾದ ಚಿತ್ರಭಾಗಗಳನ್ನು ಸೇರಿಸಿ ಚಿತ್ರವನ್ನು ಪೂರ್ತಿಗೊಳಿಸಲಿ.
- ಗುಂಪು ಚರ್ಚೆ, ಸ್ವತಃ–ಪರಸ್ಪರ ಮೌಲ್ಯಮಾಪನ
- ಮುಂದುವರಿದ ಚಟುವಟಿಕೆ ಉತ್ತಮಗೊಳಿಸುವಿಕೆಗಾಗಿ ಮೂರು ಚಾರ್ಟ್ ಪೇಪರುಗಳಲ್ಲಿ ಸಮಾನವಾದ ಒಂದು ಚಟುವಟಿಕೆಯನ್ನು ವಿದ್ಯಾರ್ಥಿಗಳು ಮಾಡುವರು.
- ಪೂರ್ತಿಗೊಳಿಸಿದ ಈ ಹಿಂದಿನ ಚಿತ್ರಗಳನ್ನೂ ಈಗ ರಚಿಸಿ ಪೂರ್ತಿಗೊಳಿಸಿದ ಚಿತ್ರಗಳನ್ನೂ ಪರಸ್ಪರ ಹೋಲಿಸಿ ಅವುಗಳ ಹಿರಿಮೆಯನ್ನು ವಿದ್ಯಾರ್ಥಿಗಳು ತಿಳಿದುಕೊಳ್ಳುವರು.

## ಮೌಲ್ಯಮಾಪನ

ಅಪೂರ್ಣವಾದ ಚಿತ್ರವನ್ನು ನೀಡಲಾಗಿದೆ. ಚಿತ್ರವನ್ನು ಪೂರ್ತಿಗೊಳಿಸಿರಿ. (ಉದಾ: ಚಿತ್ರ)

ಮೌಲ್ಯಮಾಪನ ಸೂಚಕಗಳು

- ಸಂಯೋಜನೆಯ ಕೌಶಲ್ಯ
- ನಿಷ್ಪತ್ತಿ
- ಪೂರ್ಣತೆ
- ಅಚ್ಚುಕಟ್ಟು

***ಗಳಿಸಬಹುದಾದ ಕಲಿಕಾ ಹಿರಿಮೆಗಳು***

***ಕೆಳಗೆ ಕೊಟ್ಟಿರುವ ಕಲಿಕಾ ಹಿರಿಮೆಗಳನ್ನು ಗಳಿಸಲು ಎಷ್ಟರ ಮಟ್ಟಿಗೆ ಸಾಧ್ಯವಾಯಿತು?***

- ಸರಿಯಾದ ನಿಷ್ಪತ್ತಿಯೊಂದಿಗೆ ಚಿತ್ರವನ್ನು ಪೂರ್ತಿಗೊಳಿಸುವ ತಿಳುವಳಿಕೆಯನ್ನು ಗಳಿಸುವುದು.
- ಚಿತ್ರಕ್ಕೆ ಪೂರ್ಣತೆಯನ್ನು ನೀಡಿ ಆಸ್ವಾದನಾ ಸಾಮರ್ಥ್ಯವನ್ನು ಗಳಿಸುವುದು.

## ಯೂನಿಟ್ : 4 ಕೊಲಾಷ್ ಚಿತ್ರಗಳು

ಪ್ರಕೃತಿಯ ವಿವಿಧ ಬಣ್ಣಗಳನ್ನು ತಿಳಿಸುವ ಚಿತ್ರಕಲೆಯ ಇನ್ನೊಂದು ಸೌಲಭ್ಯವನ್ನು ಮಕ್ಕಳಿಗೆ ಪರಿಚಯಿಸುವ ಪ್ರಯತ್ನವನ್ನು ಇಲ್ಲಿ ನಿರ್ವಹಿಸಲಾಗುವುದು.

## ಕಲಿಕಾ ಸಾಧನೆ

- ಕೊಲಾಷ್ ತಯಾರಿಸುವುದು.

## ಆಶಯ ತಿಳುವಳಿಕೆ

- ಚಿತ್ರ ರಚನೆಗೆ ಪರಂಪರಾಗತ ಮಾಧ್ಯಮಗಳನ್ನು ಮಾತ್ರ ಉಪಯೋಗಿಸುವುದಲ್ಲ.
- ಪತ್ರಿಕಾ ಮಾಧ್ಯಮಗಳ ಬಣ್ಣದ ಪುಟಗಳನ್ನು ಹರಿದು ತೆಗೆದು ಅಂಟಿಸಿ ಚಿತ್ರಗಳನ್ನು ತಯಾರಿಸಬಹುದು.
- ಸರಿಯಾದ ನಕ್ಷೆಯನ್ನು ಬಿಡಿಸಿ ಅದಕ್ಕೆ ಬಣ್ಣದ ಕಾಗದವನ್ನು ಅಂಟಿಸಿ ಚಿತ್ರಗಳನ್ನು ತಯಾರಿಸಬಹುದು.

### ಅಧ್ಯಾಪಕರ ಅರಿವಿಗೆ

**ಕೊಲಾಷ್**

ಇದು ಪರಂಪರಾಗತ ಮಾಧ್ಯಮಗಳ ಹೊರತಾಗಿ ಆಶಯ ಪ್ರಕಟನೆಗೆ ಕಾಗದ, ಬಟ್ಟೆ ಮುಂತಾದ ವಿವಿಧ ವಸ್ತುಗಳನ್ನು ಅಂಟಿಸಿ ಒಟ್ಟು ಸೇರಿಸಿ ಚಿತ್ರ ನಿರ್ಮಿಸುವ ವಿಧಾನವಾಗಿದೆ. ಚಿತ್ರಗಳನ್ನೇ ಕತ್ತರಿಸಿ ಅಂಟಿಸಿಯೂ ವಿವಿಧ ಬಣ್ಣದ ವಸ್ತುಗಳನ್ನು ಕತ್ತರಿಸಿ ತೆಗೆದು ಚಿತ್ರ ರೂಪಕ್ಕೆ ಅಂಟಿಸಿಯೂ ಕೊಲಾಷ್ ತಯಾರಿಸಬಹುದು. ದಿನ ಪತ್ರಿಕೆ ಅಥವಾ ಮಾಸಿಕಗಳ ಪುಟಗಳನ್ನು ಅಗತ್ಯಕ್ಕನುಸಾರವಾಗಿ ಹರಿದು ತೆಗೆದು ಪರಸ್ಪರ ಜೋಡಿಸುವುದೂ ಇದೆ. ಹೀಗೆ ಜೋಡಿಸುವಾಗ ಎಡೆಯಲ್ಲಿ ಖಾಲಿಜಾಗಗಳಿದ್ದರೆ ಅಗತ್ಯವೆಂದು ಕಂಡಲ್ಲಿ ಗೆರೆಗಳನ್ನೆಳೆದು ಅಥವಾ ಬಣ್ಣ ನೀಡಿ ಅಂದಗೊಳಿಸಬಹುದು.

ಸರಿಯಾದ ನಕ್ಷೆಯನ್ನು ದಪ್ಪ ಕಾಗದದಲ್ಲಿ ಬಿಡಿಸಿ ಅದರಲ್ಲಿ ಕೆಲವು ವಸ್ತುಗಳನ್ನು ಅಥವಾ ಚಿತ್ರಗಳನ್ನು ಗಮ್ ಉಪಯೋಗಿಸಿ ಅಂಟಿಸಿ ಕೊಲಾಷ್ ತಯಾರಿಸಬಹುದು. ಚಿತ್ರಗಳು, ಪೋಸ್ಟರುಗಳು, ಶುಭಾಶಯ ಕಾರ್ಡುಗಳು ಎಂಬಿವುಗಳನ್ನು ಈ ರೀತಿ ಕೊಲಾಷ್ ರೂಪದಲ್ಲಿ ತಯಾರಿಸಬಹುದು.

## ಕಲಿಕಾ ಚಟುವಟಿಕೆಗಳು

***ಹಂತ–1***

ವಿವಿಧ ಬಣ್ಣದ ಕಾಗದಗಳನ್ನು ಉಪಯೋಗಿಸಿ ತಯಾರಿಸಿದ ಒಂದು ಕೊಲಾಷನ್ನು ವಿದ್ಯಾರ್ಥಿಗಳಿಗೆ ತೋರಿಸುವುದು. (ಬರಿಗೈಯಿಂದ ಹರಿದು ತೆಗೆದ ಪೇಪರ್ ತುಂಡುಗಳನ್ನು ಉಪಯೋಗಿಸಬೇಕು.)

- ಈ ಚಿತ್ರಗಳನ್ನು ಯಾವ ರೀತಿಯ ಬಣ್ಣಗಳನ್ನು ಉಪಯೋಗಿಸಿ ತಯಾರಿಸಲಾಗಿದೆ?
- ವಿದ್ಯಾರ್ಥಿಗಳು ಚಿತ್ರಗಳನ್ನು ಸೂಕ್ಷ್ಮವಾಗಿ ನಿರೀಕ್ಷಣೆ ಮಾಡಲಿ.
- ನಿರೀಕ್ಷಣೆ ಮಾಡುವರು. ಮುಟ್ಟಿ ನೋಡುವರು, ಅಭಿಪ್ರಾಯವನ್ನು ದಾಖಲಿಸುವರು.
- ಹಲವು ರೀತಿಯ ಬಣ್ಣದ ಕಾಗದಗಳನ್ನು ಉಪಯೋಗಿಸಿ ಚಿತ್ರ ರಚಿಸಬಹುದು.
- ಈ ರೀತಿ ಕೊಲಾಷ್ ತಯಾರಿಸಲು ನಿಮಗೆ ಸಾಧ್ಯವಿದೆಯೇ? ಹೇಗೆ? ಏನೆಲ್ಲ ವಸ್ತುಗಳ ಅಗತ್ಯವಿದೆ?
- ಪಟ್ಟಿ ಮಾಡುವರು
- ಮೇಲ್ಮೈಯಲ್ಲಿರುವ ಕಾಗದ, ಬಣ್ಣದ ಕಾಗದ, ಅಂಟು

***ಹಂತ–2***

ಕೊಲಾಷ್ ತಯಾರಿಸುವುದಕ್ಕೆ ಸಂಬಂಧಿಸಿ ಸಾಮಾನ್ಯ ತಿಳುವಳಿಕೆಯನ್ನು ವಿದ್ಯಾರ್ಥಿಗಳಿಗೆ ನೀಡಬೇಕು. ಪ್ರತಿಯೊಬ್ಬ ವಿದ್ಯಾರ್ಥಿಗೂ ಕಾಗದ, ಬಣ್ಣದ ಕಾಗದ, ಅಂಟು ಎಂಬಿವುಗಳನ್ನು ವಿತರಿಸಬೇಕು.

- ಕೊಲಾಷ್ ರಚಿಸುವ ಚಟುವಟಿಕೆ (ಮರ, ಮನೆ, ಹಕ್ಕಿ, ಹೂ ಎಂಬಿವುಗಳು)
- ವಿದ್ಯಾರ್ಥಿಗಳು ರಚಿಸಿದ ಚಿತ್ರಗಳನ್ನು ಸಂಗ್ರಹಿಸಿ ಪೂರ್ತಿಯಾಗದ ಚಿತ್ರಗಳಿದ್ದರೆ ಮುಂದಿನ ಹಂತದಲ್ಲಿ ಪೂರ್ತಿಗೊಳಿಸಬೇಕು.



*ಹಂತ-3*

ಮಕ್ಕಳು ತಯಾರಿಸಿದ ಕೊಲಾಷ್ ಚಿತ್ರಗಳನ್ನು ಪ್ರದರ್ಶಿಸುವುದು ಮಕ್ಕಳು ಸ್ವತಃ ಹಾಗೂ ಪರಸ್ಪರ ಮೌಲ್ಯಮಾಪನ ನಡೆಸಬೇಕು.

- ಚರ್ಚೆ

  ಕೊಲಾಷ್-ಸಂಪ್ರದಾಯಗಳು-ಉಪಯೋಗಿಸಬಹುದಾದ ಇತರ ಹಲವಾರು ವಿವಿಧ ವಸ್ತುಗಳು- ಪ್ರಕೃತಿಯಲ್ಲಿ ಲಭ್ಯವಿರುವ ಯಾವ ಯಾವ ವಸ್ತುಗಳನ್ನು ಉಪಯೋಗಿಸಿ ಕೊಲಾಷ್ ಚಿತ್ರಗಳನ್ನು ತಯಾರಿಸಬಹುದು. ಮಕ್ಕಳಲ್ಲಿ ಆಸಕ್ತಿಯನ್ನು ಉಂಟುಮಾಡುವ ಕೊಲಾಷ್ ನಿರ್ಮಾಣ ಚಟುವಟಿಕೆಗಳು

## ಮೌಲ್ಯಮಾಪನ

ಒಂದು ಕೊಲಾಷ್ ತಯಾರಿಸಿರಿ.

**ಮೌಲ್ಯಮಾಪನ ಸೂಚಕಗಳು**

- ವರ್ಣಪ್ರಜ್ಞೆ, ಯೋಗ್ಯವಾದ ಬಣ್ಣಗಳನ್ನು ಆರಿಸುವುದು.
- ಕತ್ತರಿಸಿ ತೆಗೆಯುವುದು, ಸರಿಯಾಗಿ ಜೋಡಿಸುವುದು.
- ಪೂರ್ತಿಗೊಳಿಸುವುದು.

**ಗಳಿಸಬಹುದಾದ ಕಲಿಕಾ ಹಿರಿಮೆಗಳು**

ಕೆಳಗೆ ಕೊಟ್ಟಿರುವ ಕಲಿಕಾ ಹಿರಿಮೆಗಳನ್ನು ಗಳಿಸಲು ಎಷ್ಟರ ಮಟ್ಟಿಗೆ ಸಾಧ್ಯವಾಯಿತು?

- ಸುತ್ತಲೂ ಕಾಣುವ ವಸ್ತುಗಳ ಸಹಜವಾದ ಬಣ್ಣಗಳಿಗೆ ಅನುಸಾರವಾಗಿ ಬಣ್ಣಗಳನ್ನು ಆರಿಸಿ ಅಂಟಿಸಿ ಚಿತ್ರಗಳನ್ನು ಪೂರ್ತಿಗೊಳಿಸುವುದು
- ಚಿತ್ರಕ್ಕೆ ಯೋಗ್ಯವಾದ ಬಣ್ಣಗಳನ್ನು ಆರಿಸುವುದು.

# ಎರಡನೇ ತರಗತಿ

## ಯೂನಿಟ್–1 : ತ್ರಿಮಾನ ವಸ್ತುಗಳ

ದ್ವಿಮಾನ ರೂಪದ ಕೊಲಾಷ್ ತಯಾರಿಸುವ ರೀತಿಯನ್ನು ಹಿಂದಿನ ತರಗತಿಗಳಲ್ಲಿ ಪರಿಚಯಿಸಿಕೊಂಡೆವು. ಮಣ್ಣಿನ ತಿಂಡಿ ತಯಾರಿಸಿ ಎಲೆ ಹಾಗೂ ಇತರ ವಸ್ತುಗಳಿಂದ ಆಟದ ಗಾಡಿಗಳನ್ನೂ ಇತರ ರೂಪಗಳನ್ನೂ ತಯಾರಿಸಿ ಪರಿಚಯವಿರುವ ಶಿಶು ಮನಸ್ಸನ್ನು ವಿವಿಧ ರೂಪಗಳನ್ನು ನಿರ್ಮಿಸುವ ಕೆಲವು ರೂಪಗಳು, ಬಳಸುವ ರೀತಿ ಎಂಬಿವುಗಳನ್ನು ಸ್ಪರ್ಶಿಸಿ ತಿಳಿಯಲಿರುವ ಕಲಿಕಾ ಚಟುವಟಿಕೆಯತ್ತ ಮಗುವನ್ನು ಇಲ್ಲಿ ಕೊಂಡೊಯ್ಯಲಾಗುವುದು.

### ಕಲಿಕಾ ಸಾಧನೆ

ತ್ರಿಮಾನ ವಸ್ತುಗಳನ್ನು ತಯಾರಿಸುವುದು.

### ಆಶಯ, ತಿಳುವಳಿಕೆ

ದ್ವಿಮಾನ ತಲದಲ್ಲಿ ಚಿತ್ರ ರಚನೆ ಸಾಧ್ಯ. ಶಿಲ್ಪಗಳು ತ್ರಿಮಾನ ರೂಪದವುಗಳು ಶಿಲ್ಪ ತಯಾರಿಸಲು ವಸ್ತುಗಳನ್ನು ಎಲ್ಲ ಪಾರ್ಶ್ವಗಳಿಂದಲೂ ನಿಖರವಾಗಿ ನಿರೀಕ್ಷಣೆ ಮಾಡುವ ಹಾಗೂ ಅಧ್ಯಯನ ನಡೆಸುವ ಅಗತ್ಯವಿದೆ. ರೂಪ ನಿರ್ಮಾಣಕ್ಕೆ ಉಪಯೋಗಿಸಬಹುದಾದ ವಸ್ತುಗಳನ್ನು ಬಳಸಲು ಒಳ್ಳೆಯ ಅನುಭವವಿರಬೇಕು.

### ಕಲಿಕಾ ಚಟುವಟಿಕೆಗಳು

***ಹಂತ–1***

ಮೊದಲ ಚಟುವಟಿಕೆಯಾಗಿ ಚೆಂಡು, ಪೆಟ್ಟಿಗೆ, ಬಾಟ್ಲಿ ಎಂಬಿವುಗಳ ದ್ವಿಮಾನ ಚಿತ್ರ ಹಾಗೂ ತ್ರಿಮಾನ ಚಿತ್ರಗಳನ್ನು ತೋರಿಸಿರಿ ಮಕ್ಕಳು ಚಿತ್ರಗಳನ್ನು ನೋಡಿ ವ್ಯತ್ಯಾಸಗಳನ್ನು ಹೇಳಲಿ. ದ್ವಿಮಾನ ತಲದಲ್ಲಿ ಮಾತ್ರ ಚಿತ್ರ ರಚನೆ ಸಾಧ್ಯವಾಗುವುದು. ಆದರೆ ಶಿಲ್ಪ ರಚನೆ ತ್ರಿಮಾನ ತಲದಲ್ಲಿ ಸಾಧ್ಯವಾಗುವುದೆಂದು ತಿಳಿಯಬೇಕು.

***ಹಂತ–2***

- ತ್ರಿಮಾನ ಚಿತ್ರಗಳನ್ನೂ, ಆಕೃತಿಗಳನ್ನೂ ಮಕ್ಕಳಿಗೆ ತೋರಿಸುವುದು.

ಉದಾ: ಚೆಂಡು, ಪೆಟ್ಟಿಗೆ, ಬಾಟ್ಲಿ, ಕಲ್ಲು, ಎಂಬಿವುಗಳು

- ತುಲನಾತ್ಮಕ ಅಧ್ಯಯನ ನಡೆಸುವುದು. ತ್ರಿಮಾನ ಸ್ವಭಾವಗಳನ್ನು ಗುರುತಿಸುವುದು. (ಇದೇ ಮಾದರಿಯಲ್ಲಿರುವ ಇತರ ಚಟುವಟಿಕೆಗಳನ್ನು ಅಧ್ಯಾಪಕರು ಕಂಡುಹಿಡಿದು ವಿದ್ಯಾರ್ಥಿಗಳಿಗೆ ನೀಡಬಹುದು.)
- ಪ್ರಕೃತಿಯಲ್ಲಿಯೂ ತರಗತಿಯಲ್ಲಿಯೂ ತ್ರಿಮಾನ ರೂಪಗಳನ್ನು ಕಂಡುಹಿಡಿಯಲು ಹೇಳುವುದು. ಕಂಡುಹಿಡಿದ ತ್ರಿಮಾನ ರೂಪಗಳನ್ನು ಮೌಲ್ಯಮಾಪನ ನಡೆಸುವುದು.

**ಹಂತ-3**

- ಯಾವ ಯಾವ ವಸ್ತುಗಳನ್ನು ಉಪಯೋಗಿಸಿ ತ್ರಿಮಾನ ಆಕೃತಿಗಳನ್ನು ತಯಾರಿಸಬಹುದು?
- ಈ ರೀತಿಯ ಆಕೃತಿಗಳನ್ನು ನಿರ್ಮಿಸಲು ಉಪಯೋಗಿಸುವ ಮಾಧ್ಯಮಗಳನ್ನು ಪರಿಚಯಿಸುವುದು.

ಉದಾ:ಮೈದಾ ಹಿಟ್ಟು, ಆವೆ ಮಣ್ಣು, ಪ್ಲಾಸ್ಟಿಕ್ ವೇಕ್ಸ್

- ಶಿಲ್ಪವನ್ನು ಮುಟ್ಟಿ ತಿಳಿದುಕೊಳ್ಳಲು ಅವಕಾಶವಿರಬೇಕು. ಸ್ಪರ್ಶಿಸಿ ತಿಳಿಯುವರು. ಮೂಸಿ ನೋಡಿ ತಿಳಿದು ಕೊಳ್ಳುವರು. ಪ್ರತಿಯೊಬ್ಬನಿಗೂ ವಿವಿಧ ರೂಪಗಳನ್ನು ತಯಾರಿಸಲು ಅಗತ್ಯವಾದ ವಸ್ತುಗಳನ್ನು (ಉದಾ: ಆವೆ ಮಣ್ಣು, ಮೈದಾ ಹಿಟ್ಟು ) ಎಂಬಿವುಗಳನ್ನು ನೀಡಿ ಇಷ್ಟವಿರುವ ರೂಪಗಳನ್ನು ನಿರ್ಮಿಸಲು ಸೂಚಿಸುವರು.
- ಪ್ರದರ್ಶನ ನಡೆಸುವರು. ವೈಯಕ್ತಿಕವಾಗಿ ಅನುಭವವನ್ನು ಹಂಚಿಕೊಳ್ಳುವರು.

**ಮೌಲ್ಯಮಾಪನ**

ಒಂದು ತ್ರಿಮಾನ ಆಕೃತಿಯನ್ನು ಪ್ರದರ್ಶಿಸುವರು. (ಉದಾ: ಪೆಟ್ಟಿಗೆ ) ಇದರ ತ್ರಿಮಾನ ಆಕೃತಿಯನ್ನು ತಯಾರಿಸಿರಿ.

- ಸ್ವತಃ ಹಾಗೂ ಪರಸ್ಪರ ಮೌಲ್ಯಮಾಪನ ನಡೆಸುವರು.
- ಬಳಿಕ ಅಧ್ಯಾಪಕರು ಅಂತಿಮ ಮೌಲ್ಯಮಾಪನ ನಡೆಸುವರು.

**ಮೌಲ್ಯಮಾಪನ ಸೂಚಕಗಳು**

- ನಿರೀಕ್ಷಣಾ ಕೌಶಲ್ಯ
- ರೂಪ ಸಾದೃಶ್ಯ
- ಮಾಧ್ಯಮಗಳನ್ನು ಬಳಸುವ ಅನುಭವ
- ಮನೋಭಾವ

**ಗಳಿಸಬಹುದಾದ ಕಲಿಕಾ ಹಿರಿಮೆಗಳು**

ಕೆಳಗೆ ಕೊಟ್ಟಿರುವ ಕಲಿಕಾ ಹಿರಿಮೆಗಳನ್ನು ಗಳಿಸಲು ಎಷ್ಟರ ಮಟ್ಟಿಗೆ ಸಾಧ್ಯವಾಯಿತು?

- ಮಕ್ಕಳ ನಿರೀಕ್ಷಣಾ ಕೌಶಲ್ಯ ಹೆಚ್ಚುವುದು.
- ಕೈ ಮತ್ತು ಬೆರಳುಗಳಿಗೆ ವೇಗ ದೊರೆಯುವುದು.
- ಸುತ್ತಮುತ್ತಲೂ ಇರುವ ವಸ್ತುಗಳನ್ನು ಆಸ್ವಾದಿಸುವ ಸಾಮರ್ಥ್ಯ ಲಭಿಸುವುದು.

## ಯೂನಿಟ್ -2 : ಹೊರಾಂಗಣ ಚಿತ್ರೀಕರಣ

ಪ್ರಕೃತಿಯಲ್ಲಿ ಹಲವು ಗಾತ್ರ ಬಣ್ಣ ಹಾಗೂ ಆಕಾರದಲ್ಲಿರುವ ವಸ್ತುಗಳಿವೆಯೆಂದು ತಿಳಿದು ಅವುಗಳ ನೈಜತೆ ನಷ್ಟವಾಗದೆ ಯಥಾರ್ಥ ವಸ್ತುಗಳನ್ನು ಮಾದರಿಯನ್ನಾಗಿರಿಸಿ ಚಿತ್ರಿಸುವ ಸಾಮರ್ಥ್ಯವನ್ನು ಮಗು ಗಳಿಸಬೇಕು. ಇದಕ್ಕಾಗಿ ಹೊರಾಂಗಣ ಚಿತ್ರೀಕರಣಕ್ಕೆ ಅವಕಾಶ ಒದಗಿಸಬೇಕು.

ಕ್ಲಾಸಿನ ಹೊರಗಡೆ ಇರುವ ವಿವಿಧ ವಸ್ತುಗಳು (ಗಿಡಗಳು, ಹೂಗಳು, ಕಾಯಿಗಳು, ಮರಗಳು, ಭೂಪ್ರಕೃತಿ ಮುಂತಾದವುಗಳು)

ಎಂಬಿವುಗಳನ್ನು ತಕ್ಷಣ ಚಿತ್ರೀಕರಿಸಲು ಅವಕಾಶ ಲಭಿಸುವಾಗ ಮಗುವಿನ ಮೆದುಳು, ಕಣ್ಣು, ಕೈ, ಮೇಲ್ಕೈ, ಉಪಕರಣಗಳು ಎಂಬಿವುಗಳು ಹೊಂದಾಣಿಸಲ್ಪಡುತ್ತವೆ.

## ಕಲಿಕಾ ಸಾಧನೆ

ಹೊರಾಂಗಣ ಚಿತ್ರೀಕರಣ.

## ಆಶಯ ತಿಳುವಳಿಕೆ

ಚಿತ್ರ ಘಟಕಗಳ ನೈಜತೆ, ಸಹಜತೆ ಎಂಬಿವುಗಳು ಮೂಲ ಭೂತವಾಗಿ ಪ್ರಕೃತಿಯೊಂದಿಗೆ ಸಂಬಂಧವನ್ನು ಹೊಂದಿರುತ್ತವೆ. ಪ್ರಕೃತಿಯ ಸಹಜವಾದ ರೂಪ ವಿನ್ಯಾಸವನ್ನು ಪ್ರತ್ಯಕ್ಷವಾಗಿ ಅರ್ಥೈಸಿಕೊಳ್ಳಬೇಕು. ಇನ್ನೊಬ್ಬರು ರಚಿಸಿದ ಚಿತ್ರ ಅಥವಾ ಕ್ಯಾಮರಾದಲ್ಲಿ ತೆಗೆದ ಫೋಟೋ ಗ್ರಾಫ್ ಈ ಪ್ರತ್ಯಕ್ಷ ಅನುಭವಕ್ಕೆ ಸಾಟಿಯಾಗದು. ಪ್ರಕೃತಿಯ ವಸ್ತುಗಳ ರೂಪ ವೈವಿಧ್ಯ, ವರ್ಣ ವೈವಿದ್ಯ, ಗಾತ್ರ ಮುಂತಾದವುಗಳ ಕುರಿತು ಸ್ಪಷ್ಟವಾದ ತಿಳುವಳಿಕೆಯು ಹೊರಾಂಗಣ ಚಿತ್ರೀಕರಣದ ಮಗುವಿಗೆ ಲಭಿಸುವುದು.

## ಕಲಿಕಾ ಚಟುವಟಿಕೆಗಳು

**ಹಂತ: 1**

ಸುತ್ತಮುತ್ತಲೂ ಇರುವ ವಸ್ತುಗಳ ವಿವರಣೆ (ಹಾಡುಗಳು, ಕತೆಗಳು ಎಂಬಿವುಗಳನ್ನು ಸೇರಿಸಬಹುದು) ಶಾಲಾ ಪರಿಸರದಲ್ಲಿರುವ ನಾಲ್ಕು ಅಥವಾ ಐದು ವಸ್ತುಗಳ ಹೆಸರುಗಳನ್ನು ಬೋರ್ಡಿನಲ್ಲಿ ಬರೆಯಬಹುದು. ಇವುಗಳಲ್ಲಿ ಯಾವುದಾದರೊಂದನ್ನು ಮಕ್ಕಳು ಅವರದೇ ಆದ ರೀತಿಯಲ್ಲಿ ರಚಿಸಲಿ. (ಕ್ರಯೋನ್ ಉಪಯೋಗಿಸಿ ಬಣ್ಣ ನೀಡಬಹುದು. (15 ಮಿನಿಟ್)

*ಸ್ವತಃ ಪರಸ್ಪರ ಮೌಲ್ಯಮಾಪನ– ಅಧ್ಯಾಪಕರ ಧನಾತ್ಮಕ ಮೌಲ್ಯಮಾಪನ.*

**ಹಂತ–2**

ಹೊರಾಂಗಣ ಚಿತ್ರೀಕರಣಕ್ಕಿರುವ ಸ್ಪಷ್ಟವಾದ ಸೂಚನೆಗಳನ್ನು ನೀಡುವುದು.

- ರಚಿಸಲಿಕ್ಕೆ ಅಗತ್ಯವಾದ ಸಾಮಗ್ರಿಗಳ ಸೂಕ್ಷ್ಮ ನಿರೀಕ್ಷಣೆ (ಬಣ್ಣ, ರೂಪ, ನಿಷ್ಪತ್ತಿ )
- ನಿರ್ದಿಷ್ಟ ಅಂತರವನ್ನು ಕಾಪಾಡುವುದು
- ರಚಿಸಲಿಕ್ಕಿರುವ ಸ್ಥಳ
- ಬಳಿಕ ಶಾಲಾ ಪರಿಸರದಲ್ಲಿರುವ ಮೇಲೆ ಹೇಳಲಾದ ಪ್ರಾಕೃತಿಕ ವಸ್ತುಗಳನ್ನು ನಿರೀಕ್ಷಣೆ ಮಾಡಿ ತಕ್ಷಣ ಚಿತ್ರೀಕರಿಸಲು ಕ್ಲಾಸಿನಿಂದ ಹೊರಗೆ ಮಕ್ಕಳನ್ನು ಕರೆದೊಯ್ಯುವುದು. ಹೊರಾಂಗಣ ಚಿತ್ರೀಕರಣ (20 ಮಿನಿಟ್)
- ಮಕ್ಕಳು ಸ್ಕೆಚ್ ಬಿಡಿಸಿದ ಬಳಿಕ ಕ್ರಯೋನ್ ಉಪಯೋಗಿಸಿ ಬಣ್ಣ ಕೊಡುವರು.
- ಪುನಃ ಕ್ಲಾಸಿಗೆ
- ಮಕ್ಕಳು ರಚಿಸಿದ ಚಿತ್ರಗಳ ಅವಲೋಕನ
- ಹಿರಿಮೆಗಳು ಮತ್ತು ಇತಿಮಿತಿಗಳನ್ನು ಮಕ್ಕಳು ಹೇಳಲಿ. (ಹೊರಾಂಗಣ ಚಿತ್ರೀಕರಣದ ಅನುಭವಗಳನ್ನು ಹಂಚಲು ಅವಕಾಶ ನೀಡಬಹುದು.)
- ಚಿತ್ರಗಳನ್ನು ತರಗತಿಯ ಆರ್ಟ್ ಗ್ಯಾಲರಿಯಲ್ಲಿ ಪ್ರದರ್ಶಿಸುವುದು.

- ಅಧ್ಯಾಪಕರ ಧನಾತ್ಮಕ ಮೌಲ್ಯಮಾಪನ–ಅಧ್ಯಾಪಕರ ಕ್ರೋಡೀಕರಣ.
  - ಚಿತ್ರ ರಚಿಸಲು ಪ್ರಕೃತಿಯನ್ನು ಕಲಿಕಾ ಮಾದರಿಯಾಗಿರಿಸಬೇಕು.
  - ವೃತ್ತ, ಚೌಕ, ತ್ರಿಕೋನ ಎಂಬೀ ಮೂಲಭೂತ ಜ್ಯಾಮಿತಿಯ ರೂಪಗಳು ಇದಕ್ಕೆ ಸಹಾಯಕವಾಗುತ್ತವೆ.
  - ವಸ್ತುಗಳೊಳಗಿನ ಗಾತ್ರ ವ್ಯತ್ಯಾಸ, ವಸ್ತುಗಳಲ್ಲಿ ಒಳಗೊಂಡಿರುವ ಘಟಕಗಳ ಗಾತ್ರ, ಸ್ಥಾನ ಎಂಬಿವುಗಳನ್ನು ನಿರೀಕ್ಷಣೆಗೊಳಪಡಿಸಿ ರಚಿಸಬೇಕು.

ಮುಂದುವರಿದ ಚಟುವಟಿಕೆಯಾಗಿ ಮನೆಯ ಪರಿಸರದಲ್ಲಿರುವ ಪ್ರಾಕೃತಿಕ ವಸ್ತುಗಳನ್ನು ಪ್ರತ್ಯಕ್ಷವಾಗಿ ನಿರೀಕ್ಷಣೆ ಮಾಡಿ ಚಿತ್ರ ರಚಿಸಿದ ಬಳಿಕ ಬಣ್ಣ ನೀಡಿ ಚಿತ್ರವನ್ನು ತೆಗೆದುಕೊಂಡು ಬರಲು ಹೇಳಬಹುದು. ಮನೆಗೆ ಹೋಗುವಾಗ ಮತ್ತು ಬರುವಾಗ ಪ್ರಕೃತಿಯನ್ನು ನಿರೀಕ್ಷಣೆ ಮಾಡಲು ಮತ್ತು ವೈಶಿಷ್ಟ್ಯಗಳನ್ನು ತಿಳಿದುಕೊಂಡು ಚಿತ್ರ ರಚಿಸಿ ತರಲು ಹೇಳಬಹುದು.

## ಮೌಲ್ಯಮಾಪನ

ಪ್ರಕೃತಿಯನ್ನು ನಿರೀಕ್ಷಣೆ ಮಾಡಿ ಒಂದು ಚಿತ್ರವನ್ನು ಬಿಡಿಸಿ ಸರಿಯಾದ ಬಣ್ಣ ನೀಡಿರಿ.

**ಮೌಲ್ಯಮಾಪನ ಸೂಚಕಗಳು**

- ಚಿತ್ರದ ಪೂರ್ಣತೆ, ಬಣ್ಣ ನೀಡಿದ ರೀತಿ.
- ರಚಿಸಿದ ಚಿತ್ರಕ್ಕೆ ಪ್ರಾಕೃತಿಕ ವಸ್ತುಗಳೊಂದಿಗಿನ ಸಾಮ್ಯ.
- ರೂಪ ರಚನೆ, ನಿಷ್ಪತ್ತಿ ಎಂಬಿವುಗಳ ಪಾಲನೆ.
- ಭಾಗಿಕವಾಗಿ ರಚಿಸಲ್ಪಟ್ಟವುಗಳು.
- ಇನ್ನೂ ಉತ್ತಮಗೊಳ್ಳಬೇಕಾದವುಗಳು

**ಗಳಿಸಬೇಕಾದ ಕಲಿಕಾ ಹಿರಿಮೆಗಳು**

***ಕೆಳಗೆ ಕೊಟ್ಟಿರುವ ಕಲಿಕಾ ಹಿರಿಮೆಗಳನ್ನು ಗಳಿಸಲು ಎಷ್ಟರ ಮಟ್ಟಿಗೆ ಸಾಧ್ಯವಾಗಿದೆ?***

- ಪ್ರಕೃತಿ ಸೌಂದರ್ಯವನ್ನು ಆಸ್ವಾದಿಸುವ ಸಾಮರ್ಥ್ಯ
- ಪ್ರಕೃತಿ ಸೌಂದರ್ಯವನ್ನು ಚಿತ್ರಿಸುವ ಸಾಮರ್ಥ್ಯ
- ಪ್ರಕೃತಿಯಲ್ಲಿರುವ ಮೂಲಭೂತ ಜ್ಯಾಮಿತಿಯ ಆಕೃತಿಗಳನ್ನು ಗುರುತಿಸಲು ಸಾಧ್ಯವಾಗುತ್ತದೆ.

## ಯೂನಿಟ್–3 : ಚಿತ್ರ–ಶಿಲ್ಪ ಸಂಗ್ರಹ

ಚಿತ್ರಗಳು ಮತ್ತು ಶಿಲ್ಪಗಳ ಸಂಗ್ರಹವು ಚಿತ್ರ–ಶಿಲ್ಪ ರಚನಾ ಸಾಮರ್ಥ್ಯದ ವಿಕಾಸಕ್ಕೆ ಅನಿವಾರ್ಯವಾಗಿದೆ. ಚಿತ್ರ ಕಲೆಯನ್ನು ಪೋಷಿಸಲು ಸಂಗ್ರಹಿಸುವ ಸಂಸ್ಕೃತಿಯನ್ನು ಎಳೆಯ ಪ್ರಾಯದಿಂದಲೇ ರೂಢಿಸಿಕೊಳ್ಳಬೇಕು. ಸಹಪಾಠಿಗಳು ರಚಿಸಿದ ಪತ್ರಿಕೆ, ನಿಯತ ಕಾಲಿಕ ಮುಂತಾದವುಗಳಲ್ಲಿ ಬರುವ ಚಿತ್ರ–ಛಾಯಾಚಿತ್ರಗಳು, ಸರಳ ಶಿಲ್ಪಗಳನ್ನು ಈ ರೀತಿಯ ಸಂಗ್ರಹದಲ್ಲಿ ಸೇರಿಸಬಹುದು. ನನ್ನ ಚಿತ್ರ ಸಂಗ್ರಹವು ಮಗುವಿನ ಕಲಿಕೆಯ ಕಾಲಾವಧಿಯ ದೊಡ್ಡ ಸಾಧನೆಯಾಗಿರುವುದು. ಪ್ರಾಥಮಿಕ ಶಿಕ್ಷಣದ ಬಳಿಕವೂ ಒಂದು ಹಿನ್ನೋಟಕ್ಕೂ, ಸ್ವ ಮೌಲ್ಯನಿರ್ಣಯಕ್ಕೂ ಇದು ಸಹಕಾರಿಯಾಗುವುದು.

### ಕಲಿಕಾ ಸಾಧನೆ

ಚಿತ್ರಗಳು ಮತ್ತು ಶಿಲ್ಪಗಳನ್ನು ಸಂಗ್ರಹಿಸುವುದು.

### ಆಶಯ ತಿಳುವಳಿಕೆ

- ಚಿತ್ರ–ಶಿಲ್ಪ ಕಲೆಗೆ ಸಂಬಂಧಿಸಿದ ವಿವಿಧ ಸೃಷ್ಟಿಗಳ ಸಂಗ್ರಹಕ್ಕೆ ಸಂಬಂಧಿಸಿದ ತಿಳುವಳಿಕೆ.
- ರಚನಾ ಮಾಧ್ಯಮಗಳಿಗನುಸಾರವಾಗಿ ವರ್ಗೀಕರಿಸಿ ಸಂಗ್ರಹಿಸುವುದರಿಂದ ಮುಂದುವರಿದ ಕಲಿಕೆಗೆ ಪ್ರಯೋಜನವಾಗುವುದು.

### ಕಲಿಕಾ ಚಟುವಟಿಕೆಗಳು

***ಚಿತ್ರ, ಶಿಲ್ಪ ಸಂಗ್ರಹ***

ಚಿತ್ರಗಳು ಮತ್ತು ಶಿಲ್ಪಗಳನ್ನು ಸಂಗ್ರಹಿಸುವುದು.

- ಶೈಕ್ಷಣಿಕ ವರ್ಷಾರಂಭದಿಂದ ಮಗು ವೈಯಕ್ತಿಕವಾಗಿ ಮಾಡಬೇಕಾದ ಚಟುವಟಿಕೆಯಾಗಿದೆ. ಸೂಚನೆಗಳನ್ನು ಆರಂಭದಲ್ಲಿಯೇ ನೀಡಬೇಕು.
- ಚಿತ್ರ, ಶಿಲ್ಪ ಎಂಬೀ ಎರಡು ಪ್ರಧಾನ ವಲಯಗಳಿವೆ.
- ಚಿತ್ರಗಳನ್ನು ದೊಡ್ಡದು ಚಿಕ್ಕದು ಎಂದು ಪರಿಗಣಿಸದೆ ಸಂಗ್ರಹಿಸಬಹುದು.
- ಸರಳ ಶಿಲ್ಪಗಳನ್ನು ಸಂಗ್ರಹಸಿದರೆ ಸಾಕು.
- ಸಂಗ್ರಹವನ್ನು ವಿವಿಧ ಮಾಧ್ಯಮಗಳಲ್ಲಿ ತಯಾರಿಸಲ್ಪಟ್ಟ ಸೃಷ್ಟಿಗಳೆಂದು ವರ್ಗೀಕರಿಸಬಹುದು.
- ಪ್ರಗತಿಯ ಮಧ್ಯಾಂತರ ಮೌಲ್ಯಮಾಪನ ಉತ್ತಮಗೊಳಿಸುವಿಕೆ.
  ಸಂಗ್ರಹಿಸಿದ ರಚನೆಗಳನ್ನು ಕ್ಲಾಸ್ ಮಟ್ಟದಲ್ಲಿ /ಶಾಲಾ ಮಟ್ಟದಲ್ಲಿ ಪ್ರದರ್ಶಿಸುವುದು.
- ಸಂಗ್ರಹಣ ಹಿರಿಮೆಗೆ ಸೂಕ್ತವಾದ ಅಂಗೀಕಾರ ನೀಡುವುದು.
- ಸಂಗ್ರಹಕ್ಕಿರುವ ಮಾನದಂಡಗಳನ್ನು ಪಾಲಿಸಿ ಮೌಲ್ಯಮಾಪನ ನಡೆಸಿದ ಬಳಿಕ ವೈಯಕ್ತಿಕವಾಗಿ ಗ್ರೇಡನ್ನು ದಾಖಲಿಸಬಹುದು.

### ಮೌಲ್ಯಮಾಪನ

ಮೌಲ್ಯಮಾಪನ ಸೂಚಕಗಳು

- ಸಂಗ್ರಹಿಸಿದ ವಸ್ತುಗಳ ಮಾಧ್ಯಮಗಳ ವೈವಿದ್ಯ.
- ಚಿತ್ರದ ಹೊಳಪು, ಆಶಯ ವಿನಿಮಯ ದಕ್ಷತೆ.
- ಶಿಲ್ಪದ ಸೌಂದರ್ಯ, ಕಲಾ ಮಹಿಮೆ.

**ಗಳಿಸಬಹುದಾದ ಕಲಿಕಾ ಹಿರಿಮೆಗಳು**

***ಕೆಳಗೆ ಕೊಟ್ಟಿರುವ ಕಲಿಕಾ ಹಿರಿಮೆಗಳನ್ನು ಅರ್ಜಿಸಲು ಎಷ್ಟರ ಮಟ್ಟಿಗೆ ಸಾಧ್ಯವಾಗಿದೆ?***

- ಚಿತ್ರಗಳು ಮತ್ತು ಶಿಲ್ಪಗಳನ್ನು ಸಂಗ್ರಹಿಸುವ ಸಾಮರ್ಥ್ಯವನ್ನು ಗಳಿಸುವುದು.
- ಚಿತ್ರಗಳು ಮತ್ತು ಶಿಲ್ಪಗಳನ್ನು ಆಸ್ವಾದಿಸುವುದು

# ಯೂನಿಟ್–4 : ಪರಿಚಿತ ಆಕೃತಿಗಳು


ಪ್ರಕೃತಿದತ್ತ ಹಾಗೂ ಮನುಷ್ಯ ನಿರ್ಮಿತವಾದ ಅನೇಕ ರೂಪಗಳು ನಮ್ಮ ಸುತ್ತಲೂ ಇವೆ. ಇವುಗಳಿಂದ ಮೂಲ ಆಕೃತಿಗಳನ್ನು ಪ್ರತ್ಯೇಕಿಸಿ ಕಾಣುವುದು ಚಿತ್ರ ರಚನೆಯ ಆರಂಭದ ದಿಶೆಯಲ್ಲಿ ಅನುಸರಿಸಬೇಕಾದ ಆವಶ್ಯಕ ಪ್ರಕ್ರಿಯೆಯಾಗಿದೆ. ಜ್ಯಾಮಿತಿಯ ಮೂಲ ಆಕೃತಿಗಳನ್ನು ಪ್ರತ್ಯೇಕವಾಗಿಯೂ ಸಂಯೋಜಿಸಿಯೂ ಸುತ್ತು ಮುತ್ತಲಿನಲ್ಲಿ ಪರಿಚಿತವಾದ ಆಕೃತಿಗಳತ್ತ ಮಗುವನ್ನು ಸುಲಭವಾಗಿ ಕೊಂಡೊಯ್ಯಲು ಸಾಧ್ಯವಾಗಬೇಕು.

## ಕಲಿಕಾ ಸಾಧನೆ

ಮೂಲ ಆಕೃತಿಗಳನ್ನು ಉಪಯೋಗಿಸಿ ಪರಿಚಿತ ಆಕೃತಿಗಳನ್ನು ರಚಿಸುವುದು.

## ಆಶಯ, ತಿಳುವಳಿಕೆ

ಚೌಕ, ವೃತ್ತ, ತ್ರಿಕೋನ ಮುಂತಾದ ಜ್ಯಾಮಿತಿಯ ಮೂಲ ಆಕೃತಿಗಳನ್ನು ತಿಳಿದುಕೊಂಡು ಉಪಕರಣಗಳ ಸಹಾಯವಿಲ್ಲದೆಯೇ ಅವುಗಳನ್ನು ರಚಿಸುವ ಸಾಮರ್ಥ್ಯವನ್ನು ಗಳಿಸುವರು. ಪ್ರಕೃತಿಯಲ್ಲಿರುವ ವಸ್ತುಗಳೊಂದಿಗಿನ ಹೋಲಿಕೆಯನ್ನು ಮಗು ತಿಳಿದುಕೊಳ್ಳುವುದು. ಪುನರಾವರ್ತಿಸಿಯೂ ಆಕೃತಿಗಳಿಗೆ ಅನುಸಾರವಾಗಿ ಹೊಂದಿಸಿಯೂ ಅಭ್ಯಸಿಸುವುದರಲ್ಲಿ ನಿರತನಾಗುವನು.



## ಕಲಿಕಾ ಚಟುವಟಿಕೆಗಳು

***ಆರಂಭದ ಚಟುವಟಿಕೆ***

- ಆಕೃತಿಗಳು ಎಂಬ ಆಶಯವನ್ನೊಳಗೊಂಡ ಸರಳವಾದ ಹಾಡುಗಳನ್ನು ಹಾಡಿ ಆರಂಭಿಸಬಹುದು.
- ಮಕ್ಕಳನ್ನು ವೃತ್ತ, ಚೌಕ, ತ್ರಿಕೋನ, ಎಂಬೀ ಆಕೃತಿಗಳಲ್ಲಿ ನಿಲ್ಲಿಸಿ ಚಲಿಸುತ್ತಾ ಹಾಡಬಹುದು.

***ಚಟುವಟಿಕೆ–1***

- ಮೂಲ ಆಕೃತಿಗಳನ್ನು ನಿರ್ಮಿಸುವುದು.
  ಮಕ್ಕಳನ್ನು ಗುಂಪುಗಳಾಗಿ ವಿಂಗಡಿಸಿ ಪ್ರತಿಯೊಂದು ಗುಂಪಿಗೂ ಹೆಚ್ಚು ಒಣಗದ ಮಡಲ ಕಡ್ಡಿಯನ್ನು ನೀಡುವುದು. ಅದನ್ನು ಉಪಯೋಗಿಸಿ ಮೂಲ ಆಕೃತಿಗಳನ್ನು ರಚಿಸಲು ಹೇಳುವುದು. ತಯಾರಿಸಿದ ಆಕೃತಿಗಳನ್ನು ಜೋಡಿಸಿ ಇತರ ಆಕೃತಿಗಳನ್ನು ತಯಾರಿಸುವುದು.
- ಅಧ್ಯಾಪಕರ ಮೌಲ್ಯಮಾಪನ

***ಚಟುವಟಿಕೆ–2***

- ಅಧ್ಯಾಪಕರು ಚಾರ್ಟಿನಲ್ಲಿ ಮೂಲ ಆಕೃತಿಗಳನ್ನು ಪ್ರದರ್ಶಿಸಲಿ. ಮಗು ತಯಾರಿಸಿದ ಚಿತ್ರದಲ್ಲಿ ಕಾಣಿಸುವ ಆಕೃತಿಗಳನ್ನು ಹೋಲಿಸುವುದು. ನಿರ್ಮಾಣದ ಇತಿಮಿತಿಗಳನ್ನು ಮಗು ಗುರುತಿಸುವುದು.
- ಅಧ್ಯಾಪಕರು ಸ್ಪಷ್ಟತೆಯುಂಟುಮಾಡುವರು.
- ಬಳಿಕ ಮಕ್ಕಳು ರಚಿಸಲಿ.
- ರಚಿಸಿದ ಚಿತ್ರಗಳನ್ನು ಸ್ವತಃ ಅಥವಾ ಪರಸ್ಪರ ಮೌಲ್ಯಮಾಪನ ನಡೆಸುವುದು.

***ಚಟುವಟಿಕೆ–3***

- ಆಕೃತಿಗಳ ಸಂಯೋಜನೆ
- ಚಟುವಟಿಕೆಯ ಆಕೃತಿಗಳನ್ನು ಒಟ್ಟು ಸೇರಿಸುವುದು. ಮೂಲ ಆಕೃತಿಗಳನ್ನು ಒಟ್ಟು ಸೇರಿಸಿ ಮಗು ವಿವಿಧ ಆಕೃತಿಗಳನ್ನು ರಚಿಸಲಿ. ಪಕ್ಷಿಗಳು, ಪ್ರಾಣಿಗಳು, ಮರಗಳು, ಮನೆ, ವಾಹನ ಎಂಬಿವುಗಳಿಂದ ಆರಂಭಿಸಿ ಇನ್ನೂ ಹೆಚ್ಚಿನ ಆಕೃತಿಗಳತ್ತ ತಲುಪಲು ಅಧ್ಯಾಪಕರು ಸಹಾಯಮಾಡಬಹುದು. ಪ್ರತ್ಯಕ್ಷ ಮಾದರಿಗಳ ಸಹಾಯ ಪಡೆಯದಿರುವುದು ಉತ್ತಮ.

***ಚಟುವಟಿಕೆ–4***

- ಬಣ್ಣ ಕೊಡುವುದು.
- ಕಲರ್ ಪೆನ್ಸಿಲನ್ನು ಉಪಯೋಗಿಸಿ ರಚಿಸಿದ ಚಿತ್ರಗಳಿಗೆ ಬಣ್ಣ ಕೊಡಬಹುದು.
- ಅಧ್ಯಾಪಕರ ಧನಾತ್ಮಕ ಮೌಲ್ಯಮಾಪನ.
- ಭಾಗಿಕವಾಗಿ ನಿರ್ವಹಿಸಿದವರು ಯಾರು?
- ಇನ್ನೂ ಉತ್ತಮಗೊಳ್ಳಬೇಕಾದವರು.
- ಪರಿಹಾರೋಪಾಯಗಳು
- ತರಗತಿಯ, ಆರ್ಟ್ ಗ್ಯಾಲರಿಯಲ್ಲಿ ಪ್ರದರ್ಶಿಸುವುದು.

**ಮೌಲ್ಯಮಾಪನ**

ಮೂಲ ಜ್ಯಾಮಿತಿಯ ಆಕೃತಿಗಳನ್ನು ಸೇರಿಸಿ ರೂಪಗಳನ್ನು ತಯಾರಿಸಿರಿ.

**ಗಳಿಸಬಹುದಾದ ಕಲಿಕಾ ಹಿರಿಮೆಗಳು**

*ಕೆಳಗೆ ಕೊಟ್ಟಿರುವ ಕಲಿಕಾ ಹಿರಿಮೆಗಳನ್ನು ಅರ್ಜಿಸಲು ಎಷ್ಟರ ಮಟ್ಟಿಗೆ ಸಾಧ್ಯವಾಗಿದೆ?*

- ವಿವಿಧ ಆಕೃತಿಗಳು, ಪೇಟರ್ನ್‌ಗಳು ಎಂಬಿವುಗಳನ್ನು ರೂಪೀಕರಿಸುವುದು.
- ಆಸ್ವಾದನಾ ಸಾಮರ್ಥ್ಯ ಹೆಚ್ಚುವುದು.
- ಬಣ್ಣ ನೀಡಿ ಆಕರ್ಷಕಗೊಳಿಸುವ ಮೂಲಕ ಕಲಿಕೆಯು ಆನಂದದಾಯಕವಾಗುವುದು.
- ಚಿತ್ರ ರಚನಾ ಕೌಶಲ್ಯ ಹೆಚ್ಚುವುದು.

# ಮೂರನೇ ತರಗತಿ

## ಯೂನಿಟ್–1 : ರಚಿಸುವ ಬಣ್ಣ ನೀಡುವ

ಪ್ರಕೃತಿಯಲ್ಲಿರುವ ವಸ್ತುಗಳ ನೈಜತೆ ನಷ್ಟವಾಗದಂತೆ ಅವುಗಳನ್ನು ಚಿತ್ರಿಸಲು ಅವಕಾಶ ಲಭಿಸುವುದರೊಂದಿಗೆ ಬಣ್ಣ ನೀಡುವ ಹಾಗೂ ಅವುಗಳನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಮಕ್ಕಳಲ್ಲಿ ಉಂಟಾಗಬೇಕು. ಇದು ಏಕಾಗ್ರತೆ ಅಗತ್ಯವಿರುವ ಒಂದು ಚಟುವಟಿಕೆಯಾಗಿದೆ.

### ಕಲಿಕಾ ಸಾಧನೆ

ಪ್ರಕೃತಿಯಲ್ಲಿರುವ ವಸ್ತುಗಳನ್ನು ನಿರೀಕ್ಷಣೆ ಮಾಡಿ ರಚಿಸಿ ಬಣ್ಣ ಕೊಡುವುದು.

### ಆಶಯ, ತಿಳುವಳಿಕೆ

ಚಿತ್ರಗಳಲ್ಲಿರುವ ಘಟಕಗಳ ನೈಜತೆ ಮತ್ತು ಸಹಜತೆಯು ರಚನಾತ್ಮಕವಾಗಿ ಪ್ರಕೃತಿಯೊಂದಿಗೆ ಸಂಬಂಧವನ್ನು ಹೊಂದಿರುವ ಕಾರಣ ಸಹಜವಾದ ರೂಪ ವಿನ್ಯಾಸಗಳನ್ನು ಪ್ರತ್ಯಕ್ಷವಾಗಿ ಮನದಟ್ಟು ಮಾಡಿಕೊಳ್ಳಬೇಕು. ವಿವಿಧ ಮಾಧ್ಯಮಗಳ ಕುರಿತಾದ ತಿಳುವಳಿಕೆ ಮಕ್ಕಳಿಗೆ ಲಭಿಸುವುದು.

### ಕಲಿಕಾ ಚಟುವಟಿಕೆಗಳು

***ಹಂತ–1***

ಮಕ್ಕಳಿಗೆ ಹೆಚ್ಚು ಪರಿಚಯವಿರುವ ಪ್ರಾಕೃತಿಕ ವಸ್ತುಗಳ ಕುರಿತು (ಉದಾ.) ವಿವರಣೆ ಮತ್ತು ಚರ್ಚೆ. ಚರ್ಚಿಸಿದ ವಸ್ತುವನ್ನು ನಿರೀಕ್ಷಣೆ ಮಾಡುವುದು. ಲಭ್ಯವಿರುವ ಮಾಧ್ಯಮಗಳನ್ನು (ಕ್ರಯೋನ್, ವಾಟರ್ ಕಲರ್, ಪೆನ್ಸಿಲ್) ಉಪಯೋಗಿಸಿ ಮಕ್ಕಳು ಚಿತ್ರ ರಚಿಸುವುದು. (20 ನಿಮಿಷ) ಸ್ವತಃ–ಪರಸ್ಪರ ಮೌಲ್ಯಮಾಪನ ನಡೆಸುವುದು. ತರಗತಿಯ ಆರ್ಟ್ ಗ್ಯಾಲರಿಯಲ್ಲಿ ಪ್ರದರ್ಶಿಸುವುದು.

***ಹಂತ–2***

ತರಗತಿಯ ಹೊರಗಿನಿಂದ ಸಂಗ್ರಹಿಸುವ ಚಿಕ್ಕ ವಸ್ತುಗಳನ್ನು ತರಗತಿಯಲ್ಲಿ ನಿರೀಕ್ಷಣೆ ಮಾಡಿ ರೇಖಾಚಿತ್ರ ಬಿಡಿಸುವುದು. ನಿಜವಾದ ವಸ್ತುವಿನೊಂದಿಗೆ ಹೋಲಿಸಲು ಮಕ್ಕಳಲ್ಲಿ ಸೂಚಿಸುವುದು. (15 ನಿಮಿಷ)

**ಹಂತ–3**

ಅಧ್ಯಾಪಕರು ವಿದ್ಯಾರ್ಥಿಗಳೊಂದಿಗೆ ಈ ಚಟುವಟಿಕೆಯಲ್ಲಿ ಭಾಗವಹಿಸಿ ಎಲ್ಲರ ಚಿತ್ರಗಳ ಕುರಿತು

ಚರ್ಚಿಸುವರು.

ಚರ್ಚಾ ಸೂಚಕಗಳು

- ಅನುಭವಗಳು
- ತಾಂತ್ರಿಕ ಹಿರಿಮೆಗಳು (ಪ್ರತಿಯೊಂದು ಮಾಧ್ಯಮದಲ್ಲಿ)
- ಎದುರಾದ ಸಮಸ್ಯೆಗಳು
- ನಿಜವಾದ ವಸ್ತುವಿನೊಂದಿಗೆ ಚಿತ್ರಕ್ಕಿರುವ ಹೋಲಿಕೆ.

### ಮೌಲ್ಯಮಾಪನ

ಪರಿಸರದಲ್ಲಿ ಯಾವುದಾದರೊಂದು ವಸ್ತುವನ್ನು ಮೇಜಿನ ಮೇಲಿರಿಸುವುದು. ವಸ್ತುವಿನ ರೇಖಾಚಿತ್ರವನ್ನು ರಚಿಸುವುದು. ಚಿತ್ರವನ್ನು ಕೆಳಗೆ ಕೊಟ್ಟಿರುವ ಮೌಲ್ಯಮಾಪನ ಸೂಚಕಗಳನ್ನು ಉಪಯೋಗಿಸಿ ಮೌಲ್ಯಮಾಪನ ನಡೆಸುವುದು.

ಮೌಲ್ಯಮಾಪನ ಸೂಚಕಗಳು

- ನಿರೀಕ್ಷಣಾ ಕೌಶಲ್ಯ
- ಯೋಗ್ಯವಾದ ವಸ್ತುವನ್ನು ಆಯ್ಕೆ ಮಾಡುವುದು.
- ರಚನಾ ಮಾಧ್ಯಮ
- ರಚನಾ ವಿಧಾನ
- ಸಾಮ್ಯ, ವರ್ಣಪ್ರಜ್ಞೆ

### ಗಳಿಸಬಹುದಾದ ಕಲಿಕಾ ಸಾಮರ್ಥ್ಯಗಳು

*ಕೆಳಗೆ ಕೊಟ್ಟಿರುವ ಕಲಿಕಾ ಹಿರಿಮೆಗಳನ್ನು ಗಳಿಸಲು ಎಷ್ಟರ ಮಟ್ಟಿಗೆ ಸಾಧ್ಯವಾಯಿತು?*

- ಅಭಿರುಚಿಗನುಸಾರವಾದ ಆಯ್ಕೆ
- ಕಲಿಕೆಯನ್ನು ತ್ವರಿತಗೊಳಿಸುವುದು
- ಪ್ರತಿಯೊಂದು ವಸ್ತುವಿನ ಸ್ವಭಾವಕ್ಕನುಸಾರವಾಗಿ ಬಣ್ಣ ಕೊಡುವ ಸಾಮರ್ಥ್ಯ.
- ಪರಸ್ಪರ ಮೌಲ್ಯಮಾಪನದ ಮೂಲಕ ಉತ್ತಮಗೊಳಿಸುವಿಕೆ.

## ಯೂನಿಟ್–2 : ತ್ರಿಮಾನ ವಸ್ತುಗಳನ್ನು ತಯಾರಿಸೋಣ

ಚಿತ್ರ ಮತ್ತು ಶಿಲ್ಪಗಳು ಆವಿಷ್ಕಾರಕ್ಕಿರುವ ಪ್ರಧಾನ ಮಾಧ್ಯಮಗಳಾಗಿವೆ. ಚಿತ್ರ ದ್ವಿಮಾನ ತಲದಲ್ಲಿಯೂ ಶಿಲ್ಪ ತ್ರಿಮಾನ ತಲದಲ್ಲಿಯೂ ತಯಾರಿಸಲ್ಪಡುತ್ತವೆ.ಚಿತ್ರ ಎಂಬುದು ವಸ್ತುಗಳ ಆಶಯದ ಒಂದು ಪಾರ್ಶ್ವದಿಂದಿರುವ ದೃಶ್ಯದ ಅನುಭವವನ್ನು ಮಾತ್ರ ನೀಡಿದರೆ ಶಿಲ್ಪವು ನಾನಾ ಬದಿಗಳಿಂದಿರುವ ದೃಶ್ಯಗಳ ಸಂಯೋಜನೆಯ ಅನುಭವವನ್ನು ನೀಡುವುದು. ಆದುದರಿಂದ ಶಿಲ್ಪವನ್ನು ತಯಾರಿಸುವಾಗ ವಸ್ತುವಿನ ಎಲ್ಲ ಬದಿಗಳನ್ನೂ ಅಧ್ಯಯನ ಮಾಡುವುದು ಅಗತ್ಯ.

### ಕಲಿಕಾ ಸಾಧನೆ

ತ್ರಿಮಾನ ವಸ್ತುಗಳನ್ನು ತಯಾರಿಸುವುದು.

## ಆಶಯ, ತಿಳುವಳಿಕೆ

- ಚಿತ್ರವು ದ್ವಿಮಾನ ಸ್ವಭಾವವುಳ್ಳದಾಗಿದೆ.
- ಶಿಲ್ಪಕ್ಕೆ ತ್ರಿಮಾನ ಸ್ವಭಾವಿದೆ.
- ಶಿಲ್ಪವನ್ನು ತಯಾರಿಸುವಾಗ ಅದರ ವಿವಿಧ ಬದಿಗಳಿಂದಿರುವ ದೃಶ್ಯವನ್ನು ವೀಕ್ಷಿಸಬೇಕು.
- ಶಿಲ್ಪ ತಯಾರಿಗೆ ಆವೆ ಮಣ್ಣು, ಲೋಹ, ಮರ ಮುಂತಾದ ಪರಂಪರಾಗತ ಮಾಧ್ಯಮಗಳು, ಪ್ಲಾಸ್ಟರ್ ಆಫ್ ಪ್ಯಾರಿಸ್, ಪಲ್ಪ್, ವೇಕ್ಸ್ ಮುಂತಾದ ಆಧುನಿಕ ಮಾಧ್ಯಮಗಳನ್ನು ಉಪಯೋಗಿಸುತ್ತಾರೆ.
- ಶಿಲ್ಪ ನಿರ್ಮಾಣಕ್ಕಿರುವ ಮಾಧ್ಯಮವನ್ನು ತಯಾರಿಸುವುದು ಹೆಚ್ಚು ಪ್ರಧಾನವಾದ ವಿಚಾರವಾಗಿದೆ

## ಕಲಿಕಾ ಚಟುವಟಿಕೆಗಳು

***ಹಂತ–1***

- ಚಿತ್ರ ಮತ್ತು ಶಿಲ್ಪಗಳ ನಡುವಿನ ವ್ಯತ್ಯಾಸಗಳನ್ನು ಗುರುತಿಸುವುದು.
- ಒಂದು ವಸ್ತು ಮತ್ತು ಅದರ ಚಿತ್ರವನ್ನು ಪ್ರದರ್ಶಿಸುವುದು.

ಉದಾ: ಒಂದು ಸೇಬನ್ನು ಪ್ರದರ್ಶಿಸುವುದು. ಸೇಬಿನ ಚಿತ್ರವನ್ನು ಪ್ರದರ್ಶಿಸುವುದು.

- ವಸ್ತು ಮತ್ತು ಚಿತ್ರವನ್ನು ಆಧಾರವಾಗಿರಿಸಿ ಚರ್ಚೆ. ಅಧ್ಯಾಪಕರ ಕ್ರೋಡೀಕರಣ.

***ಹಂತ–2***

ಶಿಲ್ಪ ತಯಾರಿಗೆ ಅಗತ್ಯವಾದ ಆಶಯವನ್ನು ಕಂಡುಹಿಡಿಯುವುದು.

- ಮಾಧ್ಯಮವನ್ನು ತಯಾರಿಸುವುದು.
- ಆವೆ ಮಣ್ಣು, ಮೈದಾಹಿಟ್ಟು ಮುಂತಾದ ಮಾಧ್ಯಮಗಳನ್ನು ನೀರು ಸೇರಿಸಿ ಕಲಸಿ ತಯಾರಿಸುವುದು.
- ತಯಾರಿಸಬೇಕಾದ ವಸ್ತು .ಯಾವುದೆಂದು ಕಂಡುಹಿಡಿಯುವ ಚರ್ಚೆ, ಆಯ್ಕೆ ಮಾಡುವುದು.
- ಶಿಲ್ಪವನ್ನು ತಯಾರಿಸುವುದು, ಪ್ರದರ್ಶಿಸುವುದು, ಮೌಲ್ಯಮಾಪನ ಮಾಡುವುದು.
- ಪ್ರದರ್ಶನದ ಬಳಿಕ ಶಿಲ್ಪದ ಕುಂದು ಕೊರತೆಗಳನ್ನು ನಿವಾರಿಸಲು ಅವಕಾಶ ಒದಗಿಸಿ ಮೊದಲು ತಯಾರಿಸಿದ ಹಾಗೂ ಅನಂತರ ತಯಾರಿಸಿದ ಶಿಲ್ಪಗಳನ್ನು ಹೋಲಿಸಿ ಸುಧಾರಣೆಯನ್ನು ತಿಳಿದುಕೊಳ್ಳುವುದು.

## ಮೌಲ್ಯಮಾಪನ

ಚಟುವಟಿಕೆಯನ್ನು ಕೆಳಗೆ ಕೊಟ್ಟಿರುವ ಸೂಚಕಗಳನ್ನು ಉಪಯೋಗಿಸಿ ಮೌಲ್ಯಮಾಪನ ನಡೆಸುವುದು.

ಮೌಲ್ಯಮಾಪನ ಸೂಚಕಗಳು

- ವಿಷಯ/ಆಶಯದ ಆಯ್ಕೆ
- ಮಾಧ್ಯಮವನ್ನು ತಯಾರಿಸುವುದು, ಮಾಧ್ಯಮದೊಂದಿಗಿನ ಬೆರೆಯುವಿಕೆ.
- ನಿರ್ಮಾಣ ಕೌಶಲ್ಯ, ಪೂರ್ಣತೆ

**ಗಳಿಸಬಹುದಾದ ಕಲಿಕಾ ಸಾಮರ್ಥ್ಯಗಳು**

ಕೆಳಗೆ ಕೊಟ್ಟಿರುವ ಕಲಿಕಾ ಹಿರಿಮೆಗಳನ್ನು ಗಳಿಸಲು ಎಷ್ಟರ ಮಟ್ಟಿಗೆ ಸಾಧ್ಯವಾಗಿದೆ?

- ಚಿತ್ರ, ಶಿಲ್ಪಗಳ ವ್ಯತ್ಯಾಸವನ್ನು ಗುರುತಿಸುವರು/ತಯಾರಿಸಲಿರುವ ಸಾಮರ್ಥ್ಯವನ್ನು ಗಳಿಸುವರು.

## ಯೂನಿಟ್–3 : ನೆರಳು ಚಿತ್ರಗಳು

ವಸ್ತುಗಳನ್ನು ಚಿತ್ರಿಸುವಾಗ ಅವುಗಳ ಆಕೃತಿ/ರಚನಾ ಪ್ರಜ್ಞೆ ಮಕ್ಕಳಿಗೆ ಲಭಿಸಬೇಕಾದ ಮೊದಲ ತಿಳುವಳಿಕೆಯಾಗಿದೆ. ಪ್ರತಿಯೊಂದು ವಸ್ತು ಪ್ರಾಥಮಿಕವಾಗಿ ಅದರ ಆಕೃತಿ ಮತ್ತು ರಚನೆಯಲ್ಲಿ ಭಿನ್ನವಾಗಿರುವುದು. ಈ ಒಂದು ತಿಳುವಳಿಕೆ ಮಕ್ಕಳಿಗೆ ಲಭಿಸುವ ರೀತಿಯಲ್ಲಿ ನೆರಳು ಚಿತ್ರ ನಿರ್ಮಾಣದಲ್ಲಿ ಮಕ್ಕಳು ನಿರತರಾಗಬೇಕು.

### ಕಲಿಕಾ ಸಾಧನೆ

ನೆರಳು ಚಿತ್ರಗಳನ್ನು ತಯಾರಿಸುವುದು.

### ಆಶಯ/ತಿಳುವಳಿಕೆ


- ಎಲ್ಲ ವಸ್ತುಗಳು ಆಕೃತಿಯಲ್ಲಿಯೂ ರಚನೆಯಲ್ಲಿಯೂ ಭಿನ್ನವಾಗಿವೆ.
- ನೆರಳು ಚಿತ್ರಗಳು ವಸ್ತುವಿನ ಮೇಲ್ಮೈಯಲ್ಲಿರುವ ವಿಚಾರಗಳನ್ನು ಸ್ಪಷ್ಟಪಡಿಸುವುದಿಲ್ಲ.
- ವಸ್ತುಗಳ ಆಕೃತಿ ಒಂದೇ ಬಣ್ಣದಲ್ಲಿ ಕಾಣಿಸುವುದು.

### ನೈಪುಣ್ಯ

- ಮಕ್ಕಳು ನೆರಳು ಚಿತ್ರಗಳನ್ನು ತಯಾರಿಸಲು ಅವುಗಳ ಆಕೃತಿಯನ್ನು ಸೂಕ್ಷ್ಮವಾಗಿ ಅರ್ಥೈಸಿಕೊಳ್ಳುವುದು.
- ನೆರಳು ಚಿತ್ರಗಳನ್ನು ತಯಾರಿಸಲಿರುವ ಸಾಮರ್ಥ್ಯ.

### ಕಲಿಕಾ ಚಟುವಟಿಕೆಗಳು

ಕೆಲವು ನೆರಳು ಚಿತ್ರಗಳನ್ನು ತಯಾರಿಸುವುದು.



- ಈ ರೀತಿಯ ಚಿತ್ರಗಳ ವಿಶೇಷತೆಗಳೇನು?
- ವಿಷಯದ ಆಶಯಗಳನ್ನು ಆಧಾರವಾಗಿರಿಸಿ ಅಧ್ಯಾಪಕರು ಕ್ರೋಡೀಕರಿಸುವುದು.
- ನೆರಳು ಚಿತ್ರಗಳನ್ನು ಹೇಗೆ ರೂಪೀಕರಿಸಬಹುದು?
  - ವಸ್ತುವಿನ ರೂಪುರೇಖೆಗಳನ್ನು ರಚಿಸಿ ಕತ್ತರಿಸಿ ತೆಗೆದು ಅಂಟಿಸಬಹುದು.
  - ತಯಾರಿಸಿದ ಚಿತ್ರಗಳನ್ನು ಪ್ರದರ್ಶಿಸುವುದು.
  - ಸ್ವತಃ ಮೌಲ್ಯಮಾಪನ ನಡೆಸುವುದು.

## ಮೌಲ್ಯಮಾಪನ

ಪರಸ್ಪರ ಮೌಲ್ಯಮಾಪನ

ಮಕ್ಕಳು ರಚಿಸಿದ ನೆರಳು ಚಿತ್ರಗಳನ್ನು ಕೆಳಗೆ ಕೊಟ್ಟಿರುವ ಸೂಚಕಗಳ ಆಧಾರದಲ್ಲಿ ಮೌಲ್ಯಮಾಪನ ಮಾಡುವರು.

ಮೌಲ್ಯಮಾಪನ ಸೂಚಕಗಳು

- ರೂಪಸಾದೃಶ್ಯ
- ಆಕೃತಿಯ ಸೂಕ್ಷ್ಮತೆ.

## ಗಳಿಸಬಹುದಾದ ಕಲಿಕಾ ಸಾಧನೆಗಳು

ಕೆಳಗೆ ಕೊಟ್ಟಿರುವ ಕಲಿಕಾ ಹಿರಿಮೆಗಳನ್ನು ಗಳಿಸಲು ಎಷ್ಟರ ಮಟ್ಟಿಗೆ ಸಾಧ್ಯವಾಗಿದೆ.?

- ನೆರಳು ಚಿತ್ರಗಳನ್ನು ತಯಾರಿಸುವ ಸಾಮರ್ಥ್ಯವನ್ನು ಗಳಿಸುವುದು.

# ಯೂನಿಟ್ – 4 : ಪೋಸ್ಟರ್ ತಯಾರಿ

ಪ್ರಸ್ತುತ ಘಟನೆಗಳು, ಸಾರ್ವಜನಿಕ ಸಮಸ್ಯೆಗಳು ಮತ್ತು ಜನರ ಒಳಿತಿಗಾಗಿ ಪ್ರತಿಕ್ರಿಯಿಸುವುದು ಒಂದು ಸಾಂಸ್ಕೃತಿಕ – ಸಾಮಾಜಿಕ ಚಟುವಟಿಕೆಯಾದರೆ ಕಲೆಯ ಮೂಲಕ ಪ್ರತಿಕ್ರಿಯಿಸುವುದು ಕಲಾ ಚಟುವಟಿಕೆಯ ಗುರಿಯಾಗಿದೆ.

## ಕಲಿಕಾ ಚಟುವಟಿಕೆಗಳು

ಪ್ರಸ್ತುತ ಘಟನೆಗಳು ಸಾರ್ವಜನಿಕ ಸಮಸ್ಯೆಗಳು, ಪ್ರಸಕ್ತ ವಲಯಗಳು ಎಂಬಿವುಗಳನ್ನು ಕೇಂದ್ರೀಕರಿಸಿ ಪೋಸ್ಟರ್ ತಯಾರಿಸುವುದು.

## ಆಶಯ ತಿಳುವಳಿಕೆ

- ಒಂದು ಬಣ್ಣದಲ್ಲಿ ಹಾಗೂ ಹಲುವು ಬಣ್ಣಗಳಲ್ಲಿ ಪೋಸ್ಟರ್ ತಯಾರಿಸುವುದು.
- ಚಿತ್ರಗಳನ್ನು ರಚಿಸಿ ಕತ್ತರಿಸಿ ಹಾಗೂ ಅಂಟಿಸಿ ಪೋಸ್ಟರ್ ತಯಾರಿಸಬಹುದು.


## ನೈಪುಣ್ಯ

- ಪೋಸ್ಟರ್ ತಯಾರಿಸುವ ಸಾಮರ್ಥ್ಯ.

## ಕಲಿಕಾ ಚಟುವಟಿಕೆಗಳು

- ಪ್ರಸಕ್ತವಾದ ಪೋಸ್ಟರ್ ರಚನೆಗಿರುವ ಸಾಧ್ಯತೆಗಳಿರದ ಪತ್ರಿಕಾ ವಾರ್ತೆಗಳ ಕುರಿತು ಚರ್ಚಿಸುವುದು.
- ಸಮಾಜದ ಒಳಿತಿನ ಕಡೆಗೆ ಚರ್ಚೆಗಳನ್ನು ಕೊಂಡೊಯ್ಯುವುದು.
- ಪ್ರತಿಕ್ರಿಯೆಯಾಗಿ ಒಂದು ಪೋಸ್ಟರ್ ತಯಾರಿಸಿದರೆ ಹೇಗೆ?
- ಹೇಗೆ  ಪೋಸ್ಟರ್ ತಯಾರಿಸಬಹುದು ?
- ಪದಗಳು  / ವಾಕ್ಯಗಳು , ಚಿತ್ರಗಳು ಎಂಬಿವುಗಳು ಅಗತ್ಯ.




- ಪೋಸ್ಟರ್ ನ ಮನೋಚಿತ್ರಣವನ್ನು ರೂಪೀಕರಿಸಲಿರುವ ಚರ್ಚೆ
- ಪೋಸ್ಟರ್  ನಿರ್ಮಾಣ ಹಂತದ ಕಡೆಗೆ
- ಪೋಸ್ಟರ್ ತಯಾರಿಸುವರು ಬಣ್ಣ ಕೊಡುವರು
- ಪ್ರದರ್ಶನ ಸ್ವ–ಮೌಲ್ಯಮಾಪನ

## ಮೌಲ್ಯಮಾಪನ

ಕೆಳಗೆ ಕೊಟ್ಟಿರುವ ಸೂಚಕಗಳ ಆಧಾರದಲ್ಲಿ ಮೌಲ್ಯಮಾಪನ ನಡೆಸುವುದು.

ಮಾಲ್ಯಮಾಪನ ಸೂಚಕಗಳು

- ಆಶಯ ಪ್ರಕಟಣಾ ದಕ್ಷತೆ.
- ವರ್ಣಪ್ರಜ್ಞೆ
- ವಿನ್ಯಾಸ
- ಸಂಯೋಜನೆ
- ಶೈಲಿ

**ಗಳಿಸಬಹುದಾದ ಕಲಿಕಾ ಸಾಮರ್ಥ್ಯಗಳು**

*ಕೆಳಗೆ ಕೊಟ್ಟಿರುವ ಕಲಿಕಾ ಹಿರಿಮೆಗಳನ್ನು ಗಳಿಸಲು ಎಷ್ಟರ ಮಟ್ಟಿಗೆ ಸಾಧ್ಯವಾಗಿದೆ.*

- ಪೋಸ್ಟರ್ ತಯಾರಿಸುವ ಸಾಮರ್ಥ್ಯವನ್ನು ಗಳಿಸುವುದು.
- ಪ್ರಸ್ತುತ ಘಟನೆಗಳಿಗೆದುರಾಗಿ ಪೋಸ್ಟರ್‌ನ ಮೂಲಕ ಪ್ರತಿಕ್ರಯಿಸುವುದು.

## ಯೂನಿಟ್ –5 : ಆಕೃತಿ ರಚನೆ

ಚಿತ್ರ ರಚನೆಗೆ ವಿವಿಧ ವಿಧಾನಗಳನ್ನು ಉಪಯೋಗಿಸುತ್ತಾರೆ. ಅದರಲ್ಲೊಂದು ಒಣಗಿದ ಅಥವಾ ಹಸಿ ಎಲೆಗಳನ್ನು ಅಂಟಿಸಿ ತಯಾರಿಸುವ ಚಿತ್ರಗಳಾಗಿವೆ. ಕ್ರಯೋನ್ಸ್, ಕಲರ್ ಪೆನ್ಸಿಲ್ ಎಂಬಿವುಗಳನ್ನು ಉಪಯೋಗಿಸಿ ಚಿತ್ರಗಳನ್ನು ಹೆಚ್ಚು ಆಕರ್ಷಕಗೊಳಿಸಬಹುದು. ಈ ರೀತಿ ವಿವಿಧ ರಚನಾ ವಿಧಾನಗಳನ್ನು ಪರಿಚಯಿಸುವುದರಿಂದ ಅವುಗಳ ಸೃಜನಶೀಲತೆ ಹೆಚ್ಚುವುದರೊಂದಿಗೆ ಚಿತ್ರರಚನೆಯತ್ತ ಆಕರ್ಷಿಸಲಿಕ್ಕೂ ಸಹಾಯಕವಾಗುವುದು. ಸರಳವಾದ ಪ್ರಯತ್ನದಿಂದ ಅಂದವಾದ ಹಾಗೂ ಪೂರ್ಣತೆಯುಳ್ಳ ಚಿತ್ರರಚನೆ ಮಾಡಬಹುದೆಂಬುವುದು ಈ ರೀತಿಯ ಚಿತ್ರಗಳ ಹಿರಿಮೆಯಾಗಿದೆ.

### ಕಲಿಕಾ ಸಾಧನೆ

ಎಲೆಗಳನ್ನು ಜೋಡಿಸಿ ಮೃಗ ಪಕ್ಷಿಗಳ ಆಕೃತಿಗಳನ್ನು ರಚಿಸುವುದು.

### ಆಶಯ ತಿಳುವಳಿಕೆ

- ಒಣಗಿದ ಅಥವಾ ಹಸಿಯಾದ ಎಲೆಗಳಿಂದ ಸುಲಭವಾಗಿ ಚಿತ್ರರಚನೆ ಮಾಡಬಹುದು.
- ಪಕ್ಷಿಗಳು ಮತ್ತು ಪ್ರಾಣಿಗಳ ಆಕೃತಿ ಮತ್ತು ಬಣ್ಣಗಳಿವೆ. ಕೆಲವು ಎಲೆಗಳ ಆಕೃತಿ ಮತ್ತು ಬಣ್ಣದೊಂದಿಗೆ ಸಾಮ್ಯವಿದೆ.
- ಕ್ರಯೋನ್, ಕಲರ್ ಪೆನ್ಸಿಲ್‌ಗಳು ಎಂಬಿವುಗಳನ್ನು ಉಪಯೋಗಿಸಿದ ಅಂದವಾದ ಹಾಗೂ ಪೂರ್ಣತೆಯುಳ್ಳ ಚಿತ್ರಗಳನ್ನು ಸುಲಭವಾಗಿ ರಚಿಸಬಹುದು.
- ಎಲೆಗಳು ಮತ್ತು ಪ್ರಾಣಿಪಕ್ಷಿಗಳ ಹೋಲಿಕೆಗಳನ್ನು ಕಂಡುಹಿಡಿಯುವ ಸಾಮರ್ಥ್ಯ.
- ಸೃಜನಾತ್ಮಕವಾಗಿ ಎಲೆಗಳನ್ನು ವಿನ್ಯಾಸಗೊಳಿಸುವ ಸಾಮರ್ಥ್ಯ.

### ಕಲಿಕಾ ಚಟುವಟಿಕೆಗಳು

- ಕೆಲವು ಎಲೆಗಳನ್ನು ನಿರೀಕ್ಷಣೆ ಮಾಡುವುದು.
- ಯಾವುದಾದರೂ ಪಕ್ಷಿ ಅಥವಾ ಪ್ರಾಣಿಯ ಆಕಾರವನ್ನು ಈ ಎಲೆಯಲ್ಲಿ ಕಾಣಲು ಸಾಧ್ಯವಾಗುತ್ತಿದೆಯೇ?

- ಅವುಗಳ ರೇಖಾಚಿತ್ರವನ್ನು ಬಿಡಿಸಿದ ಬಳಿಕ ಎಲೆಗಳನ್ನು ಅವುಗಳ ಒಳಗೆ ಅಂಟಿಸುವುದು.
- ಹೊರರೇಖೆಗಳು (ಔಟ್‌ಲೈನ್ಸ್) ವಿವರಗಳು ಎಂಬಿವುಗಳನ್ನು ಕ್ರಯೋನ್ಸ್, ಕಲರ್ ಪೆನ್ಸಿಲ್ ಎಂಬಿವುಗಳನ್ನು ಉಪಯೋಗಿಸಿ ಗುರುತಿಸುವುದು. ಹಿನ್ನಲೆಯನ್ನೂ ರಚಿಸಬಹುದು.
- ತರಗತಿಯ ಆರ್ಟ್ ಗ್ಯಾಲರಿಯಲ್ಲಿ ಪ್ರದರ್ಶಿಸುವುದು.
- ಸ್ವತಃ ಮೌಲ್ಯಮಾಪನ ನಡೆಸುವುದು. ಪರಸ್ಪರ ಮೌಲ್ಯಮಾಪನ ನಡೆಸುವುದು.

**ಮೌಲ್ಯಮಾಪನ**

ಕೆಳಗೆ ಕೊಟ್ಟಿರುವ ಸೂಚಕಗಳನ್ನು ಉಪಯೋಗಿಸಿ ಅಧ್ಯಾಪಕರ ಮೌಲ್ಯಮಾಪನ

ಮೌಲ್ಯಮಾಪನ ಸೂಚಕಗಳು

- ಸಮಗ್ರತೆ, ಸೌಂದರ್ಯಪ್ರಜ್ಞೆ, ರೂಪಪ್ರಜ್ಞೆ.
- ಯೋಗ್ಯವಾದ ಆಕೃತಿ, ಬಣ್ಣ ಎಂಬಿವುಗಳನ್ನು ಕಂಡುಹಿಡಿಯುವ ಸಾಮರ್ಥ್ಯ.
- ಪೂರ್ಣತೆ.

**ಗಳಿಸಬಹುದಾದ ಕಲಿಕಾ ಹಿರಿಮೆಗಳು**

*ಕೆಳಗೆ ಕೊಟ್ಟಿರುವ ಕಲಿಕಾ ಹಿರಿಮೆಗಳನ್ನು ಗಳಿಸಲು ಎಷ್ಟರ ಮಟ್ಟಿಗೆ ಸಾಧ್ಯವಾಯಿತು ?*

- ವಿವಿಧ ರೀತಿಯ ಎಲೆಗಳನ್ನು ಕಾಗದದಲ್ಲಿ ಜೋಡಿಸಿ, ಅಂಟಿಸಿ ಚಿತ್ರರಚನೆ ಮಾಡುವುದು.

# ನಾಲ್ಕನೇ ತರಗತಿ

## ಯೂನಿಟ್ 1 : ಚಿತ್ರೀಕರಣ (Illustration)

ಆಶಯಗಳ ಚಿತ್ರೀಕರಣವು ಸೃಜನಾತ್ಮಕ ಬೆಳವಣಿಗೆಗೆ ಅತ್ಯಂತ ಸೂಕ್ತವಾದ ಶೈಲಿಯಾಗಿದೆ. ಆಶಯ ರೂಪೀಕರಣ ಹಾಗೂ ಮನೋಚಿತ್ರಣ ರೂಪೀಕರಣಕ್ಕೆ ಈ ರೀತಿಯ ಚಟುವಟಿಕೆಗಳ ಪಾತ್ರ ಅವಶ್ಯವಾದುದಾಗಿದೆ. ಕತೆ ಕವಿತೆಗಳನ್ನು ಓದಿ ಅದರಲ್ಲಿರುವ ಪ್ರಧಾನ ಸಂದರ್ಭಗಳನ್ನು ಚಿತ್ರೀಕರಿಸಲಿಕ್ಕಿದೆ. ಕತೆ ಮತ್ತು ಕವಿತೆಗಳನ್ನು ಆಸ್ವಾದಿಸಲು ಮತ್ತು ಅದರಲ್ಲಿರುವ ಸನ್ನಿವೇಶಗಳನ್ನು ಮನೋಚಿತ್ರಣವನ್ನು ರೂಪೀಕರಿಸಲು ಈ ಪ್ರಕ್ರಿಯೆ ಸಹಾಯಕವಾದುದು.

### ಕಲಿಕಾ ಸಾಧನೆ

ಕತೆ ಮತ್ತು ಕವಿತೆಗಳನ್ನು ಓದಿ ಆಶಯ, ಸಂದರ್ಭ ಚಿತ್ರೀಕರಣ ನಡೆಸುವರು.

### ಆಶಯ ತಿಳುವಳಿಕೆ

- ಚಿತ್ರ ರಚನೆಗಿಂತ ಮೊದಲು ಮನೋಚಿತ್ರಣ ರೂಪೀಕರಣ ನಡೆಯಬೇಕು.
- ಕತೆ, ಕವಿತೆ ಎಂಬಿವುಗಳ ಪ್ರಧಾನ ಸಂದರ್ಭಗಳನ್ನು ಚಿತ್ರೀಕರಿಸಬಹುದಾಗಿದೆ.
- ಸಂದರ್ಭಕ್ಕೆ ತಕ್ಕುದಾದ ಕಥಾಪಾತ್ರ ರಚನೆ ಮತ್ತು ಹಿನ್ನಲೆಯನ್ನು ಉಪಯೋಗಿಸಿ ಚಿತ್ರರಚನೆ ನಡೆಸುವರು.

### ಕಲಿಕಾ ಚಟುವಟಿಕೆಗಳು

- ಒಂದು ಚಿಕ್ಕ ಕತೆ, ಕವಿತೆಯ ಭಾಗವನ್ನು ಮಕ್ಕಳಿಗೆ ಓದಲು ನೀಡುವುದು.
- ಇದರಲ್ಲಿ ಅತ್ಯಂತ ಪ್ರಧಾನ ಘಟನೆ ಯಾವುದು ?
- ಆ ಸನ್ನಿವೇಶದಲ್ಲಿ ಕಥಾಪಾತ್ರಗಳು ಏನು ಮಾಡುತ್ತಿದ್ದಾರೆ ?
- ಆ ಕಥಾಪಾತ್ರದ ಹತ್ತಿರ ಯಾರು ಯಾರು ಇದ್ದಾರೆ ?
- ಅವರೇನು ಮಾಡುತ್ತಿದ್ದಾರೆ ?
- ಆ ಸಂದರ್ಭದಲ್ಲಿ ಸುತ್ತುಮುತ್ತಲಿನಲ್ಲಿ ಯಾರಿದ್ದಾರೆ ? ಏನೆಲ್ಲ ಇದೆ ?
- ಆ ಸನ್ನಿವೇಶವನ್ನು ಮನಸ್ಸಿನಲ್ಲಿ ಯೋಚಿಸಿರಿ
- ಆ ಸನ್ನಿವೇಶವನ್ನು ರಚಿಸೋಣ.
- ಎಲ್ಲರೂ ನೋಟ್ ಪುಸ್ತಕದಲ್ಲಿ ರಚಿಸಿರಿ.
- ಮಂಡನೆ ಕೊನೆಗೆ ಆಸ್ವಾದಕರು ರಚಿಸಿ ತೋರಿಸುವರು.

**ಮೌಲ್ಯಮಾಪನ**

ಚಿತ್ರಗಳನ್ನು ಪರಸ್ಪರ ವರ್ಗಾಯಿಸಿ ನೋಡುವರು. ಪರಸ್ಪರ ಮೌಲ್ಯಮಾಪನ. ಕೆಳಗೆ ಕೊಟ್ಟಿರುವ ಸೂಚಕಗಳನ್ನು ಉಪಯೋಗಿಸಿ ಅಧ್ಯಾಪಕರು ಮೌಲ್ಯಮಾಪನ ನಡೆಸುವರು.

ಮೌಲ್ಯಮಾಪನ ಸೂಚಕಗಳು

- ಮಂಡನಾ ಶೈಲಿ
- ಸಂದರ್ಭಗಳನ್ನು ಕಂಡುಹಿಡಿಯುವುದು.
- ಕಥಾಪಾತ್ರಗಳ ಚಿತ್ರೀಕರಣ ಕೌಶಲ್ಯ
- ಬಣ್ಣದ ಶೈಲಿ
- ಸಂದರ್ಭಗಳ ಚಿತ್ರೀಕರಣ ಪೂರ್ಣತೆ

**ಗಳಿಸಬಹುದಾದ ಕಲಿಕಾ ಹಿರಿಮೆಗಳು**

ಕೆಳಗೆ ಕೊಟ್ಟಿರುವ ಕಲಿಕಾ ಹಿರಿಮೆಗಳನ್ನು ಗಳಿಸಲು ಎಷ್ಟರ ಮಟ್ಟಿಗೆ ಸಾಧ್ಯವಾಗಿದೆ. ?

- ಕತೆಗಳು ಕವಿತೆಗಳನ್ನು ಆಧಾರವಾಗಿರಿಸಿ ಚಿತ್ರ ರಚಿಸುವುದು.

## ಯೂನಿಟ್ 2 : ಕವಿತೆಗಳನ್ನು ಆಧಾರವಾಗಿರಿಸಿ ಚಿತ್ರ ರಚಿಸುವುದು

ಪ್ರಾಕೃತಿಕ ವಸ್ತುಗಳ ನೈಜತೆ ನಷ್ಟವಾಗದೆಯೇ ಅವುಗಳನ್ನು ಚಿತ್ರೀಕರಸಲು ಮಕ್ಕಳಿಗೆ ಅವಕಾಶ ನೀಡಬೇಕಾದುದು ಅನಿವಾರ್ಯವಾಗಿದೆ. ಅವುಗಳನ್ನು ತಿಳಿಯಲು ಹಾಗೂ ಚಿತ್ರೀಕರಿಸಲು ಅವಕಾಶ ನೀಡುವುದರಿಂದ ವಿದ್ಯಾರ್ಥಿಯ ವಿವಿಧ ಸಾಮರ್ಥ್ಯಗಳನ್ನು ವಿಕಾಸಗೊಳಿಸಲು ಸಂದರ್ಭ ಲಭಿಸುವುದು.

**ಕಲಿಕಾ ಸಾಧನೆ**

ಪ್ರಕೃತಿ ದೃಶ್ಯಗಳನ್ನು ರಚಿಸಿ ಬಣ್ಣ ಕೊಡುವುದು.

**ಆಶಯ ತಿಳುವಳಿಕೆ**

ವಿವಿಧ ಮಾಧ್ಯಮಗಳ ಕುರಿತು ಮಕ್ಕಳಿಗೆ ತಿಳುವಳಿಕೆ ಲಭಿಸಬೇಕು. ಚಿತ್ರ ಘಟಕಗಳ ಸಹಜತೆ ಮತ್ತು ನೈಜತೆ ರಚನಾತ್ಮಕವಾಗಿ ಪ್ರಕೃತಿಯೊಂದಿಗೆ ಸಂಬಂಧವನ್ನು ಹೊಂದಿದೆ. ಪ್ರಾಕೃತಿಕ ವಸ್ತುಗಳಿಗೆ ವಿಭಿನ್ನ ರೂಪ, ಬಣ್ಣ ಮತ್ತು ಆಕೃತಿ ಇರುವುದು. ವಸ್ತುಗಳನ್ನು ಗುರುತಿಸಲು ಬಣ್ಣಗಳು, ಆಕೃತಿ ಎಂಬಿವುಗಳು ಸಹಾಯವಾಗುತ್ತದೆ. ಬಾಗಿದ ನೆಟ್ಟಗಿರುವ ಹಾಗೂ ಓರೆಯಾಗಿರುವ ಮಾನವ ನಿರ್ಮಿತ ವಸ್ತುಗಳು ಪ್ರಕೃತಿಯಲ್ಲಿವೆ ಎಂಬ ತಿಳುವಳಿಕೆ ಮಕ್ಕಳಿಗೆ ಉಂಟಾಗಬೇಕು..

**ಕಲಿಕಾ ಚಟುವಟಿಕೆಗಳು**

**ಹಂತ – 1**

ಪ್ರಾಕೃತಿಕ ವಸ್ತುಗಳ ಕುರಿತಾತದ ಚರ್ಚೆ ಮತ್ತು ನಿರೀಕ್ಷಣೆ ನಡೆಸುವುದು. ಸಾಮಾನ್ಯವಾಗಿ

ಕಾಣುವ ವಸ್ತುಗಳು ಮತ್ತು ಅನಿರೀಕ್ಷಿತವಾಗಿ ಕಾಣಸಿಗುವ ವಸ್ತುಗಳನ್ನು ವಿಂಗಡಿಸುವುದು. ನಿಶ್ಚಲವಾಗಿರುವ ಹಾಗೂ ಚಲಿಸುವ ಚಿಕ್ಕ ಹಾಗೂ ದೊಡ್ಡ ವಸ್ತುಗಳನ್ನು ವರ್ಗೀಕರಿಸುವುದು. ಬಣ್ಣಗಳ ಕುರಿತು ಚರ್ಚೆ ಮತ್ತು ಅಧ್ಯಯನ ನಡೆಸುವುದು. ಚಿತ್ರ ಸಂಗ್ರಹ ಉತ್ತಮವಾದ ಚಟುವಟಿಕೆ ಎಂದು ಮಕ್ಕಳು ತಿಳಿಯಬೇಕು. ವಿವಿಧ ಬಣ್ಣಗಳಿವೆಯೆಂಬ ತಿಳುವಳಿಕೆಯೂ ಉಂಟಾಗಬೇಕು .

**ಹಂತ –2**

ಹೊರಗಿನಿಂದ ಸಂಗ್ರಹಿಸುವ ಉಪಯೋಗಿಸಬಹುದಾದ ವಸ್ತುಗಳನ್ನು ಸಂಗ್ರಹಿಸುವರು. ತರಗತಿಗೆ ತಂದು ಅಧ್ಯಾಪಕರ ಸಹಾಯದಿಂದ ನಿರೀಕ್ಷಣೆ ಒಳಪಡಿಸುವರು. ವಿಶ್ಲೇಷಣೆ ಮತ್ತು ಚರ್ಚೆ ನಡೆಸುವುದು. ಮಕ್ಕಳೇ ಚಿತ್ರರಚನೆಯಲ್ಲಿ ನಿರರಾಗುವರು. ಯಾವುದೇ ಮಾದ್ಯಮವನ್ನು ಅವರು ಉಪಯೋಗಿಸಲಿ. .

*ರಚಿಸಿದ ಚಿತ್ರದ ಕುರಿತು ವಿವರವಾದ ಚರ್ಚೆಯನ್ನು ನಡೆಸುವರು.*

- ತರಗತಿಯಲ್ಲಿ ಪ್ರದರ್ಶಿಸುವರು
- ಮೌಲ್ಯಮಾಪನ ನಡೆಸುವರು
- ಉತ್ತಮಗೊಳಿಸುವರು
- ಆಲ್ಬಂ ತಯಾರಿಸುವರು

***ಹಂತ –3***

- ಅಧ್ಯಾಪಕರು ಮಕ್ಕಳೊಂದಿಗೆ ಚಟುವಟಿಕೆಯಲ್ಲಿ ನಿರತರಾಗುವುದು.
- ಅನುಭವಗಳನ್ನು ಹಂಚಿಕೊಳ್ಳುವುದು
- ಹಿರಿಮೆಗಳನ್ನು ಮೌಲ್ಯಮಾಪನ ಮಾಡುವುದು
- ಎದುರಾದ ತೊಂದರೆಗಳ ಕುರಿತು ಚರ್ಚಿಸುವುದು.
- ಪರಿಹಾರೋಪಾಯಗಳನ್ನು ರೂಪೀಕರಿಸುವುದು.
- ಯಥಾರ್ಥ ವಸ್ತುವಿನೊಂದಿಗೆ ರಚಿಸಿದ ಚಿತ್ರಕ್ಕಿರುವ ಹೋಲಿಕೆಯ ಕುರಿತು ಚರ್ಚಿಸುವುದು .

**ಹಂತ – 4**

ಮನೆಯ ಪರಿಸರವನ್ನು ನಿರೀಕ್ಷಣೆ ಮಾಡಿ ಚಿತ್ರೀಕರಣ ನಡೆಸಲು ಹೇಳುವುದು. ಪ್ರದರ್ಶಿಸಿ ಮೌಲ್ಯಮಾಪನ ನಡೆಸುವುದು.

## ಮೌಲ್ಯಮಾಪನ

ಚಿತ್ರಗಳನ್ನು ಪರಸ್ಪರ ವೀಕ್ಷಿಸುವರು. ಪರಸ್ಪರ ಮೌಲ್ಯಮಾಪನ. ಕೆಳಗೆ ಕೊಟ್ಟಿರುವ ಸೂಚಕಗಳನ್ನು ಉಪಯೋಗಿಸಿ ಅಧ್ಯಾಪಕರು ಮೌಲ್ಯಮಾಪನ ನಡೆಸುವರು.

ಮೌಲ್ಯಮಾಪನ ಸೂಚಕಗಳು

- ರಚನಾಮಾಧ್ಯಮ
- ರಚನಾವಿಧಾನ
- ಯೋಗ್ಯವಾದ್ದೆಂದು ತೋರುವ ವಸ್ತುಗಳನ್ನು ಆಯ್ಕೆಮಾಡುವುದು
- ನಿರೀಕ್ಷಣಾ ಕೌಶಲ್ಯ
- ಸಾಮ್ಯ, ವರ್ಣಪ್ರಜ್ಞೆ
- ಪರಿಸರದೊಂದಿಗಿನ ಸಂಬಂಧ

**ಗಳಿಸಬೇಕಾದ ಕಲಿಕಾ ಹಿರಿಮೆಗಳು**

*ಕೆಳಗೆ ಕೊಟ್ಟಿರುವ ಕಲಿಕಾ ಹಿರಿಮೆಗಳನ್ನು ಗಳಿಸಲು ಎಷ್ಟರ ಮಟ್ಟಿಗೆ ಸಾಧ್ಯವಾಯಿತು ?*

- ಪರಿಸರದೊಂದಿಗಿನ ಮಮತೆ
- ಕಲಿಕೆಯಲ್ಲಿ ತ್ವರಿತಗೊಳಿಸುವುದು

## ಯೂನಿಟ್ – 3 : ತ್ರಿಮಾನ ರೂಪಗಳು

ಚಿತ್ರಕ್ಕೆ ಉದ್ದ ಮತ್ತು ಅಗಲ ಮಾತ್ರವಿದ್ದರೆ ಶಿಲ್ಪಕ್ಕೆ ದಪ್ಪ ಎಂಬ ಇನ್ನೊಂದು ಆಳತೆಯೂ ಇದೆ. ಶಿಲ್ಪವನ್ನು ತಯಾರಿಸುವಾಗ ಎಲ್ಲ ಪಾರ್ಶ್ವಗಳಿಂದಿರುವ ನೋಟವನ್ನು ಕಲಿಕೆಗೆ ಒಳಪಡಿಸಬೇಕು. ಶಿಲ್ಪವನ್ನು ತಯಾರಿಸುವಾಗ ಶಿಲ್ಪಿ ಮಾಧ್ಯಮ ಮತ್ತು ವಸ್ತುಗಳೊಳಗಿನ ಅನ್ಯೋನ್ಯತೆ ಬಹಳಷ್ಟು ಪ್ರಬಲವಾಗುವುದು. ವಸ್ತುಗಳ ಆಕೃತಿಯ ಕುರಿತು ದೃಢವಾದ ತಿಳುವಳಿಕೆ ಉಂಟಾಗಲು ಶಿಲ್ಪ ನಿರ್ಮಾಣ ಸಹಾಯಕವಾಗುವುದು.

### ಕಲಿಕಾ ಸಾಧನೆ

ಆವೆಮಣ್ಣು ವೇಕ್ಸ್ ಮುಂತಾದ ಮಾಧ್ಯಮಗಳನ್ನು ಉಪಯೋಗಿಸಿ ತ್ರಿಮಾನ ರೂಪದ ವಸ್ತುಗಳನ್ನು ತಸಾರಿಸುವುದು.

### ಆಶಯ ತಿಳುವಳಿಕೆ

- ಶಿಲ್ಪವು ತ್ರಿಮಾನ ಸ್ವಭಾವ ಉಳ್ಳದ್ದಾಗಿದೆ
- ಶಿಲ್ಪವನ್ನು ತಯಾರಿಸುವಾಗ ವಸ್ತುವಿನ ನಾನಾ ಪಾರ್ಶ್ವ ಗಳಿಂದಿರುವ ಕಲಿಕೆ ಅಥವಾ ನಿರೀಕ್ಷಣೆ ಅಗತ್ಯ
- ಶಿಲ್ಪ ನಿರ್ಮಾಣಕ್ಕೆ ಆವೆ ಮಣ್ಣು, ಮರ, ಲೋಹ ಮುಂತಾದ ಪರಂಪರಾಗತ ಮಾಧ್ಯಮಗಳನ್ನು ಪ್ಲಾಸ್ಟರ್ ಆಫ್ ಪ್ಯಾರಿಸ್, ಪೇಪರ್ ಪಲ್ಪ್, ವೇಕ್ಸ್, ಫೈಬರ್ ಮುಂತಾದ ಆಧುನಿಕ ಮಾಧ್ಯಮಗಳನ್ನು ಉಪಯೋಗಿಸಬಹುದು.
- ಶಿಲ್ಪ ತಯಾರಿಸಲಿರುವ ಮಾಧ್ಯವನ್ನು ಹದಗೊಳಿಸುವುದು ಅತ್ಯಂತ ಪ್ರಧಾನವಾದ ವಿಚಾರವಾಗಿದೆ.

### ಕಲಿಕಾ ಚಟುವಟಿಕೆಗಳು

- ವಸ್ತುಗಳನ್ನು ಪಟ್ಟಿಮಾಡುವುದು
- ಮಾಡಲು ಇಷ್ಟವಿರುವ ವಸ್ತುವಿನ ಡ್ರೋಯಿಂಗ್ ತಯಾರಿಸುವುದು.
- ಶಿಲ್ಪ ತಯಾರಿಸಲಿರುವ ಮಾಧ್ಯಮವನ್ನು ತಯಾರಿಸುವುದು
- ಆವೆ ಮಣ್ಣು ಮೈದಾಹಿಟ್ಟು ಮುಂತಾದ ಮಾಧ್ಯಮಗಳನ್ನು ನೀರು ಸೇರಿಸಿ ಕಲಸಿ ಕಸ ಸೇರದಂತೆ ಹದಗೊಳಿಸಬೇಕು.

- ಶಿಲ್ಪವನ್ನು ತಯಾರಿಸುವುದು ಕಿತ್ತು ತೆಗೆಯಲು ಸಾಧ್ಯವಾಗುವ ರೀತಿಯಲ್ಲಿ ಗಟ್ಟಿಯಾದ ಕಾರ್ಡ್ ಬೋರ್ಡ್ ಅಥವಾ ರಟ್ಟಿನ ತುಂಡಿನ ಮೇಲೆ ಶಿಲ್ಪವನ್ನು ನಿರ್ಮಿಸಬೇಕು
- ಶಿಲ್ಪಗಳನ್ನು ಪ್ರದರ್ಶಿಸುವುದು. ಸ್ವತಃ / ಪರಸ್ಪರ ಮೌಲ್ಯಮಾಪನ ನಡೆಸುವುದು
- ಪರಸ್ಪರ ಮೌಲ್ಯಮಾಪನದ ಬಳಿಕ ಶಿಲ್ಪದ ಕುಂದುಕೊರತೆಗಳನ್ನು ನಿವಾರಿಸಿ ಪೂರ್ತಿಗೊಳಿಸಲು ಅಥವಾ ಹೊಸ ಶಿಲ್ಪವನ್ನು ನಿರ್ಮಿಸಲು ಅವಕಾಶ ಒದಗಿಸಬಹುದು.

**ಮೌಲ್ಯಮಾಪನ**

ಕೆಳಗೆ ಕೊಟ್ಟಿರುವ ಸೂಚಕಗಳ ಆಧಾರದಲ್ಲಿ ಮೌಲ್ಯಮಾಪನ ನಡೆಸುವರು.

- ನಿರ್ಮಾಣದ ಎಲ್ಲಾ ಹಂತಗಳಲ್ಲಿ ಮೌಲ್ಯಮಾಪನ
- ಮಾಧ್ಯಮವನ್ನು ಹದಗೊಳಿಸುವುದು
- ನಿರ್ಮಾಣ ಕೌಶಲ್ಯ
- ಯಥಾರ್ಥ ವಸ್ತುವಿನೊಂದಿಗಿನ ಹೋಲಿಕೆ

**ಗಳಿಸಬಹುದಾದ ಕಲಿಕಾ ಹಿರಿಮೆಗಳು**

ಕೆಳಗೆ ಕೊಟ್ಟಿರುವ ಕಲಿಕಾ ಹಿರಿಮೆಗಳನ್ನು ಗಳಿಸಲು ಎಷ್ಟರ ಮಟ್ಟಿಗೆ ಸಾಧ್ಯವಾಯಿತು ?

- ತ್ರಿಮಾನ ರೂಪಗಳನ್ನು ನಿರ್ಮಿಸಲಿಕ್ಕಿರುವ ಸಾಮರ್ಥ್ಯ ಗಳಿಸುವುದು.

## ಯೂನಿಟ್ – 4 : ಕೊಲಾಷ್ ಚಿತ್ರಗಳು

ಚಿತ್ರ ರಚನೆಗೆ ಉಪಯೋಗಿಸುವ ವಿವಿಧ ಮಾಧ್ಯಮಗಳಲ್ಲೊಂದು ಕೊಲಾಷ್ ಆಗಿದೆ. ನಿರುಪಯುಕ್ತ ವಸ್ತುಗಳ ತುಂಡುಗಳನ್ನು ಹರಿದು ತೆಗೆದು ಅಥವಾ ಕತ್ತರಿಸಿ ತೆಗೆದು ಚಿತ್ರಕ್ಕೆ ಅಗತ್ಯವಾದ ಬಣ್ಣಗಳಿಗನುಸಾರವಾಗಿ ಅಂಟಿಸಿ ಚಿತ್ರವನ್ನು ಪೂರ್ತಿಗೊಳಿಸುವುದೇ ಕೊಲಾಷ್. ನಿರುಪಯುಕ್ತ ವಸ್ತುಗಳನ್ನು ಮಾತ್ರ ಉಪಯೋಗಿಸಿ ಅಂಟಿಸಿ ತಯಾರಿಸುವ ಚಿತ್ರವಾದ ಕಾರಣ ಹಣ ಖರ್ಚಾಗುವುದಿಲ್ಲ.

**ಕಲಿಕಾ ಸಾಧನೆಗಳು**

ಕೊಲಾಷ್ ಚಿತ್ರಗಳನ್ನು ತಯಾರಿಸುವುದು.

**ಆಶಯ / ತಿಳುವಳಿಕೆ**

- ಚಿತ್ರ ರಚನೆಗೆ ಪರಂಪರಾಗದತ ವಿಧಾನಗಳು ಮಾತ್ರ ಇರುವುದಲ್ಲ
- ಮುದ್ರಣ ಮಾಧ್ಯಮಗಳ ಬಣ್ಣದ ಪುಟಗಳನ್ನು ಹರಿದು ತೆಗೆದು ಅಂಟಿಸಿ ಅಂದವಾದ ಚಿತ್ರಗಳನ್ನು ತಯಾರಿಸಬಹುದು.

- ಚಿತ್ರಕ್ಕೆ ಅಗತ್ಯವಾದ ಆಕೃತಿಗಳನ್ನು ರಚಿಸಿ ಅದಕ್ಕೆ ತಕ್ಕುದಾದ ಬಣ್ಣದ ಕಾಗದಗಳನ್ನು ಕತ್ತರಿಸಿ ತೆಗೆದು ಅಂಟಿಸಿ ಚಿತ್ರವನ್ನು ಪೂರ್ತಿಗೊಳಿಸಲಾಗುತ್ತದೆ.

**ಸಾಮರ್ಥ್ಯಗಳು**

- ಚಿತ್ರಗಳನ್ನು ರಚಿಸುವುವ ನೈಪುಣ್ಯ.
- ಯೋಗ್ಯವಾದ ಬಣ್ಣ ಹಾಗೂ ಗಾತ್ರವಿರುವ ಕಾಗದ, ಬಟ್ಟೆ ಮುಂತಾದವುಗಳನ್ನು ಕಂಡುಕೊಳ್ಳುವ ನೈಪುಣ್ಯ
- ಮನೋಚಿತ್ರಗಳನ್ನು ರೂಪೀಕರಿಸುವ ಸಾಮರ್ಥ್ಯ.

**ಕಲಿಕಾ ಚಟುವಟಿಕೆಗಳು**

- ನಿರೀಕ್ಷಣೆ ಮಾಡಲು ಮತ್ತು ವಿಶ್ಲೇಷಣೆ ನಡೆಸಲು ಒಂದೆರಡು ಕೊಲಾಷ್ ಚಿತ್ರಗಳನ್ನು ನೀಡುವುದು – ಚಿತ್ರೀಕರಣದ ರೀತಿಯನ್ನು ಪರಿಚಯಿಸುವುದು.
- ಆಶಯಕ್ಕನುಸಾರವಾಗಿ ಚಿತ್ರದ ಹೊರರೇಖೆಯನ್ನು ರಚಿಸುವುದು.
- ಯೋಗ್ಯವಾದ ಬಣ್ಣದಲ್ಲಿರುವ ಬಣ್ಣದ ಕಾಗದಗಳನ್ನು ಹೋರರೇಖೆಗಳಿಗೆ ಅನುಸಾರವಾಗಿ ಕತ್ತರಿಸಿ ಅಂಟಿಸುವುದು.
- ಕಾಗದದಲ್ಲಿ ಪೂರ್ತಿಯಾಗಿ ಈ ರೀತಿ ಅಂಟಿಸುವುದು.
- ಕೊಲಾಷ್‌ನ ಪ್ರದರ್ಶನ

**ಮೌಲ್ಯಮಾಪನ**

- ಸ್ವತಃ ಮೌಲ್ಯಮಾಪನ ನಡೆಸುವುದು
- ಪರಸ್ಪರ ಮೌಲ್ಯಮಾಪನ ನಡೆಸುವುದು.

**ಮೌಲ್ಯಮಾಪನ ಸೂಚಕಗಳು**

- ಪೂರ್ಣತೆ
- ಬಣ್ಣಗಳ ಹೊಂದಿಕೆ
- ಶುಚಿತ್ವ
- ಆಕೃತಿರೇಖೆಯ ರಚನೆಗನುಸಾರವಾಗಿ ಹರಿದು ತೆಗೆಯುವ ಸಾಮರ್ಥ್ಯ

**ಗಳಿಸಬಹುದಾದ ಕಲಿಕಾ ಹಿರಿಮೆಗಳು**

ಕೆಳಗೆ ಕೊಟ್ಟಿರುವ ಕಲಿಕಾ ಹಿರಿಮೆಗಳನ್ನು ಸ್ವಾಯತ್ತಗೊಳಿಸಲು ಎಷ್ಟರ ಮಟ್ಟಿಗೆ ಸಾಧ್ಯವಾಗಿದೆ?

- ಉಪಯೋಗ ಶೂನ್ಯವಾದ ವಸ್ತುಗಳನ್ನು ಉಪಯೋಗಿಸಿ ಅಂದವಾದ ಚಿತ್ರಗಳನ್ನು ರಚಿಸಲು ಮಕ್ಕಳಿಗೆ ಸಾಧ್ಯವಾಗುವುದು.

# ಯೂನಿಟ್ – 5 : ಪೋಸ್ಟರ್ ರಚನೆ

ಪೋಸ್ಟರ್ ನಿರ್ಮಾಣವು ಆಶಯ ಪ್ರಕಟಣೆ ಮತ್ತು ಪ್ರತಿಕ್ರಿಯೆಗೆ ಬೇಕಾಗಿರುವ ಕಲೆಯಾಗಿದೆ. ಸಾಮಾಜಿಕ ಪ್ರಶ್ನೆಗಳಿಗೆ ಪ್ರತಿಭಟಿಸಲೋ, ಒಂದು ಆಶಯವನ್ನು ಪ್ರಚಾರ ಮಾಡಲಿಕ್ಕೋ ಪೋಸ್ಟರನ್ನು ತಯಾರಿಸಬಹುದು. ಪೋಸ್ಟರ್ ತಯಾರಿಸುವಾಗ ಪ್ರಚಾರ ಮಾಡಬೇಕಾದ ಆಶಯಗಳಿಗನುಸಾರವಾಗಿ ವಾಚಕಗಳಲ್ಲೂ ಚಿತ್ರಗಳಲ್ಲೂ ಪ್ರಾಧಾನ್ಯವಿರಬೇಕು. ಯೋಗ್ಯವಾದ ಚಿತ್ರಗಳನ್ನು ಬರೆದು ಸೇರಿಸಿಯೋ ಕತ್ತರಿಸಿ ಅಂಟಿಸಿದ್ದೋ ಆಗಲಿ ಪೋಸ್ಟರನ್ನು ಸುಂದರಗೊಳಿಸಬಹುದು.

### ಕಲಿಕಾ ಸಾಧನೆ

ಆಶಯಕ್ಕನುಗುಣವಾಗಿ ಪೋಸ್ಟರ್ ನಿರ್ಮಿಸುವುದು.

### ಆಶಯ, ಧಾರಣೆ

- ಪೋಸ್ಟರ್ ಆಶಯ ಪ್ರಕಟಣೆ ಮತ್ತು ಪ್ರತಿಕ್ರಿಯೆಗಿರುವ ಮಾರ್ಗವಾಗಿದೆ.
- ಪೋಸ್ಟರನ್ನು ಏಕವರ್ಣದಲ್ಲಿಯೋ ಅನೇಕ ಬಣ್ಣಗಳಿಂದಲೋ ತಯಾರಿಸಬಹುದು.
- ಚಿತ್ರಗಳನ್ನು ರಚಿಸಿ ಅಥವಾ ಕತ್ತರಿಸಿ ಅಂಟಿಸಿ ಪೋಸ್ಟರ್ ತಯಾರಿಸಬಹುದು.

### ಸಾಮರ್ಥ್ಯಗಳು

- ಆಶಯಗಳನ್ನು ಚಿತ್ರೀಕರಿಸಲಿರುವ ಸಾಮರ್ಥ್ಯ
- ಚಿತ್ರಗಳನ್ನು ಬರೆದು ಸೇರಿಸಿ ಅಥವಾ ಕತ್ತರಿಸಿ ಅಂಟಿಸಿ ಪೋಸ್ಟರನ್ನು ಚಂದಗೊಳಿಸಲಿರುವ ಸಾಮರ್ಥ್ಯ.

### ಕಲಿಕಾ ಚಟುವಟಿಕೆಗಳು

- ಕಾಲಕಾಲಕ್ಕೆ ಸಂಭವಿಸುವ ಅನುಭವಗಳಿಗೆ ಸಂಬಂಧಿಸಿ ಪತ್ರಿಕಾವಾರ್ತೆಗಳನ್ನು ವಿಶ್ಲೇಷಿಸಿ ಚರ್ಚೆಗೆ ಒಳಪಡಿಸುತ್ತಾರೆ.
- ಆಶಯ ಪ್ರಕಟಿಸಲು ಮತ್ತು ಪ್ರತಿಕ್ರಿಯೆ ಮಾಡಲಿಕ್ಕಾಗಿ ಘೋಷಣಾವಾಕ್ಯಗಳು/ಶೀರ್ಷಿಕೆ ಎಂಬಿವುಗಳನ್ನು ತಯಾರಿಸುವುದು.
- ಘೋಷಣಾವಾಕ್ಯ ಮತ್ತು ಶೀರ್ಷಿಕೆಗಳು ಅಂದಗೊಳಿಸುವುದಕ್ಕಾಗಿ ಚಿತ್ರಗಳನ್ನು ಕಂಡುಹಿಡಿದು ಮತ್ತು ಬರೆದು ತಯಾರಿಸಿ ಪೋಸ್ಟರ್ ನಿರ್ಮಿಸುತ್ತಾರೆ.
- ಯೋಗ್ಯವಾದ ಬಣ್ಣಗಳನ್ನು ಕೊಟ್ಟು ಆಕರ್ಷಕಗೊಳಿಸುತ್ತಾರೆ.
- ತಯಾರಿಸಿದ ಪೋಸ್ಟರನ್ನು ಪ್ರದರ್ಶಿಸುತ್ತಾರೆ.
- ಮೌಲ್ಯಮಾಪನ ಮಾಡುತ್ತಾರೆ. –ಸ್ವತಃ ಮೌಲ್ಯಮಾಪನ

- ಪರಸ್ಪರ ಮೌಲ್ಯಮಾಪನ ಮಾಡಲಿಕ್ಕಾಗಿ ಅವಕಾಶ ಒದಗಿಸುವುದು

**ಮೌಲ್ಯಮಾಪನ**

- ಆಶಯ ಪ್ರಕಟಣೆಗಿರುವ ಸಾಮರ್ಥ್ಯ
- ಯೋಗ್ಯವಾದ ಘೋಷಣಾವಾಕ್ಯಗಳ ರೂಪೀಕರಣ
- ಯೋಗ್ಯವಾದ ಚಿತ್ರ
- ವರ್ಣಪ್ರಜ್ಞೆ, ಸಂಯೋಜನೆ
- ಆಕರ್ಷಣೆ.

ಗಳಿಸಬಹುದಾದ ಕಲಿಕಾ ಹಿರಿಮೆಗಳು

*ಕೆಳಗೆ ಕೊಟ್ಟಿರುವ ಕಲಿಕಾ ಹಿರಿಮೆಗಳನ್ನು ಗಳಿಸಲು ಎಷ್ಟರಮಟ್ಟಿಗೆ ಸಾಧ್ಯವಾಯಿತು ?*

- ಆಶಯಾಧಾರಿತವಾಗಿ ಪೋಸ್ಟರ್ ತಯಾರಿಸಲು ಮಕ್ಕಳಿಗೆ ಸಾಧ್ಯವಾಗುವುದು.

## ಚಿತ್ರರಚನೆಯಲ್ಲಿ ಹೆಚ್ಚು ಆಸಕ್ತಿ ಇರುವ ಮಕ್ಕಳಿಗೆ ಮಾತ್ರ ನಿಡಬೇಕಾದ ಹೆಚ್ಚುವರಿ ಚಟುವಟಿಕೆಗಳು

### ಯೂನಿಟ್ – 6 : ಶುಭಾಶಯ ಪತ್ರದ ತಯಾರಿ

ಶುಭಾಶಯ ಪತ್ರಗಳು ಇಂದು ಅತಿ ಹೆಚ್ಚು ಉಪಯೋಗಿಸಲ್ಪಡುತ್ತವೆ. ಆದರೆ ಸ್ವತಃ ತಯಾರಿಸುವುದಕ್ಕಿಂತ ಮಾರುಕಟ್ಟೆಯನ್ನು ಆಶ್ರಯಿಸುವವರೇ ಹೆಚ್ಚು. ಅದರ ಬದಲಿಗೆ ಸ್ವತಃ ರೂಪಕಲ್ಪನೆ ಮಾಡಿದ ಹೃದಯಪೂರ್ವಕ ಶುಭಾಶಯ ಪತ್ರಗಳನ್ನು ತಯಾರಿಸುವ ತರಬೇತಿ ಮಕ್ಕಳಿಗೆ ಲಭಿಸಬೇಕು. ತನ್ನದೇ ಆದ ಶೈಲಿ ವಾಕ್ಯಗಳನ್ನು ಉಪಯೋಗಿಸಿ ಇನ್ನಾರಿಗೂ ನೀಡಲು ಸಾಧ್ಯವಾಗದ ಶುಭಾಶಯಗಳ ವರ್ಗಾವಣೆ ಆ ಮೂಲಕ ಸಾಧ್ಯವಾಗುವುದು.

ಮಾರುಕಟ್ಟೆಯ ಲಾಭದೃಷ್ಟಿ ಸ್ಪರ್ಶಿಸದ ತನ್ನದೇ ಆದ ಆವಿಷ್ಕಾರ ಸಾಮರ್ಥ್ಯದ ಮೂಲಕ ಜನ್ಮವೆತ್ತುವ ಪ್ರತಿಯೊಂದು ಶುಭಾಶಯ ಪತ್ರ ಅನನ್ಯವಾದುದೆಂಬ ಮೌಲ್ಯ ಇಲ್ಲಿ ಸಂರಕ್ಷಿಸಲ್ಪಡುವುದು. ಇದನ್ನು ಸಂಸ್ಕೃತಿಯಾಗಿ ಬದಲಾಯಿಸಬೇಕು ಎಂಬುದು ಈ ಚಟುವಟಿಕೆಯ ಸಂದೇಶವಾಗಿರಬೇಕು.

**ಕಲಿಕಾ ಸಾಧನೆ**

ಶುಭಾಶಯ ಪತ್ರಗಳನ್ನು ತಯಾರಿಸುವುದು

**ಆಶಯ ತಿಳುವಳಿಕೆ**

- ಶುಭಾಶಯ ಪತ್ರಗಳನ್ನು ಸ್ವತಃ ತಯಾರಿಸಬಹುದು.
- ಅಗತ್ಯವಾದ ಚಿತ್ರಗಳನ್ನು ಅಂಟಿಸುವುದೋ ರಚಿಸುವುದೋ ಆಗಬಹುದು.
- ಕೊಲಾಷ್ ಸಾಧ್ಯತೆಗಳನ್ನು ಉಪಯೋಗಿಸಬಹುದು.

**ಸಾಮರ್ಥ್ಯಗಳು**

- ಶುಭಾಶಯ ಪತ್ರಗಳನ್ನು ಸ್ವತಃ ತಯಾರಿಸುವ ನೈಪುಣ್ಯ
- ಶುಭಾಶಯ ವಾಕ್ಯಗಳನ್ನು ಕಂಡುಹಿಡಿಯುವ ಬರೆಯುವ ಸಾಮರ್ಥ್ಯ.
- ಚಿತ್ರಗಳು, ಬಣ್ಣಗಳನ್ನು ಕೊಟ್ಟು ಶುಭಾಶಯ ಪತ್ರಗಳನ್ನು ಆಕರ್ಷಕಗೊಳಿಸುವ ನೈಪುಣ್ಯ

**ಕಲಿಕಾ ಚಟುವಟಿಕೆಗಳು**

- ವಿವಿಧ ಶುಭಾಶಯ ಪತ್ರಗಳ ರಚನೆ ಮತ್ತು ಅಲಂಕಾರಗಳನ್ನು ಪರಿಚಯಿಸುವುದು.
- ಇದಕ್ಕಿಂತ ಆಕರ್ಷಕವಾಗಿ ಶುಭಾಶಯ ಪತ್ರಗಳನ್ನು ರಚಿಸಲು ಸಾಧ್ಯವೇ ?
- ಶುಭಾಶಂಸನಾ ವಾಕ್ಯಗಳನ್ನು ತಯಾರಿಸುವುದು.
- ನಿರ್ದಿಷ್ಟ ಕಾರ್ಡ್ ಪೇಪರನ್ನು ಕತ್ತರಿಸಿ ಅದಕ್ಕೆ ಶುಭಾಶಂಸನಾ ವಾಕ್ಯಗಳನ್ನೂ ಚಿತ್ರಗಳನ್ನೂ ಅಲಂಕಾರಗಳನ್ನೂ ಸೇರಿಸುವುದು.
- ಯೋಗ್ಯವಾದ ಬಣ್ಣಗಳನ್ನು ಕೊಡುವುದು.
- ಶುಭಾಶಯ ಪತ್ರಗಳ ಪ್ರದರ್ಶನವನ್ನು ತರಗತಿಯ ಆರ್ಟ್ ಗ್ಯಾಲರಿಯಲ್ಲಿ ನಡೆಸುವುದು.

ಮೌಲ್ಯಮಾಪನ

- ಮಕ್ಕಳು ಸ್ವತಃ ಮೌಲ್ಯಮಾಪನ ನಡೆಸುವರು.
- ಸೂಚಕಗಳು
- ಶುಭಾಶಯ ಪತ್ರದ ರೂಪಕಲ್ಪನೆ ಮಾಡುವುದು
- ಯೋಗ್ಯವಾದ ವಾಕ್ಯಗಳು, ಚಿತ್ರಗಳು, ಕುಸುರಿ ಕೆಲಸಗಳು
- ಆಕರ್ಷಣೆ, ಅಚ್ಚುಕಟ್ಟು

**ಗಳಿಸಬೇಕಾದ ಕಲಿಕಾ ಹಿರಿಮೆಗಳು**

***ಕೆಳಗೆ ಕೊಟ್ಟಿರುವ ಕಲಿಕಾ ಹಿರಿಮೆಯನ್ನು ಗಳಿಸಲು ಎಷ್ಟರ ಮಟ್ಟಿಗೆ ಸಾಧ್ಯವಾಯಿತು ?***

- ಶೈಲಿಯಲ್ಲಿಯೂ ವಾಕ್ಯದಲ್ಲಿಯೂ ಸ್ವಂತಿಕೆ ಇರುವ ಶುಭಾಶಯ ಪತ್ರಗಳನ್ನು ನಿರ್ಮಿಸಲು ಮಕ್ಕಳಿಗೆ ಸಾಧ್ಯವಾಗುವುದು.

## ಯೂನಿಟ್ –7 : ಕಾರ್ಟೂನ್

ಸಮಾಜದಲ್ಲಿ ಬಹಳ ಪ್ರಸಿದ್ಧವಾದ ಹಾಗೂ ಪ್ರಬಲವಾದ ಪ್ರತಿಕ್ರಿಯೆಯ ಮಾಧ್ಯಮವು ಕಾರ್ಟೂನ್ ಆಗಿದೆ. ಪ್ರತಿಕ್ರಿಯೆಯ ಆಶಯಗಳನ್ನು ಹಾಸ್ಯಾತ್ಮಕವಾಗಿ ಚುಟುಕಾದ ರೇಖಾಚಿತ್ರಗಳ ಮೂಲಕ ಕಾರ್ಟೂನ್ ಗಳ ಓದುಗನಿಗೆ ತಲುಪಿಸುತ್ತವೆ. ಪ್ರತಿಕ್ರಿಯೆಯ ಆಶಯಗಳ ತೀಕ್ಷ್ಣತೆ ಮತ್ತು ಸರಳವಾದ ರಚನಾಶೈಲಿಯು ಕಾರ್ಟೂನ್ ಎಂಬ ಮಾಧ್ಯಮವನ್ನು ಜನಪ್ರಿಯಗೊಳಿಸಿತು. ವಿಮರ್ಶೆಗಳಿಗೆ ಹಾಸ್ಯಲೇಪನವನ್ನು ನೀಡಿ ಅದನ್ನು ವ್ಯಂಗ್ಯಚಿತ್ರಕಾರರು ಮಧುರವಾಗಿ ಪ್ರಸ್ತುತ ಪಡಿಸುತ್ತಾರೆ. ಮುದ್ರಣ ಮಾಧ್ಯಮಗಳಲ್ಲಿ ಹೆಚ್ಚು ಪ್ರಾಧಾನ್ಯದೊಂದಿಗೆ ಹಾಗೂ ಇಲೆಕ್ಟ್ರೋನಿಕ್ ಮಾಧ್ಯಮಗಳಲ್ಲಿ ಸಣ್ಣ ಪ್ರಮಾಣದಲ್ಲಿ ಕಾರ್ಟೂನ್ ಗಳನ್ನು ಉಪಯೋಗಿಸುವರು.

### ಕಲಿಕಾ ಸಾಧನೆ

ಕಾರ್ಟೂನನ್ನು ರಚಿಸುವುದು.

### ಆಶಯ ತಿಳುವಳಿಕೆ

- ಕಾರ್ಟೂನ್ ಶಕ್ತವಾದ ಪ್ರತಿಕ್ರಿಯೆಯ ಮಾಧ್ಯಮವಾಗಿದೆ.
- ಕಾರ್ಟೂನ್ ವಿಮರ್ಶೆ, ಹಾಸ್ಯ ಮತ್ತು ಕಲೆಯನ್ನು ಒಳಗೊಂಡಿದೆ.
- ಕಥಾಪಾತ್ರಗಳನ್ನು ಹಾಸ್ಯದ್ಯೋತಕವಾಗಿ ಉತ್ಪ್ರೇಕ್ಷೆಯೊಂದಿಗೆ ಚಿತ್ರೀಕರಿಸುವುದು.
- ಅತಿಕಡಿಮೆ ರೇಖೆಗಳನ್ನು ಮಾತ್ರ ಉಪಯೋಗಿಸುವುದು.

### ನೈಪುಣ್ಯ

- ಅತಿಕಡಿಮೆ ರೇಖೆಗಳಿಂದ ಕಥಾಪಾತ್ರಗಳನ್ನು ಚಿತ್ರೀಕರಿಸುವ ಸಾಮರ್ಥ್ಯ.
- ಪ್ರತಿಯೊಂದು ವಿಚಾರದಲ್ಲಿಯೂ ಹಾಸ್ಯವನ್ನು ಕಂಡುಕೊಳ್ಳುವ ಸಾಮರ್ಥ್ಯ.

### ಕಲಿಕಾ ಚಟುವಟಿಕೆಗಳು

- ಕಾರ್ಟೂನ್ ಚಿತ್ರಗಳನ್ನು ನೋಡಲು ಮಕ್ಕಳಿಗೆ ಅವಕಾಶ ಒದಗಿಸುವುದು.
- ಕಾರ್ಟೂನಿನ ವೈಶಿಷ್ಟ್ಯಗಳೇನು ? ಚರ್ಚೆ
- ಮೇಲೆ ಕೊಟ್ಟಿರುವ ಆಶಯಗಳನ್ನು ಸೇರಿಸಿ ಚರ್ಚೆಯನ್ನು ಕ್ರೋಡೀಕರಿಸುವುದು.
- ಕಾರ್ಟೂನ್ ರಚಿಸಲು ಅಗತ್ಯವಾದ ಆಶಯಗಳನ್ನು ಕಂಡುಕೊಳ್ಳುವುದು.
- ಕಥಾಪಾತ್ರಗಳನ್ನು ಕಂಡುಕೊಳ್ಳುವುದು, ಚಿತ್ರೀಕರಿಸುವುದು.
- ಕಲಿಕೋತ್ಪನ್ನಗಳ ಪ್ರದರ್ಶನ , ಸ್ವ ಮೌಲ್ಯಮಾಪನ

### ಮೌಲ್ಯಮಾಪನ

ಮೌಲ್ಯಮಾಪನ ಸೂಚಕಗಳು


- ವಿಮರ್ಶಾತ್ಮಕ
- ಹಾಸ್ಯಾತ್ಮಕ
- ರಚನೆಯ ರೀತಿ

**ಗಳಿಸಬಹುದಾದ ಕಲಿಕಾ ಹಿರಿಮೆಗಳು**

ಕೆಳಗೆ ಕೊಟ್ಟಿರುವ ಕಲಿಕಾ ಹಿರಿಮೆಗಳನ್ನು ಗಳಿಸಲು ಎಷ್ಟರ ಮಟ್ಟಿಗೆ ಸಾಧ್ಯವಾಗಿದೆ ?

- ಕಾರ್ಟೂನನ್ನು ರಚಿಸುವ ಸಾಮರ್ಥ್ಯ ಗಳಿಸುವುದು.

**7.2**



# ಸಂಗೀತ



# ಸಂಗೀತ

## ಮುನ್ನುಡಿ

ಎಲ್ಲ ಕಲೆಗಳು ಮನಸ್ಸನ್ನು ಮುದಗೊಳಿಸಲಿಕ್ಕಿರುವವುಗಳಾಗಿವೆ.ಆ ಆನಂದವು ಚರಾಚರಗಳೊಂದಿಗಿನ ಪ್ರೀತಿಯಾಗಿ ಬೆಳೆಯುವುದೇ ಸಂಸ್ಕೃತಿ. ಪ್ರಕೃತಿ ಮತ್ತು ಮನುಷ್ಯನನ್ನು ಪ್ರತ್ಯೇಕಿಸಿ ಕಾಣದೆ ಅನ್ಯೋನ್ಯತೆಯ ಸಮನ್ವಯಭಾವ ನಮಗೆ ಹಾಗೆ ಲಭಿಸುವುದು. ಎಲ್ಲ ಜೀವಜಾಲಗಳಿಗೂ ಒಂದೇ ರೀತಿ ಆಸ್ವಾದಿಸಬಹುದಾದ ಕಾರಣ ಸಂಗೀತವು ಇತರ ಕಲೆಗಳಿಗಿಂತ ಭಿನ್ನವಾಗಿದೆ. ಮನುಷ್ಯನ ಮನಸ್ಸನ್ನು ನಿರ್ಮಲಗೊಳಿಸಿ ಅಮೂರ್ತವಾದ ಧನ್ಯತೆಯೆಡೆಗೆ ಕೊಂಡೊಯ್ದು ಶಾಂತಗೊಳಿಸಲು ಸಾಮರ್ಥ್ಯವಿರುವ ಕಲೆಯೆ ಸಂಗೀತ. ಸಾರ್ವತ್ರಿಕವಾಗಿ ಮನುಷ್ಯನನ್ನು ಒಂದಾಗಿ ಕಾಣುವ ವಿಶಾಲವಾದ ದೃಷ್ಟಿಕೋನ ಸಂಗೀತ ಸಂಸ್ಕೃತಿಯಿಂದ ಕೈಗೂಡುವುದು. ಆದ್ದರಿಂದಲೇ ಸಂಗೀತ ಕಲಿಕೆಯು ವ್ಯಕ್ತಿತ್ವದ ವಿಕಾಸ ಹಾಗೂ ಸಾಮಾಜಿಕ ಹೊಂದಾಣಿಕೆಗೆ ಅನಿವಾರ್ಯವಾಗಿದೆ.

ಸುತ್ತುಮುತ್ತಲಿನ ಕುರಿತು ತಿಳುವಳಿಕೆ ಉಂಟಾಗುವ ಕಾಲಕ್ಕಿಂತ ಮೊದಲೇ ನಿಸರ್ಗದ ಸಂಗೀತವು ಮಗುವಿನ ಶಾರೀರಿಕ ಹಾಗೂ ಮಾನಸಿಕ ಬೆಳವಣಿಗೆಗೆ ಕಾರಣವಾಗುತ್ತದೆ ಎಂದು ವೈಜ್ಞಾನಿಕವಾದ ಅಧ್ಯಯನದಿಂದ ಸಾಬೀತಾಗಿದೆ. ಶಾಲಾಶಿಕ್ಷಣದ ಕಾಲಘಟ್ಟದಲ್ಲಿ ಮಕ್ಕಳಲ್ಲಿ ಉಂಟಾಗಬಹುದಾದ ಮಾನಸಿಕ ಸಂಘರ್ಷವನ್ನು ಹೋಗಲಾಡಿಸಿ ಮನಸ್ಸನ್ನು ಪ್ರಸನ್ನಗೊಳಿಸಿ ಜ್ಞಾನಾರ್ಜನೆಗೆ ಪ್ರೇರೇಪಿಸಲು ಸಂಗೀತ ಕಲಿಕೆಯಿಂದ ಸಾಧ್ಯವಿದೆಯೆಂದು ಸಂಶೋಧನೆಗಳಿಂದ ಸಾಬೀತಾಗಿದೆ. ಸಂಗೀತವನ್ನು ಆಸ್ವಾದಿಸುವ ಮಗುವಿಗೆ ತಾನು ಮಾಡುವ ಯಾವುದೇ ಕಾರ್ಯದಲ್ಲಿ ನಿಗೂಢವಾಗಿ ಸ್ಥಿತವಾಗಿರುವ ತಾಳವನ್ನು ಕಂಡುಹಿಡಿಯಲು ಸಾಧ್ಯವಾಗುವುದರ ಮೂಲಕ ಜೀವನದ ಪರಮ ಸತ್ಯವನ್ನು ಸುಲಭವಾಗಿ ತಿಳಿದುಕೊಳ್ಳಲು ಸಾಧ್ಯವಾಗುವುದು. ಈ ಆಸ್ವಾದನಾ ಸಾಮರ್ಥ್ಯವನ್ನು ಹೆಚ್ಚಿಸಲು ನಿಖರವಾದ ಅಧ್ಯಯನದ ಅಗತ್ಯವಿದೆ. ಇದರಿಂದ ಪ್ರತಿಯೊಬ್ಬನಲ್ಲಿ ಸುಪ್ತವಾಗಿರುವ ಪ್ರತಿಭೆಯನ್ನು ಸ್ವತಃ ತಿಳಿದುಕೊಳ್ಳಲು ಅದನ್ನು ವಿಕಾಸಗೊಳಿಸಲು ಸಾಧ್ಯವಾಗುವುದು. ಇದು ಮಕ್ಕಳಲ್ಲಿ ಅತಿಯಾದ ಆತ್ಮವಿಶ್ವಾಸವನ್ನು ಉಂಟುಮಾಡುವುದಲ್ಲದೆ ಎಲ್ಲ ವಿಷಯಗಳ ಕಲಿಕೆಯಲ್ಲಿ ಅತ್ಯಾಸಕ್ತಿಯಿಂದ ವ್ಯವಹರಿಸಲು ಸಾಧ್ಯವಾಗುವ ರೀತಿಯಲ್ಲಿ ಉತ್ಸಾಹಭರಿತರನ್ನಾಗಿಸುತ್ತದೆ.

ಅತಿ ಮಹತ್ತರವಾದ ಸಂಗೀತ ಪರಂಪರೆ ನಮಗಿತ್ತು. ಸಂಗೀತವನ್ನು ಅದರ ಔನ್ನತ್ಯಕ್ಕೆ ತಲುಪಿಸಿದ ಅನೇಕವಾಹಿನಿಗಳು ಈ ಪ್ರದೇಶದಲ್ಲಿದೆ. ಜನಸಾಮನ್ಯರ ಮನಸ್ಸಿನಲ್ಲಿಯೂ ಜೀವನಾಡಿಯಾಗಿ ಸಂಗೀತವು ಹಾಸುಹೊಕ್ಕಾದ ಪರಂಪರೆ ನಮ್ಮದು. ಇಲ್ಲಿ ಅವಿಶ್ರಾಂತವಾಗಿ ನೆಲೆಗೊಂಡ ಆ ಸಂಗೀತ ಸಂಸ್ಕೃತಿಯು ನಮ್ಮನ್ನು ಯಾವಾಗಲೂ ಪ್ರಚೋದಿಸುತ್ತಿತ್ತು. ಲೋಕ ಸಂಗೀತದ ಎಲ್ಲ ಗುಣಾತ್ಮಕ ಅಂಶಗಳನ್ನು ಸ್ವೀಕರಿಸಿ ಭಾರತದ ಸಂಗೀತ ವಿಕಾಸಗೊಂಡ ಕಾರಣ ಅದಕ್ಕೆ ಸಾರ್ವತ್ರಿಕ ಮನ್ನಣೆ ದೊರೆತಿದೆ.

## ಕಲಿಕಾ ಸಾಧನೆಗಳು

**ಒಂದನೇ ತರಗತಿ**

- ಪ್ರಕೃತಿಯ ವಿವಿಧ ಶಬ್ದಗಳನ್ನು ಕೇಳಲು, ಅನುಕರಿಸಲು ಸಾಧ್ಯವಾಗುವುದು
- ಶಬ್ಧಗಳನ್ನು ಶಬ್ಧದ ಮೂಲಗಳ ಆಧಾರದಲ್ಲಿ ವರ್ಗೀಕರಿಸಲು ಸಾಧ್ಯವಾಗುವುದು
- ನಿರ್ದಿಷ್ಟ ಸಮಯಾಂತರಗಳಲ್ಲಿ ಆವರ್ತಿಸುವ ಬಡಿತವನ್ನು ಕಂಡುಹಿಡಿದು ಪ್ರಸ್ತುತಪಡಿಸಲು ಸಾಧ್ಯವಾಗುವುದು
- ಪರಿಚಿತವಾದ ಹಾಡುಗಳನ್ನು ಸ್ವತಃ ಹಾಡುವುದು.

**ಎರಡನೇ ತರಗತಿ**

- ಪ್ರಕೃತಿಯ ಸೂಕ್ಷ್ಮ ಶಬ್ದಗಳನ್ನು ಗುರುತಿಸಿ ನಿಖರವಾಗಿ ಅನುಕರಿಸುವುದು
- ಪರಿಚಿತವಾದ ಶಬ್ಧಗಳನ್ನು ವಿವಿಧ ಮಾನದಂಡಗಳನ್ನು ಉಪಯೋಗಿಸಿ ವರ್ಗೀಕರಿಸುವುದು
- ಸಂಭಾಷಣಾ ಹಾಡುಗಳನ್ನು ಸಂದರ್ಭೋಚಿತವಾಗಿ ಏರು ಸ್ವರದಲ್ಲಿಯೂ ಇಳಿಸ್ವರದಲ್ಲಿಯೂ ಸಾಮಾನ್ಯ ವೇಗದಲ್ಲಿಯೂ ಕಥಾಪಾತ್ರಗಳಿಗನುಸಾರವಾಗಿ ಶಬ್ಧ ನಿಯಂತ್ರಣದೊಂದಿಗೆ ಹಾಡುವುದು.
- ಒಗಟುಗಳು , ಗಾದೆಗಳು ಎಂಬಿವುಗಳನ್ನು ತಾಳಾತ್ಮಕವಾಗಿ ಹಾಡುವುದು, ಹೇಳುವುದು.

**ಮೂರನೇ ತರಗತಿ**

- ಸಂದರ್ಭ ಅಥವಾ ವಿಷಯಕ್ಕೆ ತಕ್ಕಂತೆ ಪ್ರಕೃತಿಯ ಶಬ್ದಗಳನ್ನು ಆರಿಸಿ ಪ್ರಸ್ತುತಪಡಿಸಲು ಸಾಧ್ಯವಾಗುವುದು.
- ಪರಿಚಿತವಾದ ಹಾಡುಗಳು ಪ್ರಾದೇಶಿಕ ಗೀತೆಗಳು, ಬಾಯಿತಾಳಗಳು, ಶಿಶುಗೀತೆಗಳು ಎಂಬಿವುಗಳನ್ನು ತಾಳಾತ್ಮಕವಾಗಿ ಚಲನೆಯೊಂದಿಗೆ ವೇಗ ಹೆಚ್ಚಿಸಿ ಅಥವಾ ಇಳಿಸಿ ಹಾಡುವುದು.
- ಒಂದೇ ರೀತಿಯ ಹಾಡುಗಳು ಕವಿತೆಗಳು ಎಂಬಿವುಗಳನ್ನು ಕೇಳಿ ಜೊತೆಯಲ್ಲಿ ಹಾಡುತ್ತಾ ತಾಳಹಹಾಕುವುದು.
- ಹಾಡುಗಳನ್ನು ಶಬ್ಧ ನಿಯಂತ್ರಣದೊಂದಿಗೆ ಹಾಡುವಾಗ ಉಂಟಾಗುವ ಆಸ್ವಾದನೆಯನ್ನು ತಿಳಿದುಕೊಳ್ಳುವುದು.

**ನಾಲ್ಕನೇ ತರಗತಿ**

- ವಾದ್ಯೋಪಕರಣ ಸಂಗೀತದಿಂದೊಡಗೂಡಿದ ಹಾಡನ್ನು ಕೇಳಿ ಅದರ ಹಿನ್ನಲೆಯನ್ನು ತಿಳಿದುಕೊಳ್ಳುವುದು.
- ಪ್ರಕೃತಿಯ ಶಬ್ದಗಳೊಂದಿಗೆ ಹೊಂದುವ ವಾದ್ಯೋಪಕರಣಗಳ ನಾದಗಳನ್ನು ಕಂಡುಹಿಡಿದು ಬಾಯ್ಮಾತಿನಿಂದ ವಿವರಿಸುವುದು ಮತ್ತು ಅನುಕರಿಸುವುದು.

. ಚಲನೆಯ ವೇಗಕ್ಕನುಸಾರವಾಗಿ ಸರಳವಾದ ತಾಳವಾದ್ಯಗಳಲ್ಲಿ ತಾಳಹಿಡಿಯುವಾಗ ಚಲನೆ ಮತ್ತು ತಾಳ ಎಷ್ಟರ ಮಟ್ಟಿಗೆ ಹೊಂದಿಕೆಯಾಗುತ್ತದೆ ಎಂದು ತಿಳಿಯುವುದು.

- ಏಕಕಾಲದಲ್ಲಿ ಕೇಳಿಬರುತ್ತಿರುವ ವಿವಿಧ ಸ್ವರ ಮತ್ತು ತಾಳಗಳಲ್ಲಿರುವ ಸಂಗಿತದ ತುಣುಕುಗಳನ್ನು ಆಲಿಸಿ ಸ್ವರ ತಾಳ ಎಂಬಿವುಗಳ ನಡುವಿನ ವ್ಯತ್ಯಾಸವನ್ನು ಗುರುತಿಸುವುದು.
- ಕೇರಳೀಯ ಕಲಾರೂಪಗಳಿಗೆ ಹಿನ್ನಲೆಯಾಗಿ ಉಪಯೋಗಿಸುವ ಸಂಗೀತೋಪಕರಣಗಳನ್ನು ವರ್ಗೀಕರಿಸಲು ಸಾಧ್ಯವಾಗುವುದು.
- ದೈಘ್ಯ ವ್ಯತ್ಯಾಸ ಇರುವವುಗಳನ್ನು ಗುರುತಿಸಿ ಹಾಡುವುದು.
- ವೇಗವನ್ನು ಹೆಚ್ಚಿಸಿ ಅಥವಾ ಕಡಿಮೆ ಮಾಡಿ ಸರಳವಾಕ್ಯಗಳಲ್ಲಿ ತಾಳ ಹಾಕಿ ಪರಿಚಿತವಾದ ಹಾಡುಗಳ ಆಲಾಪನೆ ಮಾಡಲು ಸಾಧ್ಯವಾಗುವುದು.

# ಒಂದನೇ ತರಗತಿ

## ಯೂನಿಟ್ 1 : ಕಂಡು ಮತ್ತು ಕೇಳಿ

ದಿನನಿತ್ಯ ನಮ್ಮ ಸುತ್ತಮುತ್ತಲಿನಿಂದ ಎಷ್ಟೊಂದು ಶಬ್ಧಗಳನ್ನು ಕೇಳುತ್ತೇವೆ ಗಿಳಿಗಳ ನಾದ ಪ್ರಾಣಿಗಳ ನಾದ, ಮಳೆಯ ಶಬ್ದ , ನದಿ, ಸಮುದ್ರ, ಗಾಳಿಯ ಶಬ್ಧ. ಪ್ರಕೃತಿಯ ಶಬ್ಧಗಳು ಮಾತ್ರವಲ್ಲ ನಮಗೆ ಕೇಳುವುದು. ಮೋಟರ್ ವಾಹನಗಳ ಶಬ್ದ, ರೈಲಿನ ಶಬ್ಧ, ಕಾರ್ಖಾನೆಗಳ ಸೈರನ್ ಮೊಳಗುವ ಶಬ್ಧ ಹೀಗೆ ಅನೇಕ ಕೃತಕ ಶಬ್ಧಗಳೂ ನಮ್ಮ ಸುತ್ತಲೂ ಇವೆ. ಕೆಲವು ಶಬ್ಧಗಳು ನಮಗೆ ಆನಂದವನ್ನುಂಟುಮಾಡಿದರೆ ಕೆಲವು ಅರೋಚಕವಾಗಿರುತ್ತವೆ. ಆನಂದ ವನ್ನುಂಟುಮಾಡುವ (ಇಂಪನ್ನು ನೀಡುವ) ಶಬ್ಧಗಳ ಸಾನಿಧ್ಯವೇ ಸಂಗೀತದ ಮೊದಲ ಪಾಠ. ಈ ಶ್ರವಣಸಾಮರ್ಥ್ಯವು ಶಬ್ಧಘೋಷಗಳಿಂದ ಗದ್ದಲಗಳಿಂದ ಸಂಗೀತದ ನಾದಗಳನ್ನು ಪ್ರತ್ಯೇಕಿಸುವುದು. ಅನುಕರಿಸುತ್ತಾ ಸಂಗೀತದ ಶಬ್ದವಾದ ನಾದವೆಂಬ ತಿಳುವಳಿಕೆಯ ಕಡೆಗೆ ಮಕ್ಕಳನ್ನು ತಲುಪಿಸಲು ಈ ಯೂನಿಟ್‌ನಿಂದ ಸಾಧ್ಯವಾಗಬೇಕು.

### ಕಲಿಕಾ ಸಾಧನೆ

ಪ್ರಕೃತಿಯ ವಿವಿಧ ಶಬ್ಧಗಳನ್ನು ಆಲಿಸಿ ಅನುಸರಿಸುವುದು.

### ಆಶಯ ತಿಳುವಳಿಕೆ

- ಪ್ರಕೃತಿಯಲ್ಲಿ ವಿವಿಧ ಶಬ್ಧಗಳಿವೆ.
- ಪ್ರಕೃತಿಯ ನೈಜತೆಯನ್ನು ಉಳಿಸುವಲ್ಲಿ ಶಬ್ಧಗಳಿಗೆ ಪಾತ್ರವಿದೆ.
- ಶಬ್ಧಗಳನ್ನು ಅನುಕರಿಸಲು ಸಾಧ್ಯವಾಗುವುದು.

### ಪ್ರಕ್ರಿಯೆ

- ಸುತ್ತಮುತ್ತಲೂ ಇರುವ ಶಬ್ಧಗಳನ್ನು ಕೇಳಲು ಗುರುತಿಸಲಿರುವ ವೈವಿಧ್ಯಮಯವಾದ ಚಟುವಟಿಕೆಯಲ್ಲಿ ತೊಡಗುವುದು.
- ರೆಕಾರ್ಡ್ ಮಾಡಿದ ಶಬ್ಧಗಳನ್ನು ಕೇಳಿ ವಸ್ತು ಸಂದರ್ಭ ಎಂಬಿವುಗಳನ್ನು ತಿಳಿದುಕೊಳ್ಳುವುದು.

### ಮೌಲ್ಯಮಾಪನ

- ಆಲಿಸಿದ ಬಳಿಕ ಶಬ್ಧಕ್ಕೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರಿಸುವುದು.
- ಶಬ್ಧಾನುಕರಣೆಯನ್ನು ಪರಸ್ಪರ ಮೌಲ್ಯಮಾಪನ ಮಾಡುವುದು.

## ಅನುಕ್ರಮಣಿಕೆ

- ಪ್ರಕೃತಿಯಲ್ಲಿ ವಿವಿಧ ರೀತಿಯ ಶಬ್ಧಗಳಿವೆ.
- ಜೀವಜಾಲಗಳು, ಮೃಗಪಕ್ಷಿಗಳು, ಯಂತ್ರಗಳು, ಮೋಟಾರ್ ವಾಹನಗಳು ಎಂಬಿವುಗಳು
- ಪ್ರಕೃತಿಯ ನೈಜತೆಯನ್ನು ಉಳಿಸುವಲ್ಲಿ ಶಬ್ಧಗಳು ಪ್ರಧಾನ ಪಾತ್ರವಹಿಸುತ್ತದೆ.
- ಪ್ರಕೃತಿಯ ಶಬ್ಧಗಳನ್ನು ಆಲಿಸಲು,ಪ್ರತ್ಯೇಕಿಸಲು, ಸಾಧ್ಯವಾದವುಗಳನ್ನು ಅನುಕರಿಸಲು ಮಕ್ಕಳನ್ನು ಸಮರ್ಥರಾಗುವಂತೆ ಮಾಡಲು ಈ ಯೂನಿಟ್‌ನಲ್ಲಿ ಯೋಜನೆ ಮಾಡಿದ ಕಲಿಕಾ ಚಟುವಟಿಕೆಗಳಿಗೆ ಸಾಧ್ಯವಾಗಬೇಕು.

## ಕಲಿಕಾ ಚಟುವಟಿಕೆಗಳು

ಪ್ರಕೃತಿಯ ಜೀವಜಾಲಗಳು ಮತ್ತು ವಾಹನಗಳನ್ನು ಪ್ರತಿಪಾದಿಸುವ ಹಾಡುಗಳನ್ನು ಮಕ್ಕಳಿಗೆ ಪರಿಚಯಿಸುವುದು. ಅಧ್ಯಾಪಕರು ಹಾಡಬಹುದು. ರೆಕಾರ್ಡ್ ಮಾಡಿದ ಹಾಡುಗಳನ್ನು ಕೇಳುವಂತೆ ಮಾಡಬಹುದು.

ಹಾಡುಗಳಿಗೆ ಉದಾಹರಣೆಗಳು

1. ಗುಡುಗು ಗುಡುಗಿತು
ಮೋಡ ಮುಸುಕಿತು
ಕತ್ತಲಾಯಿತು ಸುತ್ತಲೂ
ಗಿಡವು ಕಿತ್ತಿತು ಮರವು ಬಾಗಿತು
ಸೋಗೆ ಜಾರಿತು ಎತ್ತಲೂ

2. ಬೇಕೆ ಬೇಕೆ ತರಕಾರಿ
ತರತರ ಜಾತಿಯ ತರಕಾರಿ
ಬೆರಳನು ಹೋಲುವ ಬೆಂಡೆಕಾಯಿ
ಹಾವನು ಹೋಲುವ ಹಾಗಲಕಾಯಿ

3. ಕೋತಿಯೊಂದು ಬಂದಿತು
ಮಡಕೆಯನ್ನು ತಂದಿತು
ಅಂಗಡಿಗೆ ಹೋಯಿತು
ಬೇಳೆ ಬೆಲ್ಲ ತಂದಿತು
ಒಲೆಯ ಮೇಲೆ ಇಟ್ಟಿತು
ಬೆಂಕಿಯನ್ನು ಹೆಚ್ಚಿತು.

.4. ಬಾ ಬಾ ಗಿಳಿಯೆ
ಬಣ್ಣದ ಗಿಳಿಯೆ
ಹಣ್ಣನು ಕೊಡುವೆನು ಬಾ ಬಾ ಬಾ
ಮರದ ಮೇಲಿನ ಚಂದದ ಗಿಣಿಯೆ
ಕೆಂಪು ಕೊಕ್ಕಿನ ಮುದ್ದಿನ ಗಿಣಿಯೆ
ನನ್ನೊಡನಾಡಲು ಬಾ ಬಾ ಬಾ

5. ಚುಕುಪುಕು ಚುಕುಪುಕು ಉಗಿಬಂಡಿ
ಹಳಿಯಲಿ ಓಡುವ ಮಹಾಬಂಡಿ
ಉದ್ದುದ್ದದ ಈ ಬಂಡಿ
ಜನರನು ಸಾಗಿಸೊ ಉಗಿಬಂಡಿ.

6. ಹಾಗಲ ಪಡುವಲ
ಕುಂಬಲಕಾಯಿ
ಹರಿವೆ ಬಸಳೆ ತರಕಾರಿ
ರುಚಿ ರುಚಿ ಊಟಕೆ
ಉಪಕಾರಿ.

- ಆಯ್ಕೆ ಮಾಡಿದ ಹಾಡಿನ ಸಾಲುಗಳನ್ನು ಅಧ್ಯಾಪಕರು ಹಾಡಿ ಮಕ್ಕಳಿಗೆ ಕೇಳಿಸಬೇಕು ಮಕ್ಕಳೂ ಧ್ವನಿಗೂಡಿಸಬೇಕು.

- ಅಧ್ಯಾಪಕರು ಹಾಡುವರು. ಮಕ್ಕಳು ಧ್ವನಿಗೂಡಿಸುವರು.
- ರಾಗವಾಗಿ ಹಾಡಲು ಸಾಮರ್ಥ್ಯವಿರುವ ಮಕ್ಕಳನ್ನು ಕಂಡುಹಿಡಿದು ಅವರ ನೇತೃತ್ವದಲ್ಲಿ ಮಕ್ಕಳನ್ನು ಹಾಡಿಸುವುದು.

**ಅಧ್ಯಾಪಕರ ಪ್ರಶ್ನೆಗಳು**

- ನಾವು ಹಾಡಿದ ಹಾಡುಗಳಲ್ಲಿ ಪರಿಚಯವಾದ ಜೀವಜಾಲಗಳು ಯಾವುವು ?
- ಮೋಟಾರು ವಾಹನಗಳ, ಯಂತ್ರಗಳ ಹೆಸರನ್ನು ಹೇಳಬಹುದೇ?
- ಇದೇ ರೀತಿ ನೀವು ಕೇಳಿ ಪರಿಚಯವಿರುವ ಇನ್ನಷ್ಟು ಶಬ್ಧಗಳು ಯಾವುವು?
- ಆ ಶಬ್ಧಗಳಲ್ಲಿ ನಿಮಗಿಷ್ಟವಾದವುಗಳು ಯಾವುವು? ಯಾಕೆ ಇಷ್ಟವಾಯಿತು? ಯಾಕೆ ಇಷ್ಟವಾಗಲಿಲ್ಲ?
- ಕೇಳುವಾಗ ಮನಸ್ಸಿಗೆ ಹಿತವಾಗುವ. ಹಿತಕರವಲ್ಲದ ಶಬ್ಧಗಳನ್ನು ವರ್ಗೀಕರಿಸಬಹುದೇ?
- ನಿಮಗೆ ಅನುಕರಿಸಬಹುದಾದ ಶಬ್ಧಗಳು ಯಾವುವು? ಅನುಕರಿಸಿ ತೋರಿಸುವಿರಾ?

## ಮೌಲ್ಯಮಾಪನ

- ಹಾಡನ್ನು ಹಾಡುವಾಗಲೂ ಹೇಳುವಾಗಲೂ ಮಕ್ಕಳನ್ನು ಮೌಲ್ಯಮಾಪನ ನಡೆಸಬಹುದು.
- ರಾಗವಾಗಿ ಹಾಡುವ ಸಾಮರ್ಥ್ಯ
- ಅಭಿವ್ಯಕ್ತಿಗಿರುವ ಆಸಕ್ತಿ
- ನೇತೃತ್ವ ವಹಿಸುವ ಸಾಮರ್ಥ್ಯ
- ಅಧ್ಯಾಪಕರು ಕೇಳಿದ ಪ್ರಶ್ನೆಗಳ ಮೂಲಕ ಮಕ್ಕಳನ್ನು ಮೌಲ್ಯಮಾಪನ ನಡೆಸಬಹುದು.

## ನಿರೀಕ್ಷಣೆ

- ಉತ್ತರಗಳಲ್ಲಿ ಬಂದ ಸ್ಪಷ್ಟತೆ ನಿಖರತೆ
- ಶಬ್ಧಾನುಕರಣೆಯಲ್ಲಿ ನಿಖರತೆ, ಹಿರಿಮೆ

## ಪರಾಮರ್ಶೆ

- ವಯಲಾರ್ ಪಿ. ಭಾಸ್ಕರನ್ ಒ.ಎನ್.ವಿ ಮುಂತಾದವರ ಸಿನೆಮಾ ಹಾಡುಗಳ ಸಂಗ್ರಹ (ಪ್ರಕೃತಿಗೆ ಸಂಬಂಧಿಸಿದವುಗಳು, ಮಕ್ಕಳ ಗೀತೆಗಳು)
- ಜಾನಪದ ಗೀತೆಗಳು ಮತ್ತು ಅಂತ್ಯಪ್ರಾಸಗೀತೆಗಳ (ರೈಮ್ಸ್ ಗಳು) ಸಂಗ್ರಹ (ನರ್ಸರಿ ಗೀತೆಗಳು, ಶಿಶುಗೀತೆಗಳು)
- ಶಬ್ಧಗಳು ವಿಭಿನ್ನವಾಗಿವೆಯೆಂದೂ ಪ್ರಕೃತಿಯು ವಿಭಿನ್ನ ಶಬ್ಧಗಳ ಕಣಜವೆಂದು ತಿಳಿಯಲು ಮಕ್ಕಳನ್ನು ಸಮರ್ಥರಾಗುವಂತೆ ಮಾಡಬೇಕು. ಶಬ್ಧಗಳನ್ನು ಕೇಳಿ ಅನುಕರಿಸಲು ಸಮರ್ಥರನ್ನಾಗಿಸಬೇಕು.
- ಹಾಡಿನ ಸಾಲುಗಳನ್ನು ಹಾಡುವಾಗ ಅಥವಾ ಉಚ್ಚರಿಸುವಾಗ ಉಂಟಾಗುವ ವಿವಿಧ ಅನುಭವಗಳನ್ನೂ ಶಬ್ಧದ ಪರಿಮಿತಗಳನ್ನು ಮಕ್ಕಳೊಂದಿಗೆ ಹಂಚಿಕೊಳ್ಳಬೇಕು.

# ಯೂನಿಟ್–2 : ಗಾಳಿಯಾಗಿ ........ ಮಳೆಯಾಗಿ.............

ಸದ್ದು ಗದ್ದಲಗಳ ಮಧ್ಯೆ ಸುಶ್ರಾವ್ಯವಾದ ಶಬ್ಧಮೂಲಗಳು ಯಾವುವು ಎಂಬ ಅನ್ವೇಷಣೆ ರಸವತ್ತಾಗಿರಬಹುದು. ಗಾಳಿಗೂ ಮಳೆಗೂ ಪ್ರವಾಹಕ್ಕೂ ಒಂದೇ ಭಾವವಿರುವುದಿಲ್ಲ . ಮೈಯನ್ನು ನೇವರಿಸುವ ನವಿರಾದ ತಂಗಾಳಿ ಕೆಲವೊಮ್ಮೆ ರೌದ್ರಭಾವತಾಳಿ ಬಿರುಗಾಳಿಯಾಗಿ ನಮ್ಮನ್ನು ಭಯಭೀತಗೊಳಿಸುವುದು. ಬಿರುಗಾಳಿ ನವಿರಾದ ತಂಗಾಳಿಯಂತೆ ನಿಶ್ಯಬ್ಧವಾಗಿ ಇರುವುದಿಲ್ಲ. ಶಾಂತವಾದ ನದಿಯ ಪ್ರವಾಹದ ಶಬ್ಧದಂತೆ ಕಡಲಿನ ಅಲೆಗಳು ಅಪ್ಪಳಿಸುತ್ತಿರುವ ಶಬ್ಧವಿರುವುದಿಲ್ಲ. ತುಂತುರು ಮಳೆ ಮತ್ತು ಜಡಿಮಳೆ ವಿವಿಧ ಶಬ್ದಾನುಭವಗಳನ್ನು ನೀಡುತ್ತವೆ. ಇವುಗಳೆಲ್ಲವೂ ಅನುಭವಗಳನ್ನು ಅನುಭೂತಿಯಾಗಿ ಪರಿವರ್ತಿಸುವ ಸಂಗೀತದ ಮೂಲಗಳಾಗಿವೆ.

## ಕಲಿಕಾ ಸಾಧನೆ

ಶಬ್ಧ ಗಳು ಮತ್ತು ಶಬ್ಧದ ಮೂಲಗಳ ಆಧಾರದಲ್ಲಿ ವೈವಿಧ್ಯ ಮತ್ತು ವೈಶಿಷ್ಟ್ಯಗಳನ್ನು ಗುರುತಿಸುವುದು.

## ಆಶಯ ತಿಳುವಳಿಕೆ

- ಶ್ರದ್ಧೆಯಿಂದ ಆಲಿಸಿದರೆ ಶಬ್ಧದ ಮೂಲಗಳನ್ನು ಕಂಡುಹುಡುಕಲು ಸಾಧ್ಯವಿದೆ.
- ತನ್ನ ಸುತ್ತಮುತ್ತಲಿರುವ ಶಬ್ಧಮೂಲಗಳ ಕುರಿತಾದ ತಿಳುವಳಿಕೆ – ಗಾಳಿ ಮಳೆ, ಮೃಗ ಪಕ್ಷಿಗಳು, ವಾಹನಗಳು

## ಪ್ರಕ್ರಿಯೆ

- ಮಕ್ಕಳ ಹಾಡುಗಳು ಮತ್ತು ರೆಕಾರ್ಡ್ ಮಾಡಿದ ಶಬ್ಧಗಳ ಮೂಲವನ್ನು ಕಂಡುಹಿಡಿಯಲು ಪ್ರಯತ್ನಿಸುವುದು.
- ಆಲಿಸಿದ ಶಬ್ಧಗಳನ್ನು ವರ್ಗೀಕರಿಸುವುದು.

## ಮೌಲ್ಯಮಾಪನ

- ಕಂಡುಹಿಡಿದ ವಿವಿಧ ಶಬ್ಧಗಳನ್ನು ಮೌಲ್ಯಮಾಪನ ನಡೆಸುವುದು.

## ವಿಷಯ

ಪ್ರಕೃತಿಯಲ್ಲಿರುವ ವಿವಿಧ ಶಬ್ಧಗಳನ್ನು ಸೂಕ್ಷ್ಮವಾಗಿ ಆಲಿಸಲು ಅವುಗಳನ್ನು ಪ್ರಸ್ತುತಪಡಿಸಿ ವರ್ಗೀಕರಿಸಲು ನಮಗೆ ಸಾಧ್ಯವಿದೆ. ನಾವು ಕೇಳುವ ಶಬ್ಧಗಳಲ್ಲಿ ಕೆಲವೊಂದು ಶಬ್ಧಗಳಾದರೂ ಆಸ್ವಾದನೆಗೆ ಯೋಗ್ಯವಾದ ರೀತಿಯಲ್ಲಿರುವುದಿಲ್ಲ. ಆದರೆ ಅವುಗಳನ್ನು ಶ್ರದ್ಧೆಯಿಂದ ಆಲಿಸಿದರೆ ಕೆಲವು ಅತಿಸೂಕ್ಷ್ಮ ಶಬ್ಧಗಳು ಆಸ್ವಾದಕನಲ್ಲಿ ಅತಿಯಾದ ಆನಂದವನ್ನು ಉಂಟುಮಾಡುತ್ತವೆ. ಅವುಗಳ ಮೂಲಗಳನ್ನು ಕಂಡುಹಿಡಿದು ವೈಶಿಷ್ಟ್ಯಗಳನ್ನು ಗುರುತಿಸಿ ಸಂಗೀತವು ಪ್ರಕೃತಿಜನ್ಯವಾಗಿದೆ ಎಂಬ ಸತ್ಯಾಂಸವನ್ನು ಇನ್ನಷ್ಟು ಸ್ಪಷ್ಟವಾಗಿ ತಿಳಿಯುವುದೇ ಈ ಯೂನಿಟ್‌ನ ಉದ್ದೇಶ.

## ಕಲಿಕಾ ಚಟುವಟಿಕೆಗಳು

1 ˘ಶ್.........ಶ್..............ಶ್............ಶ್..........ಶ್..........ಶ್............ಗಾಳಿ ಬಿಸುತ್ತಿದೆ.
ಡಪ್..........ಡಪ್........ಡಪ್........ಡಪ್........ಡಪ್.......ಗುಡುಗು ಗುಡುಗುವುದು.
ಚರ........ಚರ..........ಚರ........ಚರ........ಚರ....... ಮಳೆ ಬರುವುದು.
ಕಲ.......ಕಲ........ಕಲ.......ಕಲ........ಕಲ..........ನದಿ ಹರಿಯುವುದು
ಎಲೆಯಲ್ಲಿ ಮಳೆಬೀಳುವುದು ..........ಜಗಲಿಯಲ್ಲಿಯೂ ಮಳೆ ಬೀಳುವುದು.
ನದಿಯಲ್ಲಿ ಮಳೆಸುರಿಯುವುದು...........ದಡದಲ್ಲಿಯೂ ಮಳೆಬೀಳುವುದು.
ಎಲೆಯಲ್ಲಿ ಮಳೆ, ನದಿಯಲ್ಲಿ ಮಳೆ ಕಡಲಲ್ಲಿ
ಮಳೆ ಬೀಳುವುದು. ಇಳೆಯಲ್ಲಿ ಮಳೆ ಬೀಳುವುದು.

ಅಧ್ಯಾಪಕರು ಹಾಡುವಾಗ ಮಕ್ಕಳು ಪುನರುಚ್ಚರಿಸುವರು.
- ಒಂಟಿಯಾಗಿ ಅಥವಾ ಗುಂಪಾಗಿ ಹಾಡಲು ಅಧ್ಯಾಪಕರು ಸಹಾಯ ಮಾಡುವರು.
- ಮಕ್ಕಳ ಇಷ್ಟಕ್ಕೆ (ಆಯ್ಕೆ) ಅನುಸಾರವಾಗಿ ಪ್ರಸ್ತುತಪಡಿಸುವ ಅವಕಾಶವನ್ನು ಅಧ್ಯಾಪಕರು ಒದಗಿಸುವರು.
- ಈ ಗೀತೆಗಳಿಂದ ಶಬ್ದ ವೈವಿಧ್ಯ ಮತ್ತು ಶಬ್ದ ವೈಚಿತ್ರಗಳನ್ನು ವರ್ಗೀಕರಿಸಲು ಮತ್ತು ಪ್ರಸ್ತುತಪಡಿಸಲು ಸಮರ್ಥರನ್ನಾಗಿಸುವುದು.


- ಅಧ್ಯಾಪಕರು ಹಾಡುವಾಗ ಮಕ್ಕಳು ಪುನರುಚ್ಚರಿಸುವರು.
- ಒಂಟಿಯಾಗಿ ಅಥವಾ ಗುಂಪಾಗಿ ಹಾಡಲು ಅಧ್ಯಾಪಕರು ಸಹಾಯ ಮಾಡುವರು.
- ಮಕ್ಕಳ ಇಷ್ಟಕ್ಕೆ (ಆಯ್ಕೆ) ಅನುಸಾರವಾಗಿ ಪ್ರಸ್ತುತಪಡಿಸುವ ಅವಕಾಶವನ್ನು ಅಧ್ಯಾಪಕರು ಒದಗಿಸುವರು.
- ಈ ಗೀತೆಗಳಿಂದ ಶಬ್ದ ವೈವಿಧ್ಯ ಮತ್ತು ಶಬ್ದ ವೈಚಿತ್ರಗಳನ್ನು ವರ್ಗೀಕರಿಸಲು ಮತ್ತು ಪ್ರಸ್ತುತಪಡಿಸಲು ಸಮರ್ಥರನ್ನಾಗಿಸುವುದು.


### *ಚಟುವಟಿಕೆ –1*

- ಮೇಲೆ ಕೊಟ್ಟಿರುವ ಗೀತೆಗಳಿಂದ ಯಾವುದಾದರೊಂದನ್ನು ಆರಿಸುವುದು.
- ಅಧ್ಯಾಪಕ ಮತ್ತು ಮಕ್ಕಳು ಸೇರಿ ಆಲಾಪನೆ ನಡೆಸುವುದು.
- ಈ ಹಾಡಿನಲ್ಲಿ/ ಹಾಡುಗಳಲ್ಲಿ ಪ್ರತಿಪಾದಿಸಲ್ಪಟ್ಟ ಜೀವಜಾಲಗಳು / ಶಬ್ದದ ಮೂಲಗಳು ಮುಂತಾದವುಗಳ ಶಬ್ದ ವೈಶಿಷ್ಟ್ಯಗಳು ಯಾವುವು ಎಂದು ಕಂಡುಹಿಡಿದು ಅಧ್ಯಾಪಕರ ಸಹಾಯದಿಂದ ಮಂಡಿಸುವುದು.

### *ಸೂಚಕಗಳು*

- ಮೃದುವಾದವುಗಳು.
- ಹಿತವಾದವುಗಳು / ಅಲ್ಲದವುಗಳು
- ದೀರ್ಘವಿರುವವುಗಳು / ಚಿಕ್ಕದು
- ನಿರಂತರ ಮೌಲ್ಯಮಾಪನ
- ಹಂತಹಂತವಾಗಿ

### *ಚಟುವಟಿಕೆ 2*

ಪರಿಚಿತವಾದ ಪರಿಸರದಿಂದ ಕೇಳುವ ಮತ್ತು ಅನುಭವಿಸುವ ಶಬ್ದ ವೈಚಿತ್ಯಗಳನ್ನು (ವಿವಿಧ ವಿಭಾಗದವುಗಳು) ಆರಿಸಿ ಪ್ರತ್ಯೇಕತೆಗಳನ್ನು ಕಂಡುಹಿಡಿಯುವುದು.

*ಉದಾಹರಣೆ – 1*

☐ ಗಾಳಿ

- ಫ್ಯಾನ್ ತಿರುಗುವಾಗ ಉಂಟಾಗುವ ಶಬ್ಧ.
- ಪುಸ್ತಕದ ಪುಟಗಳನ್ನು ತಿರುವಿದಾಗ ಉಂಟಾಗುವ ಶಬ್ಧ.
- ಮರಗಳೆಡೆಯಲ್ಲಿ / ಬಿದಿರು ಕಾಡುಗಳಲ್ಲಿ ಗಾಳಿ ಬೀಸುವಾಗ ಉಂಟಾಗುವ ಶಬ್ಧ.
- ಬೀಸಣಿಕೆಯನ್ನು ಬೀಸುವಾಗ ಉಂಟಾಗುವ ಶಬ್ಧ.

*ಉದಾಹರಣೆ –2*

☐ ನೀರು

- ದೂರದಲ್ಲಿ ಸುರಿಯುತ್ತಿರುವ ಮಳೆ ಹತ್ತಿರ ಬರುವಾಗ ಉಂಟಾಗುವ ಶಬ್ಧ.
- ತುಂತುರು ಮಳೆ ಸುರಿಯುವಾಗ ಕೇಳುವ ಶಬ್ಧ.
- ನೀರು ಕುದಿಯುವಾಗ ಉಂಟಾಗುವ ಶಬ್ಧ.
- ನಳ್ಳಿಯಿಂದ ನೀರು ಬೀಳುವಾಗ ಉಂಟಾಗುವ ಶಬ್ಧ.
- ಹರಿಯುತ್ತಿರುವ ನೀರಿನ ಶಬ್ಧ.

**ಮೌಲ್ಯಮಾಪನ**

*ಮಕ್ಕಳು ಹಾಡುತ್ತಿರುವಾಗ ಮೌಲ್ಯಮಾಪನ ನಡೆಸುವುದು.*

- ಹಾಡಲಿಕ್ಕಿರುವ ಆಸಕ್ತಿ
- ನೇತೃತ್ವದಲ್ಲಿ ಆಸಕ್ತಿ, ಸಾಮರ್ಥ್ಯವನ್ನು ಮೌಲ್ಯಮಾಪನ ನಡೆಸುವುದು.

ಪ್ರಶ್ನಾವಳಿಗಳ ಮೂಲಕ

- ಚೆನ್ನಾಗಿ ಹಾಡುವರು.
- ಇನ್ನೂ ಹೆಚ್ಚು ಉತ್ತಮವಾಗಿ ಹಾಡುವವರು.

## ಯೂನಿಟ್ –3 : ಹಾಡುವ........ ಹೇಳುವ..........

ಆಶಯಗಳ ವಿನಿಮಯಕ್ಕೆ ಬಾಷೆ ಅನಿವಾರ್ಯ. ಪ್ರಕೃತಿಯ ಎಲ್ಲ ಜೀವಜಾಲಗಳಿಗೂ ಅವುಗಳದ್ದೇ ಆದ ಸಂವಹನ ಪ್ರಕ್ರಿಯೆ ಇದೆ. ಸಾಮಾನ್ಯ ಮಾತುಕತೆಯಲ್ಲಿ ಸೃಜನಶೀಲತೆ ಹಾದುಬರುವಾಗ ನಿತ್ಯ ಜೀವನ ಕಲಾತ್ಮಕವಾಗುವುದು. ಸತ್ಯಾಂಶಗಳಲ್ಲಿ ಲೋಪ ಉಂಟಾಗದಂತೆ ಸುಲಭವಾಗಿ ಹೇಳಲು ಮತ್ತು ಸ್ವೀಕರಿಸಲು ಸಂಗೀತಾತ್ಮಕವಾದ ಮಾಧ್ಯಮದ ಅಗತ್ಯವಿದೆ. ಸಾಮಾನ್ಯವಾಗಿ ಸಂಭಾಷಣೆಯ ತುಣುಕುಗಳಲ್ಲಿ ರಾಗ ಮತ್ತು ತಾಳ ಸೇರುವಾಗ ನಿತ್ಯ ಜೀವನ ಸಂಗೀತಾತ್ಮಕವಾಗುವುದು.

**ಕಲಿಕಾ ಸಾಧನೆ**

ಮಾತುಗಾರಿಕೆ ಮತ್ತು ಆಲಾಪನೆಯನ್ನು (ಹೇಳುವುದು ಮತ್ತು ಹಾಡುವುದು) ತಿಳಿದುಕೊಳ್ಳುವುದು.

ನಿರ್ದಿಷ್ಟ ಸಮಯಾಂತರಗಳಲ್ಲಿ ಆವರ್ತಿಸುವ ಬಡಿತಕ್ಕೆ (ತಾಳ) ಅನುಸಾರವಾಗಿ ನಿಖರತೆಯೊಂದಿಗೆ ಆಲಾಪನೆ ಮಾಡುವುದು.

**ಆಶಯ ತಿಳುವಳಿಕೆ**

ಆಲಾಪನೆಯ ಶಬ್ದ ನಿಯಂತ್ರಣವು ಮಾತುಗಾರಿಕೆಗಿಂತ ಭಿನ್ನವಾಗಿದೆ. ಸರಿಯಾದ ಸಮಯಾಂತರಗಳಲ್ಲಿ ಆವರ್ತಿಸುವ ಬಡಿತಗಳಿಗನುಸಾರವಾಗಿ ಸಾಲುಗಳು / ಬಾಯಿತಾಳಗಳನ್ನು ಕ್ರಮೀಕರಿಸುವುದು. ಬಡಿತಗಳ ವೈವಿಧ್ಯವನ್ನು ತಿಳಿಯುವುದು.

**ಪ್ರಕ್ರಿಯೆ**

- ಪರಿಚಿತವಾದ ಕತೆಯ ಹಾಡುಗಳು / ಕತೆಗಳನ್ನು ಆರಿಸುವುದು.
- ಮಕ್ಕಳ ಮಂಡನೆ
- ಇದೇ ಹಾಡುಗಳು ಕತೆಗಳು ಎಂಬಿವುಗಳನ್ನು ಯೋಗ್ಯವಾದ ಶಬ್ಧ ಕ್ರಮೀಕರಣದ ಮೂಲಕ ಪ್ರಸ್ತುತ ಪಡಿಸುವುದು.
- ಮಕ್ಕಳು ಹಾಡನ್ನು ಆವರ್ತಿಸುವುದು, ಉಚ್ಚರಿಸುವುದು.
- ನಿರ್ದಿಷ್ಟ ಸಮಯ ಕ್ರಮೀಕರಣದಲ್ಲಿರುವ ಚಪ್ಪಾಳೆಯ ಮೂಲಕ / ಕಾಲಿನ ಚಲನೆಗಳ ಸಹಾಯದೊಂದಿಗೆ ಕತೆಗಳು, ಹಾಡುಗಳು, ಮಂಡನೆ.

**ಮೌಲ್ಯಮಾಪನ**

- ಉಚ್ಚಾರದ ಭಾವ
- ಮಂಡನೆಯ ಹಿರಿಮೆ
- ಚಲನೆಗಳೊಂದಿಗೆ ಹಾಡಿನ ಸಾಲುಗಳನ್ನು ಸೇರಿಸಿ ಹಾಡುವ ಸಾಮರ್ಥ್ಯ .

**ವಿಷಯ**

ಸಾಮಾನ್ಯ ಸಂದರ್ಭಗಳಲ್ಲಿ ಯೋಗ್ಯವಾದ ಶಬ್ಧ ವ್ಯತ್ಯಯಗಳು ಸೇರುವಾಗ ಅವು ಅಲಾಪನೆಗಳಾಗುತ್ತವೆ. ಹೇಳುವುದು, ಉಚ್ಚರಿಸುವುದು, ಎಂಬೀ ಹಂತಗಳನ್ನು ದಾಟಿ ಆಲಾಪನೆಯ ಹಂತಕ್ಕೆ ತಲುಪುವುದು. ಆಲಾಪನೆಯ ಆಶಯಗ್ರಹಿಕೆಗೂ ವಿನಿಮಯಕ್ಕೂ ಸುಗಮವಾದ ಮಾಧ್ಯಮವಾಗಿದೆ. ಮಾತುಗಾರಿಕೆ ಮತ್ತು ಆಲಾಪನೆಗೆ ಭಾವ ಅಗತ್ಯ. ರಾಗ ಮತ್ತು ತಾಳ ಸೇರುವಾಗ ಆಲಾಪನೆ ಪೂರ್ಣವಾಗುವುದು. ಸಂಭಾಷಣಾ ಪ್ರಕ್ರಿಯೆಯಲ್ಲಿ ನಿಖರವಾದ ಸಮಯ ಕ್ರಮೀಕರಣ ವ್ಯವಸ್ಥೆ , ಶಬ್ಧ ಕ್ರಮೀಕರಣ ವ್ಯವಸ್ಥೆ ಅನಿವಾರ್ಯವಾಗಿದ್ದರೂ ಆಲಾಪನೆಯಲ್ಲಿ ಇವುಗಳೆಲ್ಲವೂ ನಿಖರವಾಗಿ ಪಾಲಿಸಲ್ಪಡಬೇಕು. ಸಾಮಾನ್ಯ ಸಂಭಾಷಣೆಯು ಆಲಾಪನೆಗೆ ತಲುಪುವ ಹಂತಗಳನ್ನು ತಿಳಿದುಕೊಂಡು ವೈವಿಧ್ಯಗಳನ್ನು ಗುರುತಿಸುವುದೇ ಈ ಅಧ್ಯಾಯದ ಉದ್ದೇಶವಾಗಿದೆ.

**ಕಲಿಕಾ ಚಟುವಟಿಕೆಗಳು**

***ಚಟುವಟಿಕೆ – 1***

ವಿದ್ಯಾರ್ಥಿಗಳು ಹಿಂದಿನ ತರಗತಿಗಳಲ್ಲಿ ಕಲಿತ (ನರ್ಸರಿ ತರಗತಿಗಳಲ್ಲಿ) ಅಥವಾ ಬಾಲಮಾಸಿಕಗಳಲ್ಲಿ ಪ್ರಕಾಶನಗೊಂಡ ಹಾಡು ಮಕ್ಕಳಿಗೆ ಪರಿಚಯವಿರುವ ಕತೆಯ ಗೀತೆಗಳನ್ನು ಹಾಡಲು ಮಕ್ಕಳಿಗೆ ಅವಕಾಶ ನೀಡುವುದು. ವೈಯಕ್ತಿಕವಾಗಿಯೂ ಎರಡು

ಅಥವಾ ಮೂರು ಮಕ್ಕಳು ಗುಂಪಾಗಿಯೋ ಪ್ರಸ್ತುತಪಡಿಸಬಹುದು.
ಮಂಡನೆಯ ಸಮಯದಲ್ಲಿ ಉತ್ತಮವಾದವುಗಳನ್ನು ಅಧ್ಯಾಪಕನು ದಾಖಲಿಸಬೇಕು ನಲ್ಲಿ ) ಉತ್ತಮ ಪ್ರಸ್ತುತಿಗಳನ್ನು ಆರಿಯಲು ಮಕ್ಕಳಿಗೂ ಅವಕಾಶ ನೀಡಬಹುದು.
ಮಕ್ಕಳು ಅವರ ಮಟ್ಟದಲ್ಲಿ ಮೌಲ್ಯಮಾಪನ ಮಾಡಿ ಅಭಿಪ್ರಾಯಗಳನ್ನು ಪ್ರಕಟಪಡಿಸುವಾಗ ಅಧ್ಯಾಪಕರು ಪ್ರಶ್ನೆಗಳ ಮೂಲಕ ಮಗುವಿನಿಂದ ಹೆಚ್ಚಿನ ಅಭಿಪ್ರಾಯಗಳನ್ನು ಸಂಗ್ರಹಿಸಬೇಕು.

***ಪ್ರಶ್ನೆಗಳು***

- ಬಿಜು, ನಿಶಾ ಮತ್ತು ಸಂಧ್ಯಾ ಯಾವಯಾವ ಕಥಾಗೀತೆಗಳನ್ನು ಹಾಡಿದರು ? ನಿಮಗೆ ಇಷ್ಟವಾದ ಗೀತೆ ಯಾವುದು ?
- ಬಿಜುವಿನ ಕಥಾಗೀತೆ ಇಷ್ಟವಾಗಲು ಕಾರಣವೇನು ?
- ಸಂಧ್ಯಾಳ ಕಥಾಗೀತೆಯಲ್ಲಿ ಯಾವ ಕೊರತೆಯಿತ್ತು ?
- ಮಕ್ಕಳು ಹೇಳುವ ಉತ್ತರಗಳು ಚರ್ಚೆಯ ಮೂಲಕ ಅವರು ಪ್ರಕಟಪಡಿಸುವ ವಿಚಾರಗಳು ಎಂಬಿವುಗಳನ್ನು ಅಧ್ಯಾಪಕರ ನೆರವಿನಿಂದ ಸ್ಪಷ್ಟಪಡಿಸಿ ಅಧ್ಯಾಪಕರು ಸರಳವಾಗಿ ಪುನಃ ಆವರ್ತಿಸಿ ಹೇಳಬೇಕು.
- ಯಾವುದಾದರೂ ಒಂದು ಹೊಸ ಕಥಾಗಾನ ಅಥವಾ ಸಿಂದು ಹಾಡಿದ ಕಥಾಗಾನವನ್ನು ನಾವು ಗುಂಪಾಗಿ ಹಾಡಬಹುದೇ?

***ಚಟುವಟಿಕೆ –2***

- ಅಧ್ಯಾಪಕರು ಕಥಾಗಾನದ ತುಣುಕುಗಳನ್ನು ಯೋಗ್ಯವಾದ ಶಬ್ಧ ನಿಯಂತ್ರಣದೊಂದಿಗೆ ಪ್ರಸ್ತುತ ಪಡಿಸುವರು.
- ಮಕ್ಕಳು ಜೊತೆಗೂಡಿ ಹಾಡಲು ಹೇಳುವುದು.
- ಇದೇ ತುಣುಕುಗಳನ್ನು ಹಿಂದೆ ಹಾಡಿದ ಮಕ್ಕಳ ನೇತೃತ್ವದಲ್ಲಿ ಹಾಡಿಸುವುದು.
- ಇನ್ನಷ್ಟು ಹೊಸ ಕಥಾಗಾನಗಳನ್ನು ಸಂಗ್ರಹಿಸಲು ಹೇಳಬೇಕು.
- ಬಾಲಮಾಸಿಕಗಳೂ ಇತರ ಪುಸ್ತಕಗಳನ್ನು ಸೂಚಿಸಬಹುದು.

***ಚಟುವಟಿಕೆ –3***

- ಅಧ್ಯಾಪಕರು ಎಡೆಬಿಟ್ಟು 1/2/3/4 ಎಂದು ಹೇಳುವರು. ಎರಡು ಅಥವಾ ಮೂರು ಬಾರಿ ಆವರ್ತಿಸಿದ ಬಳಿಕ ಅವರ ಜತೆ ಹೇಳಲು ಸೂಚಿಸುವರು. ನಾಲ್ಕು ಅಥವಾ ಐದು ಬಾರಿ ಮಕ್ಕಳೊಂದಿಗೆ ಹೇಳಿದ ಬಳಿಕ ಮಕ್ಕಳು ಮಾತ್ರ ಹೇಳುವರು. ಮಕ್ಕಳು ಸಮಾಯಾಂತರಗಳನ್ನು ಸರಿಯಾಗಿ ನೆನಪಿಟ್ಟು ಚಪ್ಪಾಳೆ ತಟ್ಟಲು ಹೇಳಬೇಕು ಅಧ್ಯಾಪಕರು 1/2/3/4 ಎಂದು ಸಮಯಕ್ರಮದಲ್ಲಿ ಹೇಳುವರು. 4 ಹೇಳುವಾಗ ಮಾತ್ರ ಚಪ್ಪಾಳೆ ತಟ್ಟಲು ಹೇಳುವರು.
- ನಾಲ್ಕು ಅಥವಾ ಎಂಟು ಸಲ ಆವರ್ತಿಸಿದ ಬಳಿಕ ಅಧ್ಯಾಪಕರು 1/2/3/0 ಎಂದು ಹೇಳಿ 4 ಎಂದು ಹೇಳದಿದ್ದರೂ ಮಗು ಸರಿಯಾಗಿ ಚಪ್ಪಾಳೆ ತಟ್ಟಬೇಕು. ಈ ಚಟುವಟಿಕೆಯನ್ನು 2 ಮತ್ತು 4 ರಲ್ಲಿ ಮಾಡಲು ಹೇಳಬೇಕು. ಬಳಿಕ 1 ಮತ್ತು 2,3 ಹಾಗೂ 4 ರಲ್ಲಿಯೂ ಚಪ್ಪಾಳೆ ತಟ್ಟಿಸಬೇಕು.
- ಇದೇ ವೇಗದಲ್ಲಿ ಹಾಡಬಹುದಾದ ಪರಿಚಿತವಾದ ಒಂದೇರಡು ಹಾಡುಗಳನ್ನು ಅಧ್ಯಾಪಕರು ಆರಿಸಿ ತಾಳಾತ್ಮಕವಾಗಿ ಹಾಡುವರು. ಬಳಕ ಚಪ್ಪಾಳೆ ತಟ್ಟಿಸಿ ಹಾಡಿಸುವರು.
- ಬಳಿಕ ಮಕ್ಕಳು ಅವರಿಗೆ ತಿಳಿದಿರುವ ಹಾಡುಗಳನ್ನು ಚಪ್ಪಾಳೆ ತಟ್ಟಿ ಹಾಡಲಿ ಅವಕಾಶ ನೀಡುವರು.

## ಮೌಲ್ಯಮಾಪನ

**ಚಟುವಟಿಕೆ –1**

- ಸ್ವತಂತ್ರ ಮಂಡನೆಗೆ ಅವಕಾಶ ಲಭಿಸುವಾಗ ಸಭಾಕಂಪನವಿಲ್ಲದೆ ಸ್ವತಃ ಸಿದ್ಧವಾದ ಶೈಲಿಯಲ್ಲಿ ಪ್ರಸ್ತುತ ಪಡಿಸಿದ ಹಾಡುಗಳನ್ನು ಅಧ್ಯಾಪಕರು ತಿಳಿದುಕೊಳ್ಳುವುದು . ಧನಾತ್ಮಕ ಮೌಲ್ಯಮಾಪನದ ಮೂಲಕ ಉತ್ತಮಗೊಳಿಸುವುದು.
- ಪರಸ್ಪರ ಮೌಲ್ಯಮಾಪನದ ಮೂಲಕ ಲಭಿಸಿದ ಮಕ್ಕಳ ಅಭಿಪ್ರಾಯಗಳಿಂದ ಅವರ ಆಸ್ವಾದನಾ ಮಟ್ಟದ ಕುರಿತು ಅಧ್ಯಾಪಕರಿಗೆ ಹೆಚ್ಚಿನ ಮಾಹಿತಿ ಲಭಿಸುವುದು.

***ಚಟುವಟಿಕೆ –2***

- ಅಧ್ಯಾಪಕರ ಸಹಾಯ ಲಭಿಸಿದರೆ ಉತ್ತಮವಾಗಿ ಆಲಾಪನೆ ನಡೆಸುವರು. ಯಾರೆಂದು ತಿಳಿದಿರಬೇಕು
- ಭಾಗವಹಿಸುವ ಆಸಕ್ತಿ / ಮನೋಭಾವವನ್ನು ಪ್ರೋತ್ಸಾಹಿಸಬೇಕು.

**ಚಟುವಟಿಕೆ –3**

- ನಿರ್ದಿಷ್ಟ ಸಮಯಾಂತರಗಳಲ್ಲಿ ಜಾಗರೂಕತೆಯಿಂದ ಎಣಿಕೆಮಾಡುವವರು, ತಾಳಹಾಕುವವರು, ತಾಳಪ್ರಜ್ಞೆಯುಳ್ಳವರು ಉಳಿದವರಿಗಿಂತ ಮುಂದಿದ್ದಾರೆ.
- ಅವರಿಗೆ ಹಾಡಿನೊಂದದಿಗೆ ನಿಖರವಾಗಿ ಚಪ್ಪಾಳೆ ತಟ್ಟಲೂ ಸಾಧ್ಯವಾಗುವುದು.

***ಸೂಚಕಗಳು***

- ಸಭಾಕಂಪನವಿಲ್ಲದೆ ಹಾಡುವುದು.
- ಮಂಡನೆಯ ಹಿರಿಮೆ
- ಆಸ್ವಾದನೆ
- ಮನೋಭಾವ
- ತಾಳದಲ್ಲಿ ನಿಖರತೆ
- ತಾಳಾತ್ಮಕವಾದ ಆಲಾಪನೆ
- ತಾಳಪ್ರಜ್ಞೆ

## ಯೂನಿಟ್ – 4 : ಹಾಡೋಣ ಹಾಡಿ ಆನಂದಿಸೋಣ

ಯಾವುದೇ ಹಾಡನ್ನು ನಿರಂತರವಾಗಿ ಆವರ್ತಿಸಿ ಆಸ್ವಾದಿಸುವಾಗ ಅದು ನಮಗೆ ಸುಪರಿಚಿತ ವಾಗುವುದು. ನಿಖರವಾದ ಆವರ್ತನೆ / ತರಬೇತಿ ಎಂದು ಕರೆಯಲ್ಪಡುವ ಪರಿಚಿತವಾದ ಹಾಡುಗಳನ್ನು ಅಭ್ಯಸಿಸುವುದರ ಮೂಲಕ ಮಕ್ಕಳು ಉತ್ತಮವಾದ ಆಲಾಪನಾ ಸಾಮರ್ಥ್ಯ ವನ್ನೂ ಆತ್ಮವಿಶ್ವಾಸವನ್ನೂ ಮಕ್ಕಳು ಗಳಿಸುವರು.

## ಕಲಿಕಾ ಸಾಧನೆ

ಪರಿಚಿತವಾದ ಹಾಡುಗಳನ್ನು ಸ್ವತಃ ಹಾಡುವುದು. ವೇಗ ಹೆಚ್ಚಿಸಿಯೂ ಕಡಿಮೆಮಾಡಿಯೂ ಹಾಡುವುದು.

## ಆಶಯ ತಿಳುವಳಿಕೆ

- ಪರಿಚಿತವಾದ ಹಾಡುಗಳ ಸ್ವತಂತ್ರ ಆಲಾಪನೆ
- ಒಂದೇ ಹಾಡನ್ನು ವೇಗ ಹೆಚ್ಚಿಸಿ ಅಥವಾ ಇಳಿಸಿ ಹಾಡಲು ಸಾಧ್ಯವಿದೆ.

## ಪ್ರಕ್ರಿಯೆ

- ಗಾನಾಲಾಪನೆ
- ಹಾಡಿನ ಸರಿಯಾದ ರಾಗವನ್ನು ಕೇಳಿಸಿವುದು.
- ಅನುಕರಿಸಿ ಉತ್ತಮವಾಗಿ ಹಾಡಲು ಪ್ರಯತ್ನಿಸುವುದು.
- ಆಲಾಪನೆಗೆ ಅವಕಾಶ ನೀಡುವುದು.
- ಹಾಡುಗಳು ಮತ್ತು ಅವುಗಳ ಬಾಯಿತಾಳಗಳನ್ನು ವೇಗ ಹೆಚ್ಚಿಸಿ ಅಥವಾ ಇಳಿಸಿ ಹಾಡುವ ರೀತಿಯನ್ನು ಆಲಿಸುವುದು. ತಿಳಿದು ಅನುಕರಿಸುವುದು.
- ಹಾಡುವಾಗ ಶಬ್ಧ ವ್ಯತ್ಯಯಗಳ ಕುರಿತು ಚರ್ಚಿಸುವುದು.

## ಮೌಲ್ಯಮಾಪನ

- ಸ್ವತಂತ್ರವಾದ ಆಲಾಪನೆಯನ್ನು ಮೌಲ್ಯಮಾಪನ ಮಾಡುವುದು.
- ವೇಗ ಹೆಚ್ಚಿಸಿ ಅಥವಾ ಇಳಿಸಿ ಹಾಡುವುದರಲ್ಲಿರುವ ನಿಖರತೆ
- ಹಾಡು ತಾಳಗಳ ಹೊಂದಿಕೆ

## ವಿಷಯ

ಎಲ್ಲ ಹಾಡುಗಳಿಗೂ ನಿರ್ದಿಷ್ಟ ತಾಳಗತಿಯಿದೆ. ಅಭ್ಯಾಸಮಾಡುವ ಸಂದರ್ಭದಲ್ಲಿ ವಿಳಂಬಗತಿಯಲ್ಲಿಯಲ್ಲಿಯೂ (ಸ್ಲೋಟೆಂಪೋ) ಕ್ರಮೇಣ ನಿರ್ಧಾರಿತ ವೇಗದಲ್ಲಿಯೂ ಹಾಡಬೇಕು. ಈ ರೀತಿಯ ತರಬೇತಿಯನ್ನು ಪಡೆದ ಮಕ್ಕಳನ್ನು ಸ್ವತಃ ಹಾಡಲು ಸಮರ್ಥರನ್ನಾಗಿಸುವುದೇ ಆ ಯೂನಿಟ್‌ನ ಉದ್ದೇಶ.

## ಕಲಿಕಾ ಚಟುವಟಿಕೆಗಳು

***ಚಟುವಟಿಕೆ 1***

- ತರಗತಿಯಲ್ಲಿ ಮಕ್ಕಳಿಗೆ ಪರಿಚಿತವಾದ ಹಾಗೂ ಇಷ್ಟವಿರುವ ಹಾಡುಗಳನ್ನು ಹಾಡಲು ಅವಕಾಶ ನೀಡುವುದು. (ಆಲಾಪನೆ– ಪರಸ್ಪರ ಮೌಲ್ಯಮಾಪನಕ್ಕೆ ಅವಕಾಶ ನೀಡಬಹುದು.
- ಆಲಾಪನೆಯ ಬಳಿಕ ಮಕ್ಕಳು ಹಾಡಿದ ಹಾಡುಗಳ ಸರಿಯಾದ ರಾಗವನ್ನು ಕೇಳಲು ಅವಕಾಶ ಒದಗಿಸುವುದು.
- (ಅಧ್ಯಾಪಕರು ಹಾಡಿ ಕೇಳಿಸಬಹುದು, ಸಿ.ಡಿ ಹಾಕಿ ಕೇಳಿಸಬಹುದು.)
- ಮಕ್ಕಳು ಯಥಾರ್ಥ ರಾಗವನ್ನು ಕೇಳಿದ ಬಳಿಕ ಅವರವರ ಆಲಾಪನೆಯನ್ನು ಉತ್ತಮಗೊಳಿಸಲು ಪುನಃ ಅಭ್ಯಾಸಮಾಡುವುದರಲ್ಲಿ ನಿರತರಾಗಬೇಕು.
- ಅಧ್ಯಾಪಕರ ನೇತೃತ್ವದಲ್ಲಿ ಸಂಗೀತವನ್ನು ಕೇಳಲು ಅನೇಕ ಸಂದರ್ಭಗಳು ಸೃಷ್ಟಿಸಲ್ಪಡಬೇಕು.
- ಅಭ್ಯಾಸಮಾಡಿದ ನಂತರ ಯಥಾರ್ಥ ರಾಗವನ್ನು ಕೇಳಿ ಪುನಃ ಹಾಡಲು ಅವಕಾಶ

ಒದಗಿಸಬೇಕು. ಈ ಎರಡನೇ ಸಲ ಹಾಡಿದ ಬಳಿಕ ಮೊದಲು ಮತ್ತು ಎರಡನೇ ಬಾರಿ ಹಾಡಿದಾಗ ಉಂಟಾದ ವ್ಯತ್ಯಾಸವನ್ನು ಸೂಚಿಸಬೇಕು.

- ಮಕ್ಕಳೊಂದಿಗೆ ಕಿರು ಚರ್ಚೆ (ಎರಡು ಪ್ರಸ್ತುತಿಗಳ ಕುರಿತಾಗಿಯೂ ಚರ್ಚಿಸಬೇಕು.)
- ಸಂಗೀತವನ್ನು ಕೇಳುವುದರಿಂದ ಮಗುವಿನಲ್ಲಿ ಸಂಗೀತಾಭಿರುಚಿ ಮತ್ತು ಸೃಜನಾತ್ಮಕ ಸಾಮರ್ಥ್ಯ ಹೆಚ್ಚುವುದು.

***ಚಟುವಟಿಕೆ 1***

- ಮಕ್ಕಳಿಗೆ ಪರಿಚಿತವಾದ ಹಾಗೂ ಸುಲಭವಾದ ಹಾಡುಗಳನ್ನು ಮಕ್ಕಳೊಂದಿಗೆ ಚರ್ಚಿಸಿ ಅಧ್ಯಾಪಕರು ಆರಿಸುವುದು.

  ಉದಾಹರಣೆಗಳು :

  1 ತನ್ನನಂ ತಾನನ್ನಂ ತಾಳತ್ತಿಳಾಡಿ
  ಮಂದಾರಕೊಂಬತ್ತೊರುಇಾಲಿಲಾಡಿ
  ಒನ್ನಿಚ್ಚುರಂಡೋಮಲ್ ಪೈಂಗಿಳಿಕಳ್
  ಒನ್ನಾನಂ ಕುನ್ನಿಲೆ ಓಮನಕಳ್
  ಕಾಟಿಲೆ ಕಿಂಙಿಣಿಕಳ್

  2 ಅಚ್ಚನ್ ಕೊಂಬತ್ತ್ – ತೆಯ್ಯಂದಾರೋ ತೆಯ್
  ಅಮ್ಮ ವರಂಬತ್ತ್ – ತೆಯ್ಯಂದಾರೋ ತೆಯ್
  ಅಮ್ಮಾನಕೂಟಂ – ತೆಯ್ಯಂದಾರೋ ತೆಯ್
  ಅಚ್ಚನ್ ಕೊಂಬತ್ತಮ್ಮವರಂಬತ್ತಮ್ಮಾನಕೂಟಂ
  ತೆಯ್ಯಂದಾರೋ, ತೆಯ್ಯಂದಾರೋ, ತೆಯ್ಯಂದಾರೋ, ತೆಯ್
  ....................................................................................................

  3. ಅಳಿಲೆ ಅಳಿಲೇ ಬಾ ಬಾ ಅಳಿಲೇ
  ಮರದಿಂದಿಳಿದು ಬಾ ಬಾ ಅಳಿಲೇ
  ..........................................................

- ಈ ರೀತಿಯ ಹಾಡುಗಳನ್ನು ವೇಗವನ್ನು ಇಳಿಸಿ ಹಾಡಿಸುವುದು
- ವಿವಿಧ ಗುಂಪುಗಳಿಗೆ ಅವಕಾಶ ನೀಡುವುದು.

## ಮೌಲ್ಯಮಾಪನ

*ಸೂಚಕಗಳು :*

- ಆಲಾಪನೆಯ ಹಿರಿಮೆ
- ವೇಗ ಹೆಚ್ಚಿಸಿ, ಇಳಿಸಿ ಹಾಡುವಾಗ ತಾಳದ ನಿಖರತೆ
- ಹಾಡುವಾಗ ಸ್ವರಗಳ ಹೊಂದಿಕೆ

# ಎರಡನೇ ತರಗತಿ

## ಯೂನಿಟ್ 1 – ಪ್ರಕೃತಿಯ ಶಬ್ದ

ಪ್ರಕೃತಿಯ ಶಬ್ದಗಳ ಒಟ್ಟುಸೇರುವಿಕೆಯ ಮನೋಹರವಾದ ಹಾಗೂ ಮನಸ್ಸನ್ನು ರಂಜಿಸುವ ವಾದ್ಯಮೇಳವಾಗಿ ಅನುಭವವಾಗುವುದು. ನಿರ್ದೇಶಿತ ಕ್ರಮಗಳಿಲ್ಲದೆ ಜೀವಜಾಲಗಳು ಮತ್ತು ಪ್ರಕೃತಿಯ ವಿದ್ಯಮಾನಗಳು ನಮಗೆ ಒದಗಿಸುವ ಶಬ್ದಮೇಳಗಳು ನಾವು ಕೇಳಿರುವ ಕೇಳಲಿರುವ ವಾದ್ಯ ಸೃಷ್ಟಿಗಳಿಗೆಲ್ಲ ಪ್ರೇರಣೆಯಾದುದು. ಶಬ್ಧಗಳು ಪರಸ್ಪರ ಬೆರೆತಾಗ ಉಂಟಾಗುವ ದೀರ್ಘವಾದ ಮತ್ತು ಹೃಸ್ವ ಶಬ್ದಗಳು ಮತ್ತು ಶ್ರವಣ ಮತ್ತು ಆಸ್ವಾದನೆಯ ಸೌಂದರ್ಯವನ್ನು ಹೆಚ್ಚಿರುತ್ತವೆ. ಈ ರೀತಿಯ ಶಬ್ದಗಳನ್ನು ಸೂಕ್ಷ್ಮತೆಯೊಂದಿಗೆ ನಿರೀಕ್ಷಣೆ ಮಾಡಲು, ಅವುಗಳ ಅನಂತ ಸಾಧ್ಯತೆಗಳನ್ನು ತಿಳಿದುಕೊಳ್ಳಲು ಅಗತ್ಯವಾದ ಚಟುವಟಿಕೆಗಳನ್ನು ಈ ಯೂನಿಟ್‌ನಲ್ಲಿ ಉದ್ದೇಶಿಸಲಾಗಿದೆ.

### ಕಲಿಕಾ ಸಾಧನೆ

- ಪ್ರಕೃತಿಯ ಶಬ್ದಗಳನ್ನು ಸೂಕ್ಷ್ಮತೆಯೊಂದಿಗೆ ತಿಳಿದುಕೊಳ್ಳುವುದು.
- ಸರಿಯಾಗಿ ಅನುಕರಿಸುವುದು.

### ಆಶಯ, ತಿಳುವಳಿಕೆ

- ಸಮ್ಮಿಶ್ರ ಶಬ್ದಗಳನ್ನು ಶ್ರದ್ಧೆಯಿಂದ ಆಲಿಸುವುದು.
- ವಿವಿಧ ಸಮಯಗಳು, ವಿವಿಧ ರೀತಿಯ ಶಬ್ದಗಳು,
- ಇಂಪಾಗಿಲ್ಲದ ಶಬ್ದಗಳು
- ಇಂಪಾದ ಶಬ್ದಗಳ ಒಟ್ಟು ಸೇರುವಿಕೆ, ಸಂಗೀತ ಸೃಷ್ಟಿಗಳ ಮೂಲ

### ಪ್ರಕ್ರಿಯೆ

- ವಿವಿಧ ಶಬ್ದಗಳನ್ನು ಆಲಿಸುವುದು ಅನುಕರಿಸುವುದು.
- ವಿವಿಧ ಸಮಯಗಳಲ್ಲಿ ಕೇಳುವ ಶಬ್ದಗಳ ನಿರೀಕ್ಷಣೆ, ಮಂಡನೆ
- ವ್ಯತ್ಯಾಸಗಳು, ವೈಶಿಷ್ಟ್ಯಗಳನ್ನು ಗುರುತಿಸುವ ಗುಂಪು ಚಟುವಟಿಕೆಗಳು

### ಮೌಲ್ಯಮಾಪನ

ವಿವಿಧ ಹಂತಗಳಲ್ಲಿ ಸಂದರ್ಭಕ್ಕನುಸಾರವಾಗಿ

- ಅಭಿವ್ಯಕ್ತಿಗಳು

- ಗುರುತಿಸುವ ಸಾಮರ್ಥ್ಯ
- ಸೃಜನಾತ್ಮಕ ಸಾಮರ್ಥ್ಯ

## ವಿಷಯ

ವೈವಿಧ್ಯಮಯವಾದ ಶಬ್ದಗಳನ್ನು ಸೂಕ್ಷ್ಮವಾಗಿ ನಿರೀಕ್ಷಣೆ ಮಾಡಿ ಅವುಗಳ ಕ್ರಮಬದ್ಧವಾದ ಒಟ್ಟುಸೇರುವಿಕೆ, ಅವುಗಳು ಪ್ರಕೃತಿಯಲ್ಲಿ ಸೃಷ್ಟಿಸುವ ಸಂಗೀತವನ್ನು ತಿಳಿದುಕೊಳ್ಳುವುದು ಹಾಗೂ ಸಾಧ್ಯತೆಗಳನ್ನು ಅರ್ಥೈಸಿಕೊಳ್ಳುವುದು ಈ ಯೂನಿಟ್‌ನ ಉದ್ದೇಶವಾಗಿದೆ.

## ಕಲಿಕಾ ಚಟುವಟಿಕೆಗಳು

- ಅಧ್ಯಾಪಕರು ಒಂದು ಕವಿತೆಯನ್ನು ಚಾರ್ಟಿನಲ್ಲಿ ಪ್ರದರ್ಶಿಸುವರು.

| | |
|---|---|
| ಹಗಲುಂಟು | ರಾತ್ರಿಯುಂಟು |
| ಮುಂಜಾನೆಯುಂಟು | ಅಸ್ತಮಯವುಂಟು |
| ಬಿಸಿಲುಂಟು | ಮಳೆಯುಂಟು |
| ಗಾಳಿಯುಂಟು | ವಾಸನೆಯುಂಟು |
| ಮಧುವುಂಟು | ಜೀರುಂಡೆಯುಂಟು |
| ಚಳಿಯುಂಟು | ಕನಸುಂಟು |
| ಗುಡಿಸಲಿನ | ಹಾಡಿದೆ ಮನದಾಳದಲ್ಲಿ.. |

- ಅಧ್ಯಾಪಕರು ಕವಿತೆಯ ಸಾಲುಗಳನ್ನು ಹೇಳಿ ಪರಿಚಯಿಸುವುದು
- ಮಕ್ಕಳು ಅದೇ ರೀತಿ ಹಾಡುವುದು.
- ಅಧ್ಯಾಪಕರು ತಾಳದೊಂದಿಗೆ ಸರಳವಾದ ರಾಗವನ್ನು ಸೇರಿಸಿ ಹಾಡುವರು.
- ಮಕ್ಕಳು ಜೊತೆಯಲ್ಲಿ ಹಾಡುವರು.
- ಅಧ್ಯಾಪಕರು ಮಕ್ಕಳನ್ನು ಎರಡು ಗುಂಪುಗಳಾಗಿ ವಿಂಗಡಿಸುವರು.
- ಗುಂಪುಗಳಿಗೆ ಹೆಸರು ನೀಡಬಹುದು (ಗುಂಪಾಗಿ ಹಾಡುವಾಗ).
- ಸ್ವರಗಳ ಹೊಂದಿಕೆಯನ್ನು ಮೌಲ್ಯಮಾಪನ ಮಾಡಬೇಕು. ಉದಾ: ಗ್ರೀಷ್ಮ, ಶಿಶಿರ, ರಾಗ ಅಥವಾ ತಾಳ
- ಕವಿತೆಯ ಸಾಲುಗಳನ್ನು ಎರಡು ತಂಡದವರು ಬದಲಿಸಿ ಹಾಡುವುದು. ಹಾಡಿನ ಸಾಲುಗಳನ್ನು ಅಧ್ಯಾಪಕರು ಮಕ್ಕಳಿಗೆ ಹೇಳುವುದು. ಚಿಕ್ಕ ಭಾಗಗಳನ್ನು ಮಕ್ಕಳಲ್ಲಿ ಆವರ್ತಿಸಲು ಹೇಳುವುದು.

***ಹಾಡುವ ಕ್ರಮ***

ಗುಂಪು – ರಾಗ

ಗುಂಪು – ತಾಳ

ಗುಂಪು – ರಾಗ

ಗುಂಪು – ತಾಳ

ರಾಗ – ತಾಳ

- ಗುಂಪುಗಳು ಸಾಲುಗಳನ್ನು ಬದಲಾಯಿಸಿ ಹಾಡುವ ನಿಖರತೆ, ತಾಳದ ಅರಿವು ಎಂಬಿವುಗಳನ್ನು ಮೌಲ್ಯಮಾಪನ ಮಾಡಬೇಕು.
- ಕವಿತೆಯಲ್ಲಿ ಸೂಚಿಸಿರುವ ವಿಭಿನ್ನವಾದ ಸಮಯದ ಆಧಾರದಲ್ಲಿ ಮಕ್ಕಳನ್ನು ಪುನಃ ಗುಂಪುಗಳಾಗಿ ವರ್ಗೀಕರಿಸುವುದು.
- ಗುಂಪುಗಳ ಹೆಸರುಗಳು : ರಾತ್ರಿ, ಹಗಲು, ಮುಂಜಾನೆ, ಮುಸ್ಸಂಜೆ
- ಪ್ರತಿಯೊಂದು ಗುಂಪಿಗೂ ಅವರವರ ಹೆಸರಿಗೆ ಸಂಬಂಧಿಸಿದ ಚಟುವಟಿಕೆಗಳನ್ನು ನೀಡುವುದು.

***ಗುಂಪು 1 – ರಾತ್ರಿ***
ರಾತ್ರಿವೇಳೆಗಳಲ್ಲಿ ಸಾಮಾನ್ಯವಾಗಿ ಕೇಳಿಬರುವ ಪ್ರಕೃತಿಯ ಶಬ್ದಗಳನ್ನು ಪ್ರಸ್ತುತಪಡಿಸುವುದು. (ಜೀವಜಾಲಗಳ, ಗಾಳಿಯ, ಮಳೆಯ.......... ಇತ್ಯಾದಿ.)

***ಗುಂಪು 2 – ಹಗಲು***
ಹಗಲು ಹೊತ್ತಿನಲ್ಲಿ ಕೇಳುವ ಶಬ್ದಗಳನ್ನು ಪ್ರಸ್ತುತಪಡಿಸುವುದು.

***ಗುಂಪು 3 – ಮುಂಜಾನೆ***
ಬೆಳಗಾಗುವಾಗ ಕೇಳಿ ಬರುವ ಶಬ್ದಗಳ ಮಂಡನೆ

***ಗುಂಪು 4 – ಮುಸ್ಸಂಜೆ***
ಸಂಧ್ಯಾಸಮಯದಲ್ಲಿ ಉಂಟಾಗುವ ಶಬ್ದಗಳ ಮಂಡನೆ

- ಅಧ್ಯಾಪಕರ ಸಹಾಯ – ಪ್ರತಿಯೊಂದು ಗುಂಪು ಮಂಡಿಸುವ ಶಬ್ದಗಳನ್ನು ಪರಿಶೀಲಿಸಿ ಕ್ರಮಬದ್ಧಗೊಳಿಸಿ ಪ್ರಸ್ತುತಪಡಿಸಲು ಸಹಾಯ ಮಾಡುವುದು.
- ಅಧ್ಯಾಪಕರು ಪ್ರತಿಯೊಂದು ಗುಂಪಿನಲ್ಲಿ ಮಂಡಿಸಲು ಹೇಳುವುದು.
- ಗುಂಪುಗಳ ಮಂಡನೆ
- ಪ್ರತಿಯೊಂದು ಗುಂಪು ಇತರ ಗುಂಪುಗಳ ಮಂಡನೆಯನ್ನು ಆಸ್ವಾದಿಸಿ ಅಭಿಪ್ರಾಯಗಳನ್ನು ಹೇಳುವಾಗ ಅಧ್ಯಾಪಕರು ಮೌಲ್ಯಮಾಪನ ಮಾಡಬೇಕು.

***ಮಂಡನೆಯ ಆಸ್ವಾದನೆಯ ಅಭಿಪ್ರಾಯಗಳನ್ನು ಹೆಚ್ಚು ಸ್ಪಷ್ಟವಾಗುವಂತೆ ಮಾಡಲು ಅಧ್ಯಾಪಕರು ಮಕ್ಕಳಿಗೆ ನೀಡುವ ಪೂರಕ ಪ್ರಶ್ನಾವಳಿ***

- ಯಾವ ಯಾವ ಶಬ್ದಗಳನ್ನು ಕೇಳಿದಿರಿ?
- ಯಾವ ಶಬ್ದಗಳನ್ನು ಆಸ್ವಾದಿಸಿರಿ?
- ಎಲ್ಲ ಸಮಯಗಳಲ್ಲಿ ಈ ಶಬ್ಧಗಳನ್ನು ಕೇಳಲು ಸಾಧ್ಯವಾಗುವುದೇ?
- ಒಂದೇ ಶಬಗಳಿಗೆ ಸಮಯ ಬದಲಾವಣೆಗನುಸರಿಸಿ ವ್ಯತ್ಯಾಸದ ಅನುಭವವಾಗುತ್ತಿದೆಯೇ?
- ಮಂಡಿಸಲ್ಪಟ್ಟ (ಪ್ರತಿಯೊಂದು ಗುಂಪು) ಶಬ್ದಗಳಲ್ಲಿ ಪ್ರತ್ಯೇಕವಾದವುಗಳೆಂದು ತೋರುವ ಶಬ್ಧಗಳಿವೆಯೇ? ಪ್ರತ್ಯೇಕತೆಯೇನು?

## ಮೌಲ್ಯಮಾಪನ

- ನಿಖರವಾಗಿ ಹೇಳುವ, ಹಾಡುವ ಸಾಮರ್ಥ್ಯ
- ಸಂಘಪ್ರಜ್ಞೆ, ನಾಯಕತ್ವ ಗುಣ
- ನಿರೀಕ್ಷಣಾ ಶೈಲಿ, ಮಂಡನೆಯ ಶೈಲಿ

- ಆಸ್ವಾದನೆ
- ಸೃಜನಾತ್ಮಕ ಸಾಮರ್ಥ್ಯ

**ಮುಂದುವರಿದ ಚಟುವಟಿಕೆಗಳು**

- ಒಂದು ದಿನ ವಿವಿಧ ಸಮಯ/ವಿವಿಧ ಸಂದರ್ಭಗಳನ್ನು ಪ್ರತಿನಿಧೀಕರಿಸುವ ಆಡಿಯೋ, ವಿಡಿಯೋ ಸಿ.ಡಿಗಳನ್ನು ಕೇಳುವಂತೆ ಮಾಡುವುದು, ಪ್ರದರ್ಶಿಸುವುದು.
- ಪರಿಚಯವಿರುವ ಸಿನೆಮಾ ಹಾಡುಗಳು, ಕಾರ್ಟೂನ್ ಸಿ.ಡಿಗಳು ಎಂಬಿವುಗಳಲ್ಲಿ ಆವಿಷ್ಕರಿಸಿದ ಸಂದರ್ಭೋಚಿತವಾದ ಸಂಗೀತ ರಚನೆಗಳು

**ರೆಫರೆನ್ಸ್**

- ಕಾಡಿನ ಹಾಡು (ಮನೋರಮ ವಿ.ಸಿ.ಡಿ)
- ಚಿಂಟುನರಿ ವಿ.ಸಿ.ಡಿ
- ಪೂಪಿ (ಮನೋರಮ ವಿಷನ್)
- ಮಂಜಾಡಿ (ಮನೋರಮ ವಿಷನ್)
- ಹಸಿರೆಲೆ ಕೂಟ (ಡಿಜಿಟಲ್ ಮೀಡಿಯ, ಎರ್ನಾಕುಲಂ)
- ಮ್ಯೂಸಿಕ್ ಟುಡೆ
- ನೇಚರ್
- ಡೆಸಾರ್ಟ್
- ವಿಂಡ್, ಫಯರ್, ರೆಯ್ನ್
- ಮನ್ಸೂನ್ ಅನುರಾಗ (ಮನೋರಮ ಮ್ಯೂಸಿಕ್)

## ಯೂನಿಟ್ 2 – ಪ್ರತ್ಯೇಕಿಸುವ, ಸಂಗ್ರಹಿಸುವ

**ಮುನ್ನುಡಿ**

ನಾವು ಕೇಳುವ ಶಬ್ಧಗಳಿಗೆ ರಾಗವೂ ಸೇರಿದಾಗ ಶಬ್ದ ಒಂದು ಮಧುರವಾದ ಅನುಭವವಾಗುವುದು. ಈ ಅನುಭವವು ಜೀವಜಾಲಗಳಲ್ಲಿ ದೊಡ್ಡ ಬದಲಾವವಣೆಯನ್ನು ಉಂಟುಮಾಡುವುದು. ಶಬ್ದ ವೈವಿಧ್ಯಗಳು ಅನೇಕವಿರುವ ಈ ಜಗತ್ತಿನಲ್ಲಿ ಅವುಗಳ ಸ್ವಂತಿಕೆಯನ್ನು ಮಾನದಂಡವಾಗಿರಿಸಿ ವಿಂಗಡಿಸಿ ಯಾವುದು ಯಾವುದಕ್ಕೆ ಯೋಗ್ಯವೆಂದು ಕಂಡುಹಿಡಿಯುವುದುಹೊಸ ಸೃಜನಶೀಲ ಕೃತಿಗಳಿಗೆ ದಾರಿಮಾಡಿಕೊಡುವುದು. ಪ್ರಕೃತಿಯ ಜೀವಜಾಲಗಳು, ಇತರ ಘಟಕಗಳು ಮುಂತಾದುವುಗಳು ಈ ಯೂನಿಟ್ ನಲ್ಲಿ ಪ್ರತಿಪಾದಿಸಲಾಗಿದೆ.

**ಕಲಿಕಾ ಸಾಧನೆ**

ಪರಿಚಿತವಾದ ಶಬ್ದಗಳನ್ನು ವಿವಿಧ ಮಾನದಂಡಗಳನ್ನು ಉಪಯೋಗಿಸಿ ವರ್ಗೀಕರಿಸುವುದು.

**ಆಶಯ, ತಿಳುವಳಿಕೆ**

- ನಿರಂತರವಾಗಿ ಆರ್ಜಿಸುವ ಶ್ರವಣ ನೈಪುಣ್ಯ
- ಇಂಪಾದ ಇಂಪಾಗಿಲ್ಲದ ಶಬ್ದಗಳು
- ಜೀವಜಾಲಗಳು ಪ್ರಕೃತಿ, ಮನುಷ್ಯ ನಿರ್ಮಿತ ಉಪಕರಣಗಳು, ಆಟದ ವಾದ್ಯೋಪಕರಣಗಳು ಎಂಬಿವುಗಳ ಶಬ್ದ ವೈವಿಧ್ಯಕ್ಕೆ ಸಂಬಂಧಿಸಿದ ತಿಳುವಳಿಕೆ.

## ಪ್ರಕ್ರಿಯೆ

- ಶಿಶುಗೀತೆಗಳ, ರೆಕಾರ್ಡ್‌ಮಾಡಿದ ಶಬ್ದಗಳ ಯಥಾರ್ಥ ಮೂಲ ವಿವಿಧ ಶಬ್ದ ಮೂಲಗಳಿಂದಿರುವ ಶಬ್ದಗಳನ್ನು ಆಲಿಸುವುದು.
- ಇಂಪಾದವುಗಳು, ಇಲ್ಲದವುಗಳು ಎಂಬುದಾಗಿ ವರ್ಗೀಕರಿಸುವುದು.
- ಆಟದ ವಾದ್ಯೋಪಕರಣಗಳನ್ನು ತಯಾರಿಸುವುದು ಹೇಗೆಂದು ಕಂಡುಹಿಡಿಯಲು ಪ್ರಯತ್ನಿಸುವುದು.

## ಮೌಲ್ಯಮಾಪನ

- ಶ್ರವಣದ ಹಿರಿಮೆ
- ಮಕ್ಕಳ ಅಭಿವ್ಯಕ್ತಿಯ ಮೌಲ್ಯಮಾಪನ
- ವಾದ್ಯೋಪಕರಣ ನಿರ್ಮಾಣದ ಹಿರಿಮೆಯ ಮೌಲ್ಯಮಾಪನ
- ತಾಳಾತ್ಮಕವಾಗಿ ಉಪಯೋಗಿಸುವುದು.

## ವಿಷಯ

ಪ್ರಕೃತಿಯ ವಿವಿಧ ವಸ್ತುಗಳ ಅನನ್ಯವಾದ ಹಾಗೂ ವೈವಿಧ್ಯಮಯವಾದ ಶಬ್ಧಗಳನ್ನು ಮಾನದಂಡಗಳ ಆಧಾರದಲ್ಲಿ ವಿಂಗಡಿಸಿ ಪ್ರಾಕೃತಿಕ ವಸ್ತುಗಳಿಂದ ಸರಳ ವಾದ್ಯೋಪಕರಣಗಳನ್ನು ತಯಾರಿಸಬೇಕು.

## ಕಲಿಕಾ ಚಟುವಟಿಕೆಗಳು

### ಚಟುವಟಿಕೆ 1

- ಬಿದಿರುಗಳು ಒರಸುವಾಗ ಉಂಟಾಗುವ ಶಬ್ದ ಗೆರಟೆಯನ್ನು ತಟ್ಟಿ ತಾಳ ಹಾಕುವ ಶಬ್ದ, ಕಲ್ಲುಗಳನ್ನು ಪರಸ್ಪರ ಕುಟ್ಟಿ ಉಂಟುಮಾಡುವ ಶಬ್ದ, ಮರದತುಂಡುಗಳನ್ನು ಪರಸ್ಪರ ತಟ್ಟಿ ತಾಳ ಹಿಡಿಯುವ ಶಬ್ದ, ಕಲ್ಲಿಗೆ ಗೆರಟೆನ್ನು ಉಜ್ಜುವಾಗ ಉಂಟಾಗುವ ಶಬ್ದ, ಟಿನ್‌ಶೀಟಿಗೆ ಬಡಿಯುವಾಗ ಉಂಟಾಗುವ ಶಬ್ದ, ನಯವಾದ ನೆಲದಲ್ಲಿ ಚಪ್ಪಲಿ ಧರಿಸಿ ನಡೆಯುವ ಶಬ್ದ ಬಾಚಣಿಗೆಯಲ್ಲಿ ಪೇಪರನ್ನಿರಿಸಿ ಊದುವ ಶಬ್ದ, ಶಂಖದ ಶಬ್ದ, ಗೆರಟೆಗೆ ಪ್ಲಾಸ್ಟಿಕ್ ವಯರನ್ನು ಎಳೆದುಕಟ್ಟಿ ಮೀಟುವ ಶಬ್ದ, ತಂತಿಗಳನ್ನು ಎಳೆದು ಕಟ್ಟಿ ತಟ್ಟುವ ಶಬ್ದ, ಗ್ಲಾಸಿನಲ್ಲಿ ನೀರು ತುಂಬಿ ಅಥವಾ ತುಂಬಿಸದೆ ತಟ್ಟುವ ಶಬ್ದ, ಸೋರೆಕಾಯಿಗೆ ತಂತಿಬಿಗಿದು ಮೀಟುವ ಶಬ್ದ ಎಂಬಿವುಗಳನ್ನು ಅಧ್ಯಾಪಕರು ರೆಕಾರ್ಡ್ ಮಾಡಿ ತಂದು ಮಕ್ಕಳನ್ನು ಮೌನವಾಗಿ ಕಣ್ಣುಮುಚ್ಚಿ ಕುಳಿತುಕೊಳ್ಳಿಸಿದ ಬಳಿಕ ಕೇಳುವಂತೆ ಮಾಡಬೇಕು.
- ಶಬ್ದಗಳನ್ನು ಒಂದೆರಡು ಸಲ ಕೇಳಿಸಿದ ಬಳಿಕ ಅಧ್ಯಾಪಕರು ಒಂದು ಕಿರು ಚರ್ಚೆಯತ್ತ ಮುನ್ನಡೆಸಬೇಕು.
  - ಈ ರೀತಿಯ ಶಬ್ದಗಳನ್ನು ನಾವು ಧಾರಾಳವಾಗಿ ಕೇಳಿರುವೆವು.
  - ಯಾವ ಯಾವ ಶಬ್ದಗಳನ್ನು ಕೇಳಿರುವಿರಿ ಎಂದು ನೆನಪು ಮಾಡಿ ಹೇಳಬಹುದೇ?
  - ಯಾವ ಯಾವ ವಸ್ತುಗಳನ್ನು ತಟ್ಟಿದಾಗ ಅಥವಾ ಕುಟ್ಟಿದಾಗ ಶಬ್ದ ಬದಲಾಯಿತು.
  - ಪತ್ತೆ ಹಚ್ಚಲು ಕಷ್ಟವಾದ ಶಬ್ದಗಳಿದ್ದುವೇ?

- ಇದಕ್ಕಿಂತ ಮೊದಲು ಅನೇಕ ಸಲ ಕೇಳಿದ ಶಬ್ದಗಳು ಯಾವುವು?
- ಹೆಚ್ಚು ಮಧುರವಾಗಿ ತೋರಿದ ಶಬ್ದಗಳನ್ನು ನೆನಪಿಸಿ ಹೇಳಬಹುದೇ?

- ಮಕ್ಕಳ ಅಭಿಪ್ರಾಯಗಳಿಗೆ ಪ್ರೋತ್ಸಾಹ ನೀಡಿ ಅಧ್ಯಾಪಕರು ಅವುಗಳನ್ನು ಬೋರ್ಡಿನಲ್ಲಿ ಬರೆಯುವರು.
- ಇಲ್ಲಿ ಚರ್ಚೆಯಲ್ಲಿ ಸರಿಯಾಗಿ ಭಾಗವಹಿಸಿದವರು ಶಬ್ದಗಳು ಅವುಗಳ ಮೂಲಗಳನ್ನು ಕಂಡುಹಿಡಿದವರನ್ನು ಅಧ್ಯಾಪಕರು ಗಮನಿಸಬೇಕು.
- ಮಕ್ಕಳು ಅಭಿಪ್ರಾಯಗಳನ್ನು ಹೇಳುವಾಗ ಇಂಪಾದ, ಇಂಪಾಗಿಲ್ಲದ ಶಬ್ದಗಳನ್ನು ಅಧ್ಯಾಪಕರು ಪಟ್ಟಿ ಮಾಡಬೇಕು.

***ಚಟುವಟಿಕೆ 2***

- ಹಾಗಾದರೆ ಚಿನ್ನುವಿನಲ್ಲಿ ನಾವೊಂದು ಹಾಡುಹಾಡಿಸೋಣ.
- ಗೆಳೆಯರಾದ ನೀವು ನಿಮಗೆ ನೀಡಿದ ವಸ್ತುಗಳನ್ನು ಉಪಯೋಗಿಸಿ ತಾಳ ಹಾಕುವಿರಾ?
  - ಗೆರಟೆಗಳು
  - ಬಿದಿರಿನ ತುಂಡುಗಳು
  - ಮರದ ತುಂಡುಗಳು
  - ಸೋಡಾಬಾಟಲಿಯ ಮುಚ್ಚಳಗಳು (ಒಂದಕ್ಕಿಂತ ಹೆಚ್ಚು ಸಂಖ್ಯೆಗಳಲ್ಲಿ ಪೋಣಿಸಿದವುಗಳು)
  - ಕಾರ್ಡ್‌ಬೋರ್ಡ್ ಪೆಟ್ಟಿಗೆಗಳು
  - ಚಿಕ್ಕ ಸ್ಟೀಲ್‌ಪ್ಲೇಟ್, ಚರ್ಮ ಇತ್ಯಾದಿ
- ಚಿನ್ನುವಿನ ಹಾಡಿನ ಪ್ರತಿಯೊಂದು ಚರಣದಲ್ಲಿಯೂ ಬೇರೆ ಬೇರೆ ವಸ್ತುಗಳಿಂದ ತಾಳ ಹಿಡಿಯಲು ಹೇಳಬೇಕು.
- ಹಾಡಿನ ಕೊನೆಯಲ್ಲಿ ಎಲ್ಲ ಉಪಕರಣಗಳನ್ನು ಒಟ್ಟಿಗೆ ಉಪಯೋಗಿಸಬೇಕು. (ತಾಳದಲ್ಲಿ ನಿಖರತೆಯನ್ನು ಪ್ರದರ್ಶಿಸುವ ಮಕ್ಕಳನ್ನು ಅಧ್ಯಾಪಕರು ಕಂಡುಹಿಡಿಯಬೇಕು.

***ಚಟುವಟಿಕೆ 3***

- ನಮಗೆ ಲಭ್ಯವಾದ ಈ ರೀತಿಯ ವಸ್ತುಗಳಿಂದ ಸರಳವಾದ ವಾದ್ಯೋಪಕರಣಗಳನ್ನು ತಯಾರಿಸಬಹುದೇ?
- ನಿರ್ಮಾಣ ಕಲೆಯಲ್ಲಿ ನಿಪುಣರಾದ ಮಕ್ಕಳು ಮತ್ತು ಅಧ್ಯಾಪಕರ ನೇತೃತ್ವದಲ್ಲಿ ನಿರ್ಮಾಣ ಚಟುವಟಿಕೆಗಳಿಗೆ ಚಾಲನೆ ನೀಡುವುದು.
  - ಸೋಡಾಬಾಟ್ಲಿಯ ಮುಚ್ಚಳಗಳನ್ನು ಸರಿಯಾದ ಕ್ರಮದಲ್ಲಿ ಸರಿಗೆಯಿಂದ ಜೋಡಿಸುವುದು.
  - ದೊಡ್ಡ ಗೆರಟೆಯ ಹೊರಬದಿಗಳನ್ನು ನಯಗೊಳಿಸಿದ ಬಳಿಕ ತೆರೆದ ಬದಿಗೆ ಪ್ಲಾಸ್ಟಿಕ್ ಶೀಟನ್ನು ಬಿಗಿಯಾಗಿ ಅಂಟಿಸುವುದು.
  - ಎರಡು ಗೆರಟೆಗಳನ್ನು ಎದುರುಬದುರಾಗಿ ಅಂಟಿಸಿ (ಒಳಗೆ ಸ್ವಲ್ಪ ಹರಳು ಕಲ್ಲುಗಳನ್ನು ಹಾಕಿದ ಬಳಿಕ) ಒಂದು ಕೋಲನ್ನು ಜೋಡಿಸುವುದು.

## ಮೌಲ್ಯಮಾಪನ

- ನಿರೀಕ್ಷಣಾ ಕೌಶಲ್ಯ – ಶಬ್ದಗಳನ್ನು ಗುರುತಿಸುವ ಸಾಮರ್ಥ್ಯ
- ವಾದ್ಯೋಪಕರಣಗಳನ್ನು ಉಪಯೋಗಿಸುವ ಸಾಮರ್ಥ್ಯ
- ಉಪಕರಣ ನಿರ್ಮಾಣದ ಸಹಭಾಗಿತ್ವ , ಹಿರಿಮೆ

# ಯೂನಿಟ್ 3 – ಸಂಭಾಷಣಾ ಗೀತೆಗಳು

ಅಕ್ಷರಗಳನ್ನು ಒಟ್ಟುಸೇರಿಸಿ ಪದಗಳನ್ನು ಉಚ್ಚರಿಸಲು ಪ್ರಾಂಭಿಸುವವಾಗಲೇ ಮಗು ಅದರ ಭಾವನೆಗನುಸರಿಸಿ ಕತೆ ಹೇಳುವುದು ಸಣ್ಣ ಪುಟ್ಟ ಹಾಡುಗಳನ್ನು ಹಾಡುವುದು. ಹೂವಿನೊಂದಿಗೂ, ಬೆಕ್ಕಿನೂಂದಿಗೂ, ಕಾಗೆಯೊಂದಿಗೂ, ಅಳಿಲಿನೊಂದಿಗೂ ಅವನು ರಾಗವಾಗಿ ವಯ್ಯಾರದೊಂದಿಗೆ ಮಾತನಾಡುವುದು ಕಥಾಗೀತೆಗಳಿಗೂ ಸಂಭಾಷಣಾ ಗೀತೆಗಳಿಗೂ ದಾರಿಮಾಡಿಕೊಡುವುದು. ಆಲಾಪನೆ ಹಾಗೂ ಅಭಿನಯದ ತಾಳಹಿಡಿಯುವುದು, ಚಿತ್ರ ರಚಿಸುವುದು ಮುಂತಾದವುಗಳಲ್ಲಿ ಅವನ ಭಾವನೆಗನುಸಾರವಾಗಿ ಅಭಿವ್ಯಕ್ತಿಗೊಳಿಸುವುದು. ಹಾಗೆ ಪ್ರಸ್ತುತಿಯ ಒಂದು ಹೊಸಜಗತ್ತನ್ನು ನಮಗೆ ತೋರಿಸಿ ಕೊಡುವನು. ಜೀವನದ ಪರಿಸ್ಥಿತಿಗಳಿಂದ ಬಾಯ್ಮಾತಿನ ಮೂಲಕ ಅವನಿಗೆ ಲಭಿಸಿದ ಅನೇಕ ಹಾಡುಗಳನ್ನು ಅವನು ನೆನಪಿನಲ್ಲಿರಿಸಿ ಪುನಃ ಹಾಡುವನು. ಬೆಳವಣಿಗೆಯ ಪ್ರತಿಯೊಂದು ಹಂತದಲ್ಲಿಯೂ ಅವನಲ್ಲಿರುವ ಸೃಜನಶೀಲತೆಯನ್ನು ಒರೆಗೆ ಹಚ್ಚಿ ನಯಗೊಳಿಸಬೇಕಾದ ಕಾರಣ ಸರಿಯಾದ ಸಂದರ್ಭದಲ್ಲಿ ಸಹಾಯಮಾಡಬೇಕಾದುದು ಅನಿವಾರ್ಯ. ಈ ಸಹಾಯ ಅವನನ್ನು ಒಬ್ಬ ಗಾಯಕ ಅಥವಾ ಅಸ್ವಾದಕನನ್ನಾಗಿ ಬದಲಾಯಿಸುವುದು ಎಂಬುದರಲ್ಲಿ ಸಂಶಯವಿಲ್ಲ. ಪ್ರತಿಯೊಂದು ಹಾಡಿನ ವೈವಿಧ್ಯಮಯವಾದ ಆಶಯಗಳು/ಸಂದರ್ಭಗಳು ಎಂಬಿವುಗಳನ್ನು ನಿಖರವಾಗಿ ತಿಳಿದು ಶಬ್ದನಿಯಂತ್ರಣದೊಂದಿಗೆ ಉತ್ತಮವಾಗಿ ಪ್ರಸ್ತುತಪಡಿಸುವುದೇ ಈ ಯೂನಿಟ್ ಉದ್ದೇಶವಾಗಿದೆ.

## ಕಲಿಕಾ ಸಾಧನೆ

ಸಂಭಾಷಣಾ ಗೀತೆಗಳನ್ನು ಸಂದರ್ಭಕ್ಕೆ ತಕ್ಕಂತೆ ಆರೋಹಣ ಮತ್ತು ಅವರೋಹಣ ಕ್ರಮದಲ್ಲಿ ಸಾಮಾನ್ಯ ತಾಳಗತಿಯಲ್ಲಿ ಹಾಗೂ ವೇಗ ಹೆಚ್ಚಿಸಿ ಕಥಾಪಾತ್ರಗಳಿಗನಿಸಾರವಾಗಿ ಹಾಡುವುದು.

## ಆಶಯ, ತಿಳುವಳಿಕೆ

- ಸಂಭಾಷಣಾ ಗೀತೆಗಳ ಸಾಲುಗಳ ಆಶಯ
- ಆಶಯಕ್ಕನುಸಾರವಾದ ರಾಗ
- ಆಶಯಕ್ಕನುಸಾರವಾಗಿ/ಸಂದರ್ಭಕ್ಕೆ ತಕ್ಕಂತೆ ಶಬ್ದದ ಆರೋಹಣ
- ಶಬ್ದ ನಿಯಂತ್ರಣ, ಭಾವ ರೂಪೀಕರಣ

## ಪ್ರಕ್ರಿಯೆ

- ಸಂಭಾಷಣಾ ಗೀತೆಗಳನ್ನು ಕೇಳುವುದು.
- ಕವಿತೆಯಲ್ಲಿರುವ ಸಂಭಾಷಣಾ ತುಣುಕುಗಳ ಆಶಯಗಳ ವಿವರಣೆ
- ಆಶಯಕ್ಕೆ ತಕ್ಕಂತೆ ರಾಗವನ್ನು ಕಂಡುಹಿಡಿದು ಅದ್ಯಾಪಕನು ಪ್ರಸ್ತುತಪಡಿಸುವುದು.
- ಶಬ್ದ ನಿಯಂತ್ರಣದೊಂದಿಗೆ ಹಾಡುವುದು.

## ಮೌಲ್ಯಮಾಪನ

- ಆಸ್ವಾದನೆ
- ಹಾಡುಗಳ ಆಲಾಪನೆಯಲ್ಲಿ ಶಬ್ದ ನಿಯಂತ್ರಣ
- ರಾಗ, ಭಾವ, ತಾಳ

## ವಿಷಯ

ಮಗುವಿಗೆ ಆಲಾಪನೆ ಮಾಡಲು ಸಾಧ್ಯವಿರುವ ಸಂಭಾಷಣಾಗೀತೆಗಳನ್ನು ಆರಿಸಿ, ಅರ್ಥೈಸಿ ರಾಗ ಸಂಯೋಜನೆ ಮಾಡಿ ಭಾವಪೂರ್ಣವಾಗಿ ಆಲಾಪನೆ ಮಾಡಲು ಸಾಧ್ಯವಾಗುವಂತೆ ಮಾಡುವುದೇ ಈ ಯೂನಿಟ್‌ನ ಉದ್ದೇಶ.

## ಕಲಿಕಾ ಚಟುವಟಿಕೆಗಳು

***ಚಟುವಟಿಕೆಗಳು 1***

ಉದಾಹರಣೆಗಳು

- ಮಾನತ್ತುಳ್ಳ ಮರಕೊಂಬಿಲ್
  ಮರನ್ನುಪೋಯೆನ್ ತೂವಾಲ
  ಅಜುಕೇರಿಯೆಡುತ್ತುತರಾಮೋ
  ಅಣ್ಣಾರಕಣ್ಣಾ ಪೂವಾಲ
  ಏಳು ನಿರಮುಂಡ್, ಕರಯುಂಡ್, ಕಸವುಂಡ್
  ಪರ್ವತಜ್ಜಳ್‌ಕ್ಕೆತ್ತುಲಾ....
  ಕೋಣಿಪಡಿಯಿಲ್ಲ, ವಳಿಯಿಲ್ಲ, ವಶಮಿಲ್ಲ
  ಎನಿಕ್ಕ್ ಕೇರನ್ ಪಟ್ಟುಲ್ಲಾ...
- ಪೈಂಕಿಳಿಯೇ ಪೈಂಕಿಳಿಯೇ
  ಕಳಿಯಾಡಿಡಾನ್ ವರುಮೋ ನೀ
  ಪಾಡಿಲ್ಲಾ ಚೆಲ್ಲಕಲಾಳ್
  ಕೂಡುಚಮಯ್ಯಾನ್ ಪೋಕುನ್ನು
  ಚೆರುನಾಯೇ ಚೆರುನಾಯೇ
  ಕಳಿಯಾಡೀಡಾನ್ ವರುಮೋ ನೀ
  ಪಾಡಿಲ್ಲ ಯಜಮಾಂಡೆ
  ವೀಡು ಕಾಕನ್ ಪೋಕುನ್ನು
- ಈವಲ್ಲಿಯಿಲ್ ನಿನ್ನುಚೆಮ್ಮೇ ಪೂಕ್ಕಳ್
  ಪೋಕುನ್ನಿತಾ ಪರನ್ನಮ್ಮೇ...
  ತೆಟ್ಟೀ ನಿನಕ್ಕುಣ್ಣಿ ಚೊಲ್ಲಾಂ ...
  ನಲ್‌ಪೂಂಬಾಟಕಳಲ್ಲೇಯಿತೆಲ್ಲಾಂ.
- ಉರುಂಬುಂ ಆನಯುಂ
  ಕೂನಾ ಕುನಾ ಎವಿಡೆಪ್ಪೋನು?
  ಕೂನನ್ ಕುಳಜರ ಉಪ್ಪಿನುಪೋನ್ನು
  ಆನ ವನ್ನಾಲೆಂದು ಚೆಯ್ಯುಂ?

ಆಲುಮ್ಮೂಟಿಲ್ ಪಾತಿರಿಕ್ಕುಂ
ಕುದಿರ ವನ್ನಾಲೆಂದುಚೆಯ್ಯುಂ?
ತೂನ್ನುವಲಿಚ್ಚೊರು ಕುತ್ತುಕೊಡುಕ್ಕುಂ

***ಚಟುವಟಿಕೆ – 2***

- ಚಾರ್ಟುಗಳನ್ನು ಪ್ರದರ್ಶಿಸಿದ ಬಳಿಕ ಮಕ್ಕಳಿಗೆ ಹಾಡಲು ಅವಕಾಶ ನೀಡಬಹುದು.
- ಬಳಿಕ ಅಧ್ಯಾಪಕರು ಸಂಭಾಷಣಾ ಗೀತೆಯಲ್ಲಿ ಅಡಕವಾಗಿರುವ ಆಶಯವನ್ನು ಮಕ್ಕಳಿಗೆ ವಿವರಿಸುವುದು.
- ಆಶಯವನ್ನೊಳಗೊಂಡು ಓದುವುದು.
- ಮಕ್ಕಳು ಗುಂಪಾಗಿ ಹಾಡುವುದು.
- ಬಳಿಕ ಸರಳವಾದ ರಾಗವನ್ನು ಕಂಡುಹಿಡಿದು ಆಶಯಕ್ಕೆ ತಕ್ಕಂತೆ ಹಾಡುವರು.
- ಮಕ್ಕಳು ಗುಂಪಾಗಿ ಹಾಡುವುದು.
- ಮಕ್ಕಳಲ್ಲಿ ಎರಡು ಗುಂಪುಗಳಾಗಿ ಪ್ರಶ್ನೆ ಮತ್ತು ಉತ್ತರ ರೂಪದಲ್ಲಿ ಹಾಡಿಸುವುದು.
- ಬಳಿಕ ವಿವಿಧ ಗುಂಪುಗಳಾಗಿ ಹಾಡಲು ಹೇಳುವುದು.
- ಶಬ್ದ ಕ್ರಮೀಕರಣ : ಕಥಾಪಾತ್ರಗಳಿಗನುಸಾರವಾಗಿ, ಸಂದರ್ಭಕ್ಕನುಸಾರವಾಗಿ ಅಂದವಾಗಿ ಮಂಡಿಸುವ ಗುಂಪುಗಳನ್ನು ಅಧ್ಯಾಪಕರು ಪತ್ತೆಹಚ್ಚಬೇಕು. ಚೆನ್ನಾಗಿ ಹಾಡಲು ಸಾಮರ್ಥ್ಯವಿರುವ ಮಕ್ಕಳನ್ನು ವಿವಿಧ ಗುಂಪುಗಳಿಗೆ ಸೇರಿಸಬಹುದು.

## ಮೌಲ್ಯಮಾಪನ

- ಪ್ರತಿಯೊಂದು ಚಟುವಟಿಕೆಗಳ ಎಡೆಯಲ್ಲಿಯೂ ಅಧ್ಯಾಪಕರ ಧನಾತ್ಮಕ ಮೌಲ್ಯಮಾಪನ ನಡೆಯಬೇಕು.
- ಹಾಡಿನ ತುಣುಕುಗಳನ್ನು ನಿಖರತೆಯಿಂದ ಆವರ್ತಿಸಿ ಹಾಡುವ ಸಾಮರ್ಥ್ಯ
- ಗುಂಪಿನಲ್ಲಿ ಹಾಡುವಾಗ ಸ್ವರಸಾಮರಸ್ಯ
- ಶಬ್ದಕ್ರಮೀಕರಣದಲ್ಲಿ ಸ್ಪಷ್ಟತೆ
- ರಾಗ, ಭಾವ, ತಾಳ
    - ಮಂಡನೆಯ ಹಿರಿಮೆ
    - ಆಸ್ವಾದನೆ
    - ಮನೋಭಾವ
    - ತಾಳದ ನಿಖರತೆ
    - ತಾಳಾತ್ಮಕ ಆರಾಧನೆ
    - ತಾಳಪ್ರಜ್ಞೆ

# ಯೂನಿಟ್ 4 : ಗಾದೆಮಾತುಗಳನ್ನು ಹಾಡೋಣ

ಪ್ರಕೃತಿಗೆ ಸಂಬಂಧಿಸಿದ ಅನೇಕ ವಿಚಾರಗಳಲ್ಲಿಯೂ ನಾವು ನಿತ್ಯವೂ ಉಪಯೋಗಿಸುವ ವಸ್ತುಗಳಲ್ಲಿಯೂ ಜೀವನದ ಶಾಶ್ವತ ಮುದ್ರೆಗಳು ಅಚ್ಚೊತ್ತಿವೆ. ಗಾದೆಮಾತುಗಳು ಮತ್ತು ಒಗಟುಗಳು ಬಾಲಹೃದಯಗಳನ್ನು ಖುಷಿಪಡಿಸುತ್ತವೆ, ಸಂತೋಷಪಡಿಸುತ್ತವೆ. ಬುದ್ಧಿವಿಕಾಸ, ನಿರೀಕ್ಷಣ ಕೌಶಲ್ಯವನ್ನು ಹೆಚ್ಚಿಸುವ ರೀತಿಯಲ್ಲಿ ಅವುಗಳ ಪದವಿನ್ಯಾಸವಿರುತ್ತವೆ. ಕಡಿಮೆವಾಕ್ಯಗಳಲ್ಲಿ ಅತಿ ಗಹನವಾದ ಆಶಯ ಪ್ರಪಂಚ ಅಡಕವಾಗಿರುತ್ತವೆ. ಬಾಯಿಮಾತಿನ ಮೂಲಕ ಲಭಿಸಿದ ಅನೇಕ ಒಗಟುಗಳನ್ನು ಮತ್ತು ಗಾದೆಮಾತುಗಳನ್ನು ಮಕ್ಕಳು ತಾಳಾತ್ಮಕವಾಗಿ ಚಪ್ಪಾಳೆ ತಟ್ಟಿ ಹೇಳಲು ಮತ್ತು ಹಾಡಲು ಜೀವನದ ವಿವಿಧ ಸಂದರ್ಭಗಳಲ್ಲಿ ಪ್ರಸ್ತುತಪಡಿಸಲು ಸಾಧ್ಯವಾಗುವ ರೀತಿಯಲ್ಲಿ ಮುನ್ನಡೆಸುವುದೇ ಉದ್ದೇಶವಾಗಿದೆ.

## ಕಲಿಕಾ ಸಾಧನೆ

ಒಗಟುಗಳು, ಗಾದೆಮಾತುಗಳು, ಎಂಬಿವುಗಳನ್ನು ತಾಳಬದ್ಧವಾಗಿ ಹೇಳುವುದು, ಹಾಡುವುದು.

## ಆಶಯ ತಿಳುವಳಿಕೆ

- ತಾಳಕ್ಕನುಸಾರವಾಗಿ ಗದ್ಯ, ಪದ್ಯಗಳನ್ನು ಪ್ರಸ್ತುತಪಡಿಸುವುದು.

## ಪ್ರಕ್ರಿಯೆ

- ಒಗಟುಗಳು, ಗಾದೆಮತುಗಳು, ಎಂಬಿವುಗಳನ್ನು ತಾಳಬದ್ಧವಾಗಿ ಹೇಳುವುದು
- ಏಕಾಂಗಿಯಾಗಿ ಗುಂಪಾಗಿ ಅಭ್ಯಾಸಮಾಡುವುದು.
- ಚಪ್ಪಾಳೆ ತಟ್ಟಿ ಹಾಡಲು, ಹೇಳಲು ಅಭ್ಯಾಸಮಾಡುವುದು.

## ಮೌಲ್ಯಮಾಪನ

- ಮಂಡನೆಯನ್ನು ಮೌಲ್ಯಮಾಪನ ಮಾಡುವುದು.

## ವಿಷಯ

ಮಕ್ಕಳು ತಾಳಾತ್ಮಕವಾಗಿ ಆಲಾಪನೆ ಮಾಡುವ ಸಾಧ್ಯತೆಯನ್ನು ಉಂಟುಮಾಡಲು ಸರಳವಾದ ರೀತಿಯಲ್ಲಿ ಒಂಟಿಯಾಗಿ ಅಥವಾ ಗುಂಪಾಗಿ ಹಾಡಲು ಸಾಧ್ಯವಾಗುವಂತೆ ಮಾಡಬೇಕೆಂಬುದೇ ಈ ಪಾಠಭಾಗದ ಉದ್ದೇಶ.

## ಕಲಿಕಾ ಚಟುವಟಿಕೆಗಳು

**ಚಟುವಟಿಕೆ 1**

- ತರಗತಿಯಲ್ಲಿ ಮಕ್ಕಳು ಪರಿಚಿತವಾದ ಒಗಟುಗಳು ಮತ್ತು ಗಾದೆಮಾತುಗಳನ್ನು ಹೇಳಲು ಅಧ್ಯಾಪಕರು ಅವಕಾಶ ಒದಗಿಸುವುದು.

- ಮಕ್ಕಳು ಹೇಳಿದ ಒಗಟುಗಳು ಮತ್ತು ಗಾದೆಮಾತುಗಳನ್ನು ಅಧ್ಯಾಪಕರು ಬೋರ್ಡಿನಲ್ಲಿ ಬರೆಯುವುದು.
  - ♦ ಓಡುವ ಕುದುರೆ, ಹಾರುವ ಕುದುರೆ, ನೀರನು ಕಂಡರೆ ನಿಲ್ಲುವ ಕುದುರೆ
  - ♦ ತೊಟ್ಟಿಲ್ಲದ ಉರುಟು ಎಲೆ
  - ♦ ಹಗ್ಗದೊಂದಿಗೆ ಕೋಣ ಮಲಗಿದೆ
  - ♦ ಅಕ್ಕಿ ಎಸೆದರೆ ಸಾವಿರ ಕಾಗೆ
  - ♦ ಅಡ್ಡ ಮರದಲ್ಲಿ ಬೊಡ್ಡ ಕುಳಿತಿದ್ದಾನೆ

***ಚಟುವಟಿಕೆ 1***

- ದಾಖಲಿಸಿದವುಗಳನ್ನು ಒಂಟಿಯಾಗಿ ಅಥವಾ ಗುಂಪಾಗಿ ಅಧ್ಯಾಪಕರ ತಾಳಾತ್ಮಕವಾಗಿ ಹಾಡಲು ಅಭ್ಯಾಸ ಮಾಡುವರು.

  "ಆಡಿಯಕಾಲುಂ ಪಾಡಿಯ ನಾವುಂ ಅಡಂಜಿಲ್ಲ"

  "ಪದಿನೆಟ್ಟ್ ವಾದ್ಯವುಂ ಚೆಂಡಯ್ಕ್ ತಾಳೆ"

***ಚಟುವಟಿಕೆ 1***

- ಕುಂಞಣ್ಣಿಮಾಸ್ತರು ಮತ್ತು ಮಕ್ಕಳು
- ಸಿ.ಡಿ ಪ್ರದರ್ಶನ
- ಸಿ.ಡಿಯಲ್ಲಿರುವ ತಾಳಾತ್ಮಕವಾದ ಒಗಟುಗಳು ಮತ್ತು ಗಾದೆಮಾತುಗಳಲ್ಲಿ ಕೇಳವನ್ನು ಹೇಳುವುದು.
- ಮಂಡನೆಯನ್ನು ಮೌಲ್ಯಮಾಪನ ಮಾಡುವುದು.

## ಮೌಲ್ಯಮಾಪನ

- ಮಂಡನೆ ಮಾಡುವ ಸಾಮರ್ಥ್ಯ
- ಪದಗಳನ್ನು ಸೇರಿಸಿ ತಾಳಾತ್ಮಕವಾಗಿ ಪ್ರಸ್ತುತಪಡಿಸುವುದು.

# ಮೂರನೇ ತರಗತಿ

## ಯೂನಿಟ್ – 1 : ಪ್ರಕೃತಿಯ ಶಬ್ದಗಳು

ಜೀವಜಾಲಗಳಿಗೆ ಪ್ರಕೃತಿಯು ಹಲವು ರೀತಿಯಲ್ಲಿ ರಕ್ಷಣೆಯನ್ನು ನೀಡುತ್ತದೆ. ಅನ್ನ, ಆಶ್ರಯ, ರಕ್ಷಣೆ, ರಾಗ, ಜೋಗುಳ ಹೀಗೆ ನಿತ್ಯಜೀವನದ ತನ್ನೆಲ್ಲ ನಿಮಿಷಗಳಲ್ಲಿಯೂ ಮನುಷ್ಯ ಪ್ರಕೃತಿಯೊಂದಿಗೆ ಬೆಸೆದುಕೊಂಡಿರುತ್ತಾನೆ. ಎಲ್ಲ ಮನೋಹರ ಶಬ್ದಗಳ ಮೂಲ ಪ್ರಕೃತಿಯಾಗಿದೆ. ಕಾಲ, ಸಮಯ, ಋತು, ನಾವು ಮಾಡುವ ವೈವಿಧ್ಯಮಯವಾದ ಚಟುವಟಿಕೆಗಳು ಎಂಬಿವುಗಳಿಗೆ ಹಿನ್ನಲೆಯಾಗಿ ಚೈತನ್ಯದ ಮೂಲವಾಗಿ ಪ್ರಕೃತಿಯ ಅದರ ಮನೋಹರವಾದ ಶಬ್ದಗಳಿಂದ ಸಂಗೀತದ ಆದ್ಯಕ್ಷರಗಳನ್ನು ಕಲಿಸುವುದು ಪ್ರಕೃತಿಯೇ ಆಗಿದೆ. ಕೋಗಿಲೆ, ಬೆಕ್ಕು, ಕಾಗೆ, ನವಿಲು ಎಂಬಿವುಗಳ ಕಲರವಗಳಲ್ಲಿ ಅವರು ಸಂಗೀತ ಅಡಕವಾಗಿರುವುದನ್ನು ಗುರುತಿಸುವರು. ಬಳಿಕ ಅವುಗಳು ವೇದಿಕೆಗಳಲ್ಲಿಯೂ ಖಾಸಗಿ ಸಮಯಗಳಲ್ಲಿಯೂ ಅನುಕರಣೆಯಾಗುತ್ತವೆ. ಅವನ ಶಿಶು ಸಹಜವಾದ ಸಂಗೀತ ರಚನಾ ಕೌಶಲ್ಯ ನಮ್ಮ ಮುಂದೆ ಅನಾವರಣಗೊಳ್ಳುವುದು. ಸಂಗೀತದ ಕಾಲೋಚಿತವೂ ಸಂದರ್ಭೋಚಿತವೂ ಆದ ಸೇರ್ಪಡೆಗಳು ಅವನ ಪ್ರತಿಭೆಯನ್ನು ನಮಗೆ ಇನ್ನಷ್ಟು ಸ್ಪಷ್ಟಪಡಿಸುವುದು.

### ಕಲಿಕಾ ಸಾಧನೆ

ಸಂದರ್ಭ ಅಥವಾ ವಿಷಯಕ್ಕೆ ಸೂಕ್ತವಾದ ಪ್ರಕೃತಿಯ ಶಬ್ದಗಳನ್ನು ಆರಿಸಿ ಮಂಡಿಸಲು ಸಾಧ್ಯವಾಗುವುದು.

### ಆಶಯ, ತಿಳುವಳಿಕೆ

- ವಿಷಯ ಮತ್ತು ಸಂದರ್ಭಕ್ಕೆ ಹೆಚ್ಚು ಮೆರುಗು ನೀಡಲು ಪ್ರಕೃತಿಯ ಶಬ್ದಗಳನ್ನು ಉಪಯೋಗಿಸಬಹುದು.
- ಯೋಗ್ಯವಾದ ಪ್ರಕೃತಿಯ ಶಬ್ದಗಳನ್ನು ಆರಿಸಿ ಸಂದರ್ಭಕ್ಕೆ ತಕ್ಕಂತೆ ಪ್ರಯೋಗಿಸುವ ನೈಪುಣ್ಯ

### ಪ್ರಕ್ರಿಯೆ

- ವಿಶೇಷತೆಗಳಿರುವ ಪ್ರಕೃತಿಯ ಶಬ್ದಗಳನ್ನು ಪಟ್ಟಿಮಾಡುವುದು (ಗುಡುಗಿನ ಶಬ್ದ, ಕಡಲಿನ ಮೊರೆತ, ಊಳಿಡುವಿಕೆ)

- ಪಟ್ಟಿಯಲ್ಲಿರುವ ಸಂದರ್ಭಗಳು ನೀಡುವ ಅರ್ಥ ಚರ್ಚೆ
- ಸೂಕ್ತವಾದ ಸಂದರ್ಭಗಳಲ್ಲಿ ಪ್ರಕೃತಿಯ ಶಬ್ದಗಳನ್ನು ಉಪಯೋಗಿಸಿ ಪ್ರಸ್ತುತಪಡಿಸುವುದು.

## ಮೌಲ್ಯಮಾಪನ

- ಪಟ್ಟಿಯ ಮೌಲ್ಯಮಾಪನ
- ಅಧಿಕೃತತೆ
- ಅಭಿವ್ಯಕ್ತಿಯ ಸ್ವಂತಿಕೆ
- ಆಸ್ವಾದನೆ

## ವಿಷಯ

ವೈವಿಧ್ಯಮಯವಾದ ಶಬ್ದಗಳನ್ನು ಸೂಕ್ಷ್ಮವಾಗಿ ನಿರೀಕ್ಷಣೆಮಾಡಿ ಅವುಗಳ ಕ್ರಮವಾದ ಸಂಯೋಜನೆ, ಪ್ರಕೃತಿಯಲ್ಲಿ ಉಂಟುಮಾಡುವ ಸಂಗೀತ ಎಂಬಿವುಗಳನ್ನು ಗುರುತಿಸಿ ಸಾಧ್ಯತೆಗಳನ್ನು ತಿಳಿದುಕೊಳ್ಳುವುದು ಈ ಯೂನಿಟಿನ ಉದ್ದೇಶ.

## ಕಲಿಕಾ ಚಟುವಟಿಕೆಗಳು

***ಚಟುವಟಿಕೆ 1***

- ಗುಡುಗು, ಗಾಳಿ ಎಂಬಿವುಗಳನ್ನೊಳಗೊಂಡ ಮಳೆಯ ಚಿತ್ರೀಕರಣದ ಸಿ.ಡಿಯನ್ನು ಮಕ್ಕಳಿಗೆ ತೋರಿಸುವುದು. ಪ್ರದರ್ಶಿಸುವಾಗ ಶಬ್ದವನ್ನು ಮ್ಯೂಟ್ (mute) ಮಾಡಬೇಕು.
- ಆ ದೃಶ್ಯ ಮಗುವಿನಲ್ಲಿ ಉಂಟುಮಾಡಿದ ಅನುಭವಗಳನ್ನು ಹಂಚಿಕೊಳ್ಳುವುದು. (ಅಧ್ಯಾಪಕರು ಮುಂಚಿತವಾಗಿ ಪ್ರಶ್ನಾವಳಿ ತಯಾರಿಸಬೇಕು. ಪ್ರಶ್ನೆಗಳ ಆಧಾರದಲ್ಲಿ ಪ್ರತಿಕ್ರಿಯಿಸಲು ಸೂಚಿಸಬೇಕು)

  ***ಪ್ರಶ್ನೆಗಳು***

  - ಈ ದೃಶ್ಯ ನಿಮಗೆ ನೀಡಿದ ಅನುಭವಗಳು ಯಾವುವು?
  - ಈ ದೃಶ್ಯವನ್ನು ಪೂರ್ತಿಯಾಗಿ ಅರ್ಥೈಸಿಕೊಳ್ಳಲು ಸಾಧ್ಯವಿದೆಯೇ?
  - ಈ ದೃಶ್ಯವನ್ನು ಪೂರ್ತಿಯಾಗಿ ಅರ್ಥೈಸಿಕೊಳ್ಳಲು – ಆಸ್ವಾದಿಸಲು ಯಾವ ಯಾವ ಶಬ್ದವ್ಯವಸ್ಥೆಗಳನ್ನು ಸೇರಿಸಲು ಸಾಧ್ಯವಿದೆ?
- ಮಕ್ಕಳ ಮೌಖಿಕವಾದ ಪ್ರತಿಕ್ರಿಯೆಗಳನ್ನು ಅಧ್ಯಾಪಕರು ದಾಖಲಿಸುವರು.
- ಪ್ರತಿಕ್ರಿಯೆಗಳನ್ನು ಅಧ್ಯಾಪಕರ ಸಹಾಯದಿಂದ ಹೆಚ್ಚು ನಿಖರಗೊಳಿಸುವುದು. ಸ್ಪಷ್ಟತೆಯುಂಟುಮಾಡುವುದು.

***ಚಟುವಟಿಕೆ 2***

- ಮಕ್ಕಳನ್ನು ಮಿಂಚು, ಗುಡುಗು, ಗಾಳಿ ಎಂಬೀ ಹೆಸರುಗಳಿರುವ ನಾಲ್ಕು ಗುಂಪುಗಳಾಗಿಸುವುದು. ಮೊದಲು ತೋರಿಸಿದ ದೃಶ್ಯವನ್ನು ಪುನಃ ಮಕ್ಕಳಿಗೆ ತೋರಿಸುವುದು. ನಾಲ್ಕು ಗುಂಪುಗಳಿಗೂ ಅಭ್ಯಾಸಮಾಡಲು ಅವಕಾಶ ನೀಡುವುದು. ದೃಶ್ಯವನ್ನು ಪ್ರದರ್ಶಿಸಿ ಅದರೊಂದಿಗೆ ಯೋಗ್ಯವಾದ ಶಬ್ದಗಳನ್ನು ಮಿಶ್ರಣ ಮಾಡಿ ಮಂಡಿಸಲು ನಾಲ್ಕು

ಗುಂಪುಗಳಿಗೂ ಅವಕಾಶ ನೀಡುವುದು. ಪ್ರತಿಯೊಂದು ಗುಂಪಿನವರು ಮಂಡಿಸುವಾಗ ಇತರ ಗುಂಪಿನವರು ಮೌಲ್ಯಮಾಪನ ನಡೆಯಬೇಕು. ಎಲ್ಲ ಗುಂಪುಗಳ ಮಂಡನೆಯ ಬಳಿಕ ಪ್ರತಿಯೊಂದು ಗುಂಪಿನವರು ಮಾಡಿದ ಮೌಲ್ಯಮಾಪನದ ವಿಚಾರಗಳನ್ನು ಪ್ರಸ್ತುತಪಡಿಸಲು ಅವಕಾಶ ನೀಡಬೇಕು.

- ಮಕ್ಕಳ ಅಭಿವ್ಯಕ್ತಿ ಹಾಗೂ ಮೌಲ್ಯಮಾಪನವನ್ನು ಅಧ್ಯಾಪಕರು ನಿಖರವಾಗಿ ಮೌಲ್ಯ ಮಾಪನಮಾಡಿ ದಾಖಲಿಸಬೇಕು. ಬಳಿಕ ಸಂದರ್ಭ, ಸಮಯ ಮತ್ತು ಕಾಲಕ್ಕನುಸಾರವಾಗಿ ಮಕ್ಕಳು ಶಬ್ದಮಿಶ್ರಣ ನಡೆಸಿದ ಹಿರಿಮೆಗಳು, ನ್ಯೂನತೆಗಳನ್ನು ಅಧ್ಯಾಪಕರು ಮಕ್ಕಳಿಗೆ ತಿಳಿಯಪಡಿಸುವರು. ಈ ರೀತಿಯ ಕೊರತೆಗಳನ್ನು ನಿವಾರಿಸಿ ಒಂದು ಗುಂಪಿಗೆ ಪುನಃ ಮಂಡನೆಗಿರುವ ಅವಕಾಶ ನೀಡಿ ಮಕ್ಕಳಿಗೆ ಮನದಟ್ಟುಮಾಡಿಸಬಹುದು.

***ಕ್ರೋಡೀಕರಣ***

ಸಂದರ್ಭಕ್ಕನುಸಾರವಾಗಿ ಶಬ್ದ ಮಿಶ್ರಣ ನಡೆಸಬೇಕು. ಶಬ್ದ ಮತ್ತು ಸಂದರ್ಭಗಳ ನಡುವಿನ ಹೊಂದಿಕೆ ಪೂರ್ಣವಾಗಿದ್ದರೆ ಮಾತ್ರ ದೃಶ್ಯ ಮತ್ತು ಶ್ರವಣ ಹೆಚ್ಚು ಉತ್ತಮವಾಗುವುದು. ಶಬ್ದದ ಸಾನ್ನಿಧ್ಯವಿಲ್ಲದೆ ಯಾವುದೇ ದೃಶ್ಯ ಮತ್ತು ಶ್ರವಣ ಪೂರ್ಣತೆಗೆ ತಲುಪಲಿಕ್ಕಿಲ್ಲ.

***ಮುಂದುವರಿದ ಚಟುವಟಿಕೆ***

- ಮೊದಲು ಪ್ರದರ್ಶಿಸಿದ ಮಳೆಯ ಸಿ.ಡಿ ಯನ್ನು ಧ್ವನಿ ಮಿಶ್ರಣ ಮಾಡಿ ಮಕ್ಕಳಿಗೆ ತೋರಿಸುವುದು. ಆಸ್ವಾದನೆಗೆ ಅವಕಾಶ ಒದಗಿಸುವುದು.
- ಇದೇ ರೀತಿ ವೈಶಿಷ್ಟ್ಯಗಳುಳ್ಳ ಪ್ರಕೃತಿಯ ಶಬ್ದಗಳನ್ನು ಪಟ್ಟಿಮಾಡಲು ಮಕ್ಕಳಿಗೆ ಸೂಚಿಸುವುದು. ಉದಾಃ– ಮುಂಜಾನೆ, ರಾತ್ರಿ, ಸಮುದ್ರತೀರ, ನಗರದ ನೋಟಗಳು, ಜನಜಂಗುಳಿ.
- ಆರಿಸಿದ ಸಂದರ್ಭಗಳ ಕುರಿತು ಮತ್ತು ಅವುಗಳ ಹಿನ್ನಲೆ ಶಬ್ದಗಳ ಕುರಿತು ಚರ್ಚೆ – ಶಬ್ದಗಳ ಮಿಶ್ರಣ– ಮಂಡನೆ (ಗುಂಪು ಮಟ್ಟದಲ್ಲಿ)

***ಕ್ರೋಡೀಕರಣ***

- ಪ್ರತಿಯೊಂದು ಸಂದರ್ಭಕ್ಕೂ ವಿಷಯಕ್ಕೂ ಯೋಗ್ಯವಾದ ಶಬ್ದಗಳು ಪ್ರಕೃತಿಯಲ್ಲಿಯೇ ಇವೆ. ಯೋಗ್ಯವಾದ ಶಬ್ದ ಮಿಶ್ರಣವಿಲ್ಲದ ಒಂದು ದೃಶ್ಯವೂ, ಆಸ್ವಾದನೆಗೆ ಪೂರ್ಣತೆ ನೀಡುವುದಿಲ್ಲ. ಸಂದರ್ಭಕ್ಕೆ, ಆಶಯಕ್ಕೆ, ಶಬ್ದಮಿಶ್ರಣ ನಡೆಸುವಾಗ ಅವುಗಳೊಳಗಿನ ಹೊಂದಾಣಿಕೆಯು ಆ ಪ್ರಕ್ರಿಯೆಯನ್ನು ಹೆಚ್ಚು ಉತ್ತಮಗೊಳಿಸುವುದು. ಒಳ್ಳೆಯ ಆಸ್ವಾದನಾ ಸಾಮರ್ಥ್ಯ ಮತ್ತು ನಿರೀಕ್ಷಣೆಯಿದ್ದರೆ ಯಾವುದೇ ವಿದ್ಯಮಾನವನ್ನು ಪುನಃ ನಿರ್ಮಿಸಲು, ಉತ್ತಮಗೊಳಿಸಲು ಸಾಧ್ಯವಿದೆ.

**ಮೌಲ್ಯಮಾಪನ**

- ಅಭಿವ್ಯಕ್ತಿಯ ಹಿರಿಮೆ
- ಧ್ವನಿಮಿಶ್ರಣದ ಸ್ವಂತಿಕೆ
- ಪಟ್ಟಿಯ ಮೌಲ್ಯಮಾಪನ
- ಆಸ್ವಾದನೆ

# ಯೂನಿಟ್ – 2 : ಆಡುವ ಹಾಡುವ

ಕಲಿಯಲು ಆರಂಭಿಸುವುದಕ್ಕಿಂತ ಮೊದಲೇ ನಾವೆಲ್ಲರೂ ಹಾಡಲು ಆರಂಭಿಸುವೆವು. ಮಗುವಿನ ಎಳೆಯ ತುಟಿಗಳಿಗೆ ಎದೆಹಾಲಿನೊಂದಿಗೆ ತಿಳಿಯಾದ ಮಾಧ್ಯುರ್ಯವಿರುವ ಜೋಗುಳ ಹಾಡುಗಳನ್ನೂ ಉಣಬಡಿಸುವಾಗ ಮಗು ಆಸ್ವಾದಕನೂ ಅಮ್ಮ ಅವನ ಪ್ರೀತಿ ಪಾತ್ರಳಾದ ಗಾಯಕಿಯೂ ಆಗುವಳು. ಹಾಡಿದ್ದರೆ ಮಾತ್ರ ಅವನ ನಡಿಗೆ, ಬೀಳುವಿಕೆ, ನಗು, ಆಟ, ವಯ್ಯಾರ, ಆಹಾರ ಸೇವನೆ, ನಿದ್ದೆ ಎಲ್ಲವೂ ನಡೆಯುವುದು. ಪ್ರತಿಯೊಂದು ರಾಗಗಳನ್ನು ಕೇಳುವಾಗಲೂ ಅವನ ಭಾಷೆಯ ಚಲನೆಯಿಂದ ಅವನು ತಾಳಹಿಡಿಯುವನು. ಹೀಗೆ ಅಮ್ಮನಿಂದ ತೊಡಗುವ ಸಂಗೀತಾಸ್ವಾದನೆ ಅವನು ಬೆಳೆದಂತೆ ಸುತ್ತುಮುತ್ತಲಿರುವ ಸಕಲ ಚರಾಚರಗಳಿಗೆ ವ್ಯಾಪಿಸುವುದು. ವೈವಿಧ್ಯವನ್ನೊಳಗೊಂಡ ಈ ವಿಧಾನ ಮತ್ತು ದೃಶ್ಯ ಅವನಲ್ಲಿರುವ ಆಸ್ವಾದನೆಯ ಮಟ್ಟ ಆಳವಾಗುವಂತೆ ಮಾಡುವುದು. ಕಾಲ ಪ್ರಪಂಚದ ಕುರಿತು ಹೆಚ್ಚು ತಿಳಿದುಕೊಳ್ಳುವನು. ಪ್ರೌಢಾವಸ್ಥೆಗೆ ತಲಪುವಾಗ ತನ್ನ ಮನೆ ಮತ್ತು ಊರಿನಲ್ಲಿ ಹೇಳಿದ, ಹಾಡಿದ ರಾಗಗಳನ್ನೂ ಹಾಡುಗಳನ್ನೂ ಅವನು ತನ್ನದಾಗಿಸಿಕೊಳ್ಳುತ್ತಾನೆ. ಕಥಾಗೀತೆಗಳು, ಗಾದೆಮಾತುಗಳು, ಶಿಶುಗೀತೆಗಳು ಅವನ ಅಭಿವ್ಯಕ್ತಿಗೆ ಮೆರುಗು ನೀಡುವುದು. ಜೊತೆಯಲ್ಲಿ ಸಂಗೀತದ ತಾಳಾತ್ಮಕತೆಯ ಪೂರ್ಣತೆ ಅವನಿಗೆ ಅರ್ಥವಾಗಲು ಪ್ರಾರಂಭವಾಗುವುದು. ಆಲಾಪನೆಗೆ ಪೂರ್ಣತೆ ನೀಡುವ ಪ್ರಧಾನ ಘಟಕ ತಾಳವೆಂದೂ ತಾಳಕ್ಕೆ ಕೈ ಮತ್ತು ಒಟ್ಟುಸೇರುವಾಗ ಅವು ಉಂಟುಮಾಡುವ ಅನುಭೂತಿಯನ್ನು ತನ್ನದಾಗಿಸಿ ಮೇರೆಯಿಲ್ಲದ ಆನಂದವನ್ನು ಅನುಭವಿಸುವುದು. ಪ್ರಾದೇಶಿಕ ಸ್ವಂತಿಕೆಯುಳ್ಳ ಹಾಡುಗಳ ಮೂಲಕ ಒಂದು ಊರಿನ ಸಂಗೀತ ಸಂಸ್ಕೃತಿ, ವೈಶಿಷ್ಟ್ಯ ಎಂಬಿವುಗಳನ್ನು ಗುರುತಿಸುವನು. ಸಂಗೀತದ ಸಮಾನತೆಗಳು, ತಾಳ, ನಿಯಮಗಳೆಲ್ಲವೂ ಪ್ರಕೃತಿಜನ್ಯವೆಂದು ತಿಳಿದು ಇವುಗಳೆಲ್ಲ ಪರಸ್ಪರ ಸಂಬಂಧವನ್ನು ಹೊಂದಿವೆಯೆಂದೂ ಅವುಗಳ ಒಟ್ಟುಸೇರುವಿಕೆ ಹೆಚ್ಚು ಹಿತವನ್ನುಂಟುಮಾಡುವುದೆಂದೂ ತಿಳಿದು ಅದನ್ನು ಮುಗ್ಧ ಮನಸ್ಸಿನ ಮಕ್ಕಳಿಗೆ ತಲುಪಿಸುವುದೇ ಈ ಯೂನಿಟ್‌ನ ಉದ್ದೇಶವಾಗಿದೆ.

## ಕಲಿಕಾ ಸಾಧನೆ

- ಪರಿಚಿತವಾದ ಹಾಡುಗಳು, ಪ್ರಾದೇಶಿಕ ಗೀತೆಗಳು, ಬಾಯಿತಾಳಗಳು, ಶಿಶುಗೀತೆಗಳು ಎಂಬಿವುಗಳ ತಾಳಕ್ಕೆ ಅನುಸಾರವಾಗಿ ಚಲನೆಯೊಂದಿಗೆ ವೇಗವನ್ನು ಹೆಚ್ಚಿಸಿ ಅಥವಾ ಕಡಿಮೆ ಮಾಡಿ ಹಾಡುವುದು.
- ಒಂದೇ ರೀತಿಯ ಹಾಡುಗಳು, ಕವಿತೆಗಳು ಎಂಬಿವುಗಳನ್ನು ಕೇಳಿ ಜೊತೆಯಲ್ಲಿ ಹಾಡುವುದು, ತಾಳ ಹಿಡಿಯುವುದು.

## ಆಶಯ, ತಿಳುವಳಿಕೆ

- ಹಾಡಿನ ವೇಗಕ್ಕನುಸಾರವಾಗಿ ತಾಳಾತ್ಮಕ ಚಲನೆಗಳನ್ನು ಕ್ರಮೀಕರಿಸಬೇಕು. ವೇಗ ಹೆಚ್ಚಿಸುವ ಅಥವಾ ಕಡಿಮೆ ಇರುವ ವೈವಿಧ್ಯಮಯವಾದ ಆಲಾಪನಾ ವಿಧಾನಗಳಿವೆ.
- ಸಂಗೀತ ರೂಪಗಳ ಸ್ವಂತಿಕೆಯನ್ನು ಉಳಿಸುವಲ್ಲಿ ತಾಳದ ವೇಗವೂ ಒಂದು ಘಟಕವಾಗಿದೆ.
- ತಾಳದ ಸಾಮ್ಯವನ್ನು ಕಂಡುಹಿಡಿಯುವ ನೈಪುಣ್ಯ
- ಒಂದೇ ತಾಳದಲ್ಲಿರುವ ಹಾಡುಗಳೂ ಕವಿತೆಗಳೂ ಇವೆ.

## ಪ್ರಕ್ರಿಯೆ

- ವಿವಿಧ ರಾಗದಲ್ಲಿರುವ ಹಾಗೂ ವೇಗದಲ್ಲಿರುವ ಹಾಡುಗಳನ್ನು ಆಲಿಸುವುದು. ವಿಶ್ಲೇಷಿಸುವುದು.
- ಹಾಡುಗಳ ತಾಳಕ್ಕನುಸಾರವಾಗಿ ಶಾರೀರಿಕ ಚಲನೆಗಳನ್ನು ಕ್ರಮೀಕರಿಸುವುದು.
- ಒಂಟಿಯಾಗಿ, ಗುಂಪಾಗಿ ಹಾಡುಗಳನ್ನು ವೇಗ ಹೆಚ್ಚಿಸಿ ಅಥವಾ ಇಳಿಸಿ ಆಂಗಿಕ ಚಲನೆಯೊಂದಿಗೆ ಪ್ರಸ್ತುತಪಡಿಸುವುದು.
- ಕವಿತೆಗಳು ಮತ್ತು ಗೀತೆಗಳ ತಾಳವನ್ನು ತುಲನೆಮಾಡುವುದು. ಒಂದೇ ತಾಳದಲ್ಲಿರುವವುಗಳನ್ನು ಕಂಡುಹಿಡಿಯುವುದು.
- ಹಾಡುಗಳಿಗೆ ಅನುಸಾರವಾಗಿ ತಾಳ ಹಿಡಿಯುವುದು.

## ಮೌಲ್ಯಮಾಪನ

- ಮಂಡನೆಯ ಮೌಲ್ಯಮಾಪನ
- ವಿವಿಧ ತಾಳಗಳ ವೇಗವನ್ನು ತಿಳಿದುಕೊಳ್ಳುವುದು.
- ಪ್ರಶ್ನೆಗಳನ್ನು ಕೇಳಿ ಮೌಲ್ಯಮಾಪನ ನಡೆಸುವುದು.
- ಅಭಿವ್ಯಕ್ತಿಯನ್ನು ಮೌಲ್ಯಮಾಪನ ಮಾಡುವುದು.

## ವಿಷಯ

ವೈವಿಧ್ಯಮಯವಾದ ಹಾಡುಗಳನ್ನು ನಿಖರವಾದ ತಾಳದೊಂದಿಗೆ ಹಾಡಿ ಅಭ್ಯಾಸಮಾಡಲು, ಪ್ರತಿಯೊಂದು ಹಾಡಿನ ಸ್ವಂತಿಕೆಯನ್ನು ಉಳಿಸಿಕೊಳ್ಳುವಲ್ಲಿ ತಾಳದ ವೇಗಕ್ಕೆ ಪ್ರಧಾನ ಪಾತ್ರವಿದೆಯೆಂದು ತಿಳಿಯಲು ಈ ಯೂನಿಟ್‌ನ ಕಲಿಕಾ ಚಟುವಟಿಕೆಗಳಿಂದ ಮಗುವಿಗೆ ಸಾಧ್ಯವಾಗಬೇಕು. ವಿವಿಧ ಭಾವನೆಗಳನ್ನೊಳಗೊಂಡ ಹಾಡುಗಳ ತಾಳಗಳಲ್ಲಿ ಸಾಮ್ಯವಿದೆಯೆಂದು ತಿಳಿದು ಸಮಾನ ತಾಳದಲ್ಲಿರುವ ಹಾಡುಗಳನ್ನು ಮಗುವಿಗೆ ಕಂಡು ಹಿಡಿಯಲು ಸಾಧ್ಯವಾಗಲು ಈ ಯೂನಿಟ್‌ನ ಚಟುವಟಿಕೆಗಳಿಂದ ಉದ್ದೇಶಿಸಲಾಗಿದೆ.

## ಕಲಿಕಾ ಚಟುವಟಿಕೆಗಳು

***ಚಟುವಟಿಕೆ – 1***

- ಮಕ್ಕಳೆಡೆಯಲ್ಲಿ ಪ್ರಚಾರದಲ್ಲಿರುವ ಒಂದು ಹಾಡನ್ನು ಆರಿಸುವುದು. ಅಧ್ಯಾಪಕರು ಅದನ್ನು ಚಾರ್ಟಿನಲ್ಲಿ ಪ್ರದರ್ಶಿಸುವುದು.

*ಉದಾಹರಣೆ*

1. ಒನ್ನಾಂ ಮಲ ಮೇಲೆ ಕೇರೆಂಡೇ...

   ಅವಿಡುನ್ನು ತಲೇಂಕುತ್ತಿ ಚಾಡೆಂಡೇ....

2. ಕುಟ್ಟನಾಡನ್ ಪುಂಜಯಿಲೆ....(ವಂಜಿಪ್ಪಾಟ್)

ಚಾರ್ಟಿನಲ್ಲಿ ಬರೆದ ಸಾಲುಗಳನ್ನು ಗುಂಪುಗಳಾಗಿ ಹಾಡಿಸುವುದು. ಬಳಿಕ ಕೈ ಚಪ್ಪಾಳೆ ತಟ್ಟಿ ತಾಳಬದ್ಧವಾಗಿ ವೇಗವನ್ನು ಇಳಿಸಿ ಹಾಡಿಸುವುದು. ಇದೇ ವೇಗದಲ್ಲಿ ಸರಳವಾದ ರಾಗದಲ್ಲಿ ಅಧ್ಯಾಪಕರು ಹಾಡಿ ಮಕ್ಕಳಲ್ಲಿ ಆವರ್ತಿಸಿ ಹಾಡಿಸುವುದು. (ತಾಳಹಾಕುತ್ತಾ ಹಾಡಿಸಬೇಕು.)

ವೇಗ ಹೆಚ್ಚಿಸಿ ಅಥವಾ ಇಳಿಸಿ ಇದೇ ಸಾಲುಗಳನ್ನು ಹಲವು ಸಲ ಹಾಡಿಸುವುದು. ವೇಗದ ಆಧಾರದಲ್ಲಿ ತಾಳದ ಚಲನೆಯನ್ನು ಬದಲಿಸುವುದು.

ಅಧ್ಯಾಪಕನ ಪ್ರಶ್ನೆ

- ಎಲ್ಲರಿಗೂ ಸುಗಮವಾಗಿ ಹಾಡಲು ಮತ್ತು ಹೆಚ್ಚು ಆಸ್ವಾದಿಸಲು ಸಾಧ್ಯವಾದ ಹಾಡಿನ ವೇಗ ಯಾವುದೆಂದು ಕಂಡುಹಿಡಿಯಬಹುದೇ?

- ಸಾಲುಗಳನ್ನು ತಾಳದೊಂದಿಗೆ ಆಲಾಪನೆ ನಡೆಸಲು ಸಾಧ್ಯವಾದ ವೇಗವನ್ನು ಮಕ್ಕಳು ಕಂಡುಕೊಳ್ಳುವರು. ಈ ರೀತಿ ಹಾಡಲು ಸಾಧ್ಯವಾಗುವ ಹಾಡಿನ ತುಣುಕುಗಳನ್ನು ಮಕ್ಕಳಲ್ಲಿ ಆರಿಸಲು ಹೇಳುವುದು.

- ಮಕ್ಕಳು ಆರಿಸಿದ ಹಾಡುಗಳನ್ನು ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವರು. ಅವುಗಳಲ್ಲಿ ಕೆಲವನ್ನು ಅಧ್ಯಾಪಕರು ಸೂಕ್ತವಾದ ವೇಗದಲ್ಲಿಯೂ, ಅಲ್ಲದೆಯೂ (ವೇಗ ಹೆಚ್ಚಿಸಿ ಅಥವಾ ಇಳಿಸಿ) ಹಾಡಿ ಕೇಳಿಸುವರು. ಪುನಃ ಆಲಾಪಿಸುವಾಗ ಜೊತೆಯಲ್ಲಿ ಮಕ್ಕಳನ್ನೂ ತಾಳಾತ್ಮಕ ಚಲನೆಯೊಂದಿಗೆ ಹಾಡಿಸಬಹುದು. (ಚಿಟಿಕೆ ಹೊಡೆದು, ಕಾಲಿನಲ್ಲಿ ತಾಳಹಾಕಿ, ಕುತ್ತಿಗೆಯ ವಿವಿಧ ಚಲನೆಗಳೊಂದಿಗೆ)
  *(ಈಗ ಆಲಾಪಿಸಿದ ಹಾಡಿಗೆ ಸೂಕ್ತವಾದ ವೇಗವನ್ನು ಕಂಡುಹಿಡಿಯಲು ಮಕ್ಕಳಿಗೆ ಅವಕಾಶ ನೀಡಬೇಕು.)*

***ಚಟುವಟಿಕೆ – 2***

- ವಿವಿಧ ಹಾಡುಗಳನ್ನು (ಮಕ್ಕಳಿಗೆ ಪರಿಚಯವಿರುವ) ಅಧ್ಯಾಪಕರ, ಸಹಾಯದಿಂದ ಮಕ್ಕಳು ಆರಿಸುವರು. (ಹಾಡುಗಳ ವಿವಿಧ ತಾಳದಲ್ಲಿರುವವುಗಳಾಗಿರುವಂತೆ ಅಧ್ಯಾಪಕರು ಗಮನಿಸಬೇಕು.

  ಉದಾಹರಣೆ

  - ಸಿನೆಮಾ ಹಾಡುಗಳು
  - ದೇಶಭಕ್ತಿ ಗೀತೆಗಳು
  - ಜಾನಪದ ಗೀತೆಗಳು
  - ಲಘು ಸಂಗೀತ
  - ರಾಷ್ಟ್ರಗೀತೆ
  - ಪಾಠಭಾಗದಲ್ಲಿರುವ ಸರಳವಾದ ಸಾಲುಗಳು

- ತರಬೇತಿ ಮತ್ತು ಆಲಾಪನೆಗೆ ಮಕ್ಕಳನ್ನು ಐದು ಗುಂಪುಗಳನ್ನಾಗಿಸುವುದು.
- ಐದು ಗುಂಪುಗಳಿಗೂ ತಾಳದಲ್ಲಿಯೂ ರಾಗದಲ್ಲಿಯೂ ವೈವಿಧ್ಯವುಳ್ಳ ಐದು ಹಾಡುಗಳನ್ನು ಆರಿಸಿ ನೀಡಲು ಅಧ್ಯಾಪಕರು ಗಮನಿಸಬೇಕು.
- ಪ್ರತಿಯೊಂದು ಗುಂಪಿನ ತರಬೇತಿಗೂ ಆಲಾಪನೆಗೂ ಅಗತ್ಯವಾದ ಸಹಾಯಗಳನ್ನು ಅಧ್ಯಾಪಕರು ಕೊಡುತ್ತಿರಬೇಕು.
- ಗುಂಪಿಗೆ ಹಾಡುವ ಅವಕಾಶ
- ಇತರ ಗುಂಪುಗಳ ಮೌಲ್ಯಮಾಪನ

- ಅಧ್ಯಾಪಕರ ಮೌಲ್ಯಮಾಪನ (ಆಲಾಪನೆ ಮತ್ತು ಮಕ್ಕಳ ಮೌಲ್ಯಮಾಪನ)

***ಚಟುವಟಿಕೆ 3***

- ಪ್ರತಿಯೊಂದು ಗುಂಪಿಗೂ ಆಲಾಪನೆಯ ತಾಳ, ಅವುಗಳ ಚಲನೆಯ ಪ್ರತ್ಯೇಕತೆ/ವ್ಯತ್ಯಾಸ ಎಂಬಿವುಗಳನ್ನು ಚೆನ್ನಾಗಿ ತಿಳಿಯಲು ಸಂಖ್ಯೆಗಳನ್ನು ತಾಳಾತ್ಮಕವಾಗಿ ಅಧ್ಯಾಪಕರು ಹೇಳಿ ವಿದ್ಯಾರ್ಥಿಗಳಿಂದ ಹೇಳಿಸಬೇಕು.

ಉದಾಹರಣೆ

| | |
|---|---|
| 1. ಪಚ್ಚಪ್ರನಂದತ್ತೇ..... | /1,2,3/1,2,3,4/1,2,3/1,2,3,4/ |
| 2. ಕಿಝುಕ್ಕ್ ಪೂಕ್ಕುಂ<br>OR<br>ಕಾಯಲರಿಕತ್ತೆ .... | /1,2,3/1,2,3,4/1,2,3/1,2,3,4/... |
| 3. ಕಾಟ್ಟೇ ಕಾಟ್ಟೇ..... | /1,2,3,4/1,2,3,4/1,2,3,4/... |
| 4. ಸೌಪರ್ಣಿಕಾಮೃತ... | /1,2,1,2,3/1,2,1,2,3/... |
| OR<br>ನೋಕ್ಕೆಡಾ ನಮ್ಮುಡೆ (ತುಳ್ಳನ್ ಪಾಟ್ಟ್) | /1,2,1,2,3/1,2,1,2,3/... |
| 5. ಎಲ್ಲಾರುಂ ಚೊಲ್ಲಣ | /1,2,3/1,2,3/1,2,3/1,2,3/... |

- ಈ ರೀತಿ ಗುಂಪಿನಲ್ಲಿ ಹಾಡುವ ಹಾಡುಗಳ ಸಾಲುಗಳಿಗೆ ಯೋಗ್ಯವಾದ ಬಾಯಿತಾಳಗಳನ್ನು ಸಂಗ್ರಹಿಸಲು ಅಧ್ಯಾಪಕರು ಮಕ್ಕಳಲ್ಲಿ ಹೇಳಬೇಕು.
- ಸರಳವಾಗಿ ಹೇಳಿಸಬೇಕು.

***ಚಟುವಟಿಕೆ 4***

- ರಾಗ ಹಾಗೂ ಭಾವದಲ್ಲಿ ವೈವಿಧ್ಯವಿರುವ ಆದರೆ ತಾಳದಲ್ಲಿ ಸಾಮ್ಯವಿರುವ ಹಾಡುಗಳನ್ನು ಆರಿಸಿ ಅಧ್ಯಾಪಕರು ಮಕ್ಕಳಿಗೆ ಕೇಳಿಸಬೇಕು.

ಉದಾಹರಣೆ

1. ಅಂಬಲಪ್ಪುಝು ಉಣ್ಣಿಕಣ್ಣನೋಡು ನೀ
2. ಹರಿವರಾಸನಂ

1. ಒರುವಟ್ಟಂ ಕೂಡಿಯೆನ್
2. ಪಲವಟ್ಟಂ ಪೂಕ್ಕಾಲಂ...

- ಸಮಾನ ಸ್ವಭಾವದ ಹಾಡುಗಳನ್ನು ಅಧ್ಯಾಪಕರೂ ಮಕ್ಕಳೂ ಸೇರಿ ಹಾಡಬಹುದು.

***ಅಧ್ಯಾಪಕರು ಕೇಳುವ ಪ್ರಶ್ನೆಗಳು***

- ಸಮಾನತೆಗಳಿರುವ ಹಾಡುಗಳಿವೆಯೇ?
- ಸಾಮ್ಯವಿದೆಯೆಂದು ತೋರುವುದು ಯಾವುದರಲ್ಲಿ (ಸೂಚನೆ – ರಾಗದಲ್ಲಿ /ತಾಳದಲ್ಲಿ)
- ಒಂದೇ ತಾಳದಲ್ಲಿರುವ ಹಾಡುಗಳಿಗೆ ಭಾವದಲ್ಲಿ/ರಾಗದಲ್ಲಿ ವೈವಿಧ್ಯವಿದೆಯೇ?

- ಮಕ್ಕಳು ಅಭಿಪ್ರಾಯಗಳನ್ನು ಬಾಯ್ಮತಿನಲ್ಲಿ ಪ್ರಕಟಪಡಿಸಲು ಅವಕಾಶ ನೀಡಬೇಕು. ಮಕ್ಕಳ ಅಭಿಪ್ರಾಯಗಳಿಗೆ ಅಧ್ಯಾಪಕರು ಸಹಕಾರದಿಂದ ಇನ್ನಷ್ಟು ಸ್ಪಷ್ಟತೆಯನ್ನು ಉಂಟುಮಾಡಬೇಕು.

  *ಹಾಗಾದರೆ ಈ ರೀತಿಯ ಸಾಮ್ಯಗಳಿರುವ ಹಾಡುಗಳು, ಪಾಠಭಾಗದ ಕವಿತೆಗಳು, ಜಾನಪದ ಗೀತೆಗಳು ಎಂಬಿವುಗಳನ್ನು ಕಂಡುಹಿಡಿಯಬಹುದೇ?*

  ಅಧ್ಯಾಪಕರ ಸಹಾಯದಿಂದ ಕಂಡುಹಿಡಿದು ವಿದ್ಯಾರ್ಥಿಗಳು ಪ್ರಸ್ತುತಪಡಿಸುವರು.

**ಮೌಲ್ಯಮಾಪನ**

- ತಾಳವೈವಿಧ್ಯವನ್ನು ಗುರುತಿಸುವುದು
- ನಿಖರವಾದ ವೇಗವನ್ನು ಗುರುತಿಸುವುದು.
- ಪ್ರಶ್ನಾವಳಿಗಿರುವ ಪ್ರತಿಕ್ರಿಯೆ
- ಮಂಡನೆಯ ಹಿರಿಮೆ
- ಸಮಾನವಾದ ತಾಳವಿರುವವುಗಳನ್ನು ಕಂಡುಹಿಯುವ ಸಾಮರ್ಥ್ಯ

***ಕ್ರೋಢೀಕರಣ***

ಹಾಡುಗಳು ವೈವಿಧ್ಯವನ್ನು ಒಳಗೊಂಡಿರುತ್ತವೆ. ರಾಗ ಹಾಗೂ ತಾಳದಲ್ಲಿ ವೈವಿಧ್ಯವಿರುವ ಪರಿಚಿತವಾದ ಹಾಡುಗಳನ್ನು ಹೆಚ್ಚು ಉತ್ತಮ ರೀತಿಯಲ್ಲಿ ಹಾಡಲು ಕ್ರಮವಾಗಿ ಅಭ್ಯಾಸಮಾಡಬೇಕು. ನಿಖರವಾದ ತಾಳಚಲನೆಯೊಂದಿಗಿರುವ ಆಲಾಪನೆಯು ಆಸ್ವಾದನಾ ಸಾಮರ್ಥ್ಯವನ್ನು ಹೆಚ್ಚಿಸುವುದು. ನಿಖರವಾದ ವೇಗವಿದ್ದರೆ ಮಾತ್ರ ಆ ಹಾಡಿನ ಸ್ವಂತಿಕೆಯನ್ನು ಉಳಿಸಿಕೊಂಡು ಹಾಡಲು ಸಾಧ್ಯವಾಗುವುದು. ಪರಿಚಿತವಾದ ಕೆಲವು ಹಾಡುಗಳ ತಾಳಗಳ ಸಮಾನ ಸ್ವಭಾವಗಳನ್ನು ಕೆಡುಹಿಡಿಯಲಿಕ್ಕೂ ಸಾಧ್ಯವಿದೆ.

# ಯೂನಿಟ್ 3 : ಹಾಡುಗಳನ್ನು ಆಸ್ವಾದಿಸುವ

ದೃಶ್ಯ ಮತ್ತು ಶ್ರವಣದ ಸೊಬಗು ಹೆಚ್ಚಿದಂತೆ ಅದು ನಯನಮನೋಹರವೂ ಆಸ್ವಾದನಾತ್ಮಕವೂ ಆಗುತ್ತದೆ. ಪ್ರಕೃತಿಯಿಂದ ರೂಪುಗೊಳ್ಳುವ ಎಲ್ಲ ಶಬ್ದಗಳು ಮನೋಹರವಾಗಿರಬೇಕೆಂದಿಲ್ಲ. ಆದರೆ ಆ ರೀತಿ ಅರೋಚಕತೆಯನ್ನು ಉಂಟುಮಾಡುವ ಶಬ್ದಗಳನ್ನು ಆಕರ್ಷಕವಾಗಿಯೂ, ಸಂಗೀತಾತ್ಮಕವಾಗಿಯೂ, ಪರಿವರ್ತಿಸಬಹುದು. ಆಲಾಪನೆಯ ಹಿರಿಮೆಯನ್ನು ಮೌಲ್ಯಮಾಪನ ಮಾಡಲು ಸಾಧ್ಯವಾಗದಿರಲು ಕಾರಣ ಕಿವಿಗೆ ಹೆಚ್ಚು ಇಂಪನ್ನು ನೀಡುವ ಶಬ್ದವ್ಯವಸ್ಥೆಯನ್ನು ಆಧಾರವಾಗಿರಿಸಿದುದರಿಂದಾಗಿದೆ. ಸಂಗೀತ ರಚನೆಗಳ ವೈವಿಧ್ಯಕ್ಕನುಸರಿಸಿ ಶಬ್ದವಿನ್ಯಾಸವನ್ನು ಮಾಡಲಾಗುತ್ತದೆ. ಸಂದರ್ಭ ಹಾಗೂ ಆಶಯಕ್ಕೆ ತಕ್ಕಂತೆ ಶಬ್ದವನ್ನು ಹೇಗೆಲ್ಲ ಪ್ರಯೋಗಿಸಬಹುದು, ಆಲಾಪನೆಯ ಸಂದರ್ಭದಲ್ಲಿ ಈ ರೀತಿಯ ಶಬ್ದ ಕ್ರಮೀಕರಣಗಳು ಯಾವ ಯಾವ ಹಿರಿಮೆಗಳನ್ನು ಉಂಟುಮಾಡುತ್ತವೆ ಎಂಬಿವುಗಳನ್ನೆಲ್ಲ ತಿಳಿದುಕೊಂಡು ಯೋಗ್ಯವಾದ ರೀತಿಯಲ್ಲಿ ಹೇಗೆ ಶಬ್ದವನ್ನು ಕ್ರಮೀಕರಿಸಭೇಕೆಂಬುದನ್ನು ಈ ಯೂನಿಟ್‌ನಲ್ಲಿ ಪ್ರಸ್ತಾಪಿಸಲಾಗಿದೆ.

## ಕಲಿಕಾ ಸಾಧನೆ

ಹಾಡುಗಳನ್ನು ಶಬ್ದ ಕ್ರಮೀಕರಣದೊಂದಿಗೆ ಹಾಡುವಾಗ ಉಂಟಾಗುವ ಆಸ್ವಾದನೆಯನ್ನು ತಿಳಿದುಕೊಳ್ಳುವುದು.

## ಆಶಯ, ತಿಳುವಳಿಕೆ

- ಶಬ್ದ ಕ್ರಮೀಕರಣದೊಂದಿಗೆ ಹಾಡುವಾಗ ಆಸ್ವಾದನೆ ಹೆಚ್ಚುವುದು.
- ಹಾಡಿನ ಸಾಹಿತ್ಯವನ್ನು ಗಮನದಲ್ಲಿರಿಸಿದ ಆಲಾಪನೆಯ ನೈಪುಣ್ಯ.
- ಭಾವದ ಸೊಗಸನ್ನು ಹೆಚ್ಚಿಸಲು ಶಬ್ದ ಕ್ರಮೀಕರಣ ಅನಿವಾರ್ಯ

## ಪ್ರಕ್ರಿಯೆ

- ಶಬ್ದ ಕ್ರಮೀಕರಣದೊಂದಿಗೆ ಅಥವಾ ಇಲ್ಲದೆ ಹಾಡಿರುವ ಹಾಡುಗಳನ್ನು ತುಲನೆ ಮಾಡುವುದು.
- ಸಾಹಿತ್ಯದ ಆಶಯವನ್ನು ಅರ್ಥೈಸಿ ಹಾಡುಗಳನ್ನು ಆಲಾಪಿಸುವುದು.

## ಮೌಲ್ಯಮಾಪನ

- ಆಲಾಪನೆಯ ಮೌಲ್ಯಮಾಪನ

## ವಿಷಯ

ಹಾಡುಗಳನ್ನು ಶಬ್ದ ಕ್ರಮೀಕರಣದೊಂದಿಗೆ ಹಾಡುವಾಗ ಅದೇ ಹೆಚ್ಚು ಇಂಪಾಗುವುದು. ಹಾಡಿನ ಸಾಹಿತ್ಯವನ್ನು ತಿಳಿದುಕೊಂಡು ಶಬ್ದ ಕ್ರಮೀಕರಣದೊಂದಿಗೆ ಮಾಡುವ ಅಲಾಪನೆಯು ಹಾಡನ್ನು ಹೆಚ್ಚು ಭಾವಪೂರ್ಣಗೊಳಿಸುವುದೆಂದು ಮಗು ಈ ಯೂನಿಟ್‌ನ ಕಲಿಕಾ ಚಟುವಟಿಕೆಗಳಿಂದ ತಿಳಿದುಕೊಳ್ಳಬೇಕು. ಭಾವಪೂರ್ಣವಾದ ಆಲಾಪನೆ ನಡೆಸುವ ಸಾಮರ್ಥ್ಯವನ್ನು ಮಗು ಗಳಿಸಬೇಕು.

## ಕಲಿಕಾ ಚಟುವಟಿಕೆಗಳು

***ಚಟುವಟಿಕೆ 1***

- ಒಂದು ಹಾಡನ್ನು ಅದರ ನೈಜ ರಾಗದಲ್ಲಿ ಶಬ್ದ ನಿಯಂತ್ರಣವಿಲ್ಲದೆ ಮುಕ್ತವಾಗಿ ಹಾಡಿ ಕೇಳಿಸುವುದು. ಇದೇ ಹಾಡನ್ನು ಆಲಾಪನೆಯನ್ನು ಪೂರ್ಣತೆಗೆ ಕೊಂಡೊಯ್ಯುವ ಭಾವ, ಲಯ, ತಾಳಗಳ ವಿಶ್ರಣದೊಂದಿಗೆ ಹಾಡುವುದು ಮಕ್ಕಳು ಆಲಿಸುವುದು.
- ಸೂಚಕಗಳನ್ನು ನೀಡಿ ಎರಡು ಆಲಾಪನೆಗಳನ್ನೂ ಹೋಲಿಸಲು ಸೂಚಿಸುವುದು.

  ***ಉದಾಹರಣೆಗಳು***
  - ಉತ್ತಮವಾದ ಆಲಾಪನೆ ಯಾವುದು?
  - ವೈಶಿಷ್ಟ್ಯವೇನು?
  - ಆಲಾಪನೆ ಅರೋಚಕವೆಂದು ತೋರಿತೇ? ಕಾರಣವೇನಿರಬಹುದು?
- ಎರಡು ರೀತಿಯ ಆಲಾಪನೆಯಲ್ಲಿಯೂ ಶಬ್ದ ಹೇಗೆ ಉಪಯೋಗಿಸಲ್ಪಟ್ಟಿತು?
- ಮಕ್ಕಳ ಅಭಿಪ್ರಾಯಗಳನ್ನು (ವೈಯಕ್ತಿಕವಾಗಿ) ಅಧ್ಯಾಪಕರು ಬ್ಲೇಕ್‌ಬೋರ್ಡಿನಲ್ಲಿಯೋ ಚಾರ್ಟಿನಲ್ಲಿಯೂ ದಾಖಲಿಸಬಹುದು.

- ಮಕ್ಕಳ ಅಭಿಪ್ರಾಯಗಳಿಗೆ ಇನ್ನಷ್ಟು ಸ್ಪಷ್ಟತೆ ನೀಡಿ ಅಧ್ಯಾಪಕರು ತರಗತಿಯಲ್ಲಿ ಪ್ರಸ್ತುತಪಡಿಸಬೇಕು.

  ***ಸೂಚಕಗಳು***

  - ಆಲಾಪನೆ ಉತ್ತಮವಾಗಬೇಕಿದ್ದರೆ ಸಾಹಿತ್ಯ , ಸಂದರ್ಭವನ್ನು ಪೂರ್ಣವಾಗಿ ಅರ್ಥೈಸಿಕೊಂಡಿರಬೇಕು.
  - ಅರ್ಥ ಮನದಟ್ಟಾದರೆ ಆಲಾಪನೆಯ ಮೂಲಕ ಆಶಯ ಮಂಡನೆಗೆ ನಿಖರವಾದ ಹಾಗೂ ಸೂಕ್ತವಾದ ಶಬ್ದ ನಿಯಂತ್ರಣ ಅನಿವಾರ್ಯವಾಗುವುದು (ಶಬ್ದದ ಗಾಂಭೀರ್ಯವನ್ನು ಹೆಚ್ಚಿಸಿ, ಕಡಿಮೆ ಮಾಡಿ, ತಿಳಿಯಾಗಿಸಿ, ಮಿಶ್ರಗೊಳಿಸಿ, ಅಚ್ಚುಕಟ್ಟಾಗಿ)
  - ಹಾಡಿಗೆ ನೀಡಲ್ಪಟ್ಟ ರಾಗದ ವೈಶಿಷ್ಟ್ಯ / ಪ್ರತ್ಯೇಕತೆಯನ್ನು ತಿಳಿದುಕೊಂಡು ಶಬ್ದ ಕ್ರಮೀಕರಣ ಮಾಡುವುದು ಅನಿವಾರ್ಯ
  - ಶಬ್ದ ಕ್ರಮೀಕರಣವೇ ಈ ರೀತಿಯ ಹಾಡುಗಳ ಜೀವಾಳ

***ಚಟುವಟಿಕೆ 2***

- ಪಾಠಭಾಗದ ವಿವಿಧ ಆಶಯಗಳನ್ನು ಪ್ರತಿಪಾದಿಸುವ ಕವಿತೆಗಳನ್ನು ಆರಿಸುವುದು.
- ಮಕ್ಕಳನ್ನು ರಾಗ, ಭಾವ, ಲಯ, ಶ್ರುತಿ ಎಂಬೀ ನಾಲ್ಕು ಗುಂಪುಗಳನ್ನಾಗಿ ವಿಂಗಡಿಸಿ ಪ್ರತಿಯೊಂದು ಗುಂಪಿಗೆ ಒಂದೊಂದು ಕವಿತೆಯನ್ನು ವಿತರಿಸುವುದು. ಅರ್ಥ ಸ್ಪಷ್ಟವಾಗುವಂತೆ ಮಾಡಲು ಅಧ್ಯಾಪಕರು ಸಹಾಯ ಮಾಡಬೇಕು. ಬಳಿಕ ಭಾವಪೂರ್ಣವಾಗಿ ಶಬ್ದವನ್ನು ನಿಯಂತ್ರಿಸಿ ಹಾಡಲು ಹೇಳುವುದು.
- ಅಧ್ಯಾಪಕರ ಸಹಕಾರದಿಂದ ನಿಖರಗೊಳಿಸಬಹುದು.
- ಬಳಿಕ ಮಕ್ಕಳಿಗೆ ಹಾಡಲು ಸಾಧ್ಯವಾಗುವ ಸರಳವಾದ ರಾಗ ಸಂಯೋಜನೆ ಮಾಡಲು ಹೇಳಬೇಕು. ವೈಯಕ್ತಿಕವಾಗಿ ಅಥವಾ ಗುಂಪಾಗಿ ಭಾವಪೂರ್ಣವಾಗಿ ಹಾಡಬಹುದು.
- ಬಳಿಕ ಶ್ರೇಷ್ಠ ಕವಿಗಳು ಅಥವಾ ಹಾಡುಗಾರರು ಆಲಾಪಿಸಿದ ಕವಿತೆಗಳನ್ನು ಕೇಳಿಸಬಹುದು.

## ಮೌಲ್ಯಮಾಪನ

- ಪ್ರತಿಕ್ರಿಯೆಗಳ ಅಧಿಕೃತತೆ
- ಭಾವಪೂರ್ಣವಾದ ಓದು
- ಆಲಾಪನೆಯ ಹಿರಿಮೆ

***ಕ್ರೋಢೀಕರಣ***

ಗೀತೆಗಳು ಮತ್ತು ಕವಿತೆಗಳನ್ನು ಹಾಡುವಾಗ ಆಶಯವನ್ನು ತಿಳಿದು ಕೊಂಡಿರಬೇಕು. ವಿವಿಧ ಭಾವಗಳನ್ನು ಶಬ್ದ ನಿಯಂತ್ರಣದ ಮೂಲಕಪ್ರದರ್ಶಿಸಲು ಸಾಧ್ಯವಾಗಬೇಕು. ಭಾವಪೂರ್ಣವಾದ ಆಲಾಪನೆಯ ರೀತಿಯು ಜೀವಸತ್ವವಿರುವುದೂ ಆಸ್ವಾದನಾಯೋಗ್ಯವೂ ಆಗಿರುವುದು. ತಾಳಬದ್ಧವಾಗಿ ಹಾಡಲು ತರಬೇತಿ ನೀಡುವುದು.

# ನಾಲ್ಕನೇ ತರಗತಿ

## ಯೂನಿಟ್ 1 : ಸಂಗೀತೋಪಕರಣಗಳು

ನಮ್ಮ ನಾಡಿನ ಸಂಗೀತ ಸಂಸ್ಕೃತಿ ಹೆಚ್ಚು ವೈವಿಧ್ಯಪೂರ್ಣವೂ ಅಮೂಲ್ಯವೂ ಆಗಿದೆ. ಸಂಗೀತದ ಸಂಪ್ರದಾಯಗಳಲ್ಲಿ , ಶೈಲಿಗಳಲ್ಲಿ ಮಾತ್ರವಲ್ಲದೆ ಉಪಕರಣದಲ್ಲಿ ಅನೇಕ ವೈವಿಧ್ಯವಿರುವ ನಮ್ಮ ಸಂಗೀತ ಸರಣಿ ಬೇರೆ ಯಾವುದೇ ನಾಡಿನ ಸಂಗೀತದೊಂದಿಗೂ ಸ್ಪರ್ಧಿಸುವ ಮಟ್ಟಿಗೆ ಬೆಳೆದಿದೆ. ಪುರಾಣಕಾಲದಿಂದಲೇ ಅನೇಕ ವೈವಿಧ್ಯಪೂರ್ಣವಾದ ಸಂಗೀತೋಪಕರಣಗಳು ಸಂಶೋಧನೆಗೂ ಉಪಯೋಗಿಸುವಿಕೆಗೂ ನಮ್ಮ ನಾಡು ಸಾಕ್ಷಿಯಾಗಿದೆ. ಯಾವುದೇ ಆಲಾಪನೆಯಾಗಲಿ ಅಂದು ಪ್ರಚಾರದಲ್ಲಿದ್ದ ಉಪಕರಣ ಹಿಮ್ಮೇಳದೊಂದಿಗೆ ಪ್ರಸ್ತುತಪಡಿಸಲಾಗುತ್ತಿತ್ತು. ಇಂದಿನ ಸಂಗೀತ ನಿನ್ನೆಯ ಸಂಗೀತ ಮತ್ತು ಮುಂದೆ ಬರಲಿರುವ ಸಂಗೀತ ಶೈಲಿಗಳೆಲ್ಲವೂ ಹಿನ್ನಲೆ ಸಂಗೀತದ ಅನಂತ ಸಾಧ್ಯತೆಗಳನ್ನು ಒಳಗೊಂಡಿವೆ, ಒಳಗೊಳ್ಳಲೂ ಬೇಕು. ವಾದ್ಯೋಪಕರಣಗಳ ತಳಹದಿ ಪ್ರಕೃತಿಯೇ ಆಗಿದೆ. ವಾದ್ಯಗಳ ಶಬ್ದ ವೈವಿಧ್ಯಗಳು ಪ್ರಕೃತಿಯ ವಿವಿಧ ಶಬ್ದ ವೈವಿಧ್ಯಗಳನ್ನು ನೆನಪಿಸುತ್ತವೆ. ಆಲಾಪನೆ ಪ್ರಕ್ರಿಯೆಯಿಂದ ವಾದ್ಯ, ವಾದನಗಳನ್ನು ಎಂದಿಗೂ ಕೈಬಿಡಲು ಸಾಧ್ಯವಿಲ್ಲ. ಒಂದೇ ಸಮಯದಲ್ಲಿ ಆಲಾಪನೆಯ ಸೌಂದರ್ಯವನ್ನು ಹೆಚ್ಚಿಸುವುದರೊಂದಿಗೆ ಗಾಯಕನ ಆತ್ಮವಿಶ್ವಾಸ ವನ್ನು ಹೆಚ್ಚಿಸಲಿಕ್ಕೂ ಹಿನ್ನಲೆ ಸಂಗೀತ ದಾರಿಮಾಡಿಕೊಡುವುದು. ನಮ್ಮ ಗಾನ ರೂಪಗಳಲ್ಲಿ ಉಪಯೋಗಿಸಲ್ಪಡುವ ವಾದ್ಯೋಪಕರಣಗಳ ಕುರಿತಾಗಿಯೂ ಅವುಗಳ ಶಬ್ದ ವೈವಿಧ್ಯದ ಕುರಿತಾಗಿಯೂ ಉಗಮ ಚರಿತ್ರೆಯ ಕುರಿತಾಗಿಯೂ ಆಲಾಪನ ಪ್ರಕ್ರಿಯೆಯಲ್ಲಿ ಹಿನ್ನಲೆ ಸಂಗೀತದ ಸಮೃದ್ಧಿಯ ಕುರಿತಾಗಿಯೂ ತಿಲಿಯುವುದೇ ಈ ಯೂನಿಟ್‌ನಿಂದ ಉದ್ದೇಶಿಸಲಾಗಿದೆ.

### ಕಲಿಕಾ ಸಾಧನೆ

- ಉಪಕರಣ ಸಂಗೀತದೊಂದಿಗಿರುವ ಆಲಾಪನೆಯನ್ನು ಆಲಿಸುವುದು. .
- ಹಿಮ್ಮೇಳದ ಸಂಗೀತೋಪಕರಣಗಳನ್ನು ಗುರುತಿಸುವುದು.
- ಪ್ರಕೃತಿಯ ಶಬ್ದಗಳೊಂದಿಗೆ ಹೊಂದಿಕೆಯಾಗುವ ಸಂಗೀತೋಪಕರಣಗಳ ಶಬ್ದಗಳನ್ನು ಕಂಡುಹಿಡಿದು ಮೌಖಿಕವಾಗಿ ಅನುಕರಿಸುವುದು.

### ಆಶಯ, ತಿಳುವಳಿಕೆ

- ವಾದ್ಯೋಪಕರಣಗಳು ಆಲಾಪನೆ ಹಿರಿಮೆಯನ್ನೂ ಪೂರ್ಣತೆಯನ್ನೂ ಸೃಷ್ಟಿಸುವುವು.

- ವಾಹನಗಳಲ್ಲಿ ವಿಭಿನ್ನತೆಯನ್ನು ಪ್ರದರ್ಶಿಸುವ ವಾದ್ಯೋಪಕರಣಗಳಿವೆ.
- ಪ್ರಕೃತಿಯ ಶಬ್ದಗಳಿಗೆ ವಾದ್ಯೋಪಕರಣಗಳ ಶಬ್ದಗಳೊಂದಿಗೆ ಸಾಮ್ಯವಿದೆ.
- ಅವುಗಳನ್ನು ಅನುಕರಿಸಲು ಸಾಧ್ಯವಿದೆ.
- ಶಬ್ದಗಳಲ್ಲಿ ಸಾಮ್ಯವಿರುವವುಗಳನ್ನು ಕಂಡುಹಿಡಿಯುವ ಸಾಮರ್ಥ್ಯ

## ಪ್ರಕ್ರಿಯೆ

- ವಾದ್ಯೋಪಕರಣಗಳನ್ನು ಗಾನದೊಂದಿಗೆ ಸಹಜವಾಗಿ ನುಡಿಸುವುದನ್ನು ನಿರೀಕ್ಷಣೆ ಮಾಡುವುದು.
- ವಿವಿಧ ಉಪಕರಣಗಳನ್ನು ಉಪಯೋಗಿಸುವಾಗ ಉಂಟಾಗುವ ನಾದ ವ್ಯತ್ಯಾಸವನ್ನು ವಿಶ್ಲೇಷಿಸುವುದು.
- ಪ್ರಕೃತಿಯ ಶಬ್ದಗಳು ಮತ್ತು ವಾದ್ಯೋಪಕರಣಗಳ ಶಬ್ದವನ್ನು ಕೇಳುವುದು (ಸಿ.ಡಿ)
- ಅವುಗಳ ಸಾಮ್ಯದ ಕುರಿತಾದ ಚರ್ಚೆ ಸಾಮ್ಯವನ್ನು ಕಂಡುಹಿಡಿದು ಪಟ್ಟಿಯನ್ನು ತಯಾರಿಸುವುದು, ವಿವರಿಸುವುದು.
- ಪ್ರಕೃತಿಯ ಶಬ್ದಗಳ ಅನುಕರಣೆ

## ಮೌಲ್ಯಮಾಪನ

- ಉಪಕರಣಗಳನ್ನು ನುಡಿಸುವ ರೀತಿಯ ಕುರಿತಾದ ತಿಳುವಳಿಕೆ
- ಶಬ್ದ ಸಮಾನತೆಗಳನ್ನು ಗುರುತಿಸುವ ಸಾಮರ್ಥ್ಯ
- ಮೌಲ್ಯಮಾಪನ ಮಾಡುವುದು.
- ಮಂಡನೆಯ ಸಾಮರ್ಥ್ಯ

## ವಿಷಯ

ಆಲಾಪನೆಗೆ ವಾದ್ಯೋಪಕರಣಗಳು ನೀಡುವ ಹಿರಿಮೆಗಳನ್ನು ತಿಳಿದುಕೊಂಡು ಅವುಗಳ ರಚನೆ, ಉಪಯೋಗಿಸುವ ರೀತಿ, ವಿಶೇಷತೆಗಳಿಗನುಸಾರವಾದ ವರ್ಗೀಕರಣ, ಉಗಮದ ಕುರಿತಾದ ಕಿರು ಚರಿತ್ರೆ ಮುಂತಾದವುಗಳ ಕುರಿತೆಲ್ಲವೂ ಸಾಮಾನ್ಯ ತಿಳುವಳಿಕೆಯನ್ನು ಉಂಟುಮಾಡುವುದು ಈ ಪಾಠಭಾಗದ ಉದ್ದೇಶವಾಗಿದೆ. ಪ್ರಕೃತಿ ಮತ್ತು ಸಂಗೀತ ಎಷ್ಟರ ಮಟ್ಟಿಗೆ ಬೆಸೆದುಕೊಂಡಿದೆ ಎಂದೂ ಪ್ರಕೃತಿಯೇ ವಾದ್ಯೋಪಕರಣಗಳು ಮತ್ತು ಅವುಗಳಿಂದ ಹೆರಹೊಮ್ಮುವ ನಾದದ ಅಲೆಗಳ ಅಡಿಪಾಯ ಎಂಬ ಸತ್ಯಾಂಶವನ್ನು ಮಕ್ಕಳಿಗೆ ವಿನಿಮಯ ಮಾಡುವ ಉದ್ದೇಶವೂ ಈ ಯೂನಿಟ್‌ಗಿದೆ. ಉಪಕರಣಗಳ ವೈವಿಧ್ಯ ಮತ್ತು ಅವುಗಳ ಶಬ್ದ ವೈಚಿತ್ರ್ಯವನ್ನು ಗುರುತಿಸುವ ಚಟುವಟಿಕೆಗಳನ್ನೂ ಈ ಯೂನಿಟ್‌ನಲ್ಲಿ ಸೇರಿಸಲಾಗಿದೆ.

## ಕಲಿಕಾ ಚಟುವಟಿಕೆಗಳು

***ಚಟುವಟಿಕೆ 1***

- ಅಧ್ಯಾಪಕರು ಮುಂಚಿತವಾಗಿ ಸಂಗ್ರಹಿಸಿದ ಗಾನಗಳಿಂದ ಕೆಲವನ್ನು ಮಕ್ಕಳಿಗೆ ಕೇಳಿಸುವುದು.

ಉದಾ: : ಸಿನೆಮಾ ಹಾಡುಗಳು, ಕಾರ್ಟೂನ್ ಸಿ.ಡಿಯ ಹಾಡುಗಳು

- ಕುಂಞ ಕಂಞ ಪಕ್ಷಿ.... (ತಗರ ಚೆಂಡ)
- ಕುಕ್ಕುರು ಕುಕ್ಕು ..... (ವೆಳ್ಳಿ ನಕ್ಷತ್ರಂ)
- ಅಣ್ಣಾರಕಣ್ಣಾ ...... (ಸೆಲ್ಲುಲೋಯ್ಡ್)
- ಕಣ್ಣಾಂತುಂಬಿ.... (ಕಾಕತ್ತಿಕಾವಿಲೆ ಅಪ್ಪೂಪ್ಪನ್ ತಾಡಿಗಳ್)

ಹಿನ್ನಲೆ ಸಂಗೀತದೊಂದಿಗೆ ಕೇಳಿದ ಹಾಡುಗಳನ್ನು ಹಿನ್ನಲೆ ಸಂಗೀತವಿಲ್ಲದೆಯೇ ಅಧ್ಯಾಪಕನು ಆಲಾಪಿಸುವುದು.

- ಎರಡು ಆಲಾಪನೆಗಳನ್ನೂ ಹೋಲಿಸುವುದು.

***ಸೂಚಕಗಳು***

- ಆಲಾಪನೆಯಲ್ಲಿ ಯಾವುದು ಹೆಚ್ಚು ಇಷ್ಟವಾಯಿತು?
- ಇಷ್ಟವಾದ ಹಾಡಿನ ಆಶಯವನ್ನು ತಿಳಿದುಕೊಳ್ಳಲು ಸಾಧ್ಯವಾಯಿತೇ?
- ಉಪಕರಣ ಸಂಗೀತದೊಂದಿಗಿರುವ ಆಲಾಪನೆಯ ಪ್ರತ್ಯೇಕತೆಯೇನು?
- ಹಿನ್ನಲೆ ಸಂಗೀತವಿರುವ ಆಲಾಪನೆ ಇಷ್ಟವಾಗಲು ಕಾರಣವೇನು?

- ***ಅಧ್ಯಾಪಕನ ಕಿರು ವಿವರಣೆ***

  ಉಪಕರಣಗಳ ಹಿಮ್ಮೇಳವಿದ್ದರೆ ಹಾಡಿನ ಆಶಯವನ್ನು ಹೆಚ್ಚು ಸ್ಫುಟಗೊಳಿಸಲು , ರಾಗ ಮತ್ತು ತಾಳವನ್ನು ಪೂರ್ತಿಯಾಗಿ ಆಸ್ವಾದಿಸಲು ಸಾಧ್ಯವಾಗುವುದು. ಪ್ರದರ್ಶನವನ್ನು ಆಕರ್ಷಣೆಗೊಳಿಸುವಲ್ಲಿ ಹಿನ್ನಲೆ ಸಂಗೀತ ಪ್ರಧಾನ ಪಾತ್ರ ವಹಿಸುವುದು.

- ಹಾಗಾದರೆ ಮೊದಲು ಕೇಳಿದ ಆಲಾಪನೆಯಲ್ಲಿ ಉಪಯೋಗಿಸಿದ ಉಪಕರಣಗಳನ್ನು ಗುರುತಿಸಲು ಸಾಧ್ಯವಾಗುತ್ತಿದೆಯೇ?

  ಗುರುತಿಸಲು ಸಾಧ್ಯವಾಗದವರು ಬಿ.ಬಿ ಯಲ್ಲಿ ಉಪಕರಣಗಳ ಹೆಸರನ್ನು ಬರೆಯುವಿರಾ?

- ಬರೆದ ಉಪಕರಣಗಳು ಮತ್ತು ಇತರ ಉಪಕರಣಗಳ ಚಿತ್ರಗಳನ್ನು ಅವುಗಳ ವಾದನವನ್ನು ತೋರಿಸುವುದು – ವಿ.ಸಿ.ಡಿಯನ್ನು ಉಪಯೋಗಿಸಿ ಕೇಳುವಂತೆ ಮಾಡುವುದು.
- ವಿಭಿನ್ನವಾದ ಮೂರು ವಿಧದ ವಾದ್ಯಗಳನ್ನು ಪರಿಚಯಿಸುವುದು.

***ಸಂಗೀತೋಪಕರಣಗಳು***

❖ ವಯಲಿನ್ ❖ ಕೀಬೋರ್ಡ್ ❖ ಗಿಟಾರ್ ❖ ತಬಲ ❖ ಡ್ರಮ್ಸ್ ❖ ಚೆಂಡೆ



- ಉಪಕರಣಗಳ ವಾದನ ಮತ್ತು ರಚನೆಯನ್ನು ವಿ.ಸಿ.ಡಿಯ ಸಹಾಯದಿಂದ ಪರಿಚಯಿಸುವುದು. (ಪ್ರತಿಯೊಂದು ಉಪಕರಣದ ಶಬ್ದಗಳಲ್ಲಿರುವ ವ್ಯತ್ಯಾಸವನ್ನು ಸರಿಯಾಗಿ ಕೇಳಲು ಮತ್ತು ಅರ್ಥೈಸಿಕೊಳ್ಳಲು ಸಾಧ್ಯವಾಗುವ ರೀತಿಯಲ್ಲಿ ಕ್ರಮೀಕರಿಸುವುದು). ಅವುಗಳಲ್ಲಿ ಮಕ್ಕಳಿಗೆ ಸಾಧ್ಯವಾಗುವವುಗಳನ್ನು ಅನುಕರಿಸಲು ಹೇಳುವುದು. ಕೇಳಿಸಿದ ವಾದ್ಯಗಳ ಕುರಿತು ಲಘು ವಿವರಣೆ ನೀಡುವುದು.

***ತಂತಿವಾದ್ಯಗಳು***

- ವಯಲಿನ್ : ತಂತಿವಾದ್ಯವಾಗಿದೆ, ಪಾಶ್ಚಾತ್ಯ ಸಂಗೀತೋಪಕರಣವಾಗಿದೆ. ಭಾರತದಲ್ಲಿ ಕರ್ನಾಟಕ ಸಂಗೀತದ ಪಕ್ಕವಾದ್ಯವಾಗಿ ಉಪಯೋಗಿಸುವರು. ತಂತಿಗಳಲ್ಲಿ ಬೋ (ಬಿಲ್ಲು) ಉಪಯೋಗಿಸಿ ಮೀಟುವಾಗ ನಾದ ಹೊರಹೊಮ್ಮುವುದು.
- ಕೀಬೋರ್ಡ್ (ಓರ್ಗನ್) : ಇದು ಇಲೆಕ್ಟ್ರೋನಿಕ್ ವಾದ್ಯೋಪಕರಣವಾಗಿದೆ. ಕೀಯನ್ನು ಒತ್ತಿ ನಾದವನ್ನು ಹೊರಹೊಮ್ಮಿಸಲಾಗುತ್ತದೆ. ವಿವಿಧ ಉಪಕರಣಗಳ ಶಬ್ದವನ್ನು ಹೊರಹೊಮ್ಮಿಸಲು ಈ ಮೂಲಕ ಸಾಧ್ಯವಿದೆ.
- ಗಿಟಾರ್ : ತಂತಿವಾದ್ಯ, ಪಾಶ್ಚಾತ್ಯಸಂಗೀತೋಪಕರಣ. ಹೆಚ್ಚಿನ ಹಾಡುಗಳಲ್ಲಿಯೂ ಉಪಯೋಗಿಸಲ್ಪಡುತ್ತದೆ. ತಂತಿಗಳಲ್ಲಿ ಸ್ಟ್ರೈಕರ್ ಉಪಯೋಗಿಸಿ ತಟ್ಟುವ ಮೂಲಕ ನಾದವನ್ನು ಹೊರಹೊಮ್ಮಿಸಬಹುದು.

***ತಾಳವಾದ್ಯಗಳು***

- ಚರ್ಮ ವಾದ್ಯಗಳು : ತಬಲ – ಚರ್ಮ ವಾದ್ಯ. ಎರಡು ವಾದ್ಯಗಳು (ಡಕ್ಕೆ ಗೂಟ(ಕರ್ಣ) ತಬಲ) ತೊಗಲನ್ನು ಎಳೆದು ಕಟ್ಟಿ ಕೈಗಳಿಂದ ನುಡಿಸುವುದು.

  ಚೆಂಡೆ : ಮರದ ಗೂಟಕ್ಕೆ ತೊಗಲನ್ನು ಎಳೆದು ಕಟ್ಟಿ ತಯಾರಿಸಲಾಗುತ್ತದೆ. ಚೆಂಡೆಕೋಲಿನಿಂದ ಬಾರಿಸಲಾಗುತ್ತದೆ.
- ರಿಥಂ ಪ್ಯಾಡ್, ರಿಥಂ ಕಂಪೋಸರ್ :– ಇಲೆಕ್ಟ್ರೋನಿಕ್ ಉಪಕರಣ ಎಲ್ಲ ತಾಳವಾದ್ಯಗಳ ನಾದಗಳು.

***ಚಟುವಟಿಕೆ 2***

- ಗಾಳಿ, ಕೋಗಿಲೆ, ಎಂಬಿವುಗಳ ಶಬ್ದದೊಂದಿಗೆ ಸಾಮ್ಯವಿರುವ ಕೊಳಲಿನ (ಫ್ಲೂಟ್) ಶಬ್ದವನ್ನು ಮಕ್ಕಳಿಗೆ ಕೇಳುವಂತೆ ಮಾಡುವುದು. ಸಾಮ್ಯವನ್ನು ಗುರುತಿಸುವುದು.
- ಈ ರೀತಿ ಪ್ರಕೃತಿಯ ಶಬ್ದಗಳೊಂದಿಗೆ ಸಾಮ್ಯವಿರುವ ಉಪಕರಣಗಳನ್ನು ಕಂಡುಹಿಡಿಯಲು ಹೇಳುವುದು.
- ಪರಿಚಯವಿರುವವುಗಳನ್ನು ಕೆಲವನ್ನು ಅನುಕರಿಸಲು ಹೇಳುವುದು.
- ಪ್ರಕೃತಿಯ ವಿದ್ಯಮಾನಗಳು, ಜೀವಜಾಲಗಳು, ಅವುಗಳ ಶಬ್ದಗಳನ್ನು ಒಳಗೊಳ್ಳಿಸಿ ರಚಿಸಿದ ಹಾಡಿನ ಭಾಗಗಳನ್ನು ಕೇಳುವಂತೆ ಮಾಡುವುದು. (ಮಳೆ, ಗಾಳಿ, ಗಿಳಿಗಳು, ನದಿಯ, ಸಮುದ್ರದ ಶಬ್ದ)

  ***ಹಾಡುಗಳಿಗೆ ಉದಾಹರಣೆಗಳು***
  - ಕನ್ನಡ ನಾಡಿನ ಜೀವನದಿ .........
  - ತುಂತುರು ಅಲ್ಲಿ ನೀರ ಹಾಡು....
  - ಮಾಮರವೆಲ್ಲೋ ಕೋಗಿಲೆಯೆಲ್ಲೋ
  - ಶಿಲೆಗಳು ಸಂಗೀತವ ಹಾಡಿವೆ..
  - ಚಂದದ ಅರಗಿಣಿ

## ಮೌಲ್ಯಮಾಪನ

- ನುಡಿಸುವ ರೀತಿ, ಉಪಕರಣಗಳನ್ನು ಗುರುತಿಸುವುದು
- ಸಾಮ್ಯ, ವ್ಯತ್ಯಾಸಗಳನ್ನು ತಿಳಿದುಕೊಳ್ಳುವುದು.
- ಆಲಾಪನೆಯ ವೈಶಿಷ್ಟ್ಯಗಳನ್ನು ಗುರುತಿಸುವುದು.
- ಅನುಕರಣ ಸಾಮರ್ಥ್ಯ

***ಕ್ರೋಡೀಕರಣ***

- ಪ್ರಕೃತಿಗೂ ಸಂಗೀತಕ್ಕೂ ಪರಸ್ಪರ ಸಂಬಂಧವಿದೆ. ಸಂಗೀತಾಸ್ವಾದನೆಗೆ ಮೆರುಗು ನೀಡಲು ಸಂಗೀತೋಪಕರಣದ ಹಿಮ್ಮೇಳ ಅನಿವಾರ್ಯ. ಭಾರತೀಯರು ವಿವಿಧ ರೀತಿಯ ಸಂಗೀತೋಪಕರಣ ಸಂಸ್ಕೃತಿಯ ಅಧಿಪರಾಗಿರುವರು.
- ಸರಳ ವಾದ್ಯಗಳಿಂದ ತೊಡಗಿ ವಾದನಾ ಪ್ರಕ್ರಿಯೆಯಲ್ಲಿ ಸಂಕೀರ್ಣತೆಯಿರುವ ಅನೇಕ ಉಪಕರಣಗಳು ನಮ್ಮ ಆಲಾಪನಾ ಪ್ರಕ್ರಿಯೆಗೆ ಶೋಭೆಯನ್ನು ನೀಡುತ್ತವೆ. ಪ್ರಕೃತಿಯ ಪ್ರತಿಯೊಂದು ಉಪಕರಣದ ಶಬ್ದದ ಮೂಲವಾಗಿದೆ.

# ಯೂನಿಟ್ 2 : ತಾಳವಾದ್ಯಗಳು

ಪ್ರಪಂಚದ ಎಲ್ಲ ಚಟುವಟಿಕೆಗಳಲ್ಲಿಯೂ ತಾಳ ಹಾಸುಹೊಕ್ಕಾಗಿದೆ. ತಾಳಾತ್ಮಕವಾದ ಪ್ರಪಂಚವೇ ಎಲ್ಲ ಕಲೆಗಳಿಗೆ ಆಧಾರ. ತಾಳವೇ ಸಂಗೀತದ ಮೂಲ ಘಟಕ. ಸಂಗೀತದ ಸಮಯ ಕ್ರಮೀಕರಣವೇ ತಾಳ. ಪ್ರತಿಯೊಂದು ಗಾನರೂಪಕಗಳಲ್ಲಿಯೂ ಅವುಗಳ ಆಲಾಪನೆಗೆ ಹೆಚ್ಚು ಆಕರ್ಷಣೆ ಆಸ್ವಾದನೆಯನ್ನು ನೀಡಲು ತಾಳಗಳಿಗೆ ಸಾಧ್ಯವಿದೆ. ಅನೇಕ ವಿಧದ ತಾಳಗಳನ್ನು ನಮ್ಮ ಸಂಗೀತ ಶೈಲಿಯಲ್ಲಿ ಉಪಯೋಗಿಸಿರುವುದನ್ನು ಕಾಣಬಹುದು. ನುಡಿಗಟ್ಟುಗಳಲ್ಲಿಯೂ ಶಿಶುಗೀತೆಗಳಲ್ಲಿಯೂ ಕತೆ ಹೇಳುವುದರಲ್ಲಿಯೂ ಈ ತಾಳಾತ್ಮಕ ಚಲನೆಯನ್ನು ಅವನ ಸ್ವತಃ ಸಿದ್ಧವಾದ ಶೈಲಿಯಲ್ಲಿ ಪ್ರಕಟಪಡಿಸುವನು. ಅವನ ಮನಸ್ಸಿನಲ್ಲಿ ಅಂತರ್ಲೀನವಾಗಿರುವ ತಾಳಪ್ರಜ್ಞೆಯನ್ನು ಸರಳ ವಾದ್ಯಗಳತ್ತ ಕೇಂದ್ರೀಕರಿಸಿ ಅದನ್ನು ಆಲಾಪನೆಯ ಪೂರ್ಣತೆಗೂ ಹಿರಿಮೆಯನ್ನು ಉಜ್ವಲಗೊಳಿಸಲೂ ಉಪಯೋಗಿಸುವನು. ವಿವಿಧ ಪ್ರದರ್ಶನಗಳ ವೇಗವನ್ನು ಹೆಚ್ಚಿಸಿದಾಗ ಅಥವಾ ಕಡಿಮೆಮಾಡಿದಾಗ ಉಂಟಾಗುವ ಭಾವ ವ್ಯತ್ಯಾಸಗಳನ್ನು ತಿಳಿಯುವುದರ ಮೂಲಕ ಸಂದರ್ಭ, ಉಪಯೋಗ ಹಾಗೂ ಹಾಡಿಗೆ ಅನುಸಾರವಾಗಿ ತಾಳ ಪ್ರಯೋಗಿಸುವ ರೀತಿ/ಸರಳ ವಾದ್ಯೋಪಕರಣಗಳನ್ನು ನುಡಿಸುವ ರೀತಿ ಮುಂತಾದುವುಗಳನ್ನು ಪರಿಚಯಿಸು ವುದರೊಂದಿಗೆ ಅಭ್ಯಾಸಮಾಡುವನು. ತಾಳ, ಭಾವ, ರಾಗ, ಲಯ ಎಂಬಿವುಗಳು ಸೂಕ್ತವಾದ ರೀತಿಯಲ್ಲಿ ಬೆರೆತು ಆಲಾಪನೆ/ಅಭಿವ್ಯಕ್ತಿಯಲ್ಲಿ ಸ್ಫುಟಗೊಳ್ಳುವಾಗ ಸಂಗೀತ ಆಸ್ವಾದಕರಲ್ಲಿ ಹೆಚ್ಚು ಆಸಕ್ತಿ ಉಂಟುಮಾಡುವುದು.

## ಕಲಿಕಾ ಸಾಧನೆ

- ಚಲನೆಯ ವೇಗಕ್ಕನುಸಾರವಾಗಿ ಸರಳ ತಾಳ ವಾದ್ಯಗಳಲ್ಲಿ ತಾಳ ಚಲನೆ ಮತ್ತು ತಾಳದ ನಡುವಿನ ಹೊಂದಾಣಿಕೆಯನ್ನು ತಿಳಿದುಕೊಳ್ಳುವುದು.
- ವೇಗ ಹೆಚ್ಚಿಸಿ ಅಥವಾ ಇಳಿಸಿ ಸರಳ ವಾದ್ಯಗಳಲ್ಲಿ ತಾಳ ಹಾಕಿ ಪರಿಚಿತ ಹಾಡುಗಳನ್ನು ಆಲಾಪಿಸಲು ಸಾಧ್ಯವಾಗುವುದು.

## ಆಶಯ, ತಿಳುವಳಿಕೆ

- ತಾಳವಾದ್ಯಗಳ ವಾದನದಲ್ಲಿ ತಾಳ ಮತ್ತು ಚಲನೆ ಪರಸ್ಪರ ಹೊಂದಿಕೆಯಾಗಬೇಕು.
- ವೇಗವನ್ನು ಕ್ರಮೀಕರಿಸಲು ತಾಳವಾದ್ಯಗಳ ಇರುವಿಕೆ ಸಹಾಯಕವಾಗುವುದು.
- ತಾಳಾತ್ಮಕವಾದ ಚಲನೆಗೆ ತಾಳವಾದ್ಯಗಳ ಹಿಮ್ಮೇಳ ಉಪಯುಕ್ತವಾಗುವುದು.
- ವಿಭಿನ್ನ ವೇಗದಲ್ಲಿರುವ ಗಾನಾಲಾಪನೆಗಳಿವೆ.
- ವೇಗ ಹೆಚ್ಚುವುದಕ್ಕನುಸರಿಸಿ ತಾಳದ ತೀವ್ರತೆಯೂ ಹೆಚ್ಚುವುದು.
- ವಾದ್ಯಗಳನ್ನು ಉಪಯೋಗಿಸುವಾಗ ಹಾಡಿನ ಆಸ್ವಾದನೆ ಹೆಚ್ಚುವುದು.
- ಗಾಯಕವೃಂದದ ಒಗ್ಗಟ್ಟಿನ ಪರಿಶ್ರಮವೇ ಹಿರಿಮೆಗೆ ಆಧಾರ
- ಸರಳ ವಾದ್ಯಗಳೊಂದಿಗೆ ಹಾಡುವ ನೈಪುಣ್ಯ
- ಗಾನಾಲಾಪನೆಗೆ ಅನುಸಾರವಾಗಿ ಉಪಕರಣವನ್ನು ಉಪಯೋಗಿಸುವುದು.

## ಪ್ರಕ್ರಿಯೆ

- ನಿರ್ದಿಷ್ಟ ವೇಗದಲ್ಲಿ ಕೈಗಳಿಂದ ತಾಳಹಾಕಲು ಸೂಚಿಸುವುದು.
- ಒಂಟಿಯಾಗಿ ಅಥವಾ ಗುಂಪಾಗಿ ಕೈತಾಳ ಹಾಕಿ ತಾಳದ ವೇಗವನ್ನು ಕ್ರಮೀಕರಿಸುವುದು.
- ವಿಭಿನ್ನ ವೇಗದಲ್ಲಿರುವ ಹಾಡುಗಳನ್ನು ಹೋಲಿಸುವುದು.
- ವಾದ್ಯೋಪಕರಣಗಳೊಂದಿಗೆ ಹಾಡುವುದು.
- ವಾದ್ಯಗಳನ್ನು ಉಪಯೋಗಿಸಿ ಅಥವಾ ಇಲ್ಲದೆಯೇ ಹಾಡುವಾಗಿನ ಆಸ್ವಾದನಾ ಮಟ್ಟದ ಕುರಿತು ಚರ್ಚಿಸುವುದು.
- ಕೆಲವು ಹಾಡುಗಳನ್ನು ತಾಳದಲ್ಲಿ ಏರಿಳಿತವನ್ನುಂಟುಮಾಡಿ ಹಾಡುವುದು.
- ಗುಂಪಾಗಿ ಹಾಡಿದ ಹಾಡನ್ನು ವಿಶ್ಲೇಷಿಸಿ ಹೆಚ್ಚು ಪ್ರಯತ್ನಿಸಿದರೆ ಉತ್ತಮಗೊಳಿಸಬಹುದೆಂದು ತಿಳಿದುಕೊಳ್ಳುವರು.
- ಚಲನಾಧಾರಿತವಾದ ತಾಳವನ್ನು ಸರಳ ತಾಳವಾದ್ಯದೊಂದಿಗೆ ನುಡಿಸುವುದು.

## ಮೌಲ್ಯಮಾಪನ

- ಚಲನೆಯಲ್ಲಿ ತಾಳದ ನಿಖರತೆ
- ವಾದ್ಯೋಪಕರಣಗಳ ಉಪಯೋಗ
- ಚಲನೆಗಳ ಸಮಯದಲ್ಲಿ ನಿಖರತೆ
- ವೇಗವನ್ನು ಗುರುತಿಸುವುದು.
- ಸ್ವ ಮೌಲ್ಯಮಾಪನ, ವೈಯಕ್ತಿಕ ಮೌಲ್ಯಮಾಪನ
- ತಾಳವೈವಿಧ್ಯವನ್ನು ತಿಳಿಯುವುದು.

- ವಾದ್ಯೋಪಕರಣಗಳ ಉಪಯೋಗ, ಹೇಳುವುದು, ಎಣಿಸುವುದು ಮುಂತಾದವುಗಳೊಳಗಿನ ಹೊಂದಾಣಿಕೆ.

## ವಿಷಯ

ಪರಿಚಿತಗಾನಗಳೊಂದಿಗೆ ಸರಳವಾದ ಉಪಕರಣಗಳನ್ನು ಹೇಗೆ ಉಪಯೋಗಿಸಬಹುದು, ತಾಳ ವ್ಯತ್ಯಾಸ, ವೇಗ ವ್ಯತ್ಯಾಸ, ವಾದನಾ ಪ್ರಕ್ರಿಯೆಯಲ್ಲಿ ಇರಬೇಕಾದ ಬದಲಾವಣೆಗಳು, ಕ್ರಮಗಳು, ತಾಳದೊಂದಿಗೆ ಆಲಾಪನೆ ನಡೆಸುವಾಗ ಸೃಷ್ಟಿಸಲ್ಪಡುವ ವಿಶೇಷತೆಗಳು ಈ ಯೂನಿಟ್‌ನಲ್ಲಿ ಪ್ರತಿಪಾದಿಸಲ್ಪಡುವ ವಿಷಯಗಳಾಗಿವೆ.

## ಕಲಿಕಾ ಚಟುವಟಿಕೆಗಳು

***ಚಟುವಟಿಕೆ 1***

- ನಿರ್ದಿಷ್ಟ ವೇಗದಲ್ಲಿ ಸಂಖ್ಯೆಗಳನ್ನು ಎಣಿಸಿ ಚಪ್ಪಾಳೆ ತಟ್ಟಿ ತಾಳಹಾಕುವುದು. ಎಣಿಸುವ ವೇಗವನ್ನು ಹೆಚ್ಚಿಸಿ ಅಥವಾ ಕಡಿಮೆ ಮಾಡಿ ಹೇಳುವಾಗ ಅದಕ್ಕನುಸಾರವಾಗಿ ಚಲನೆಯನ್ನು ಕ್ರಮೀಕರಿಸುವುದು.
- /1-----2------3-----4/ ಎಂದು ನಿಖರವಾದ ಸಮಯಾಂತರಗಳಲ್ಲಿ ಆವರ್ತಿಸುವುದು. ವೇಗ ಹೆಚ್ಚಿಸಿ ಅಥವಾ ಕಡಿಮೆ ಮಾಡಿ ಹೇಳಿ ಚಪ್ಪಾಳೆತಟ್ಟಿ ಅಭ್ಯಾಸಮಾಡುವುದು.
- ತರಬೇತಿಯನ್ನು ಆವರ್ತಿಸುವುದು.
- ಎಣಿಕೆ ಮತ್ತು ಚಪ್ಪಾಳೆಯ ನಡುವಿನ ಹೊಂದಾಣಿಕೆಯನ್ನು ನಿಖರಗೊಳಿಸುವುದು.
- ಮಕ್ಕಳು ಕಳೆದ ತರಗತಿಗಳಲ್ಲಿ ತಯಾರಿಸಿದ ಸರಳವಾದ ವಾದ್ಯೋಪಕರಣಗಳನ್ನು ಉಪಯೋಗಿಸಲು ಸೂಚಿಸುವುದು.
  - ಸೋಡಾಬಾಟ್ಲಿಯ ಮುಚ್ಚಳಗಳನ್ನು ಸರಿಗೆಯಲ್ಲಿ ಪೋಣಿಸಿ ಮರದ ಚೌಕಟ್ಟಿನಲ್ಲಿ ಭದ್ರಗೊಳಿಸಿದ ವಾದ್ಯ.
  - ಸಾಸಿವೆ ತುಂಬಿಸಿದ ಬೆಲೂನ್
  - ಗೆರಟೆಗಳು
  - ಚಿಪ್ಲ
  - ಬಿದಿರಿನ ತುಂಡುಗಳು (ಸಪೂರದ್ದು) ಗೆರಟೆಯಲ್ಲಿ ಬೆಲೂನ್/ಎಳೆದು ಕಟ್ಟಿದ್ದು.
  - ಝಲ್ಲರಿ, ಗಂಜೀರ, ಕಪ್ಪಾಸ್

  ಎಣಿಸುತ್ತಿರುವಾಗ ತಾಳಹಾಕಲು ಈ ಉಪಕರಣಗಳನ್ನು ಉಪಯೋಗಿಸಲು ಸೂಚಿಸುವುದು.
- ಎಣಿಸುತ್ತಿರುವಾಗ ಆರಂಭಿಸಿದ ವಾದನದೆಡೆಯಲ್ಲಿ ನಿಶ್ಶಬ್ದವಾಗಿ ಎಣಿಸುವುದು, ನಿರ್ದಿಷ್ಟ ಸಮಯಾಂತರಗಳಲ್ಲಿ ಎಣಿಕೆಯನ್ನು ವಾದನದೊಂದಿಗೆ ನಡೆಸಿ ಪುನಃ ನಿಶ್ಶಬ್ದವಾಗಿ ಎಣಿಸುವುದು ಆ ಬಳಿಕ ಎಣಿಕೆಯನ್ನು ವಾದನದೊಂದಿಗೆ ನಡೆಸಬೇಕು.

***ಚಟುವಟಿಕೆ 2***

- ಮಕ್ಕಳನ್ನು ಗುಂಪುಗಳನ್ನಾಗಿಸುವುದು.
- ಒಂದನೆಯ ಗುಂಪು ನುಡಿಗಟ್ಟುಗಳನ್ನು ಹೇಳುವುದು.
- ಇತರ ಗುಂಪುಗಳು ಉಪಕರಣಗಳನ್ನು ಉಪಯೋಗಿಸುವುದು.

- ಮಕ್ಕಳು ಅಭ್ಯಾಸ ಮಾಡಿದ ತಾಳಕ್ರಮದಲ್ಲಿ ಬರುವ ಹಾಡುಗಳನ್ನು ಅಧ್ಯಾಪಕರೂ ಮಕ್ಕಳೂ ಜೊತೆಯಲ್ಲಿ ತಾಳಕ್ಕನುಸಾರವಾಗಿ ಹಾಡುವರು.
- ಸಮಾನವಾದ ಇತರ ಹಾಡುಗಳನ್ನು ಕಂಡುಹಿಡಿಯಬೇಕು.
- ತಾಳವೈವಿಧ್ಯವನ್ನೊಳಗಂಡ ಹಾಡುಗಳನ್ನು ಕಂಡುಹಿಡಿದು ಅವುಗಳೊಂದಿಗೆ ಉಪಕರಣಗಳನ್ನು ನುಡಿಸಲು ಅಭ್ಯಾಸ ಮಾಡಬೇಕು.

***ಉದಾಹರಣೆ***

- ಪಳ್ಳಿವಾಳು ಭದ್ರ ವಟ್ಟಕಂ
- ಪಳ್ಳಿಕ್ಕಲಪ್ಪಂಡೆ ಮೋನೆ
- ಕಾಟ್ಟಿತಿ ಮಾನಿಂಡೆ ತೋಲುಕೊಂಡುಂಡಾರೆ
- ಕೊಡಿಯ ವೇನಲ್‌ಕಾಲಂ
- ಆರಾನಯಿತಿ ಪೋನ್ನಡ್
- ಪೂಪರಿಕ್ಕನ್ ಪೋರಣೋ
- ಅರಿಪೋತಿರಿಪ್ಪೋ/ಅಕ್ಕುತಿಕ್ಕತ್ತಾನ
- ನಾರಜಪೋಲ್

- ಮೇಲೆ ಹೇಳಿದ ಹಾಡುಗಳಿಂದ ಆರಿಸಿದ ಎರಡು ಹಾಡುಗಳನ್ನು ವೇಗ ಹೆಚ್ಚಿಸಿಯೂ ಕಡಿಮೆಮಾಡಿಯೂ, ಯಥಾರ್ಥ ವೇಗದಲ್ಲಿಯೂ ಹಾಡಿ ಅವುಗಳೊಳಗಿನ ವ್ಯತ್ಯಾಸವನ್ನು ತಿಳಿದುಕೊಳ್ಳುವುದು.

## ಮೌಲ್ಯಮಾಪನ

- ಚಲನೆಗಳ ಸಮಯದ ನಿಖರತೆ
- ವಾದ್ಯೋಪಕರಣಗಳ ಉಪಯೋಗ, ಆಲಾಪನೆ, ಎಣಿಕೆ ಮುಂತಾದವುಗಳಲ್ಲಿರುವ ಹೊಂದಿಕೆ
- ವೇಗವನ್ನು ಗುರುತಿಸುವುದು.
- ತಾಳವೈವಿಧ್ಯವನ್ನು ತಿಳಿಯುವುದು.

***ಕ್ರೋಡೀಕರಣ***

ಸಂಗೀತದಲ್ಲಿ ಸಮಯ ಕ್ರಮೀಕರಣ ವ್ಯವಸ್ಥೆಯನ್ನು ತಾಳ ಎನ್ನುವರು. ತಾಳ ವೈವಿಧ್ಯವನ್ನೂ ತಾಳದ ಗತಿ ವೈವಿಧ್ಯವನ್ನೂ ಒಳಗೊಂಡ ಸಂಗೀತ ಪ್ರದರ್ಶನಗಳನ್ನು ಆಸ್ವಾದಿಸುವುದ ರೊಂದಿಗೆ ಮೌಲ್ಯಮಾಪನ ಮಾಡಬೇಕಿದ್ದರೆ ಪ್ರಾಥಮಿಕವಾಗಿಯೇ ಅವುಗಳ ಸಮಯ ವ್ಯತ್ಯಾಸವನ್ನು ಹೆಚ್ಚು ತಿಳಿಯಬೇಕು. ತರಗತಿಯೊಳಗೂ ಹೊರಗೂ ವ್ಯವಹರಿಸುವ ಮಕ್ಕಳಿಗೆ ಅವರ ಸಂಗೀತ ವೈಶಿಷ್ಟ್ಯವನ್ನು ಹೆಚ್ಚು ಉತ್ತಮಗೊಳಿಸಲು ಈ ರೀತಿಯ ಚಟುವಟಿಕೆಗಳನ್ನು ಜ್ಯಾರಿಗೊಳಿಸಬೇಕು.

# ಯೂನಿಟ್ 3 : ರಾಗ ತಾಳ

ಸಂಗೀತವು ಭಾವನೆಯ ಭಾಷೆಯಾಗಿದೆ. ಮನುಷ್ಯನ ಮನಸ್ಸಿನಲ್ಲಿ ರೂಪುಗೊಳ್ಳುವ ಪುಟ್ಟ ಯೋಚನೆಗಳು, ಆಶಯಗಳು ಎಂಬಿವುಗಳನ್ನೆಲ್ಲ ನಾದದ ಅಲೆಗಳೊಂದಿಗೆ ಸೌಂದರ್ಯಾತ್ಮಕವಾಗಿ ಪ್ರತಿಫಲಿಸುವಂತೆ ಮಾಡಿದಾಗ ಸಂಗೀತದ ಸಾಧ್ಯತೆಗಳು ನಮ್ಮ ಮುಂದೆ ಅನಾವರಣಗೊಳ್ಳುತ್ತವೆ. ಅನೇಕ ವಾಕ್ಯಗಳನ್ನು ಉಪಯೋಗಿಸಿ ಹೆಚ್ಚು ಸಮಯ ಖರ್ಚು ಮಾಡಿ ಪ್ರಕಟಪಡಿಸಬೇಕಾಗಿ ಬರುವ ಹಲವಾರು ಆಶಯಗಳನ್ನು ಸುಮಧುರವಾದ ಅರ್ಥಪೂರ್ಣವಾದ ಸಂಗೀತದ

ತುಣುಕನ್ನು ಉಪಯೋಗಿಸಿ ಶೀಘ್ರವಾಗಿ ಗುರಿಯತ್ತ ತಲುಪುವುದು ಅನುಭವವೇಧ್ಯವಾಗಿದೆ. ಸಂಗೀತ ಕೇವಲ ಮನರಂಜನೆಯ ಮಾಧ್ಯಮವಲ್ಲ. ಯಾವುದೇ ಆಶಯವನ್ನು ಪ್ರಕಟಪಡಿಸಲು ಸ್ವೀಕರಿಸಲು ಮತ್ತು ವರ್ಗಾಯಿಸಲು ಸಂಗೀತವು ಸುಗಮವಾದ ಮಾಧ್ಯಮ ಆಗಿದೆ.

ನಮ್ಮ ಸುತ್ತು ಮುತ್ತಲೂ ಇರುವ ಕಲಾರೂಪಗಳಲ್ಲಿ ಸಂಗೀತದ ಸ್ಥಾನ ಪ್ರಥಮವಾದುದು. ಕಲಿಕಾ ಪ್ರಕ್ರಿಯೆಯಲ್ಲಿ ಕಲೆಯೂ ಸೇರುವಾಗ ಉಂಟಾಗುವ ಬದಲಾವಣೆಗಳು ಎಷ್ಟೋ ಕಾಲಗಳಿಂದ ಸಮಾಜಕ್ಕೆ ಮನವರಿಕೆಯಾಗಿದೆ.

ಪ್ರತಿಯೊಂದು ಭಾವನೆಯನ್ನು ಸಂಗೀತದ ಮೂಲಕ ವರ್ಗಾಯಿಸುವಾಗಲೂ ಸ್ವೀಕರಿಸುವಾಗಲೂ ಆ ಪ್ರಕ್ರಿಯೆಯಲ್ಲಿ ಉಂಟಾಗುವ ಬದಲಾವಣೆ ಅದ್ವಿತೀಯವಾಗಿರುವುದು. ಹೆಚ್ಚು ಸಮಗ್ರವೂ ಆಗಿರುವುದು. ಒಂದೇ ಸಂದರ್ಭ, ಒಂದೇ ಭಾವನೆ. ಅಥವಾ ಒಂದೇ ಆಶಯವನ್ನು ಪ್ರಕಟಪಡಿಸಲು ಅನಂತವಾದ ಅವಕಾಶಗಳಿರುವ ಸಂಗೀತದಲ್ಲಿ ವೈವಿಧ್ಯಮಯವಾದ ರಾಗ ಸಿರಿ ಮತ್ತು ತಾಳಸಿರಿಇದೆ. ಸಂಗೀತದ ತಳಹದಿ ರಾಗಗಳಾಗಿವೆ ಯಲ್ಲವೇ. ಈ ಸಂದರ್ಭದ ಕುರಿತು ಪ್ರಾಥಮಿಕವಾದ ಕೆಲವು ಸತ್ಯಾಂಶಗಳನ್ನು ವಿನಿಮಯ ಮಾಡುವುದೇ ಈ ಯೂನಿಟ್‌ನ ಉದ್ದೇಶ.

## ಕಲಿಕಾ ಸಾಧನೆ

ಒಂದೇ ಸಂದರ್ಭವನ್ನು ಪ್ರತಿಫಲಿಸುವ ವಿಭಿನ್ನವಾದ ರಾಗ ಹಾಗೂ ತಾಳಗಳಿರುವ ಸಂಗೀತದ ತುಣುಕುಗಳನ್ನು ಕೇಳಿ ರಾಗ, ತಾಳ ಎಂಬಿವುಗಳ ಸಾಧ್ಯತೆಗಳನ್ನು ತಿಳಿಯುವುದು.

## ಆಶಯ, ತಿಳುವಳಿಕೆ

- ಒಂದೇ ಸಂದರ್ಭವನ್ನು ಪ್ರತಿಫಲಿಸಲು ವಿಭಿನ್ನವಾದ ರಾಗಗಳನ್ನೂ ತಾಳಗಳನ್ನೂ ಉಪಯೋಗಿಸಬಹುದು.
- ರಾಗಗಳು ಮತ್ತು ತಾಳಗಳ ಸಾಧ್ಯತೆಗಳನ್ನು ತಿಳಿಯುವುದು.

## ಪ್ರಕ್ರಿಯೆ

- ಸಮಾನ ಸಂದರ್ಭವನ್ನು ಪ್ರಕಟಪಡಿಸುವ ವಿವಿಧ ರಾಗಗಳಲ್ಲಿರುವ ಹಾಡುಗಳನ್ನು ಕೇಳುವುದು ಮತ್ತು ಆಲಾಪಿಸುವುದು.
- ರಾಗಗಳ ವೈವಿಧ್ಯವನ್ನು ತಿಳಿಯುವುದು.

## ಮೌಲ್ಯಮಾಪನ

- ರಾಗ, ಭಾವ ಎಂಬಿವುಗಳಿಗೆ ಸಂಬಂಧಿಸಿದ ಕಿರು ಪ್ರಶ್ನೆಗಳು

## ವಿಷಯ

ರಾಗ ಮತ್ತು ತಾಳಗಳು ಆಶಯ ಪ್ರಕಟನೆಗೆ ಎಷ್ಟರ ಮಟ್ಟಿಗೆ ಹೊಂದಿಕೆಯಾಗುತ್ತವೆ ಅವುಗಳ ಸಾಧ್ಯತೆಗಳೇನು ಎಂಬಿವುಗಳನ್ನು ತಿಳಿಯುವುದು ಸಂದರ್ಭ ವಿಷಯ ಮತ್ತು ಆಶಯಕ್ಕಾನುಸಾರವಾಗಿ ನಮಗೆ ಕೇಳಿ ಪರಿಚಯವಿರುವ ರಾಗ ಮತ್ತು ತಾಳಗಳನ್ನು ಉಪಯೋಗಿಸಿ ಆಶಯಗಳನ್ನು ಸೌಂದರ್ಯಾತ್ಮಕವಾಗಿ ಪ್ರಕಟಿಸುವುದು ಹೇಗೆಂದು ಈ ಯೂನಿಟಿನಲ್ಲಿ ಪರಿಶೋಧಿಸಲಾಗುವುದು. ಪ್ರತಿಯೊಂದು ರಾಗದ ಹಾಗೂ ತಾಳ ಪ್ರಯೋಗಗಳ ವೈಶಿಷ್ಟ್ಯಗಳನ್ನು ಇದರಿಂದ ತಿಳಿಯಬಹುದು.

## ಕಲಿಕಾ ಚಟುವಟಿಕೆಗಳು

***ಚಟುವಟಿಕೆ–1***

- ಬಾಲೇಟ್ಟನ್ ಎಂಬ ಸಿನೆಮಾದ ಇನ್ನೆಲೆ ಎಂಡೆ ನೆಂಜಿಲೆ ಎಂಬ ಹಾಡನ್ನು ಮಕ್ಕಳು ಕೇಳುವರು.
- ಅದರ ಆಧಾರದಲ್ಲಿ ಕೆಳಗೆ ಕೊಟ್ಟಿರುವ ಪ್ರಶ್ನೆಗಳನ್ನು ಕೇಳುವುದು.
  - ಹಾಡು ಕೇಳುವಾಗ ಉಂಟಾದ ಅನಿಸಿಕೆ?
  - ಈ ರಾಗದ ಭಾವ ಯಾವುದು?
  - ಹಾಡಿನ ಪಂಕ್ತಿಗಳು ರಾಗದ ನಡುವಿನ ಹೊಂದಾಣಿಕೆ ಎಷ್ಟರ ಮಟ್ಟಿಗಿದೆ?
  - ಇದು ಯಾವ ಸಂದರ್ಭದಲ್ಲಿ ಪ್ರತಿಫಲಿಸಲ್ಪಡುವುದು?
- ಇದೇ ಸಂದರ್ಭವನ್ನು ಪ್ರತಿಫಲಿಸುವ ಎರಡು ಅಥವಾ ಮೂರು ಹಾಡುಗಳನ್ನು ಆರಿಸುವುದು
  - ಈ ಹಾಡುಗಳನ್ನು ಕೇಳಿಸುವುದು
  - ಮಕ್ಕಳನ್ನು ಮೂರು ಗುಂಪುಗಳಾಗಿ ವಿಂಗಡಿಸುವುದು
  - ಮೂರು ಹಾಡುಗಳ ವೈಶಿಷ್ಟ್ಯಗಳು, ಚರ್ಚೆ

***ಸೂಚಕಗಳು***

- ಪ್ರಕಟಪಡಿಸಿದ ಭಾವನೆ /ಭಾವ
- ಆಸ್ವಾದನೆ
- ಪಂಕ್ತಿಗಳು ರಾಗದ ನಡುವಿನ ಸಂಬಂಧ
- ಸಂದರ್ಭಕ್ಕೆ ಹೆಚ್ಚು ಸೊಬಗನ್ನು ನೀಡಲು ಹಾಡು ಎಷ್ಟರ ಮಟ್ಟಿಗೆ ಸಹಾಯಕವಾಗುವುದು?

- ಇತರ ಗುಂಪಿನವರಿಗೆ ಲಭಿಸಿದ ಹಾಡುಗಳ ರಾಗದ ಸಮಾನತೆಗಳಾವುವು?
- ಮೂರು ಗುಂಪಿನವರು ಕಂಡುಹಿಡಿದ ಸತ್ಯಾಂಶಗಳು–ಮಂಡನೆ
- ವಿಭಿನ್ನ ರಾಗದಲ್ಲಿರುವ ಹಾಡುಗಳಾಗಿದ್ದರೂ ಪ್ರಕಟವಾದ ಸಂದರ್ಭ ಮತ್ತು ಭಾವನೆ ಒಂದೇ ಆಗಿದೆ. ಒಂದೇ ಭಾವ, ಭಾವನೆ, ಸಂದರ್ಭ ಎಂಬಿವುಗಳನ್ನು ಪ್ರಕಟಪಡಿಸಲು ವಿಭಿನ್ನವಾದ ರಾಗಗಳನ್ನೂ ತಾಳಗಳನ್ನೂ ಉಪಯೋಗಿಸಬಹುದು.

***ಚಟುವಟಿಕೆ–2***

- ಬೇಸರ, ಸಂತೋಷ, ವಾತ್ಸಲ್ಯ, ವಿಹರ, ಭಕ್ತಿ, ಎಂಬೀ ವಿವಿಧ ಭಾವಗಳಲ್ಲಿರುವ ಹಾಡುಗಳನ್ನು ಕಂಡುಹಿಡಿಯಲು ಸೂಚಿಸುವುದು.

  ***ಉದಾಹರಣೆಗಳು***

  - ಬೇಸರ – ಬಾಡಿಹೋದ ಬಳ್ಳಿಯಿಂದ ಹೂ ಅರಳಬಲ್ಲದು
  - ಸಂತೋಷ – ಸಂತೋಷಕ್ಕೆ ಹಾಡು ಸಂತೋಷಕ್ಕೆ
  - ವಾತ್ಸಲ್ಯ – ಅಮ್ಮ ನಿನ್ನ ತೋಳಿನಲ್ಲಿ ಕಂದ ನಾನು
  - ವಿರಹ – ವಿರಹ ನೋವು ನೂರು ತರಹ
  - ಭಕ್ತಿ – ವಿಠಲ ಎಲ್ಲಿ ಮರೆಯಾದೆ

- ಮಕ್ಕಳು ಕಂಡುಹಿಡಿದ ಹಾಡುಗಳ ಸಂಗ್ರಹವನ್ನು ತರಗತಿಯಲ್ಲಿ ಪ್ರಸ್ತುತಪಡಿಸುವುದು.
- ಕೆಲವು ಹಾಡುಗಳನ್ನು ಮಕ್ಕಳಿಂದ ಹಾಡಿಸುವುದು.
- ಭಾವನಾತ್ಮಕ ಅಭಿವ್ಯಕ್ತಿಯಲ್ಲಿ ರಾಗದ ಸಾಧ್ಯತೆಯನ್ನು ತಿಳಿಯುವುದು.

**ಮೌಲ್ಯಮಾಪನ**

- ಚರ್ಚೆಯ ಅಧಿಕೃತತೆ
- ರಾಗಗಳ ಸರಿಯಾದ ಭಾವವನ್ನು ತಿಳಿಯುವುದು
- ಪಟ್ಟಿ ಮಾಡಿದ ಹಾಡುಗಳು
- ಆಲಾಪನೆ, ಮಂಡನೆ

***ಕ್ರೋಡೀಕರಣ***

ರಾಗಗಳ ಆಶಯಗಳನ್ನು ವಿನಿಮಯ ಮಾಡಲು, ಆಶಯವನ್ನು ಗ್ರಹಿಸಲು ದಾರಿ ಮಾಡಿ ಕೊಡುತ್ತವೆ. ಪ್ರತಿಯೊಂದು ರಾಗಕ್ಕೂ ಅದರದ್ದೇ ಆದ ಭಾವ ಮತ್ತು ವೈಶಿಷ್ಟ್ಯವಿದೆ. ಇತರ ಕಲಾರೂಪಗಳಲ್ಲಿ ಸಂಗೀತದ ಸಾನಿಧ್ಯ ಅನಿವಾರ್ಯವಾಗಲು ಕಾರಣ ಇದುವೇ ಆಗಿದೆ. ಪ್ರತಿ ಸಂದರ್ಭಗಳಲ್ಲಿ ಪ್ರತಿಯೊಂದು ಪ್ರಕಟವಾಗಲು ವೈವಿಧ್ಯ ಪೂರ್ಣವಾದ ರಾಗಗಳು, ತಾಳಗಳು ಎಂಬಿವುಗಳು ಉಪಯೋಗಿಸಲ್ಪಡುತ್ತವೆ. ರಾಗದ ವೈಶಿಷ್ಟ್ಯ ಮತ್ತು ಪ್ರತ್ಯೇಕತೆಯನ್ನು ಅರ್ಥೈಸಿ ರಾಗ ನೀಡುವಾಗ ಮಾತ್ರ ನಿಜವಾದ ಭಾವ ಲಭಿಸುವುದು.

## ಯೂನಿಟ್ 4 : ರಾಗ-ಭಾವ-ತಾಳ

ಕವಿತೆಗಳು ಭಾಷೆಯ ಉದಾತ್ತವಾದ ರೂಪವಾಗಿದೆ. ಸಾಹಿತ್ಯದ ಅಲಂಕಾರದ ಸೊಬಗನ್ನು ಒಳಗೊಂಡು ಆಸ್ವಾದಕರ ಹೃದಯದಲ್ಲಿ ಪ್ರಾಮುಖ್ಯವಾದ ಸ್ಥಾನಗಳಿಸಿದ ಕವಿತೆಗಳು ಆಯಾ ಕಾಲಗಳಲ್ಲಿ ಸಮಾಜದದಲ್ಲಿ ಉಂಟು ಮಾಡುವ ಚಲನೆಗಳು ಕಿರಿದಲ್ಲ, ಯಾವುದೇ ಆಶಯ ಕವಿತೆಯಲ್ಲಿ ಪ್ರತಿಪಾದಿಸಲ್ಪಡುವ ವಿಷಯವಾಗಿರುವ ಸಮಾಜದೆಡೆಗೆ ಹೆಚ್ಚು ಸ್ಪಷ್ಟತೆಯೊಂದಿಗೆ ಹಾಗೂ ಹಿರಿಮೆಯೊಂದಿಗೆ ಈ ರೀತಿಯ ಕವಿತೆಗಳು ತಲುಪಲು ಸಹಾಯಕವಾಗುವ ಒಂದು ಉತ್ತಮ ಘಟಕವಾಗಿ ಕಲೆ ಬದಲಾಗುವುದು. ಪ್ರತ್ಯೇಕವಾಗಿ ಹೇಳುವುದಾದರೆ ಈ ರೀತಿಯ ಆಶಯ ಸಂವಹನದಲ್ಲಿ ಸಂಗೀತ ವಹಿಸುವ ಪಾತ್ರ ಮಹತ್ತರವಾದುದು ಬಹಳಷ್ಟು ಪ್ರಾಧಾನ್ಯವುಳ್ಳದ್ದೂ ಆಗಿರುವುದು. ಕಾವ್ಯದ ತುಣುಕುಗಳಿಗೆ ಆಶಯಕ್ಕನುಸರಿಸಿ ಸಂಗೀತ ಸಂಯೋಜನೆ ಮಾಡುವಾಗ ಸೃಷ್ಟಿಸಲ್ಪಡುವ ಅನುಭೂತಿ ವರ್ಣನಾತೀತವಾಗಿರುವುದು. ಕವಿತೆಗಳ ಸ್ವಭಾವವನ್ನು ತಿಳಿದು ರಾಗ ನೀಡುವಾಗ ಕವಿತೆಯಾಗಿ ರಾಗ ಸಂಯೋಜನೆಯ ಪ್ರಕ್ರಿಯೆ ಹೆಚ್ಚು ಉತ್ತಮವಾದ ಸೃಷ್ಟಿಯಾಗಿ ಬದಲಾಗುವುದು.

ನೀರಸತನವನ್ನು ಹೋಗಲಾಡಿಸಿ ಎಳೆಯ ಮನಸ್ಸುಗಳನ್ನು ಕಾವ್ಯ ಜಗತ್ತಿನತ್ತ ಕೊಂಡೊಯ್ಯಲು ಈ ರೀತಿಯ ರಾಗ ಸಂಯೋಜನೆ ಅತ್ಯಂತ ಸಹಾಯಕವಾಗುವುದು. ಕವಿತೆಯ ಆಶಯವು ಶೀಘ್ರವಾಗಿ ಮಕ್ಕಳಲ್ಲಿ ಆ ಸೊಗಸಾದ ರಾಗದ ಹಿಮ್ಮೇಳದೊಂದಿಗೆ ಅಚ್ಚೊತ್ತುವುದು. ಕಲಿಕೆಯ ವೈಶಿಷ್ಟ್ಯಗಳು ಮತ್ತು ಆಸ್ವಾದನಾ ಪ್ರಕ್ರಿಯೆ ಒಂದೇ ರೀತಿ ಪೂರ್ಣತೆಯೆಡೆಗೆ ತಲುಪುವುದನ್ನು ನಮಗೆ ಅನುಭವಿಸಲು ಸಾಧ್ಯವಿದೆ.

## ಕಲಿಕಾ ಸಾಧನೆ

ಪಾಠಭಾಗಗಳಲ್ಲಿರುವ ವಿವಿಧ ಕವಿತೆಗಳನ್ನು ಯೋಗ್ಯವಾದ ರಾಗ, ಭಾವ, ತಾಳಗಳೊಂದಿಗೆ ಗುಂಪುಗಳಲ್ಲಿ ಪ್ರಸ್ತುತಪಡಿಸುವುದು.

## ಆಶಯ, ತಿಳುವಳಿಕೆ

- ಭಾವಪೂರ್ಣ ಆಲಾಪನೆಗೆ ಯೋಗ್ಯವಾದ ರಾಗ ಸಂಯೆಜನೆ ಮಾಡುವುದು.
- ಆಲಾಪನೆಗೆ ಶಬ್ದ ಕ್ರಮೀಕರಣ ಮಾಡುವುದರ ಮೂಲಕ ಆಶಯ ಪ್ರಕಟಣೆಯನ್ನು ಸುಗಮಗೊಳಿಸುವುದು.

## ಪ್ರಕ್ರಿಯೆ

- ಕವಿತೆಯ ಆಶಯದ ವಿವರಣೆ
- ಕವಿತೆಯ ಸಾಹಿತ್ಯ, ಆಶಯ ಎಂಬಿವುಗಳನ್ನು ಸೇರಿಸಿದ ಚರ್ಚೆ, ರಾಗವಾಗಿ ಹಾಡುವುದು.
- ಭಾವವ್ಯತ್ಯಾಸದೊಂದಿಗೆ ಹಾಡುವುದು
- ಭಾವ ಮತ್ತು ಸಾಹಿತ್ಯದ ಹೊಂದಾಣಿಕೆಯ ಬಗ್ಗೆ ಚರ್ಚೆ ನಡೆಸುವುದು.

## ಮೌಲ್ಯಮಾಪನ

- ರಾಗ ಸಂಯೋಜನೆ ಮಾಡುವುದು.
- ಅಭಿವ್ಯಕ್ತಿಯನ್ನು ಆಧಾರವಾಗಿರಿಸಿ ವೈಯಕ್ತಿಕ ಮೌಲ್ಯಮಾಪನ/ ಸ್ವ ಮೌಲ್ಯಮಾಪನ
- ಕವಿತೆಗೆ ರಾಗಸಂಯೋಜನೆ ಮಾಡುವುದು (ಗುಂಪು / ವೈಯಕ್ತಿಕ)

## ವಿಷಯ

ಕವಿತೆಗಳ ಆಶಯಕ್ಕನುಸಾರವಾಗಿ ರಾಗ, ಭಾವ, ಮತ್ತು ತಾಳದೊಂದಿಗೆ ಪಾಠಭಾಗದ ಕವಿತೆಗಳನ್ನು ಹೇಗೆ ಆಕರ್ಷಕವಾಗಿ ಪ್ರಸ್ತುತಪಡಿಸಬಹುದು, ಕವಿತೆಗೆ ರಾಗ ಸಂಯೋಜನೆ ನಡೆಸುವಾಗ ಗಮನಿಸಬೇಕಾದ ಮುಖ್ಯ ವಿಚಾರಗಳಾವುವು ಎಂಬುವುದು ಈ ಯೂನಿಟ್‌ನ ವಿಷಯ

## ಕಲಿಕಾ ಚಟುವಟಿಕೆಗಳು

***ಚಟುವಟಿಕೆ–1***

- ಮಕ್ಕಳಿಗೆ ಪರಿಚಯವಿರುವ ಕವಿತೆಗಳು– ಪ್ರಖ್ಯಾತ ವ್ಯಕ್ತಿಗಳು ಆಲಾಪನೆ ಮಾಡಿದ ಸಿ.ಡಿ ಗಳು ಅಥವಾ ಅಧ್ಯಾಪಕರು ಹಾಡಿದ ಹಾಡುಗಳನ್ನು ಕೇಳುವಂತೆ ಮಾಡುವುದು.

  ಉದಾಹರಣೆ

  - ಕೋದಂಬುಮಣಿಗಳ್
  - ಕುಂಞೀಡತ್ತಿ

- ಕವಿತೆಯನ್ನು ಕೇಳುವಂತೆ ಮಾಡಿದ ಬಳಿಕ ಕವಿತೆಯನ್ನು ಆಸ್ವಾದಿಸುವುದು ಮೌಲ್ಯಮಾಪನ ಮಾಡುವುದು.

- ಕವಿತಾಲಾಪನೆ ಇಷ್ಟವಾಯಿತೇ?
- ರಾಗ ಮತ್ತು ತಾಳ ಎಷ್ಟರ ಮಟ್ಟಿಗೆ ಹೊಂದಿಕೆಯಾಗುತ್ತದೆ?
- ರಾಗವಾಗಿ ಕವಿತೆಗಳನ್ನು ಹಾಡುವಾಗ ಸಾಮಾನ್ಯವಾಗಿ ಹಾಡುವುದಕ್ಕಿಂತ ಭಿನ್ನವಾದ ಯಾವ ಅನುಭವ ಉಂಟಾಯಿತು?
- ಮಕ್ಕಳ ಬಾಯ್ಮಾತಿನ ಪ್ರಕ್ರಿಯೆಗಳಿಗೆ ಅವಕಾಶ ಒದಗಿಸಬೇಕು.
- ಕವಿತೆಗಳ ಆಶಯ ಪ್ರಕಟಣೆಗೆ ಹೊಂದಿಕೆಯಾಗುವ ರೀತಿಯಲ್ಲಿ ರಾಗ ಸಂಯೋಜನೆ ಮಾಡುವಾಗ ಅದು ಹೆಚ್ಚು ಆಕರ್ಷಕವೂವಾಗುವುದರೊಂದಿಗೆ ಅದರ ಆಸ್ವಾದನೆಯ ಮಟ್ಟ ಹೆಚ್ಚುವುದು

***ಚಟುವಟಿಕೆ-2***

- ಯೋಗ್ಯವಾದ ರಾಗವನ್ನು ಕಂಡುಹಿಡಿಯಲು ಪಾಠಭಾಗದ ನಾಲ್ಕು ಕವಿತೆಗಳನ್ನು ಅಧ್ಯಾಪಕರು ಆರಿಸುವರು.
- ಮಕ್ಕಳನ್ನು ನಾಲ್ಕು ಗುಂಪುಗಳಾಗಿ ಮಾಡಿದ ಬಳಿಕ ನಾಲ್ಕು ಗುಂಪುಗಳಿಗೂ ಕವಿತೆಗಳನ್ನು ನೀಡುವುದು.
- ಕವಿತೆಗಳನ್ನು ಆರಿಸುವಾಗ ಗಮನಿಸಬೇಕಾದ ವಿಚಾರಗಳು
  - ಆಶಯ ವೈವಿಧ್ಯ
  - ತಾಳಾತ್ಮಕವಾಗಿ ಹಾಡಲು ಸಾಧ್ಯವಾಗುವವುಗಳು
- ಪ್ರತಿಯೊಂದು ಗುಂಪಿನಿಂದ ಒಬ್ಬ ಕವಿತೆಯ ಸಾಲುಗಳನ್ನು ಸ್ವರದಲ್ಲಿ ಓದುವುದು ಓದಿದ ಬಳಿಕ ಗುಂಪಿನಲ್ಲಿ ಕವಿತೆಯ ಆಶಯದ ಕುರಿತು ಚರ್ಚೆ. (ಅಧ್ಯಾಪಕರ ಸಹಾಯ, ಹಸ್ತಕ್ಷೇಪ ಎಂಬಿವುಗಳು ಅಗತ್ಯ)
- ಮಕ್ಕಳಿಗೆ ಹಾಡಲು ಸಾಧ್ಯವಿರುವ ರಾಗವನ್ನು ಕಂಡುಹಿಡಿದು ಅಭ್ಯಾಸ ಮಾಡುವುದು.
- ಗುಂಪಾಗಿ ಪ್ರತಿಯೊಂದು ಗುಂಪು ಕವಿತೆಗಳನ್ನು ಪ್ರಸ್ತುತಪಡಿಸುವುದು
- ಪ್ರತಿಯೊಂದು ಗುಂಪು ಪ್ರಸ್ತುತಪಡಿಸುವ ಸಂದರ್ಭದಲ್ಲಿ ಇತರ ಗುಂಪಿನವರೂ ಅಧ್ಯಾಪಕರೂ ಮಂಡನೆಯ ಮೌಲ್ಯಮಾಪನ ಮಾಡಬೇಕು, ಆಸ್ವಾದಿಸಬೇಕು.

  ***ಸೂಚಕಗಳು***
  - ಅಕ್ಷರ ಸ್ಫುಟತೆ
  - ಭಾವ ಸ್ವರ
  - ಸಾಮರಸ್ಯ
  - ರಾಗದ ಸ್ವಂತಿಕೆ, ಹೊಂದಾಣಿಕೆ (ಚಾರ್ಟಿನಲ್ಲಿ ಪ್ರದರ್ಶಿಸಬಹುದು)
- ಮಕ್ಕಳ ಮೌಲ್ಯಮಾಪನ ಮತ್ತು ಆಸ್ವಾದನೆಯ ಆಧಾರದಲ್ಲಿ ಕವಿತೆಗೆ ರಾಗಸಂಯೋಜನೆ ಮಾಡಿದುದರ ಕುರಿತು ಅಧ್ಯಾಪಕರು ಹೆಚ್ಚಿನ ವಿವರಣೆಯನ್ನು ನೀಡಬಹುದು.
  - ಕವಿತೆಯ ಸಾಲುಗಳ ಆಶಯಕ್ಕೆ ಹೊಂದಿಕೊಳ್ಳುವ ರಾಗವನ್ನು ಆಯ್ಕೆ ಮಾಡಬೇಕು.
  - ಅರ್ಥಕ್ಕೆ ಚ್ಯುತಿಬಾರದಂತೆ ಹೇಳಬೇಕು.
  - ಸಾಲುಗಳ ಪದವಿಂಗಡಣೆ, ಸಂಯೋಜನೆ ಎಲ್ಲವೂ ಸರಿಯಾಗಿರಬೇಕು.
  - ರಾಗ ಸಂಯೋಜನೆ ಮಾಡುವಾಗ ಸಂಗೀತದ ಅಮಿತಪ್ರಭಾವವಿರಬಾರದು.
- ಮಕ್ಕಳು ಪ್ರಸ್ತುತ ಪಡಿಸಿದ ಕವಿತೆಗಳನ್ನು ರೆಕಾರ್ಡ್ ಮಾಡಿ ಇರಿಸಬಹುದು. (ಐ.ಟಿ ಸೌಕರ್ಯವನ್ನು ಉಪಯೋಗಿಸಿ)
- ಈ ನಾಲ್ಕು ಕವಿತೆಗಳನ್ನು ಅಧ್ಯಾಪಕರು ಸ್ವತಃ ಪ್ರಸ್ತುತಪಡಿಸಬಹುದು.

### ಮೌಲ್ಯಮಾಪನ

- ಅಕ್ಷರಸ್ಪುಟತೆ
- ಆಶಯ ಗ್ರಹಿಕೆ
- ರಾಗ ಸಂಯೋಜನೆ ಮಾಡುವುದು.
- ಮಂಡನೆ (ಗುಂಪು, ವೈಯಕ್ತಿಕ)
- ಆಸ್ವಾದನೆ ಮತ್ತು ಮೌಲ್ಯಮಾಪನದ ಸಮಗ್ರತೆ

***ಕ್ರೋಡೀಕರಣ***

ಭಾಷಾ ವೈಶಿಷ್ಟ್ಯಗಳನ್ನು ಹೆಚ್ಚಾಗಿ ಒಳಗೊಂಡ ಕವಿತೆಗಳಿಗೆ ರಾಗ ಸಂಯೋಜಿಸುವಾಗ ಗಮನಿಸಬೇಕಾದ ಅನೇಕ ವಿಚಾರಗಳಿವೆ. ಭಾಷೆಯ ಸ್ವಂತಿಕೆ ಮತ್ತು ಆಶಯಕ್ಕೆ ಕುಂದುಂಟಾಗದಂತೆ ಯೋಗ್ಯವಾದ ಹಾಗೂ ಕೇಳಲು ಹಿತಕರವಾದ ರಾಗವನ್ನು ನೀಡಬೇಕು. ಎಲ್ಲ ಕವಿತೆಗಳನ್ನು ತಾಳಾತ್ಮಕವಾಗಿ ಹಾಡಲು ಸಾಧ್ಯವಿಲ್ಲ ಆದರೂ ತಾಳದೊಂದಿಗೆ ಹಾಡಲು ಸಾಧ್ಯವಾಗುವ ಕವಿತೆಗಳನ್ನು ಉಚ್ಚರಿಸುವಾಗ ಅಕ್ಷರಲೋಪವಾಗಬಾರದು. ಸಾಹಿತ್ಯದ ಆಶಯಕ್ಕೆ ಒತ್ತುನೀಡಿ ರಾಗ ಸಂಯೋಜನೆ ಮಾಡುವುದು ಉತ್ತಮ.

## ಯೂನಿಟ್ 4 : ದೇಶಭಕ್ತಿಗೀತೆಗಳು

ದೇಶದ ಮಹಿಮೆಯನ್ನು ಸಾರುವ ದೇಶಭಕ್ತಿಗೀತೆಗಳು ನಮ್ಮ ಸಂಗೀತ ಜಗತ್ತಿನಲ್ಲಿ ಎಲ್ಲ ಕಾಲಗಳಲ್ಲಿಯೂ ಪ್ರತ್ಯೇಕ ಸ್ಥಾನವನ್ನು ಗಳಿಸಿವೆ. ಭಾರತದ ನೆಲದಲ್ಲಿ ಹೋರಾಡಿ ಪ್ರಾಣ ತ್ಯಾಗ ಮಾಡಿದ ಅನೇಕ ಮಹಾತ್ಮರ ವೀರಸ್ಮರಣೆಯನ್ನು ನಮ್ಮಲ್ಲಿ ಜಾಗೃತಗೊಳಿಸಲು ಈ ಗೀತೆಗಳು ವಹಿಸಿದ ಪಾತ್ರ ಕಿರಿದಲ್ಲ. ಜಗತ್ತಿನ ಎಲ್ಲ ದೇಶಗಳ ಗಮನ ಸೆಳೆದ ನಮ್ಮ ಜನಗಣಮನ ಅದರ ವೈಶಿಷ್ಟ್ಯದಿಂದಾಗಿ ಚಿರಸ್ಥಾಯಿಯಾಗಿ ಉಳಿದಿದೆ.

ಭಾರತೀಯ ಸಂಗೀತದ ವೈಶಿಷ್ಟ್ಯಗಳನ್ನೂ ವೈವಿಧ್ಯಗಳನ್ನೂ ಈ ಗೀತೆಗಳು ನಮಗೆ ಸಾರಿ ಹೇಳುತ್ತವೆ. ಮನೋಜ್ಞವಾಗಿ ಹಾಗೂ ಸಂಗೀತ ಪ್ರಜ್ಞೆಯೊಂದಿಗೆ ಹಾಡಬೇಕಾದ ರಾಷ್ಟ್ರಗೀತೆ ಹಾಗೂ ದೇಶಭಕ್ತಿಗೀತೆಗಳು ಸಂಗೀತ ಚರಿತ್ರೆಯ ಹಿನ್ನೆಲೆ, ಆಲಾಪನೆಯ ಕ್ರಮ, ಕೆಲವು ನಿಬಂಧನೆಗಳೊಂದಿಗೆ ಅವುಗಳನ್ನು ಪ್ರಸ್ತುತಪಡಿಸುವ ವೈಶಿಷ್ಟ್ಯ ಇವುಗಳೆಲ್ಲವನ್ನೂ ಈ ಯೂನಿಟ್‌ನಲ್ಲಿ ಸೇರಿಸಲಾಗಿದೆ.

### ಕಲಿಕಾ ಸಾಧನೆ

ದೇಶಭಕ್ತಿಗೀತೆ, ರಾಷ್ಟ್ರ ಗೀತೆ ಎಂಬಿವುಗಳ ಆಶಯಗಳನ್ನು ಸೇರಿಸಿ ಶ್ರುತಿ ಸೇರಿಸಿ ತಾಳಬದ್ಧವಾಗಿ ಹಾಡುವುದು.

### ಆಶಯ, ತಿಳುವಳಿಕೆ

- ಆಯಾ ದೇಶದ ಸ್ವಂತಿಕೆ ಮತ್ತು ಸಂಗೀತ ಸಂಸ್ಕೃತಿಯನ್ನೊಳಗೊಂಡ ರಾಷ್ಟ್ರಗೀತೆಗಳು ಎಲ್ಲ ದೇಶಗಳಲ್ಲೂ ಇವೆ.

- ದೇಶಭಕ್ತಿಗೀತೆಗಳನ್ನು ಗುಂಪುಗಳಾಗಿ ಆಲಾಪಿಸಬೇಕಾದ ಕಾರಣ ಒಗ್ಗಟ್ಟು ದೇಶ ಪ್ರೇಮ ಎಂಬಿವುಗಳು ಜಾಗೃತಗೊಳ್ಳುತ್ತವೆ.
- ಆಶಯ ಗ್ರಹಿಕೆ ಆಲಾಪನೆ ಮೆರುಗನ್ನು ನೀಡುತ್ತದೆ.
- ರಾಷ್ಟ್ರಗೀತೆಯ ಸಮಯಕ್ಲಪ್ತತೆ

## ಪ್ರಕ್ರಿಯೆ

- ವಿಭಿನ್ನವಾದ ದೇಶಭಕ್ತಿಗೀತೆಗಳನ್ನು ಆಲಾಪಿಸುವುದು.
- ಗೀತೆಗಳ ಅರ್ಥವನ್ನು ತಿಳಿದುಕೊಳ್ಳುವುದು
- ಗುಂಪುಗಳಾಗಿ ಹಾಡುವುದು, ಗುಂಪಿನಲ್ಲಿ ಪ್ರತ್ಯೇಕವಾಗಿ ಕೇಳುವ ಶಬ್ದ ಯಾರದೆಂದು ಕಂಡುಹಿಡಿಯುವುದು (ಪಿಚ್‌ಔಟ್) (ಶ್ರುತಿ ಸೇರದ)
- ಶ್ರುತಿ ಉಪಯೋಗಿಸಿ ಹಾಡುವುದು.

## ಮೌಲ್ಯಮಾಪನ

- ಸ್ವ ಮೌಲ್ಯಮಾಪನ/ ಪರಸ್ಪರ ಮೌಲ್ಯಮಾಪನ
- ಪಾಲ್ಗೊಳ್ಳುವಿಕೆಯ ಮೌಲ್ಯಮಾಪನ
- ಸಂದರ್ಶನ ಸಮಯದಲ್ಲಿ ಪ್ರತಿಕ್ರಿಯೆ
- ಸರಳ ಪ್ರಶ್ನೆಗಳು

## ವಿಷಯ

ರಾಷ್ಟ್ರಗೀತೆಯ ಐತಿಹ್ಯ ಮತ್ತು ಸಂಗೀತದ ಪ್ರಾಧಾನ್ಯವನ್ನು ಹೆಚ್ಚು ಸ್ಪಷ್ಟವಾಗಿ ತಿಳಿಯುವುದು. ನಿಖರವಾಗಿ, ಅದರದ್ದೇ ಆದ ರಾಗದಲ್ಲಿ ನಿಖರವಾದ ತಾಳದಲ್ಲಿ ನಿಶ್ಚಿತ ಸಮಯದೊಳಗೆ ಹೇಗೆ ಅಕ್ಷರ ಸ್ಫುಟತೆಯೊಂದಿಗೆ ರಾಷ್ಟ್ರಗೀತೆಯನ್ನು ಭಾವಪೂರ್ಣವಾಗಿ ಹಾಡಬೇಕೆಂದು ಈ ಯೂನಿಟಿನಲ್ಲಿ ವಿವರಿಸಲಾಗಿದೆ. ಅದರ ಹೊರತಾಗಿ ಮಕ್ಕಳಿಗೆ ಹೆಚ್ಚು ಪರಿಚಿತವಾದ ಪ್ರಾದೇಶಿಕ ಭಾಷೆಯಲ್ಲಿರುವ ಕೆಲವು ದೇಶಭಕ್ತಿಗೀತೆಗಳನ್ನೂ ಪರಿಚಯಿಸುವುದು ಈ ಯೂನಿಟ್‌ನ ಉದ್ದೇಶವಾಗಿದೆ.

## ಕಲಿಕಾ ಚಟುವಟಿಕೆಗಳು

***ಚಟುವಟಿಕೆ–1***

- ಭಾರತದ ರಾಷ್ಟ್ರಗೀತೆಯಾದ ಜನಗಣಮನ, ಆರ್ಕೆಸ್ಟ್ರಾದೊಂದಿಗೆ ಧ್ವನಿಮುದ್ರಿಸಲ್ಪಟ್ಟ ಆಡಿಯೋ ಸಿ.ಡಿಯನ್ನು ಪ್ರಸ್ತುತಪಡಿಸುವುದು. ಆಲಾಪನೆಯ ವಿಶೇಷತೆಯನ್ನು ಮನದಟ್ಟುಮಾಡಲು, ಗುರುತಿಸು ಎಲ್ಲ ವಿದ್ಯಾರ್ಥಿಗಳುಆಡಿಯೋದೊಂದಿಗೆ ಹಾಡುವುದು ಹಾಡಿದ ಬಳಿಕ ವೈಯಕ್ತಿಕವಾಗಿ ಅದರ ಸಾಲುಗಳನ್ನು ಬರೆಯಲು ಹೇಳುವುದು ಬರೆದ ಹಾಡನ್ನು ಪರಸ್ಪರ ಹಸ್ತಾಂತರಿಸುವುದು. ಅಧ್ಯಾಪಕರು ಮುಂಚಿತವಾಗಿ ಬರೆದು ತಯಾರಿಸಿದ ಚಾರ್ಟನ್ನು ಪ್ರದರ್ಶಿಸುವುದು. ಚಾರ್ಟನ್ನು ನೋಡಿ ಮಕ್ಕಳು ತಪ್ಪನ್ನು ತಿದ್ದುವುದು.
- ರಾಷ್ಟ್ರ ಗೀತೆಯ ಮಹತ್ವವನ್ನು ಪರಸ್ಪರ ಹಂಚಿಕೊಳ್ಳುವುದು.
- ದೇಶದ ಅಧಿಕೃತ ಮೊದಲ ಗೀತೆ

- ದೇಶದ ಸ್ವಂತಿಕೆ ಮತ್ತು ವಿಶೇಷತೆಗಳನ್ನು ಒಳಗೊಂಡ ಗೀತೆ
    - ಗೀತೆ ರಚಿಸಿದವರು –ರವೀಂದ್ರನಾಥ ಟಾಗೋರ
    - ಸಂಗೀತ–ರಾಮ್‌ಸಿಂಗ್ ಠಾಕೂರ್
    - ಬಂಗಾಳಿ ಭಾಷೆಯಲ್ಲಿ ರಚಿಸಲ್ಪಟ್ಟಿತು.
- ರಾಷ್ಟ್ರಗೀತೆಯ ಅರ್ಥವನ್ನು ವಿವರಿಸುವುದು.
- ರಾಷ್ಟ್ರಗೀತೆಯನ್ನು ತಾಳಬದ್ಧವಾಗಿ ಅಕ್ಷರ ಸ್ಫುಟತೆಯೊಂದಿಗೆ ಹಾಡಿಸುವುದು.

ಎಲ್ಲ ದೇಶಗಳ ಸಂಗೀತ ಪರಂಪರೆಯಲ್ಲಿ ಪ್ರಚಾರದಲ್ಲಿರುವ ರಾಗದಲ್ಲಿ ಇದಕ್ಕೆ ಸಂಗೀತ ಸಂಯೋಜನೆ ಮಾಡಲಾಗಿದೆ ಆದ್ದರಿಂದ ಆಕರ್ಷಕವೂ ಜನಪ್ರಿಯವೂ ಆಗಿದೆ.

- ಪ್ರತಿಯೊಂದು ಸಾಲನ್ನು ಹೇಳುವುದು. ಮಕ್ಕಳು ಆವರ್ತಿಸಿ ಹಾಡುವುದು
- ಸರಿಯಾದ ತಾಳಕ್ಕನುಸಾರವಾಗಿ ಹಾಡಿಸುವುದು.
- 52 ಸೆಕೆಂಡಿನೊಳಗೆ ಹಾಡಿ ಮುಗಿಸಲು ವೇಗವನ್ನು ನಿಯಂತ್ರಿಸುವ ತರಬೇತಿ (ಆಡಿಯೋ ಸಿ.ಡಿ.ಯೊಂದಿಗೆ ಹಾಡಿಸಿ)
- ಮಕ್ಕಳನ್ನು ವಿವಿಧ ಗುಂಪುಗಳನ್ನಾಗಿ ಮಾಡಿ ತರಬೇತಿ ನೀಡುವುದು ಪ್ರಸ್ತುತಪಡಿಸುವುದು.
- ಆಲಾಪನೆಯ ಪ್ರಸ್ತುತಿಯನ್ನು ಗುಂಪಿನವರು ಮತ್ತು ಅಧ್ಯಾಪಕರು ಮೌಲ್ಯಮಾಪನ ಮಾಡುವುದು.
- ಸರಿಯಾದ ಶಬ್ದ ಕ್ರಮೀಕರಣ ಮತ್ತು ದೇಶ ಪ್ರೇಮದೊಂದಿಗೆ ಅಧ್ಯಾಪಕರು ಹಾಡುವುದು. ಮೊದಲು ಉತ್ತಮವಾಗಿ ಹಾಡಿದ ಗುಂಪಿಗೆ ಹಾಡಲು ಅವಕಾಶ ನೀಡಬಹುದು.

**ರಾಷ್ಟ್ರಗೀತೆಯ ಸಾರಾಂಶ**

ಎಲ್ಲರ ಮನಸ್ಸಿನ ಅಧಿಪನೂ ನಾಯಕನೂ ಆದವನೇ, ಭಾರತದ ಭಾಗ್ಯವನ್ನು ದಾನ ಮಾಡುವವನೇ, ಅಲ್ಲಿಂದ ಜಯಿಸಿದರೂ ಪಂಜಾಬ್, ಸಿಂಧ್, ಗುಜರಾತಿ, ಮಹರಾಷ್ಟ್ರ, ದ್ರಾವಿಡ, ಒರಿಸ್ಸಾ, ಬಂಗಾಳ್ ಎಂಬೀ ಪ್ರದೇಶಗಳೂ, ವಿಂದ್ಯಾ ಹಿಮಾಲಯ ಎಂಬೀ ಶಿಖರಗಳೂ, ಯಮುನಾ, ಗಂಗಾ ಎಂಬೀ ನದಿಗಳೂ ಸಮುದ್ರದಲ್ಲಿ ಅಪ್ಪಳಿಸಿ ಬರುವ ತೆರೆಗಳೂ ನಿಮ್ಮ ನಾಮವನ್ನು ಕೇಳಿ ಎದ್ದು ನಿಮಗೆ ಶುಭಾಂಸನೆ ಪ್ರಾರ್ಥಿಸುತ್ತೇವೆ. ನಿಮ್ಮ ಶುಭಗೀತೆಗಳನ್ನು ಹಾಡುತ್ತೇವೆ. ಸರ್ವ ಜನರಿಗೂ ಮಂಗಳ ನೀಡುವವನೇ ಭಾರತದ ಭಾಗ್ಯವಂತನೇ ನಿಮಗೆ ಜಯವಾಗಲಿ!ಜಯವಾಗಲಿ!ಜಯವಾಗಲಿ!

ನಿಮ್ಮ ಆಹ್ವಾನವು ಎಲ್ಲಾ ಕಡೆಗೂ ಪ್ರಚಾರವಾಗುತ್ತಿವೆ. ನಿಮ್ಮ ಮಹತ್ತಾದ ವಾಕ್ಯಗಳನ್ನು ಕೇಳಿ ಹಿಂದು, ಬುದ್ಧ, ಮತ್ತು ಸಿಖ್ಖ್ ಮತದವರೂ ಜೈನಮತದವರೂ ಪಾರ್ಸಿಗಳು, ಮುಸಲ್ಮಾನರು, ಕ್ರಿಸ್ತರು, ಪೂರ್ವಾಸ್ಥರು ಮತ್ತು ಪಶ್ಚಿಮಾತ್ಯರು ನಿಮ್ಮ ಸಿಂಹಾಸನದ ಹತ್ತಿರಕ್ಕೆ ಬರುತ್ತಿದ್ದಾರೆ. ಸ್ನೇಹ ಪುಷ್ಪವನ್ನು ನಿರ್ಮಿಸುತ್ತಾರೆ. ಜನಸಮೂಹಕ್ಕೆ ಐಕ್ಯತೆಯನ್ನು ನೀಡುವವನೇ ಭಾರತಭಾಗ್ಯವಂತನೇ ನಿಮಗೆ ಜಯವಾಗಲಿ! ಜಯವಾಗಲಿ!ಜಯವಾಗಲಿ!

ಪತನಗೊಂಡಿರುವ ಮಾರ್ಗದಲ್ಲಿ ಯುಗಯುಗಾಂತರವಾಗಿ ಯಾತ್ರಿಕರು ಸಂಚರಿಸುತ್ತಿದ್ದಾರೆ. ಹೇ ನಿತ್ಯಸಾರಥೀ, ನಿಮ್ಮ ರಥಚಕ್ರಗಳ ಶಬ್ದದಿಂದ ಹಗಲು ಇರುಳನ್ನು ಎದುರಿಸುತ್ತಿದೆ. ದಾರುಣ ವಿಪ್ಲವದಿಂದಾಗಿ ದುಃಖ ಮತ್ತು ಸಂಕಷ್ಟಗಳಿಂದ ರಕ್ಷೆ ಪಡೆಯಲು ನಿಮ್ಮ ಶಂಖನಾದ ಮೊಳಗುತ್ತಿವೆ. ಜನರ ಮಾರ್ಗದರ್ಶಿಯಾದ ಭಾರತದ ಭಾಗ್ಯವಂತನೇ ನಿಮಗೆ ಜಯವಾಗಲಿ! ಜಯವಾಗಲಿ! ಜಯವಾಗಲಿ!

ಘೋರವಾದ ಅಂಧಕಾರ ತುಂಬಿದ ಮಧ್ಯರಾತ್ರಿಯಲ್ಲಿ ಹಿಂಸೆ ಅನುಭವಿಸುತ್ತಿರುವ ದೇಶದಲ್ಲಿ ನಿಮ್ಮ ನಯನಮನೋಹರ ಕಣ್ಣುಗಳಲ್ಲಿ ಅಚಂಚಲವಾದ ಐಶ್ವರ್ಯ ಸಜೀವವಾಗಿ ನೆಲೆನಿಂತಿತ್ತು. ದುಃಸ್ವಪ್ನಗಳನ್ನು ಕಂಡರೂ ದುಃಖ ಅನುಭವಿಸುತ್ತಿರುವಾಗಲೂ ಸ್ನೇಹಮಯಿಯಾದ ತಾಯಿಯಾದ ನಿಮ್ಮ ಮಡಿಲಲ್ಲಿರಿಸಿ ನಮ್ಮನ್ನು ಸಂರಕ್ಷಿಸಿದೆ. ಜನಗಣಗಳನ್ನು ದುಃಖದಿಂದ ರಕ್ಷಿಸುವವನೇ ಭಾರತದ ಭಾಗ್ಯವಿದಾತವೇ ನಿಮಗೆ ಜಯವಾಗಲಿ! ಜಯವಾಗಲಿ! ಜಯವಾಗಲಿ!

***ಚಟುವಟಿಕೆ–2 (ರಾಷ್ಟ್ರಗೀತೆಯನ್ನು ಪರಿಚಯಿಸುವುದು)***


- ಸಾರೇ ಜಹಾಂಸೆ ಅಚ್ಛಾ... (ಉರ್ದು ಭಾಷೆಯಲ್ಲಿ–ಮುಹಮ್ಮದ್ ಇಕ್ಬಾಲ್)
- ವಂದೇ ಮಾತರಂ–(ಬಂಕಿಂ ಚಂದ್ರ ಚಟರ್ಜಿ–ಸಂಸ್ಕೃತ)

- ಸಾಲುಗಳನ್ನು ಚಾರ್ಟಿನಲ್ಲಿ ಬರೆದಿಡಬೇಕು. ಮಕ್ಕಳು ನೋಟ್‌ಬುಕ್‌ನಲ್ಲಿ ಬರೆಯಲು ಹೇಳಬೇಕು. ಆಶಯವನ್ನು ವಿವರಿಸಬೇಕು.
- ಪ್ರತಿಯೊಂದು ಸಾಲನ್ನು ಹಾಡುವುದು. ಮಕ್ಕಳು ಆವರ್ತಿಸಿ ಹಾಡಬೇಕು (ಅಧ್ಯಾಪಕರು ರಾಗವನ್ನು ಮಾತ್ರ ಹಾಡಬೇಕು)
- ರಾಗವನ್ನು ತಿಳಿದು ಮಕ್ಕಳು ರಾಗದಲ್ಲಿ ಗೀತೆಯ ಸಾಲುಗಳನ್ನು ಹಾಡುವುದು. ರಾಗವನ್ನು ಹೆಚ್ಚು ಮನದಟ್ಟುಮಾಡಿಕೊಳ್ಳುವುದು.
- ಗುಂಪಿನಲ್ಲಿ ಹಾಡುವುದು.
- ಪ್ರಾದೇಶಿಕವಾಗಿ ಪ್ರಚಾರದಲ್ಲಿರುವ ದೇಶಭಕ್ತಿಗೀತೆಗಳನ್ನು ಸಂಗ್ರಹಿಸುವುದು. ಗುಂಪುಗಳಾಗಿ ಹಾಡನ್ನು ಕಲಿತು ಆಲಾಪನೆ ಮಾಡುವುದು.
- ರಾಷ್ಟ್ರೀಯ ಪ್ರಾಧಾನ್ಯವುಳ್ಳ ದಿನಗಳಲ್ಲಿ ಈ ಗುಂಪುಗಳು ದೇಶಭಕ್ತಿ ಗೀತೆಯನ್ನು ಹಾಡಬೇಕು. ಅದಕ್ಕಾಗಿ ಅವರನ್ನು ಸಜ್ಜುಗೊಳಿಸಬೇಕು.

## ಮೌಲ್ಯಮಾಪನ

- ರಾಷ್ಟ್ರಪ್ರಜ್ಞೆಯನ್ನೊಳಗೊಂಡ ಆಲಾಪನಾ ರೀತಿ
- ತಾಳಪ್ರಜ್ಞೆ
- ಒಗ್ಗಟ್ಟಿನ ಪ್ರಜ್ಞೆ
- ಆಲಾಪನೆಯ ಸಾಮರಸ್ಯ
- ಅಭಿವ್ಯಕ್ತಿಯ ಸ್ಫುಟತೆ

7.3



# ನೃತ್ಯಕಲೆ



# ನೃತ್ಯಕಲೆ

## ಮುನ್ನುಡಿ

ಪ್ರಪಂಚ ಚಲನಾತ್ಮಕವಾಗಿದೆ. ಶಾರೀರಿಕ ಚಲನೆಗಳಲ್ಲಿ ಅಡಕವಾಗಿರುವ ತಾಳವನ್ನು ಅಂದವಾಗಿ ಪ್ರದರ್ಶಿಸುವುದೇ ನೃತ್ಯ. ಶರೀರದ ಚೈತನ್ಯವನ್ನು ನಿಯಂತ್ರಿತವಾಗಿಯೂ ಕ್ರಮೀಕೃತವಾಗಿಯೂ ವಿನಿಯೋಗಿಸಲು ನೃತ್ಯ ಸಹಾಯಕವಾಗುತ್ತದೆ. ಸಾಮಾಜಿಕ ಹೊಂದಾಣಿಕೆ, ದೈಹಿಕ ಸಾಮರ್ಥ್ಯ, ಸೌಂದರ್ಯ ಪ್ರಜ್ಞೆ ಎಂಬಿವುಗಳನ್ನು ಬೆಳೆಸುವಲ್ಲಿ ನೃತ್ಯ ಮಹತ್ತರ ಪಾತ್ರವಹಿಸುವುದು.

ಯಾವುದೇ ಕಲೆಯಲ್ಲಿರುವಂತೆಯೇ ನೃತ್ಯ ಕಲೆಯಲ್ಲಿಯೂ ಪ್ರಧಾನವಾಗಿ ಎರಡು ಭಾಗಗಳಿವೆ. ರೂಪಶಿಲ್ಪ ಮತ್ತು ಭಾವ ಶಿಲ್ಪ ಅವುಗಳಲ್ಲಿ ಸಾಮಾನ್ಯ ಜನರು ಭಾವಶಿಲ್ಪ ಎಂಬ ವಿಷಯವನ್ನು ಇಷ್ಟಪಡುತ್ತಾರೆ. ಒಂದು ನೃತ್ಯ ಸಂವಹನ ಮಾಡುವ ಕತೆ, ಸಂದರ್ಭ, ಆಶಯ ಇವುಗಳಲ್ಲಿ ಯಾವುದಾದರೂ ಒಂದು ಅದರ ವಿಷಯವಾಗಿರುವುದು. ಈ ವಿಷಯವೇ ಭಾವಶಿಲ್ಪ. ಭಾವಶಿಲ್ಪವನ್ನು ಪ್ರಸ್ತುತ ಪಡಿಸುವ ಶರೀರವನ್ನು ರೂಪಶಿಲ್ಪ ಎನ್ನುವರು.

ಉದಾಹರಣೆಗೆ ಒಬ್ಬ ವ್ಯಕ್ತಿಯನ್ನು ಕಲೆ ಎಂದಿಟ್ಟುಕೊಂಡರೆ ಅವನ ಮನಸ್ಸು ಭಾವಶಿಲ್ಪ ಹಾಗೂ ಶರೀರವು ರೂಪ ಶಿಲ್ಪ ಎಂದರ್ಥ. ಸಾಮಾನ್ಯ ಆಸ್ವಾದಕನು ರೂಪಶಿಲ್ಪದ ಮೂಲಕ ಹೊರಹೊಮ್ಮುವ ಭಾವಶಿಲ್ಪವನ್ನು ಆಸ್ವಾದಿಸುವನು. ಪಂಡಿತರು ಭಾವಶಿಲ್ಪ ಪ್ರಕಟವಾಗುವ ರೀತಿಯನ್ನು ರೂಪಶಿಲ್ಪದಲ್ಲಿ ಆಸ್ವಾದಿಸುವರು. ವಿವಿಧ ನೃತ್ಯ ರೂಪಗಳು ಭಾವಶಿಲ್ಪದ ರೂಪಾಂತರಗಳಾಗಿವೆ.

ನಮ್ಮ ಮಕ್ಕಳು ಮೊದಲು ಭಾವಶಿಲ್ಪದತ್ತ ಆಕರ್ಷಿತರಾಗುತ್ತಾರೆ. ಆದುದರಿಂದ ಅವರು ಮೊದಲು ಭಾವಶಿಲ್ಪವನ್ನು ತಿಳಿಯಲಿ. ಆಸ್ವಾದಿಸಲಿ. ಕಥಾರೂಪದಲ್ಲಿ ಒಂದು ನೃತ್ಯ (ಒಂದು ಪ್ರತ್ಯೇಕ ಕಲಾರೂಪ ಎಂಬ ನೆಲೆಯಲ್ಲಿ ಆಗಬಾರದು.) ಸಾಮಾನ್ಯ ವೇಷದಲ್ಲಿ ನಿರ್ವಹಿಸುವುದು ಉತ್ತಮ) ಪ್ರದರ್ಶಿಸಲು ಅವಕಾಶ ಒದಗಿಸಬೇಕು.

ಹೀಗೆ ನೋಡಿದ, ಆಸ್ವಾದಿಸಿದ, ಭಾವಶಿಲ್ಪಗಳನ್ನು ಸ್ವತಃ ಮಾಡುವುದು ಮುಂದಿನ ಹಂತವಾಗಿರಬೇಕು. ಆ ಮೂಲಕ ರೂಪುಗೊಳ್ಳುವ ಚಲನೆಯ ಕ್ರಮಗಳನ್ನು 'ನೃತ್ಯ' ಎಂಬ ದೊಡ್ಡ ಹಿನ್ನೆಲೆಯಲ್ಲಿ ಮಕ್ಕಳು ತಿಳಿಯಬೇಕು. ನೈಸರ್ಗಿಕವಾಗಿ, ತಾಳಾತ್ಮಕವಾಗಿ ಶರೀರ ಎಂಬ ಮಾಧ್ಯಮದ ಮೂಲಕ ಸಂಗೀತಾತ್ಮಕವಾಗಿ ಚಲಿಸುವುದು ಹೇಗೆಂದು ತಿಳಿಯುವ ರೀತಿಯಲ್ಲಿ ತರಬೇತಿ ನೀಡಬೇಕು. ಶರೀರದ ಸಾಧ್ಯತೆಗಳನ್ನು ಪಾಠಪುಸ್ತಕದ ಮೂಲಕ ಅಥವಾ ಸಂಕೀರ್ಣವಾದ ತತ್ವಗಳ ನೆರವಿಲ್ಲದೆಯೇ ಅವನು ತಿಳಿಯಬೇಕು. ಇದಕ್ಕೆ ಸರ್ವಸ್ವಾತಂತ್ರ್ಯದೊಂದಿಗೆ ನಲಿಯಲು ಸೂಕ್ತವಾದ ಸಂದರ್ಭವನ್ನು ಒದಗಿಸುವ ಅಗತ್ಯವಿದೆ. ಸರ್ವಸ್ವಾತಂತ್ರ್ಯವಾಗಿದ್ದರೂ ಸೂರ್ಯ, ಚಂದ್ರ, ಗಾಳಿಗಳ ಚಲನೆಗಳಲ್ಲಿ ಅಂತರ್ಗತವಾದ ನಿಯಂತ್ರಣದಂತೆಯೇ ಹಿನ್ನಲೆ ಸಂಗೀತ ಮತ್ತು ತಾಳ ಅವರನ್ನು ನಿಯಂತ್ರಿಸುತ್ತಿದೆಯೇ ಎಂಬುದನ್ನು ಗಮನಿಸಬೇಕು. ನೀಲೆಳೆಗಳನ್ನು ಬಟ್ಟೆಯಾಗಿ ಪರಿವರ್ತಿಸುವಂತೆಯೇ ಶರೀರ ಚಲನೆಗಳನ್ನು ನೃತ್ಯವಾಗಿ ಪರಿವರ್ತಿಸಲಾಗುತ್ತದೆ.

## ಕಲಿಕಾ ಸಾಧನೆಗಳು

**ಒಂದನೇ ತರಗತಿ**

- ಪ್ರಾದೇಶಿಕ ಆಟಗಳನ್ನು ಪ್ರಸ್ತುತಪಡಿಸಲು ಸಾಧ್ಯವಾಗುವುದು.
- ಉದ್ಯೋಗಕ್ಕೆ ಸಂಬಂಧಿಸಿದ ಆಟಗಳನ್ನು ಪ್ರಸ್ತುತಪಡಿಸುವುದು.
- ನೃತ್ಯದ ಮೂಲಕ ದೈಹಿಕ ಕ್ಷಮತೆಯನ್ನು ಗಳಿಸುವುದು (ಅಭಿವ್ಯಕ್ತಿ)
- ಪ್ರಕೃತಿಯ ಜೀವಜಾಲಗಳನ್ನು ಅನುಸರಿಸಿ ನರ್ತಿಸುವುದು.
- ಅಂಗಾಂಗಗಳ ಚಲನೆಯ ಮೂಲಕ ಸರಳವಾದ ಆಶಯಗಳನ್ನು ವರ್ಗಾಯಿಸಲು ಸಾಧ್ಯವಾಗುವುದು.
- ಬಾಯಿ ತಾಳಗಳಿಗೆ ಅನುಸಾರವಾಗಿ ಹೆಜ್ಜೆ ಹಾಕುವುದು.

**ಎರಡನೇ ತರಗತಿ**

- ಪ್ರಾದೇಶಿಕವಾಗಿ ಪರಿಚಯವಿರುವ ಆಟಗಳನ್ನು ನೃತ್ಯರೂಪದಲ್ಲಿ ನಿರೀಕ್ಷಣೆ ಮಾಡುವುದು, ಅಭ್ಯಾಸಮಾಡುವುದು.
- ತಾಳಗತಿಗೆ ಅನುಸಾರವಾಗಿ ಹೆಜ್ಜೆಗಳನ್ನಿಡಲು ಗಮನವೀಯಬೇಕು.
- ಅಂಗಾಂಗಗಳ ಚಲನೆಯ ಮೂಲಕ ಜೀವಜಾಲಗಳನ್ನು ತಾಳಾತ್ಮಕವಾಗಿ ಅನುಕರಿಸುವುದು.
- ವ್ಯಕ್ತಿಗಳಿಗನುಸಾರವಾದ ಬಾಯಿತಾಳಗಳನ್ನು ಅದಕ್ಕನುಸಾರವಾದ ನೃತ್ಯ ಸಂಪ್ರದಾಯಗಳನ್ನು ನಿರೀಕ್ಷಿಸಿ ತಿಳಿಯುವುದು.
- ಬಾಗುವಿಕೆಯ ವಿಚಾರಗಳನ್ನು ಗಮನಿಸುವುದು.

**ಮೂರನೇ ತರಗತಿ**

- ಪ್ರಾದೇಶಿಕ ಪರಿಚಯವಿರುವ ಆಟಗಳಲ್ಲಿ ನೃತ್ಯರೂಪಗಳನ್ನು ನಿರೀಕ್ಷಿಸುವುದು ಹಾಗೂ ಅದರ ವೈಶಿಷ್ಟ್ಯಗಳನ್ನು ಅರ್ಥೈಸಿಕೊಳ್ಳುವುದು.
- 3,4,5 ಬಡಿತ (ಅಕ್ಷರಗಳು) ಇರುವ ತಾಳಕ್ರಮವನ್ನು ಅಭ್ಯಸಿಸುವುದು (ಅಭಿವ್ಯಕ್ತಿ)
- ಸಂಗೀತಕ್ಕನುಸರಿಸಿ ಚಲನೆ, ತಾಳ ಎಂಬಿವುಗಳ ವೇಗವನ್ನು ನಿಯಂತ್ರಿಸುವ ಸಾಮರ್ಥ್ಯವನ್ನು ಗಳಿಸುವುದು.
- ಕಥಾಪಾತ್ರವನ್ನು ತನ್ಮಯತೆಯಿಂದ ಪ್ರದರ್ಶಿಸಲು ಶರೀರ ಮತ್ತು ಶಬ್ದವನ್ನು ಸೂಕ್ತವಾಗಿ ಉಪಯೋಗಿಸುವುದು.
- ಚಿಕ್ಕ ಹಾಡುಗಳಿಗೆ ನಿಶ್ಚಲ ದೃಶ್ಯಾವಿಷ್ಕಾರ ನೀಡುವುದು.
- ಇತರ ವ್ಯಕ್ತಿಗಳ ಚಲನೆ, ತಾಳ ಎಂಬಿವುಗಳನ್ನು ನಿರೀಕ್ಷಣೆ ಮಾಡುವುದರೊಂದಿಗೆ ಅದಕ್ಕನುಸರಿಸಿ ತನ್ನ ತಾಳ ಹಾಗೂ ಚಲನೆಯನ್ನು ನಿಯಂತ್ರಿಸಲು ಸಾಧ್ಯವಾಗುವುದು.
- ಪ್ರಕೃತಿಯಲ್ಲಿರುವ ವಿವಿಧ ರೀತಿಯ ಶಬ್ದಗಳು, ಚಲನೆಗಳು ಎಂಬಿವುಗಳನ್ನು ನಿರೀಕ್ಷಣೆ ಮಾಡಿ ಅನುಕರಿಸುವುದರೊಂದಿಗೆ ಅವುಗಳನ್ನು ಗುಂಪಿನಲ್ಲಿ ವಿನಿಮಯ ಮಾಡುವುದು, ಒಂಟಿಯಾಗಿ ಅಥವಾ ಗುಂಪಾಗಿ ಪ್ರದರ್ಶಿಸುವುದು.

**ನಾಲ್ಕನೇ ತರಗತಿ**

- ಕೇರಳದ ವಿವಿಧ ಭಾಗಗಳಲ್ಲಿ ಪ್ರಚಾರದಲ್ಲಿರುವ ಪ್ರಾದೇಶಿಕ ಆಟಗಳು, ನೃತ್ಯರೂಪಗಳು ಎಂಬಿವುಗಳನ್ನು ಕಂಡುಹಿಡಿಯುವುದು.
- 7,9 ಬಡಿತಗಳಿರುವ (ಅಕ್ಷರಗಳು) ತಾಳಕ್ರಮವನ್ನು ಅಭ್ಯಸಿಸುವುದು.
- ಪ್ರತಿಯೊಂದು ನೃತ್ಯರೂಪದಲ್ಲಿಯೂ ಸ್ವಂತಿಕೆಯುಳ್ಳ ವೇಷಭೂಷಣಗಳಿವೆ. ಎಂಬ ತಿಳುವಳಿಕೆಯನ್ನು ಗಳಿಸುವುದು.
- ವೇಗ ಹೆಚ್ಚಿಸಿ ಅಥವಾ ಗಳಿಸಿ ಸರಳ ವಾಕ್ಯಗಳಲ್ಲಿ ತಾಳ ಹಾಕಿ ಪರಿಚಯವಿರುವ ಹಾಡುಗಳನ್ನು ಹಾಡಲು ಸಾಧ್ಯವಾಗುವುದು.
- ಬಳುಕುತನವನ್ನು ಗಳಿಸುವುದು.
- ಪ್ರಕೃತಿಯ ಕೆಲವು ಹಕ್ಕಿಗಳ ನೃತ್ಯರೂಪದ ಚಲನೆಗಳನ್ನು ಅನುಕರಿಸುವುದು.
- ಕಣ್ಣು, ಕುತ್ತಿಗೆ ಎಂಬಿವುಗಳನ್ನು ಸುಲಭವಾಗಿ ಚಲಿಸುವಂತೆ ಮಾಡಲು ಸಾಧ್ಯವಾಗುವುದು.

# ಒಂದನೇ ಅಧ್ಯಾಯ

## ಯೂನಿಟ್ 1 : ಆಡೋಣ, ಹಾಡೋಣ, ನಲಿಯೋಣ

ನಮ್ಮ ಕೇರಳ ಜನಪದ ಗೀತೆಗಳು ಹಾಗೂ ಜನಪದ ಆಟಗಳನಾಡಲ್ಲವೇ, ಈ ಜನಪದ ನೃತ್ಯಗಳು ಹಾಗೂ ಜನಪದ ಆಟಗಳು ತಾಳಕ್ರಮವನ್ನು ಹೊಂದಿದೆ. ಅವುಗಳಿಗನುಸಾರವಾಗಿ ಸ್ವತಃ ಸಿದ್ಧವಾದ ಚಲನೆಗಳು ಇವೆ. ನೃತ್ಯದ ಈ ಅಂಶ ಎಲ್ಲಾ ವ್ಯಕ್ತಿಗಳಲ್ಲಿಯೂ ಅಂತರ್ಗತ ವಾಗಿರುವುದು. ಈ ಕ್ಷೇತ್ರಕ್ಕೆ ಅಂಬೆಗಾಲಿಡುತ್ತಿರುವ ಚಿಕ್ಕ ಮಕ್ಕಳಲ್ಲಿ ಅಂತರ್ಲೀನವಾಗಿರುವ ಈ ಸಾಮರ್ಥ್ಯಗಳನ್ನು ಇಲ್ಲಿ ಪರಿಪೋಷಿಸಲಾಗುವುದು. ಅವರು ನರ್ತಿಸಲಿ. ಹಾಡಲಿ.... ಆಡಲಿ... ಆನಂದಿಸಲಿ.

(ಪ್ರಾದೇಶಿಕವಾದ ಆಟಗಳ ಕುರಿತಾದ ಮಾಹಿತಿ ಸಂಗ್ರಹ ಹಾಗೂ ಆಟಗಳನ್ನು ಉಪಯೋಗಿಸಿ ಕಲಿಕಾ ಚಟುವಟಿಕೆಗಳನ್ನು ಉತ್ತಮಗೊಳಿಸಬಹುದು)

ಮಗು ಸ್ವತಃ ಸಿದ್ಧವಾದ ಶೈಲಿಯಲ್ಲಿ ಆಡುವುದನ್ನು ನಿರೀಕ್ಷಿಸಿ ಅದರ ತಾಳಾತ್ಮಕ ಚಲನೆಗಳ ವೈವಿಧ್ಯವನ್ನು ತಿಳಿದು ಪರಿಶೋಧಿಸಿ ಮುಂದಿನ ಹಂತವಾದ ಜನಪದ ನೃತ್ಯಗಳ ಸರಳವಾದ ನೃತ್ಯಾವಿಷ್ಕಾರ ತಲುಪುವ ರೀತಿಯಲ್ಲಿ ಕಲಿಕಾ ಚಟುವಟಿಕೆಗಳನ್ನು ಕ್ರಮೀಕರಿಸಬೇಕು. ಆಟಗಳಲ್ಲಿ ನಿರತರಾಗುವ ಸಾಮರ್ಥ್ಯ ಮಕ್ಕಳಲ್ಲಿ ಸ್ವತಃ ಸಿದ್ಧವಾಗಿ ಇರುವುದಿಲ್ಲವೇ? ಆದುದರಿಂದ ಆಟಗಳಲ್ಲಿ ನಿರತರಾಗುವ ಸಂದರ್ಭದಲ್ಲಿನ ಚಲನೆಗಳನ್ನು ಅಗತ್ಯಕ್ಕೆ ತಕ್ಕಂತೆ ಪರಿಶೋಧಿಸಬೇಕು. ಇದು ಮುಂದಿನ ನೃತ್ಯ ತರಬೇತಿಗೆ ಪ್ರಯೋಜನಕರವಾಗುವುದು.

### ಕಲಿಕಾ ಸಾಧನೆ

- ಪ್ರಾದೇಶಿಕ ಆಟಗಳನ್ನು ಪ್ರಸ್ತುತಪಡಿಸಲು ಸಾಧ್ಯವಾಗುವುದು.
- ಪ್ರಾದೇಶಿಕವಾದ ಪರಿಚಯವಿರುವ ಆಟಗಳನ್ನು ನೃತ್ಯರೂಪದಲ್ಲಿ ನಿರೀಕ್ಷಿಸುವುದು.

### ಆಶಯ, ತಿಳುವಳಿಕೆ

- ಹಲವು ತರದ ಪ್ರಾದೇಶಿಕ ಆಟಗಳಿವೆ.
- ಪ್ರತಿಯೊಂದಕ್ಕೂ ಅದರದ್ದೇ ಆದ ಚಲನೆಗಳಿವೆ.
- ಸ್ವತಃ ಆಟಗಳಲ್ಲಿ ನಿರತರಾಗುವರು.
- ಆಡುವುದರಲ್ಲಿರುವ ನೈಪುಣ್ಯ

### ಪ್ರಕ್ರಿಯೆ

- ಪ್ರಾದೇಶಿಕವಾದ ಆಟಗಳನ್ನು ನಿರೀಕ್ಷಣೆ ಮಾಡುವುದು.

- ಅನುಭವವನ್ನು ಹಂಚಿಕೊಳ್ಳುವುದು
- ಅನುಕರಿಸಿ ಪ್ರಸ್ತುತಪಡಿಸುವುದು
- ಆಟಗಳಲ್ಲಿ ನಿರತನಾಗುವುದು

## ವಿಷಯ

ಹಲವು ವಿಧದ ಜನಪದ ಆಟಗಳಿಂದ ನಮ್ಮ ನಾಡು ಸಂಪದ್ಭರಿತವಾಗಿದೆ. ಪ್ರತಿಯೊಂದು ಆಟಗಳಿಗೂ ಆಯಾ ಪ್ರದೇಶದ ಹಾಡುಗಳು ಮತ್ತು ಚಲನೆಯ ವೈವಿಧ್ಯಗಳಿವೆ. ಈ ಆಟಗಳನ್ನು ಅಭ್ಯಾಸ ಮಾಡುವುದರ ಮೂಲಕ ನಾವು ಪ್ರತಿಯೊಬ್ಬರೂ ಆ ಸಂಸ್ಕೃತಿಯ ಭಾಗವಾಗುತ್ತೇವೆ. ಅದರ ಹೊರತಾಗಿ ಮಕ್ಕಳು ಆಯಾ ಪ್ರದೇಶದ ನಾಟಿವಿದ್ಯೆಯನ್ನು ಶೈಲಿಗಳನ್ನೂ ತಿಳಿಯಲು ಇದು ಸಹಾಯಕವಾಗುವುದು. ಈ ರೀತಿ ನೃತ್ಯಗಳ ಹೆಜ್ಜೆಗಳಲ್ಲಿರುವ ವೈವಿಧ್ಯವು ನೃತ್ಯಗಳನ್ನು ಸಮೃದ್ಧಿಗೊಳಿಸುವುದು. ಇದೇ ರೀತಿ ಗುಂಪಿನ ಆಟಗಳಲ್ಲಿ ನಿರತವಾಗುವಾಗ ಚಲನೆಗಳಲ್ಲಿ ಏಕರೂಪತೆ ಇರಬೇಕಾದ ಅಗತ್ಯ ಅವರಿಗೆ ಮನದಟ್ಟಾಗುವುದು. ಇದಕ್ಕಿಂತ ಮಿಗಿಲಾಗಿ ಅವರವರ ಪ್ರಾದೇಶಿಕ ಜೀವನ ಕ್ರಮವನ್ನು ಚೆನ್ನಾಗಿ ತಿಳಿಯಲು ಮಕ್ಕಳಿಗೆ ಸಾಧ್ಯವಾಗುವುದು.

## ಕಲಿಕಾ ಚಟುವಟಿಕೆಗಳು

- ಪೂ ಪರಿಕ್ಕಾನ್ ಪೊರುನ್ನೋ ಪೋರುನ್ನೋ
  ಅತಿ ರಾವಿಲೆ?
  ಆರೆ ನಿಜಳ್ಕ್ ಆವಿಶ್ಯಂ
  ಅತಿರಾವಿಲೇ
  .................. ನೇ ಇಜ್ಜಳ್ಕ್ ಆವಿಶ್ಯಂ
  ಅತಿರಾವಿಲೆ?
  ಆರು ವನ್ನು ಕೊಂಡುಪೋಕುಂ ಕೊಂಡುಪೋಕುಂ
  ಅತಿರಾವಿಲೆ?
- ಮಕ್ಕಳು ಎರಡು ಗುಂಪುಗಳಾಗುವುದು. ಬಳಿಕ ಪರಸ್ಪರ ಕೈ ಹಿಡಿದು ಒಂದು ಗುಂಪು ಮುಂದಕ್ಕೆ ನಡೆಯುವುದು. (ಒಂದೊಂದೇ ಹೆಜ್ಜೆಯನ್ನಿಡುತ್ತಾ) ಹಾಡಿನ ಮೊದಲ ಸಾಲನ್ನು ಹಾಡುವುದು. ಉಳಿದ ಗುಂಪಿನವರು ಹಿಂದಕ್ಕೆ ನಡೆಯುವುದು. ಅನಂತರ ಹಿಂದಕ್ಕೆ ಹೋದ ಗುಂಪು ಮುಂದೆ ಬರುವುದು. ಯಾವುದಾದರೊಂದು ಮಗುವಿನ ಹೆಸರನ್ನು ಹೇಳಿ ಮುಂದಕ್ಕೆ ಬರುವುದು. ಬಳಿಕ ಹೆಸರು ಹೇಳಿದ ಇಬ್ಬರು ಮಕ್ಕಳು ಪರಸ್ಪರ ಕೈ ಹಿಡಿದು ಎಳೆಯುವುದು. ಯಾವ ಮಗು ಅವನ ಗುಂಪಿಗೆ ಎಳೆದು ತರುತ್ತದೆಯೋ ಆ ಗುಂಪಿಗೆ ಅವನನ್ನು ಸೇರಿಸಲಾಗುವುದು. ಇದೇ ಕ್ರಮದಲ್ಲಿ ಆಟ ಮುಂದುವರಿಯುವುದು
- ಕಾಗೆ ಹಾರಿ ಬಂದಿತು
  ಬಂಡೆ ಮೇಲೆ ಕುಳಿತಿತು
  ಕಾಗೆ ಹಾರಿ ಬಂದಿತು
  ಬಂಡೆ ಬಾಕಿಯಾಯಿತು.
- ಈ ಕವಿತೆಯನ್ನು ತಾಳಬದ್ಧವಾಗಿ ಹೇಳುತ್ತಿರಬೇಕು. ಮಕ್ಕಳು ಕಾಗೆ ಹಾರುವುದನ್ನು ನೃತ್ಯರೂಪದಲ್ಲಿ ಪ್ರಸ್ತುತಪಡಿಸಲಿ. ಅಭಿವ್ಯಕ್ತಿಯನ್ನು ಮೌಲ್ಯಮಾಪನ ಮಾಡಬಹುದು. ಕಾಗೆ

ಎಂದು ಹಾಡುವ ಬದಲಿಗೆ ಗಿಡುಗ, ನವಿಲು ಎಂದು ಬದಲಾಯಿಸಿ ಹಾಡು. ಆಗ ಹಾರುವ ಚಲನೆಯಲ್ಲಿ ವ್ಯತ್ಯಾಸವನ್ನುಂಟುಮಾಡಬೇಕು.

### ಮೌಲ್ಯಮಾಪನ

ಮಕ್ಕಳಿಗೆ ತಿಳಿಯದಂತೆ ಅಧ್ಯಾಪಕರು ಸೂಚನೆಗಳನ್ನು ಉಪಯೋಗಿಸಿ ಮೌಲ್ಯಮಾಪನ ಮಾಡಬೇಕು.

***ಸೂಚಕಗಳು***

- ತಾಳಪ್ರಜ್ಞೆ
- ಚಲನೆಗಳ ತಾಳದ ಹಿರಿಮೆ
- ಗುಂಪು ಚಟುವಟಿಕೆಗಳಲ್ಲಿ ಭಾಗವಹಿಸುವ ಆಸಕ್ತಿ

### ಪರಾಮರ್ಶೆ

- ಬಾಲವಿಜ್ಞಾನ ಕೋಶ

## ಯೂನಿಟ್ 2 : ಹೆಜ್ಜೆ ಇಡುತ್ತಾ ಕೆಲಸ ಮಾಡೋಣ

### ಮುನ್ನುಡಿ

ಪ್ರಾದೇಶಿಕ ಆಟಗಳಲ್ಲಿ ಹೆಚ್ಚಿನವುಗಳು ವೃತ್ತಿಸಂಬಂಧಿತವಾದವುಗಳು ಕೆಲಸದ ಆಯಾಸವನ್ನು ಕಡಿಮೆ ಮಾಡಲು ಸಂತೋಷದಿಂದ ಆ ಕೆಲಸವನ್ನು ಮಾಡಲು ಒಂದು ಪರಿಧಿಯ ವರೆಗೆ ಆ ಆಟಗಳು ಸಹಾಯಕವಾಗುತ್ತವೆ. ಅವುಗಳಲ್ಲಿ ಉಪಯೋಗಿಸುವ ಸಾಲುಗಳು ಮತ್ತು ಬಾಯಿ ತಾಳಗಳು ಜೀವನ ಸಂಬಂಧಿತವಾಗಿವೆ.

ಪ್ರತಿಯೊಂದು ಕೆಲಸಕ್ಕೂ ಅದರದ್ದೇ ಆದ ತಾಳವಿದೆ. ಕೆಲಸ ಮಾಡುವಾಗಿನ ಆಯಾಸವನ್ನು ಕಡಿಮೆ ಮಾಡಲು ಕೆಲಸಗಾರನು ಅರ್ಥಶೂನ್ಯವಾದ ಶಬ್ದಗಳನ್ನು ಹೊರಡಿಸುವುದಿದೆ. (ಉದಾ: ಐಲಸಾದಂತಹ ಶಬ್ದಗಳು) ತಾಳಾತ್ಮಕವಾದ ಈ ಶಬ್ದಗಳನ್ನು ಕೆಲಸಕ್ಕನುಸರಿಸಿ ಬಾಯಿತಾಳಗಳಾಗಿ ರೂಪಾಂತರಗೊಳಿಸಿ ಈ ಬಾಯಿತಾಳಗಳಿಗೆ ಅನುಸರಿಸಿ ಅವುಗಳ ಸಾಲುಗಳು ಮತ್ತು ಸಾಹಿತ್ಯವನ್ನು ಬದಲಾಯಿಸುವರು. ವೃತ್ತಿ ಆಧಾರಿತ ಜನಪದ ಗೀತೆಗಳು ಮತ್ತು ಬಾಯಿತಾಳಗಳು ಹೀಗೆ ರೂಪುಗೊಳ್ಳುವುವು.

(ಗೀತೆಯ ಸಾಲುಗಳಿಗೆ ಪ್ರಾದೇಶಿಕ ಸ್ವಭಾವಿರುವುದು. ಈ ಸತ್ಯಾಂಶವನ್ನು ಅಧ್ಯಾಪಕರು ಪ್ರತ್ಯೇಕವಾಗಿ ಗಮನದಲ್ಲಿರಿಸಿ ಪ್ರಾದೇಶಿಕ ಮೂಲಗಳನ್ನು ಉಪಯೋಗಿಸಿ ತರಗತಿಯ ಚಟುವಟಿಕೆಗಳನ್ನು ಕ್ರಮೀಕರಿಸಬೇಕು.)

### ಕಲಿಕಾ ಸಾಧನೆ

- ಉದ್ಯೋಗಕ್ಕೆ ಸಂಬಂಧಿಸಿದ ಆಟಗಳನ್ನು ಪ್ರಸ್ತುತಪಡಿಸುವುದು.

### ಆಶಯ, ತಿಳುವಳಿಕೆ

- ಉದ್ಯೋಗಕ್ಕೆ ಸಂಬಂಧಿಸಿದ ಆಟಗಳನ್ನು ಸ್ವತಃ ರೂಪೀಕರಿಸಬಹುದು, ಆಟದಲ್ಲಿ ನಿರತನಾಗಬಹುದು.
- ವೃತ್ತಿಯ ಸ್ವಭಾವಕ್ಕನುಸಾರವಾಗಿ ವಿಭಿನ್ನವಾದ ವೇಗದಲ್ಲಿ ಅದನ್ನು ಪ್ರಸ್ತುತಪಡಿಸಬೇಕು.

## ಪ್ರಕ್ರಿಯೆ

- ನೃತ್ಯರೂಪದಲ್ಲಿರುವ ಆಟಗಳನ್ನು ಕಂಡುಹಿಡಿದು ತಾಳಬದ್ಧವಾಗಿ ಹಾಡುತ್ತಾ ನರ್ತಿಸುವುದು.
- ಆಟಗಳು, ಅವುಗಳಿಗೆ ಸಂಬಂಧಿಸಿದ ಕಸುಬುಗಳು ಎಂಬಿವುಗಳ ಸಚಿತ್ರ ಚಾರ್ಟುಗಳನ್ನು ತೋರಿಸುವುದು.

## ಕಲಿಕಾ ಚಟುವಟಿಕೆಗಳು

- ಅಧ್ಯಾಪಕರು ಒಂದು ಹಾಡನ್ನು ಹಾಡುವರು. ಆ ಹಾಡಿನಲ್ಲಿರುವ ವಿಚಾರಗಳನ್ನು ಮಾಡಿ ತೋರಿಸಲು ಹೇಳುವರು. ಮಕ್ಕಳು ಗುಂಪುಗಳಾಗಿ ಪ್ರತಿಯೊಂದು ಗುಂಪು ಈ ರೀತಿ ತೋರಿಸುವುದು.

  ***ಉದಾಹರಣೆಗೆ***

  ಮೆಲ್ಲ ಮೆಲ್ಲನೆ ಬಂತೊಂದು ಗಿಳಿ
  ಹೆಕ್ಕಿ ತೆಗೆಯಿತೆಲ್ಲಾ ಬೀಜವ
  ಮೆಲ್ಲ ಮೆಲ್ಲನೆ ಬಂತೊಂದು ಬೆಕ್ಕು
  ಅಯ್ಯೋ ಗಿಳಿಯೇ ಓಡಿಕೋ
  ಹೆಕ್ಕಿದ ಪೈರನ್ನು ಕೊಕ್ಕಿನಲ್ಲಿಟ್ಟು
  ಪರ ಪರ ಪರ ಪರ ಹಾರಿಕೊ

- ಪ್ರತಿಯೊಂದು ಗುಂಪಿನವರ ಮಂಡನೆಯಲ್ಲಿರುವ ವೈವಿಧ್ಯವನ್ನು ಪ್ರತ್ಯೇಕವಾಗಿ ದಾಖಲಿಸುವರು.
- ಕೆಲಸದ ಹೊರೆಯನ್ನು ಕಡಿಮೆಮಾಡಲು ಕೆಲಸಗಾರರು ಉಂಟುಮಾಡುವ ಕೆಲವು ಶಬ್ದಗಳು ಬಳಿಕ ಅವುಗಳನ್ನು ಬಾಯಿತಾಳಗಳಾಗಿ ಉಪಯೋಗಿಸಲಾಗುತ್ತದೆ.

  *ಉದಾ:*

  ಏಳಯ್ಯಾ.... ಅಲ್ಲೈಸಾ....
  ಏಳಯ್ಯಾ.... ಅಲ್ಲೈಸಾ....

  ಚೂಟಿಯಾದ ಕಟ್ಟೆರುವೆ ಅಕ್ಕಿಯ ಮಣಿಯನ್ನು ಎತ್ತಿಕೊಂಡು ಹೋದಾಗ ಏನಂಥಾ ಹಾಡಿದ್ದು? (ಉತ್ತರವಾಗಿ)

  ಏಳಯ್ಯಾ.... ಅಲ್ಲೈಸಾ....
  ಏಳಯ್ಯಾ.... ಅಲ್ಲೈಸಾ....
  ಅಕ್ಕಿಯನ್ನು ಎತ್ತುವಾ ಅಲ್ಲೈಸಾ....
  ಸಣ್ಣ ಮಣಿಯನ್ನು ಎತ್ತುವಾ ಅಲ್ಲೈಸಾ....
  ಗೆಳೆಯರೇ ಬನ್ನಿರೀ...ಏಳಯ್ಯಾ.... ಅಲ್ಲೈಸಾ....
  ಏಳೆಳಯ್ಯಾ ಹಾಡಿ ಎತ್ತುವಾ
  ಏಳಯ್ಯಾ ಅಲ್ಲೈಸಾ....
  ಒಟ್ಟಾಗಿ ಹಿಡಿಯಲು ಬನ್ನಿರಿ..
  .................
  ಕಠಿಣಕಾಲ ಬಂದಿದೆ...
  ................
  ಒಟ್ಟು ಸೇರಿದರೆ ಮಲೆಯನ್ನು ಎತ್ತಬಹುದು
  ಗೆಳೆಯರೇ ಬನ್ನಿ...
  ........................

### ಮೌಲ್ಯಮಾಪನ

ಸೂಚಕಗಳನ್ನಿರಿಸಿ ಅಧ್ಯಾಪಕರು ಮೌಲ್ಯಮಾಪನ ಮಾಡುವರು. ನೇರ ಮೌಲ್ಯಮಾಪನ

ಸೂಚಕಗಳು

- ಕೆಲಸಕ್ಕೆ ಸಂಬಂಧಿಸಿದ ಚಲನೆಗಳು
- ತಾಳಬದ್ಧತೆ
- ಗುಂಪು ಪ್ರಜ್ಞೆ
- ಕೆಲಸದ ಕುರಿತಾದ ಅರಿವು

## ಯೂನಿಟ್ 3 : ಬಳುಕು

ನರ್ತಕರ ಶರೀರವೇ ನೃತ್ಯದ ಮಾಧ್ಯಮ ಮೈಮಾಟ ಮತ್ತು ಬಳುಕು ನೃತ್ಯದ ಅಂದದ ಮೇಲೆ ಪ್ರಭಾವ ಬೀರುವ ಘಟಕಗಳಾಗಿವೆ. ಶರೀರದ ಅಂದ ಮತ್ತು ಬಳಕನ್ನು ಉಳಿಸಿಕೊಳ್ಳಲು ಯೋಗ್ಯವಾದ ವ್ಯಾಯಾಮ ಮಾಡಬೇಕು. ಕೇವಲ ನೃತ್ಯ ಮಾಡಲಿಕ್ಕಲ್ಲದೆ ಶರೀರದ ಎಲ್ಲ ಅಂಗಾಶಗಳ ಸುಗುಮವಾದ ಕಾರ್ಯನಿರ್ವಹಣೆಯ ಮೂಲಕ ಆರೋಗ್ಯವುಳ್ಳ ಒಂದು ಶರೀರವನ್ನು ರೂಪೀಕರಿಸುವ ಒಂದು ಪ್ರತಿಕ್ರಿಯೆಯೂ ಆ ಮೂಲಕ ಕಾರ್ಯಗತವಾಗುವುದು.

### ಕಲಿಕಾ ಸಾಧನೆ

- ನೃತ್ಯದ ಮೂಲಕ ದೈಹಿಕ ಕ್ಷಮತೆಯನ್ನು ಗಳಿಸುವುದು.

### ಆಶಯ, ತಿಳುವಳಿಕೆ

- ಶರೀರವನ್ನು ಅನಾಯಾಸವಾಗಿ ಚಲಿಸುವಂತೆ ಮಾಡುವ ನೈಪುಣ್ಯ

### ಪ್ರಕ್ರಿಯೆ

- ಸೂಚನೆಗಳಿಗನುಸಾರವಾಗಿ ಅಂಗಾಂಗ ಚಲನೆ
- ಮೌಸ್‌ಡ್ರಿಲ್ಲಿನಲ್ಲಿ ನಿರತನಾಗುವುದು.

### ಕಲಿಕಾ ಚಟುವಟಿಕೆಗಳು

- ನೆಲದಲ್ಲಿ ನೆಟ್ಟಗೆ ನಿಂತು ಬೆರಳುಗಳನ್ನು ನೆಟ್ಟಗೆ ಮಾಡಿ ಕೈಗಳನ್ನು ಮುಂದಕ್ಕೆ ಚಾಚಿರಿ. ಕೈಗಳನ್ನು ಕ್ರಮವಾಗಿ ಮುಂದಕ್ಕೂ ಹಿಂದಕ್ಕೂ ಕೊಂಡೊಯ್ಯಿರಿ.
- ಕೈಯನ್ನು ಮುಂದಕ್ಕೆ ಚಾಚಿರಿ. ಬದಿಗಳಿಗೆ ಚಾಚಿರಿ. ಅಂಗೈಯನ್ನು ಮೇಲಕ್ಕೆ ತಿರುಗಿಸಿರಿ. ಕೈಯನ್ನು ತಲೆಯ ಮೇಲೆ ಇರಿಸಿರಿ. ಪುನಃ ಮೊದಲು ಮಾಡಿದ ಚಟುವಟಿಕೆಗಳನ್ನು ಆವರ್ತಿಸಿರಿ.
- ಬೆರಳಿನ ಎಲ್ಲ ಕೀಗಳನ್ನು ಮಾಡಬಹುದಾದ ರೀತಿಯಲ್ಲಿ ಕೈಗಳನ್ನು ಚಾಚಿ ಮಡಚಬೇಕು, ತೆರೆಯಬೇಕು. ಇದನ್ನು ಅನೇಕ ಸಲ ಆವರ್ತಿಸಬೇಕು.

- ಕೈಗಳನ್ನು ಚಾಚಿ ಕಿರುಬೆರಳಿನಿಂದ ಹೆಬ್ಬೆರಳಿನ ವರಗೆ ಕ್ರಮವಾಗಿ ಮಡಚುವ ರೀತಿಯಲ್ಲಿ ಮುಷ್ಟಿಯನ್ನು ಮಡಚಿರಿ. ಎಡಗೈಯ ಬೆರಳುಗಳನ್ನು ಎಡಬದಿಗೂ ಬಲಗೈಯ ಬೆರಳುಗಳನ್ನು ಬಲಕ್ಕೂ ಮಡಚಿ ಎರಡು ಕೈಗಳನ್ನೂ ಮುಷ್ಟಿ ಮಡಚಿ (ಮೇಲಕ್ಕೆ) ಇರಿಸಿರಿ. ಇದನ್ನು ಆವರ್ತಿಸಿರಿ.

**ಮೌಲ್ಯಮಾಪನ**

ಬಳುಕನ್ನು ನಿರೀಕ್ಷಣೆ ಮಾಡುವುದು.

## ಯೂನಿಟ್ 4 : ಕಾಗೆಯೆ ಬೆಕ್ಕೇ ಆಡೋಣ

ಮಕ್ಕಳಿಗೆ ಅತ್ಯಂತ ಇಷ್ಟವಾದ ಗೆಳೆಯರು ಮೃಗ ಪಕ್ಷಿಗಳಾಗಿವೆಯಲ್ಲವೇ, ಅವುಗಳನ್ನು ಅನುಕರಿಸುವಾಗ ಅವರಿಗೆ ಗರಿಷ್ಟ ಅವಕಾಶವನ್ನು ನೀಡುವುದು. ಕ್ರಿಯಾಶೀಲತೆ ಹೆಚ್ಚಿಸಲು ಸಹಾಯಕವಾಗುವುದು.

ಮನುಷ್ಯರಲ್ಲಿ ಅಥವಾ ಮಕ್ಕಳಲ್ಲಿ ಅಂತರ್ಗತವಾಗುವ ಆ ಅನುಕರಣೆಯ ಸ್ವಭಾವವನ್ನು ಸುಲಭವಾಗಿ ನೃತ್ಯದ ಕಡೆಗೆ ಮುನ್ನಡೆಸಬಹುದು.

**ಕಲಿಕಾ ಸಾಧನೆ**

- ಪ್ರಕೃತಿಯ ಜೀವಜಾಲಗಳನ್ನು ಅನುಸರಿಸಿ ನೃತ್ಯ ಮಾಡುವುದು.

**ಆಶಯ ತಿಳುವಳಿಕೆ**

- ನಿರೀಕ್ಷಣಾ ಸಾಮರ್ಥ್ಯ
- ಜೀವಜಾಲಗಳಿಗೆ ಅವುಗಳಷ್ಟೇ ಆದ ಚಲನೆಯ ವಿಧಾನಗಳಿವೆ.

**ಪ್ರಕ್ರಿಯೆ**

- ಜೀವಜಾಲಗಳ ಚಲನೆಗಳನ್ನು ಸೂಕ್ಷ್ಮವಾಗಿ ನಿರೀಕ್ಷಣೆ ಮಾಡುವುದು. ಅನುಕರಿಸುವುದು. ಪರಸ್ಪರ ಮೌಲ್ಯಮಾಪನ ಮಾಡಿ ಉತ್ತಮಗೊಳಿಸುವುದು.

**ವಿಷಯ**

ಪರಿಚಿತವಾದ ದೃಶ್ಯಗಳನ್ನು ಪ್ರಾಣಿಪಕ್ಷಿಗಳನ್ನೂ ಅನುಕರಣೆ ಮಾಡುವುದು ಮಕ್ಕಳಿಗೆ ಅತ್ಯಂತ ಪ್ರಿಯವಾದ ವಿನೋದವಾಗಿದೆ. ಈ ಅನುಕರಣೆ ಮಾಡುವ ಸನ್ನದ್ಧತೆಯನ್ನು ಉಪಯೋಗಿಸಿ ಅವರ ನಿರೀಕ್ಷಣಾ ಕೌಶಲ್ಯವನ್ನು ಹೆಚ್ಚಿಸುವುದಲ್ಲದೆ, ಜೀವಜಾಲಗಳ ನೈಜ ಚಲನಾರೀತಿಗಳನ್ನೂ ಶಬ್ದಗಳನ್ನೂ ಅಂದವಾಗಿಯೂ ಉತ್ತಮವಾಗಿಯೂ ಪ್ರಸ್ತುತಪಡಿಸಲು ನೃತ್ಯದ ಭಾಗಗಳಾದ

ತಾಳಾತ್ಮಕವಾದ ಚಲನೆ, ಅಭಿನಯ ಎಂಬಿವುಗಳನ್ನು ಉಪಯೋಗಿಸಲು ಪ್ರೇರೇಪಿಸಬೇಕು. ಪ್ರತಿಯೊಂದು ಜೀವಜಾಲಗಳಿಗೆ ಅದರದ್ದೇ ಆದ ಚಲನಾವಿಧಾನಗಳು ಮತ್ತು ವೈಶಿಷ್ಟ್ಯಗಳಿವೆ ಯೆಂದು ಅವರು ಕಂಡುಹಿಡಿಯುವರು. ಆ ಮೂಲಕ ಸೂಕ್ಷ್ಮ ನಿರೀಕ್ಷಣಾ ಕೌಶಲ್ಯ ಮತ್ತು ಅನುಕರಣ ನೈಪುಣ್ಯ ಪೋಷಿಸಲ್ಪಡುವುದು. ತನ್ನ ಸೃಜನಶೀಲತೆಯನ್ನು ಕ್ರಿಯಾತ್ಮಕವಾಗಿ ಪ್ರಸ್ತುತಪಡಿಸಲು ಸಾಧ್ಯವಾಗುವುದು ಎಂಬುದು ಮಕ್ಕಳಿಗೆ ಸಂತೋಷದ ಅನುಭವವಾಗಿರುವುದು ಇದು ಅವರ ಚಟುವಟಿಕೆ ಮಾಡಲಿರುವ ಸನ್ನದ್ಧತೆಯನ್ನೂ ಆತ್ಮವಿಶ್ವಾಸವನ್ನು ಸೃಜನಶೀಲತೆ ಯನ್ನು ಪುಷ್ಟಿಗೊಳಿಸುವುದು.

### ಕಲಿಕಾ ಚಟುವಟಿಕೆಗಳು

- ಕೆಲವು ಮಕ್ಕಳು ಕಾಡುಪ್ರಾಣಿಗಳಂತೆಯೂ ಇನ್ನು ಕೆಲವರು ಬೇಟೆಗಾರರಂತೆಯೂ ತಾಳಾತ್ಮಕವಾಗಿ ಚಲಿಸುವುದು. ಆಟದ ಸ್ಥಳವನ್ನು ಒಂದು ಕಾಡು ಎಂದು ಭಾವಿಸಿ ಹುಲಿ, ಆನೆ,ನವಿಲು, ಹಂದಿ ಎಂಬೀ ಪ್ರಾಣಿಗಳಾಗಿ ಮಕ್ಕಳು ಆಟವಾಡಬಹುದು.

### ಮೌಲ್ಯಮಾಪನ

- ಮಕ್ಕಳು ಚಲನೆಯನ್ನು ಅನುಕರಣೆ ಮಾಡುವುದನ್ನು ಅಧ್ಯಾಪಕರು ಮೌಲ್ಯಮಾಪನ ಮಾಡುವುದು.
- ತನ್ಮಯತೆ ಹಾಗೂ ತಾಳಾತ್ಮಕ ಚಲನೆಯನ್ನು ಅಧ್ಯಾಪಕರು ಮೌಲ್ಯಮಾಪನ ಮಾಡುವುದು.

## ಯೂನಿಟ್ 5 : ವಾಕ್ಯಗಳಿಗೆ ಅತೀತವಾಗಿ

ಆದಿಮಾನವನು ಆಶಯವಿನಿಮಯ ನಡೆಸಲು ಪ್ರಧಾನವಾಗಿ ಅಂಗಾಗಗಳ ಭಾಷೆಯನ್ನು ಉಪಯೋಗಿಸುತ್ತಿದ್ದನು. ಬಳಿಕ ವಿಕಾಸದ ಅಥವಾ ಬೆಳವಣಿಗೆಯ ಪ್ರತಿಯೊಂದು ಹಂತದಲ್ಲಿಯೂ ಅವನ ಭಾಷೆಯೂ ಪ್ರಗತಿ ಸಾಧಿಸಿತು. ಆಂಗಿಕ ಭಾಷೆಗಳಿಗೆ ಯೋಗ್ಯವಾದ ಸ್ಪಷ್ಟತೆಯೂ ದೊರೆಯಿತು. ಹೀಗೆ ಮಾತುಗಾರಿಕೆಯ ಭಾಷೆಯಷ್ಟೇ ಪ್ರಬಲವಾದ ಆಶಯ ವಿನಿಮಯ ಮಾಧ್ಯಮವಾಗಿ ಆಂಗಿಕ ಭಾಷೆ ಬದಲಾಯಿತು. ಭಾಷೆಯು ಅದನ್ನು ಉಪಯೋಗಿಸುವ ಸಮಾಜದಲ್ಲಿ ಮಾತ್ರ ಆಶಯ ವಿನಿಮಯ ಮಾಧ್ಯಮವಾದರೆ ಆಂಗಿಕ ಭಾಷೆಯ ಮೂಲಕವಿರುವ ಆಶಯವಿನಿಮಯಕ್ಕೆ ಮೇರೆಗಳಿಲ್ಲ. ಆಂಗಿಕ ಭಾಷೆಯನ್ನು ಉಪಯೋಗಿಸಿ ಮಕ್ಕಳನ್ನು ಸ್ವಾರಸ್ಯಕರವಾದ ಆಟಗಳತ್ತ ಮುನ್ನಡೆಸುವ ಮೂಲಕ ತರಗತಿಯ ಚಟುವಟಿಕೆಗಳನ್ನು ಜೀವಂತವಾಗಿರಿಸಲು ನಮಗೆ ಸಾಧ್ಯವಿದೆ. ಮಕ್ಕಳಿಗೆ ಹೆಚ್ಚು ಆಸಕ್ತಿ ಇರುವ ಈ ರೀತಿಯ ಚಟುವಟಿಕೆಗಳನ್ನು ಅವರಿಗೆ ತಿಳಿದಿರುವ ಆಟಗಳಿಂದಲೇ ಆರಂಭಿಸುವುದು ಉತ್ತಮ.

### ಕಲಿಕಾ ಸಾಧನೆ

- ಆಂಗಿಕ ಚಲನೆಗಳ ಮೂಲಕ ಸರಳವಾದ ಆಶಯ ವರ್ಗಾವಣೆ ಸಾಧ್ಯವಾಗುವುದು.

### ಆಶಯ, ತಿಳುವಳಿಕೆ

- ಆಶಯಗಳನ್ನು ಆಂಗಿಕ ಚಲನೆಯ ಮೂಲಕ ಪ್ರಸ್ತುತಪಡಿಸಬಹುದು.

## ಪ್ರಕ್ರಿಯೆ

- ಪರಿಚಿತವಾದ ರೂಪಗಳು, ಆಶಯಗಳು, ಎಂಬಿವುಗಳನ್ನು ಕೈ ಬೆರಳು ಮುಂತಾದ ಭಾಗಗಳನ್ನು ಉಪಯೋಗಿಸಿ ಪ್ರಸ್ತುತಪಡಿಸುವುದು.
- ಹೆಚ್ಚಿನ ಚಟುವಟಿಕೆಗಳನ್ನು ನಿರೀಕ್ಷಣೆ ಮಾಡುವುದು (ಸಿ.ಡಿ)
- ಆಶಯಗಳನ್ನು ಪ್ರಸ್ತುತಪಡಿಸುವುದು.

## ವಿಷಯ

ಪ್ರಕೃತಿಯ ರೂಪಗಳು ಮತ್ತು ಶಬ್ದಗಳನ್ನು ಅನುಕರಿಸುವ ಸಾಮರ್ಥ್ಯವನ್ನು ಮನುಷ್ಯನು ಹುಟ್ಟಿನಿಂದಲೇ ಗಳಿಸಿರುತ್ತಾನೆ. ಇದು ಅವನ ಬೆಳವಣಿಗೆಯ ಹಂತಗಳಲ್ಲಿ ನಿರ್ಣಾಯಕ ಪಾತ್ರ ವಹಿಸಿದೆ. ತಾನು ನೋಡಿದ ಹೂವಿನ ಬಗ್ಗೆ ತನ್ನ ಗೆಳೆಯನಿಗೆ ಬಾಯ್ಮಾತಿನ ಮೂಲಕ ವಿವರಿಸುವುದರ ಬದಲು ಕೈ ಬೆರಳುಗಳ ಚಲನೆಯ ಮೂಲಕ ತೋರಿಸುವಾಗ ಅದು ಹೂವನ್ನು ನೋಡಿದ ಅನುಭವವನ್ನುಂಟುಮಾಡುವುದು. ಇದೇ ರೀತಿ ಚಿಟ್ಟೆ, ದುಂಬಿ, ಹೂ, ಹುಳಗಳನ್ನು ಅನುಕರಿಸಲು ಅವನ ಕೈಬೆರಳುಗಳಿಗೆ ಸಾಧ್ಯವಾಗುವುದು. ಬೆರಳುಗಳೊಂದಿಗೆ ಕಣ್ಣು ಮತ್ತು ಮುಖ ಸೇರುವಾಗ ಅವುಗಳಿಗೆ ಜೀವ ಬರುವುದೆಂದು ಅವನು ತಿಳಿಯುವನು. ಇದೇ ರೀತಿ ಕೆಲವು ಸರಳ ವಾಕ್ಯಗಳನ್ನು ಆಶಯ ವಿನಿಮಯಕ್ಕಾಗಿ ಆಂಗಿಕ ಭಾಷೆಯ ಮೂಲಕ ಸೂಚಿಸಲು ಅವನಿಗೆ ಸಾಧ್ಯವಾಗುವುದು. ಈ ರೀತಿಯ ಚಟುವಟಿಕೆಗಳು ಅವನಲ್ಲಿರುವ ನೃತ್ಯಪ್ರತಿಭೆಯ ಬೆಳವಣಿಗೆಯ ಮೈಲುಗಲ್ಲುಗಳಾಗಿ ಬದಲಾಗುವುದು.

## ಕಲಿಕಾ ಸಾಧನೆಗಳು

***ಚಟುವಟಿಕೆ–1***

- ಉಣ್ಣಿಕುಟ್ಟನ್ ಬೆಳಗ್ಗೆ ಬೇಗನೆ ಎದ್ದು ನಿತ್ಯಕರ್ಮಗಳನ್ನು ಮುಗಿಸಿ ಶಾಲೆಗೆ ಹೊರಡಲು ಸಿದ್ಧನಾದನು. ಯಾಕೆ ಉಣ್ಣಿ ಇಷ್ಟು ಬೇಗ ಹೊರಟದ್ದು? ಅಮ್ಮ ಕೇಳಿದರು. ಇಂದು ಶಾಲೆಯಲ್ಲಿ ಕೆಲವು ಕಾರ್ಯಕ್ರಮಗಳಿವೆ. ಮಕ್ಕಳು ಕೆಲವು ವಸ್ತುಗಳ ಪಟ್ಟಿಯನ್ನು ಕೊಟ್ಟಿದ್ದಾರೆ. ಅವುಗಳೆಲ್ಲವನ್ನೂ ಸಜ್ಜುಗೊಳಿಸಬೇಕು. ಅಮ್ಮ ಕೇಳಿದಳು– ನಾನು ಸಹಾಯಮಾಡಬೇಕೆ? ಬೇಡ. ಉಣ್ಣಿಕುಟ್ಟನ ಉತ್ತರ. ಕೈ ತುಂಬಾ ಹೂಗಳು ಪುಸ್ತಕದ ಚೀಲ, ಊಟದ ಬುತ್ತಿ, ಇನ್ನ್ಯಾವುದೋ ಕೆಲವು ವಸ್ತುಗಳನ್ನು ತುಂಬಿಸಿದ ಚೀಲದೊಂದಿಗೆ ಶಾಲೆಗೆ ತಲುಪಿದನು. ತರಗತಿಯಲ್ಲಿ ಅಧ್ಯಾಪಕರು ಪ್ರತಿಯೊಬ್ಬ ವಿದ್ಯಾರ್ಥಿ ತಂದ ವಸ್ತುಗಳನ್ನು ಒಂದೊಂದು ಮೂಲೆಯಲ್ಲಿ ಇರಿಸಲು ಹೇಳಿದರು. ಮಕ್ಕಳು ಅದನ್ನು ಅನುಸರಿಸಿದರು. ತರಗತಿ ಆರಂಭವಾಯಿತು. ಈ ವಸ್ತುಗಳೆಲ್ಲವೂ ನಿಮಗೆ ಪರಿಚಯ ಇರುವವುಗಳಾಗಿವೆ. ನಾನು ಆಂಗಿಕ ಚಲನೆಗಳನ್ನು ತೋರಿಸುವಾಗ ಪ್ರತಿಯೊಬ್ಬರೂ ಆಯಾ ಸಾಮಗ್ರಿಗಳನ್ನು ಇಲ್ಲಿಗೆ ತರಬೇಕು. ಅಧ್ಯಾಪಕರು ಪ್ರತಿಸಲ ಆಂಗಿಕವಾಗಿ ಸೂಚಿಸಿದಾಗ ಮಕ್ಕಳು ಆಯಾ ಸಾಮಗ್ರಿಗಳನ್ನು ಮೇಜಿನ ಮೇಲೆ ಇರಿಸುವರು. ಅಧ್ಯಾಪಕರು ತೋರಿಸುವ ಆಂಗಿಕ ಚಲನೆಗಳು ಆಯಾ ವಸ್ತುಗಳನ್ನು ನಿಖರವಾಗಿ ಪ್ರತಿಪಾದಿಸುವಂತಿರಬೇಕು.

***ಚಟುವಟಿಕೆ–2***

- ಮಕ್ಕಳು ಪ್ರತಿಯೊಬ್ಬರೂ ಅವರು ತಂದ ವಸ್ತುಗಳನ್ನು ಪುನಃ ಒಟ್ಟು ಸೇರಿಸುವರು. ಅಧ್ಯಾಪಕರು ಅವುಗಳನ್ನು ಬೆರಕೆ ಮಾಡಿ ನಾಲ್ಕು ಗುಂಪುಗಳಿಗೆ ಪಾಲು ಮಾಡುವರು. ಎಲ್ಲ ಗುಂಪುಗಳಿಗೆ ಲಭಿಸುವ ವಸ್ತುಗಳ ಸಂಖ್ಯೆ ಸಮಾನವಾಗಿದ್ದರೂ ವಸ್ತುಗಳು ಭಿನ್ನವಾಗಿರುತ್ತವೆ. ಒಂದನೇ ಗುಂಪಿನಿಂದ ಒಂದು ಮಗು ಅವನ ಬಳಿಯಿರುವ ಒಂದು ವಸ್ತುವಿನ ಕುರಿತು ಆಂಗಿಕ ಭಾಷೆಯಲ್ಲಿ ಸೂಚಿಸುವನು. ಆ ವಸ್ತು ಇನ್ನೊಂದು ಗುಂಪಿನವರಲ್ಲಿದ್ದರೆ ಒಂದನೇ ಗುಂಪಿನಿಂದ ಅದೇ ವಸ್ತುವನ್ನು ಪಡೆದುಕೊಳ್ಳಬೇಕು. ಅಥವಾ ಇಲ್ಲದಿದ್ದರೆ ವಸ್ತುವನ್ನು ಒಂದನೆ ಗುಂಪಿಗೆ ಬಿಟ್ಟುಕೊಡಬೇಕು. ಎರಡನೆಯ ಗುಂಪಿನ ಮಗು ಇನ್ನೊಂದು ಸಂಜ್ಞೆಯನ್ನು ಮಾಡಿ ತೋರಿಸಿ ಆಟವನ್ನು ಮುಂದುವರಿಸುವುದು ನಿರ್ದಿಷ್ಟ ರೌಂಡ್ ಮುಗಿಯುವಾಗ ಆಟವನ್ನು ಮುಕ್ತಾಯಗೊಳಿಸಿ ಪ್ರತಿಯೊಂದು ಗುಂಪಿನ ಬಳಿ ಇರುವ ವಸ್ತುಗಳನ್ನು ಎಣಿಸುವುದು. ಹೆಚ್ಚು ವಸ್ತುಗಳಿರುವ ಗುಂಪನ್ನು ವಿಜಯಿ ಎಂದು ಘೋಷಿಸಬಹುದು.

### ಮೌಲ್ಯಮಾಪನ

- ಪ್ರತಿಯೊಂದು ಆಟವನ್ನು ನಿರ್ವಹಿಸುವಾಗಲೇ ಅಧ್ಯಾಪಕರು ದಾಖಲಿಸಬೇಕು.
- ಆಶಯಗಳಿಗೆ ತುಲುಪುವಂತಹ ಒಳ್ಳೆಯ ಪ್ರಶ್ನೆಗಳನ್ನು ಕೇಳಿದವರನ್ನು ಮೌಲ್ಯಮಾಪನಕ್ಕೆ ಪರಿಗಣಿಸಬೇಕು.

***ಸೂಚಕಗಳು***

- ಸಂಜ್ಞೆಯ ಆಶಯ ಸ್ಪಷ್ಟತೆ
- ಸಮಗ್ರತೆ (ಶರೀರದ ವಿವಿಧ ಅವಯವಗಳ ಹೊಂದಾಣಿಕೆಯ ಅಭಿವ್ಯಕ್ತಿಯನ್ನು ಪರಿಗಣಿಸಬೇಕು.)

## ಯೂನಿಟ್ 6 : ತಿತ್ತಿತ್ತಾತಿತ್ತೈತ್ತೈ

ಭಾಷೆಯ ಉಗಮದ ಅನ್ವೇಷಣೆಯಲ್ಲಿ ತೊಡಗಿದ ಪ್ರತಿಯೊಬ್ಬನು ಕೊನೆಗೆ ತಲುಪುವುದು ಆಯಾ ಪ್ರದೇಶಗಳ ಜನಪದ ಕಲಾರೂಪಗಳ ಕಡೆಗಿರುವುದು. ಆಯಾ ಪ್ರದೇಶಗಳ ಜನಪದ ಗೀತೆಗಳು ಮತ್ತು ನೃತ್ಯಗಳು ಜನಪದ ಕಲಾರೂಪಗಳ ಆಧಾರಸ್ತಂಭಗಳಾಗಿವೆ. ಅವುಗಳಿಗೆ ವರ್ಣವೈಭವವನ್ನು ನೀಡುವುದು ಬಾಯಿತಾಳಗಳಾಗಿವೆ. ಕೆಲವು ಬಾಯಿತಾಳಗಳು ಕೆಲವೊಮ್ಮೆ ಕೆಲವು ನೃತ್ಯ ಹಾಗೂ ಗೀತೆಗಳ ವೈಶಿಷ್ಟ್ಯಗಳಾಗಿ ಪರಿಗಣಿಸಲ್ಪಡುತ್ತವೆ. ಪ್ರಾದೇಶಿಕ ಬಾಯಿತಾಳಗಳಿಗನುಸಾರವಾಗಿ ಹೆಜ್ಜೆಹಾಕುವುದರಿಂದ ನೃತ್ಯದಲ್ಲಿ ಒಲವು ಉಂಟಾಗುವುದು.

### ಕಲಿಕಾ ಸಾಧನೆ

- ಬಾಯಿತಾಳಗಳಿಗೆ ಅನುಸಾರವಾಗಿ ಹೆಜ್ಜೆ ಹಾಕುವುದು.

## ಆಶಯ, ತಿಳುವಳಿಕೆ

- ಬಾಯಿತಾಳಗಳಿಗೆ ನಿಖರವಾದ ವೇಗವಿದೆ.
- ವೇಗಕ್ಕನುಸಾರವಾಗಿ ಹೆಜ್ಜೆ ಹಾಕಬಹುದು.
- ತಾಳಾತ್ಮಕವಾಗಿ ಹೆಜ್ಜೆ ಹಾಕುವುದು ಒಂದು ನೈಪುಣ್ಯವಾಗಿದೆ.

## ಪ್ರಕ್ರಿಯೆ

- ಬಾಯಿತಾಳಗಳನ್ನು ಪ್ರಸ್ತುತಪಡಿಸುವುದು, ಆವರ್ತಿಸಿ ಹಾರುವುದು.
- ಬಾಯಿತಾಳಗಳಿಗನುಸಾರವಾಗಿ ಚಪ್ಪಾಳೆ ತಟ್ಟುವುದು.

## ವಿಷಯ

ಪ್ರತಿಯೊಂದು ಬಾಯಿತಾಳಕ್ಕೂ ಅದನ್ನು ಉಪಯೋಗಿಸುವ ಹಾಡಿನ ಸರಾಗ, ತಾಳಗಳೊಂದಿಗೆ ಸಂಬಂಧವಿರುವುದು. ಅದರ ತಾಳಗಳಲ್ಲಿರುವ ವೈವಿಧ್ಯವು ಪುಟಾಣಿ ಮನಸ್ಸುಗಳನ್ನು ರಂಜಿಸುವುದೆಂಬುದರಲ್ಲಿ ಸಂಶಯವಿಲ್ಲ. ಬಾಯಿತಾಳಗಳನ್ನು ನಿಶ್ಚಿತ ವೇಗದಲ್ಲಿ ಆಲಾಪಿಸುವುದರಿಂದ ಉಂಟಾಗುವ ಆಕರ್ಷಣೆ ಮತ್ತು ಅದಕ್ಕನುಸಾರವಾಗಿ ವರ್ತಿಸುವಾ ಉಂಟಾಗುವ ಅಂದ ಮನಸ್ಸಿಗೆ ಮುದ ನೀಡುವುದು. ವೇಗದ ಏರಿಳಿತಗಳು, ತಾಳದ ವೈವಿಧ್ಯ ಎಂಬಿವುಗಳೆಲ್ಲವೂ ಬಾಯಿತಾಳಗಳನ್ನು ಆಕರ್ಷಕಗೊಳಿಸುತ್ತವೆ. ನಮ್ಮ ಜನಪದ ನೃತ್ಯಗಳಲ್ಲಿ ಹೆಚ್ಚಿನವುಗಳು ಆಯಾ ಪ್ರದೇಶದಲ್ಲಿ ಅಸ್ಥಿತ್ವದಲ್ಲಿರುವ ವೃತ್ತಿಯೊಂದಿಗೆ ಸಂಬಂಧವನ್ನು ಹೊಂದಿರುವುದು. ದೊಡ್ಡ ಒಂದು ಮರವನ್ನು ದೂಡಿ ಸರಿಸುವ ಕೆಲಸಗಾರರು ಅವರವರ ಕೆಲಸಗಳನ್ನು ಏಕೀಕರಿಸಲು ಏಲಯ್ಯ-ಏಲಸ ಎಂದು ಹಾಡುವಾಗ ಅದನ್ನು ಅನುಕರಿಸಿ ಬಂದ ನೃತ್ಯದಲ್ಲಿಯೂ ಹಾಡಿನಲ್ಲಿಯೂ ಅದರ ಶಕ್ತಿ ನಮಗೆ ಗೋಚರಿಸುವುದು.

## ಕಲಿಕಾ ಚಟುವಟಿಕೆಗಳು

- ಓ ತಿತ್ತಿತ್ತಾರಾ.....ತಿತ್ತಿತ್ತೈ

  ..................................................
- ಕೋಲ್ಕಳಿ (ಧಿತ್ತಾಕಿಡ ಧಿತ್ತೈ ಧಿಮ್ಮತ್ತೈ ಧಿಲ್ಲಾ ಧಿಲ್ಲಾ ತೈ
- ಪೂರಕ್ಕಳಿ (ತೈ ತಿಲ್ಲ /ತೈ ತಿಲ್ಲ/ ತೈ ತೈ

  ಎಂಬ ದೋಣಿ ಹಾಡಿನ ಬಾಯಿತಾಳಗಳಿಗೆ ನಾವು ನೃತ್ಯಮಾಡುವಾಗ ನಮಗೆ ದೋಣಿ ಆಟದ ದೃಶ್ಯಾನುಭವ ಆಗುವುದಲ್ಲವೆ?
- ಅಧ್ಯಾಪಕರು ಸರಳವಾದ ಬಾಯಿತಾಳಗಳನ್ನು ಹೇಳುವಾಗ ಮಕ್ಕಳು ಅದಕ್ಕನುಸಾರವಾಗಿ ಚಪ್ಪಾಳೆ ತಟ್ಟಿ ಪುಟ್ಟ ಹೆಜ್ಜೆಗಳನ್ನಿಡುವುದರೊಂದಿಗೆ ಹಾಡಲಿಕ್ಕೂ ಪ್ರಯತ್ನಿಸುವರು. ಈ ಚಟುವಟಿಕೆಯನ್ನು ವಿವಿಧ ಬಾಯಿತಾಳಗಳನ್ನು ಉಪಯೋಗಿಸಿ ಅಧ್ಯಾಪಕರು ಆವರ್ತಿಸಬಹುದು.
- ಅಚ್ಚನ್ ಕೊಂಬತ್ತ್ (ತೆಯ್ಯಂದಾರೋ ತೈ)<br>ಅಮ್ಮ ವರಂಬತ್ತ್ (.........)<br>ಅಮ್ಮಾನಕೂಟಂ (.............)<br>ಅಚ್ಚನ್ ಕೊಂಬತ್ತಮ್ಮ ವರಂಬತ್ತಮ್ಮಾನಕೂಟಂ<br>(ತೆಯ್ಯಂದಾರೋ ತೆಯ್ಯಂದಾರೋ ತೆಯ್ಯಂದಾರೋ ತೈ)

ಅಂಜಾಕೊಂಬತ್ತ್ (ತೆಯ್ಯಂದಾರೋ ತೈ)
ಇಂಜಾಕೊಂಬತ್ತ್ (ತೆಯ್ಯಂದಾರೋ ತೈ)
ಅನ್ಯೋನ್ಯಕೂಟಂ (ತೆಯ್ಯಂದಾರೋ ತೈ)
ಅಜಾಕೊಂಬತ್ತಿಜಾಕೊಂಬತ್ತನ್ಯೋನ್ಯಕೂಟಂ (ತೆಯ್ಯಂದಾರೋ ತೆಯ್ಯಂದಾರೋ ತೆಯ್ಯಂದಾರೋ ತೈ)

ಚಪ್ಪಾಳೆ ತಟ್ಟಿ ಕಾಲುಗಳನ್ನು ಚಲಿಸುವಂತೆ ಮಾಡಬೇಕು ತಾಳಕ್ಕನುಸರಿಸಿ ಕಾಲಿನ ಚಲನೆ ಇರಬೇಕು.

## ಮೌಲ್ಯಮಾಪನ

- ಕೆಲಸದ ತಾಳಕ್ಕೆ ಬಾಯಿತಾಳ ಹೊಂದಿಕೆಯಾಗುತ್ತದೆಯೇ ಎಂದು ಮೌಲ್ಯಮಾಪನ ಮಾಡುವುದು..
- ಬಾಯಿತಾಳದ ತಾಳಕ್ರಮ ಮತ್ತು ಚಲನೆಗಳೊಳಗಿನ ಹೊಂದಾಣಿಕೆ
- ಬಾಯಿತಾಳ ಹಾಡುವುದರೊಂದಿಗಿನ ಹೊಂದಾಣಿಕೆ
- ಆಸ್ವಾದನೆ
- ಕೆಲಸದಲ್ಲಿ ಅಭಿರುಚಿ

# ಎರಡನೇ ತರಗತಿ

## ಯೂನಿಟ್ 1 : ಆಟ ಮತ್ತು ನೃತ್ಯ

ಆಯಾ ಪ್ರದೇಶಗಳಲ್ಲಿ ಅವುಗಳದ್ದೇ ಆದ ಜನಪದ ಆಟಗಳಿವೆ. ಈ ಆಟಗಳ ವೈಶಿಷ್ಟ್ಯವನ್ನು ಹೆಚ್ಚಿಸುವ ಪದ್ಯಗಳಿವೆ. ಹೆಚ್ಚಿನ ಜನಪದ ಆಟಗಳು ತಾಳಬದ್ಧವಾದ ಹೆಜ್ಜೆಗಳಿಗೂ ಮೈಮಾಟಕ್ಕೂ ಪ್ರಾಧಾನ್ಯ ನೀಡುತ್ತವೆ. ವಿನೋದ, ವ್ಯಾಯಾಮ ಹಾಗೂ ಜ್ಞಾನ ಈ ಆಟಗಳ ವೈಶಿಷ್ಟ್ಯಗಳಾಗಿವೆ. ಪರಂಪರಾಗತವಾಗಿ ಬಂದ ಈ ಸಾಂಸ್ಕೃತಿಕ ಸ್ವಂತಿಕೆಯನ್ನು ನಿರೀಕ್ಷಣೆ ಮಾಡಲು ಹಾಗೂ ಅಭ್ಯಾಸ ಮಾಡಲು ಈ ಪಾಠಭಾಗದಲ್ಲಿ ಅವಕಾಶ ಒದಗಿಸಲಾಗಿದೆ.

### ಕಲಿಕಾ ಸಾಧನೆ

- ಪ್ರಾದೇಶಿಕ ಪರಿಚಯವಿರುವ ಆಟಗಳನ್ನು ನೃತ್ಯರೂಪದಲ್ಲಿ ನಿರೀಕ್ಷಣೆ ಮಾಡುವುದು.

### ಆಶಯ, ತಿಳುವಳಿಕೆ

- ಹೆಜ್ಜೆಗಳ ವೈವಿಧ್ಯಕ್ಕೆ ಸಂಬಂಧಿಸಿದ ತಿಳುವಳಿಕೆ
- ಚಲನೆಗಳ ಏಕತೆ
- ಅಧ್ಯಾಪಕರ ಸೂಚನೆಗಳಿಗನುಸಾರವಾಗಿ ಆಟಗಳಲ್ಲಿ ನಿತರಾಗಿರಿ.

### ಪ್ರಕ್ರಿಯೆ

- ಪ್ರಾದೇಶಿಕ ವೈವಿಧ್ಯಗಳಿರುವ ನೃತ್ಯರೂಪಗಳನ್ನು ವೀಕ್ಷಿಸುವುದು (ಐ.ಟಿಯ ಸಹಾಯ ಪಡೆಯಬಹುದು)
- ಒಂಟಿಯಾಗಿ ಅಥವಾ ಗುಂಪಾಗಿ ಪ್ರಸ್ತುತಪಡಿಸುವುದು.
- ವೈವಿಧ್ಯದ ಕುರಿತಾದ ಚರ್ಚೆ

### ವಿಷಯ

ಮಕ್ಕಳಿಗೆ ಸಹಜವಾಗಿಯೇ ಆಟದಲ್ಲಿ ಭಾಗವಹಿಸುವ ಆಸಕ್ತಿ ಇರುವುದು. ಜನಪದ ಆಟಗಳ ಹೆಜ್ಜೆಗಳು ತಾಳಾತ್ಮಕವಾಗಿರುತ್ತವೆ. ಈ ಆಟಗಳಲ್ಲಿ ಭಾಗವಹಿಸುವ ಮೂಲಕ ಮಕ್ಕಳು ನಮ್ಮ ಸಂಸ್ಕೃತಿಯ ಭಾಗವಾಗುವರು. ಆಟಗಳ ತಾಳಾತ್ಮಕವಾದ ಚಲನೆಗಳನ್ನು ಅರ್ಥೈಸಿ ಮಗು ಈ ಗುಂಪು ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದು. ಈ ಚಟುವಟಿಕೆಗಳು ನೃತ್ಯಾಭ್ಯಾಸಕ್ಕಿರುವ ಬೆಳಕಿಂಡಿಗಳಾಗಿವೆ.

## ಕಲಿಕಾ ಚಟುವಟಿಕೆಗಳು

***ಚಟುವಟಿಕೆ-1***

- ಒರಗಬೇಡ ಗೋಡೆಯೇ
  ದೂಡಬೇಡ ಗೋಡೆಯೇ
  ಒರಗಬೇಡ ಗೋಡೆಯೇ
  ವಾಲಬೇಡ ಗೋಡೆಯೇ
  ನಾನಿರುವೆನು ಇಲ್ಲಿಯೇ
  ನೆನಪಿಡುವೆಯಾ ಗೋಡೆಯೇ

- ಮಕ್ಕಳು ಬೆಂಚಿನಲ್ಲಿ ಕುಳಿತುಕೊಳ್ಳುವರು. ಆಚೆಗೂ ಈಚೆಗೂ ಉಯ್ಯಾಲೆಯಂತೆ ಆಡುವರು. ತುದಿಯಲ್ಲಿ ಕುಳಿತ ಮಗು ಬೀಳುವುದು. ಅದು ಇನ್ನೊಂದು ತುದಿಯಲ್ಲಿ ಬಂದು ಕುಳಿತುಕೊಳ್ಳುವುದು. ಪುನಃ ಆವರ್ತಿಸಲ್ಪಡುವುದು. ಒಬ್ಬೊಬ್ಬರಾಗಿ ಬೀಳುವುದು.

***ಚಟುವಟಿಕೆ 2***

- ತುಂಬಿ ತುಳ್ಳಲ್, ಮಾಣಿಕ್ಯ ಚೆಂಬುಯುಕ್ಕ

## ಮೌಲ್ಯಮಾಪನ

ಮಗುವಿಗೆ ಅರಿವಿಲ್ಲದಂತೆ ಸೂಚಕಗಳ ಆಧಾರದಲ್ಲಿ ಮೌಲ್ಯಮಾಪನ ಮಾಡುವುದು.

***ಸೂಚಕಗಳು***

- ತಾಳಪ್ರಜ್ಞೆ
- ಚಲನೆಗಳ ತಾಳದ ಹಿರಿಮೆ
- ಗುಂಪು ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲಿಕ್ಕಿರುವ ಆಸಕ್ತಿ

## ಪರಾಮರ್ಶೆ

- ಬಾಲವಿಜ್ಞಾನ ಕೋಶ-ಭಾಗ-1

# ಯೂನಿಟ್ 2 : ಕೆಲಸ ಮತ್ತು ನೃತ್ಯ

ಕಲೆ ವಿಕಾಸ ಹೊಂದಿದುದು ನೆಲದಿಂದಾಗಿದೆ ನೆಲ ಎಂಬ ಪದಕ್ಕೆ ಕೃಷಿಯೊಂದಿಗೆ ಸಂಬಂಧವಿದೆ. ಕೃಷಿ ಮತ್ತು ಇತರ ಕೆಲಸಗಳನ್ನು ಮಾಡುವಾಗ ಬಳಕೆಯಾಗುವ ಶಾರೀರಿಕ ಚಲನೆಗಳನ್ನು ವಿಶ್ರಾಂತಿ ಸಮಯದಲ್ಲಿ ಅನುಕರಿಸಲು ಪ್ರಯತ್ನಿಸುವಾಗ ನೃತ್ಯದ ಆದಿರೂಪಗಳು ಉಂಟಾದುವು. ನಮ್ಮ ಗ್ರಾಮೀಣ ಕೃಷಿ ರೀತಿಗಳು ಹಾಗೂ ಇತರ ವೃತ್ತಿಕ್ಷೇತ್ರಗಳೊಂದಿಗೆ ಸಾಮೀಪ್ಯವಿರುವುದು ನೃತ್ಯ ಕಲಿಕೆಗೆ ಸಹಾಯಕವಾಗುವುದು. ತಾಳಾತ್ಮಕವಾದ ಬಾಯಿತಾಳಗಳನ್ನೊಳಗೊಂಡ ಹಾಡನ್ನು ಹಾಡಲು ಸಾಧ್ಯವಾದರೆ? ಚಲನೆಯನ್ನು ದೃಶ್ಯವಿಸ್ಮಯವನ್ನಾಗಿ ಬದಲಾಯಿಸಲು ಸಾಧ್ಯವಿದೆ. ಬಾಯಿತಾಳಗಳ ಮೂಲಕ ನೃತ್ಯ ಜಗತ್ತಿಗೆ ಸಾಗುವ ಪ್ರಯತ್ನವನ್ನು ಈ ಪಾಠಭಾಗ ಉದ್ದೇಶಿಸಿದೆ.

## ಕಲಿಕಾ ಸಾಧನೆ

- ವೃತ್ತಿಗಳಿಗೆ ಅನುಸಾರವಾದ ಬಾಯಿತಾಳಗಳನ್ನು ಅದಕ್ಕನುಸಾರವಾದ ನೃತ್ಯ ಸಂಪ್ರದಾಯಗಳನ್ನು ಗುರುತಿಸುವುದು.

## ಆಶಯ, ತಿಳುವಳಿಕೆ

- ನಮ್ಮ ಜನಪದ ನೃತ್ಯ ಸಂಪ್ರದಾಯಕ್ಕೆ ವೃತ್ತಿಯೊಂದಿಗೆ ಸಂಬಂಧವಿದೆ.
- ವೃತ್ತಿ ಮತ್ತು ಬಾಯಿತಾಳಗಳ ನಡುವೆ ಸಂಬಂಧವಿದೆ.

## ಪ್ರಕ್ರಿಯೆ

- ಕೊಯ್ಲು ಉತ್ಸವ, ಕೃಷಿಕರ ನೃತ್ಯ, ಪಣಿಯ ವಿಭಾಗಕ್ಕೆ ಸೇರಿದವರ ಬೆಳೆ ಉತ್ಸವ ಎಂಬೀ ನೃತ್ಯ ಸಂಪ್ರದಾಯಗಳನ್ನು ಸಿ.ಡಿ ಹಾಕಿ ವೀಕ್ಷಿಸುವುದು.
- ನೃತ್ಯ ಸಂಪ್ರದಾಯ, ಬಾಯಿ ತಾಳಗಳು ಎಂಬಿವುಗಳ ವೈಶಿಷ್ಟ್ಯಗಳನ್ನು ತಿಳಿಯುವುದು. ದೋಣಿ ಆಟ, ಮರದ ದಿಮ್ಮಿಯನ್ನು ಎಳೆಯುವುದು, ನೇಜಿ ನೆಡುವುದು, ಕೊಯ್ಲು ಉತ್ಸವ, ಮೀನು ಹಿಡಿಯುವುದು.

## ಕಲಿಕಾ ಚಟುವಟಿಕೆಗಳು

***ಚಟುವಟಿಕೆ–1***

ಪತ್ತಾಯಕ್ಕಿಳಿದು ಸ್ವಲ್ಪ
ಭತ್ತತೆಗೆಯು ಮಗಳೇ
ನನ್ನಿಂದಾಗದು ಅಮ್ಮಾ
ಇಲಿ ನನ್ನ ಕಚ್ಚಿ ತಿನ್ನಬಹುದಮ್ಮ
ಹೊರಳಲ್ಲಿ ಸ್ವಲ್ಪ ಭತ್ತ ತೆಗೆದು
ಗುದ್ದಿತಾ ಮಗಳೇ
ನನ್ನಿಂದಾಗದು ಅಮ್ಮ
ಹುಡುಗರು ಕಣ್ಣುತೆಗೆಯದೆ ನೋಡುವರಮ್ಮಾ
ಅಡಿಗೆಕೋಣೆಯಲ್ಲಿ ಅಕ್ಕಿಯನ್ನು ಬೇಯಿಸಿ
ತೆಗೆದಿಡು ಮಗಳೇ
ನನ್ನಿಂದಾಗದು ಅಮ್ಮ
ಒಲೆ ನನ್ನನ್ನು ಕಣ್ಣುತೆಗೆಯದೆ ನೋಡುವದಮ್ಮಾ
ಎಲೆ ಹಾಕಿ ಬಡಿಸಿಟ್ಟೆ
ತಿನ್ನಲು ಬಾ ಮಗಳೇ
ಆಹಾ ಎಷ್ಟು ರುಚಿಯಮ್ಮಾ
ಇನ್ನು ಸ್ವಲ್ಪ ಬಡಿಸು ನನ್ನ ಪ್ರೀತಿಯ ಅಮ್ಮಾ

- ಮಕ್ಕಳಲ್ಲಿ ಒಂದು ಮಗು ಒಂದು ಬದಿಯಲ್ಲಿಯೂ ಉಳಿದ ಮಕ್ಕಳು ಎದುರು ಬದಿಯಲ್ಲಿಯೂ ನಿಲ್ಲುವರು. ಒಂದು ಮಗು ಅಮ್ಮನಾಗಿಯೂ ಉಳಿದ ಮಕ್ಕಳು ಆ ತಾಯಿಯ ಮಕ್ಕಳಾಗಿಯೂ ಹಾಡಿ ಅಭಿನಯಿಸುವರು. ಅಮ್ಮ ಪ್ರತಿಯೊಂದು ಕೆಲಸಗಳನ್ನು ಹಾಡಿಗೆ ಅನುಸಾರವಾಗಿ ತಾಳಬದ್ಧವಾಗಿ ಸಂಜ್ಞೆಯ ಮೂಲಕ ಮಾಡುವಳು. ಎದುರು ಬದಿಯಲ್ಲಿರುವ ಮಕ್ಕಳು ಅದಕ್ಕನುಸಾರವಾಗಿ ಉತ್ತರವನ್ನು ಹಾಡಿಗೆ ಸರಿಹೊಂದುವ ಆಂಗಿಕ ಚಲನೆಯನ್ನು ಉಪಯೋಗಿಸಿ ನೀಡುವರು.

***ಚಟುವಟಿಕೆ–2***

ಇಞಾನೊರು ಮೀನ ಕಂಡೆ ಕುರವಾ
ಇಞಾನೊರು ಮೀನ ಕಂಡೆ
ಏದ್ ಕುಳತ್ತಿಲೇಡಿ ಕುರತ್ತಿ
ಏದ್ ಕುಳತ್ತಿಲೇಡಿ
ದೇಂಡೇ ಕುಳತ್ತಿಳಾನೇ ಕುರವಾ
ದೇಂಡೇ ಕುಳತ್ತಿಳಾನೇ
ವಲಯಿಂಜಕಿಡುಕ್ಕನೇಡಿ ಕುರತ್ತಿ
ವಲಯಿಂಜಕಿಡುಕ್ಕನೇಡಿ
ಯೇನೆಕೊಂಡ್ ವಯ್ಯಾಯೇ ಕುರವಾ
ಯೇನೆಕೊಂಡ್ ವಯ್ಯಾಯೇ
ವಲಯಿಂಜಕಿಡುತ್ತೀಡುನ್ನು ಕುರವನ್
ವಲಯಿಂಜಕಿಡುತ್ತೀಡುನ್ನು

- ಮಕ್ಕಳು ಎರಡು ಗುಂಪುಗಳಾಗಿ ಒಂದು ಗುಂಪು ಕೊರವನಾಗಿಯೂ ಇನ್ನೊಂದು ಗುಂಪು ಕೊರತಿಯಾಗಿಯೂ ಕೆಲಸಗಳನ್ನು ಮಾಡುವ ರೀತಿಯಲ್ಲಿ ಅಭಿನಯಿಸುವರು.

***ಚಟುವಟಿಕೆ–3***

ತಂದಿನ ತಂದಿನ ತಂದಾನೋ ತನ
ತಂದಿನ ತಂದಿನ ತಂದಾನೋ
ತಂದಿನ ತಂದಿನ ತಂದಾನೋ ತನ
ತಂದಿನ ತಂದಿನ ತಂದಾನೋ

- ಬಲಗಾಲನ್ನು ಬಲಬದಿಗೆ ಚಾಚಿ ಎಡಗಾಲನ್ನು ಬಲಗಾಲಿನ ಸಮೀಪದಲ್ಲಿ ಇರಿಸಿರಿ. ಎಡಗಾಲನ್ನು ಎಡಬದಿಯಲ್ಲಿರಿಸಿ ಬಲಗಾಲನ್ನು ಅದಕ್ಕೆ ತಾಗಿಸಿ ಇಡಿರಿ. ಇದನ್ನು ಆವರ್ತಿಸಿರಿ.

ಅಮ್ಮ ವಿದಚ್ಚತುಂ ಚೆಂಜೀರ
ಅಮ್ಮ ನನಚ್ಚತುಂ ಚೆಂಜೀರ
ಅಮ್ಮ ಅರುತ್ತದುಂ ಚೆಂಜೀರ
ಅಮ್ಮ ಮುರಿಚ್ಚದುಂ ಚೆಂಜೀರ
ಅಮ್ಮ ವೆಚ್ಚದುಂ ಚೆಂಜೀರ
ಅಮ್ಮ ಕಳಿಚ್ಚದುಂ ಚೆಂಜೀರ

- ಬಾಯಿತಾಳ ಸೇರಿಸಿ ಅಮ್ಮ ಒತ್ತಿದ್ದು ಕೆಂಪು ಹರಿವೆ ಎಂಬುವುದನ್ನು ಸಂಜ್ಞೆಯ ಮೂಲಕ ತೋರಿಸುವುದು. ಹೀಗೆ ಪ್ರತಿಯೊಂದು ಸಾಲನ್ನು ಅದರ ಅರ್ಥಕ್ಕನುಸರಿಸಿ ಆಂಗಿಕ ಚಲನೆಯ ಮೂಲಕ ಪ್ರದರ್ಶಿಸಿರಿ.

### ಮೌಲ್ಯಮಾಪನ

ಸೂಚಕಗಳ ಆಧಾರದಲ್ಲಿ ಅಧ್ಯಾಪಕರು ಮೌಲ್ಯಮಾಪನ ಮಾಡುವರು. ನೇರ ಮೌಲ್ಯಮಾಪನ.

*ಸೂಚಕಗಳು*

- ವೃತ್ತಿಗೆ ಸಂಬಂಧಿಸಿದ ಚಲನೆಗಳು
- ತಾಳಬದ್ಧತೆ
- ಗುಂಪು ಪ್ರಜ್ಞೆ
- ವೃತ್ತಿಯ ಕುರಿತಾದ ಅರಿವು

### ಮುಂದುವರಿದ ಚಟುವಟಿಕೆಗಳು

ಕೊಯ್ಲಿಗೆ ಸಂಬಂಧಿಸಿದ ಹಾಡುಗಳನ್ನು ಸಂಗ್ರಹಿಸಿ ತಾಳಕ್ಕನುಸಾರವಾಗಿ ಹೆಜ್ಜೆ ಹಾಕುವುದು.

### ಪರಾಮರ್ಶೆ

- ವಿವಿಧ ಪ್ರದೇಶದ ನಾಟಿ ತಿಳುವಳಿಕೆಗಳು, ಆಟಗಳು
- ಜನಪದ ಗೀತೆಗಳು – ವಿಷ್ಣು ನಂಬೂದಿರಿ (ಭಾಷಾ ಇನ್‌ಸ್ಟಿಟ್ಯೂಟ್)
- ಕೇರಳ ಸಾಹಿತ್ಯ ಚರಿತ್ರೆ – ಉಳ್ಳೂರ್
- ಶುದ್ಧ ಮಲಯಾಳ ಶಾಖ – ಜಿ ಶಂಕರಪಿಳ್ಳೆ (ಸಾಹಿತ್ಯ ಚರಿತ್ರೆ ಪ್ರಸ್ತಾನ ಓಳಿಲೂಡೆ)
- ಸಿ.ಡಿ.ಗಳು

## ಯೂನಿಟ್ 3 : ನೃತ್ಯ ಮಾಡೋಣ

ಶಾರೀರಿಕ ವ್ಯಾಯಾಮಗಳು ಮತ್ತು ಸಮರ ಕಲೆಗಳು ನೃತ್ಯದ ಕಚ್ಚಾ ರೂಪಗಳಾಗಿವೆ. ಗರಡಿಗಳಲ್ಲಿ ಹೇರಳವಾಗಿದ್ದ ಕೇರಳದ ಸಮರಕಲಾ ಸಂಸ್ಕೃತಿಕ ಕೆಲವು ಉತ್ತಮ ಘಟಕಗಳೂ ಕಥಕ್ಕಳಿಯಂತಹ ಶಾಸ್ತ್ರೀಯ ಕಲೆಗಳನ್ನು ಆಕರ್ಷಕಗೊಳಿಸಲು ಸಹಾಯಕವಾಗಿವೆ. ಶಾರೀರಿಕ ಚಲನೆಗಳನ್ನು ತಿಳಿದುಕೊಂಡು ಅಭ್ಯಾಸ ಮಾಡುವುದೇ ಈ ಅಧ್ಯಾಯದ ಉದ್ದೇಶ.

### ಕಲಿಕಾ ಸಾಧನೆ

- ನೃತ್ಯದ ಮೂಲಕ ಶಾರೀರಿಕ ದಕ್ಷತೆಯನ್ನು ಗಳಿಸುವುದು.

### ಆಶಯ, ತಿಳುವಳಿಕೆ

- ಶರೀರವನ್ನು ಅನಾಯಾಸವಾಗಿ ಚಲಾಯಿಸುವ ನೈಪುಣ್ಯ.

### ಪ್ರಕ್ರಿಯೆ

- ಸೂಚನೆಗಳಿಗೆ ಅನುಸಾರವಾಗಿ ಅಂಗಾಗಗಳಿಗೆ ಚಲನೆಯನ್ನು ನೀಡುವುದು.
- ಮಾಸ್‌ಡ್ರಿಲ್‌ನಲ್ಲಿ ಭಾಗವಹಿಸುವುದು.

**ಕಲಿಕಾ ಚಟುವಟಿಕೆಗಳು**

- ಮುಷ್ಟಿ ಹಿಡಿದು ಕೈಯ ಮಣಿಕಟ್ಟನ್ನು ಮಾತ್ರ ಗಡಿಯಾರ ತಿರುಗುವ ದಿಶೆಯಲ್ಲಿಯೂ ವಿರುದ್ಧ ದಿಶೆಯಲ್ಲಿಯೂ ತಿರುಗಿಸಿರಿ.
- ಮುಷ್ಟಿ ಹಿಡಿದು ಕೈಗಳನ್ನು ಎರಡು ಬದಿಗಳಿಗೂ ಚಾಚಿರಿ. ಕೈಗಳು ವೃತ್ತಾಕಾರವಾಗಿ ಚಲಾಯಿಸಿರಿ. (ಕೈ ಮಡಚಬಾರದು)
- ಕೈಗಳನ್ನೂ ಎರಡು ಬದಿಗಳಿಗೂ ಚಾಚಿ, ಅಡಿಭಾಗ ಮೇಲೆ ಬರುವಂತೆ ತಿರುಗಿಸಿದ ಬಳಿಕ ಮೊಣಕೈಯನ್ನು ಮಡಚಿ ಬೆರಳಿನ ತುದಿಗಳಿಂದ ಭುಜವನ್ನು ಸ್ಪರ್ಶಿಸಿರಿ. ಇದನ್ನು ಮುಂದುವರಿಸಬೇಕು.
- ಕೈಗಳನ್ನು ಮಡಚಿ ಭುಜದ ಮೇಲೆ ಇರಿಸಿರಿ. ಭುಜದ ಕೀಲನ್ನು ವೃತ್ತಾಕೃತಿಯಲ್ಲಿ ತಿರುಗಿಸಿರಿ.
- ಕೈಗಳನ್ನು ಮಡಚಿ ಹೆಗಲ ಮೇಲಿರಿಸಿರಿ. ಎದುರುಗಡೆಯಿಂದ ವೃತ್ತಾಕಾರವಾಗಿ ತಿರುಗಿಸಿರಿ.
- ಕಾಲಿನ ಪಾದಗಳನ್ನು ಮೇಲೆ ಕೆಳಗೆ ಚಲಾಯಿಸಿರಿ.
- ಬಲಗಾಲನ್ನು ಮುಂದಕ್ಕೆ ಚಾಚಿ ಮೊಣಗಾಲನ್ನು ಮಡಚದೆಯೇ ಕಾಲಿನ ಮಣಿಗಂಟನ್ನು ವೃತ್ತಾಕೃತಿಯಲ್ಲಿ ಗಡಿಯಾರದ ದಿಶೆಯಲ್ಲಿಯೂ ತಿರುಗಿಸಿರಿ.
- ಯಾವುದಾದರೊಂದು ಹಾಡನ್ನು (ಮಗುವಿಗೆ ಪರಿಚಯವಿರುವ) ಆರೋಹಣ ಕ್ರಮದಲ್ಲಿ ಹಾಡುವುದಕ್ಕನುಸಾರವಾಗಿ ವ್ಯಾಯಾಮ ಮಾಡುವರು. ಹೀಗೆ ಮಾಡುವುದರಿಂದ ದಣಿವಿಲ್ಲದೆ ವ್ಯಾಯಾಮ ಮಾಡಲು ಸಾಧ್ಯವಾಗುವುದು.

**ಮೌಲ್ಯಮಾಪನ**

ವ್ಯಾಯಾಮಗಳನ್ನು ಮಾಡುವುದರಲ್ಲಿರುವ ನಿಖರತೆಯನ್ನು ಅಧ್ಯಾಪಕರು ಆಯಾ ಹಂತದಲ್ಲಿ ಮೌಲ್ಯಮಾಪನ ಮಾಡಿ ಅದರ ಅಂಕ ಟೋಟಲ್ ತಯಾರಿಸಿ ಇರಿಸಬೇಕು.

**ರಿಸೋರ್ಸ್**

- ದೈಹಿಕ ಶಿಕ್ಷಕನ ಸಹಾಯ
- ಆಯಾ ಪ್ರದೇಶದಲ್ಲಿ ಲಭ್ಯವಿರುವ ಯೋಗ-ಗರಡಿ ಅಧ್ಯಾಪಕರ ಸಹಾಯ ಯಾವುದಾದರೊಂದು ಹಾಡನ್ನು (ಮಗುವಿಗೆ ಪರಿಚಯವಿರುವುದು) ಆರೋಹಣ ಕ್ರಮದಲ್ಲಿ ಹಾಡುವುದಕ್ಕನುಸರಿಸಿ ವ್ಯಾಯಾಮ ಮಾಡುವುದು. ಹೀಗೆ ಮಾಡುವುದರಿಂದ ವ್ಯಾಯಾಮ ಆಯಾಸರಹಿತವಾಗುವುದು.

## ಯೂನಿಟ್ 4 : ಅನುಕರಣೆ

ಸುತ್ತಮುತ್ತಲನ್ನು ನಿರೀಕ್ಷಣೆ ಮಾಡುವುದು, ನಕಲು ಮಾಡುವುದರಿಂದ ನೃತ್ಯದಂತಹ ಕಲೆಗಳು ವಿಕಾಸ ಹೊಂದಿದುವು. ಶೈಶವ ಪ್ರಾಯದಿಂದಲೇ ಮನೆಯಂಗಳದಲ್ಲಿರುವ ಪ್ರಾಣಿ ಪಕ್ಷಿಗಳನ್ನು ಗಮನಿಸಲು, ಅನುಕರಿಸಲು ಮಕ್ಕಳು ಆಸಕ್ತಿ ತೋರಿಸುವುದಿದೆ. ಈ ಅನುಕರಣೆಯ ಸ್ವಭಾವವನ್ನು

ಉಪಯೋಗಿಸಿ ನೃತ್ಯಕಲಿಕೆಯಲ್ಲಿ ಹೊಸ ಸಾಧ್ಯತೆಗಳನ್ನು ಹುಡುಕುವ ಪ್ರಯತ್ನವನ್ನು ಈ ಪಾಠಭಾಗದಿಂದ ಉದ್ದೇಶಿಸಲಾಗಿದೆ. ಕಾಡು, ಕೆರೆ, ಬಯಲು, ಮುಂತಾದ ಜೀವ ವೈವಿಧ್ಯ ವಲಯಗಳನ್ನು ಸನ್ನಿವೇಶಗಳಾಗಿರಿಸಿ ಸೂಕ್ತವಾದ ಅಭಿನಯ ಚಲನೆಗಳನ್ನು ಪರಿಶೀಲಿಸುವುದೇ ಈ ಯಾನಿಟ್‌ನ ಉದ್ದೇಶ.

### ಕಲಿಕಾ ಸಾಧನೆ

- ಅಂಗಾಗಗಳ ಚಲನೆಯ ಮೂಲಕ ಜೀವಜಾಲಗಳನ್ನು ತಾಳಾತ್ಮಕವಾಗಿ ಅನುಕರಿಸುವುದು.

### ಆಶಯ ತಿಳುವಳಿಕೆ

- ಸೂಕ್ಷ್ಮ ನಿರೀಕ್ಷಣಾ ಕೌಶಲ್ಯ
- ಅನುಕರಣೆಯ ಕೌಶಲ್ಯ

### ಪ್ರಕ್ರಿಯೆ

- ಜೀವಜಾಲಗಳನ್ನು ನಿರೀಕ್ಷಣೆ ಮಾಡುವುದು, ಪ್ರಸ್ತುತಪಡಿಸುವುದು.
- ಪ್ರಸ್ತುತಪಡಿಸಲು ಹೆಚ್ಚು ಸಾಧ್ಯವಿರುವವುಗಳ ಪಟ್ಟಿ ತಯಾರಿಸುವುದು.

### ಕಲಿಕಾ ಚಟುವಟಿಕೆಗಳು

- ಪ್ರಾಣಿಗಳನ್ನು ಬೇಟೆಯಾಡುವ ಸನ್ನಿವೇಶವನ್ನು ಅನುಕರಿಸಿ ತೋರಿಸುವುದು.
  ಉದಾ : ಹುಲಿ, ಸಿಂಹ, ಮುಂತಾದವುಗಳು ಜಿಂಕೆಯನ್ನು ಬೇಟೆಯಾಡುವ ಸನ್ನಿವೇಶ.
- ನಾಯಿ ಬೆಕ್ಕುಗಳ ಜಗಳ (ಯಾವ ಜೀವಿಗಳಾದರೂ ಆಗಬಹುದು)
- ಮಕ್ಕಳು ದೈನಂದಿನ ಜೀವನದಲ್ಲಿ ಕಾಣುವ ಪ್ರಾಣಿಗಳು ಅಥವಾ ಮನುಷ್ಯರು ಮಾಡುವ ಚಟುವಟಿಕೆಗಳನ್ನು ಅನುಕರಿಸುವುದು.

### ಮೌಲ್ಯಮಾಪನ

ಚಲನೆಯ ಅನುಕರಣೆಯನ್ನು ಅಧ್ಯಾಪಕರು ಮೌಲ್ಯಮಾಪನ ಮಾಡುವರು.

## ಯೂನಿಟ್ 5 : ಆಂಗಿಕ ರೀತಿಗಳು

ಆಂಗಿಕ ಚಲನೆ ನೃತ್ಯದ ಒಂದು ಮುಖ್ಯ ಘಟಕವಾಗಿದೆ. ಶಾಸ್ತ್ರೀಯ ನೃತ್ಯಕಲೆಯ ಮುದ್ರೆಗಳು ರೂಪುಗೊಂಡುದು ಆದಿ ಮಾನವನ ಆಶಯವಿನಿಮಯಕ್ಕಿರುವ ಸಂಜ್ಞೆಯಿಂದಾಗಿದೆ. ಬಾಯ್ಮಾತಿನ ಮೂಲಕ ವಿನಿಮಯ ಮಾಡುವ ಆಶಯಗಳು ಮತ್ತು ಭಾವನೆಗಳನ್ನು ಶಾರೀರಿಕ ಚಲನೆಗಳ ಮೂಲಕ, ಆಂಗಿಕ ಭಾಷೆಯ ಮೂಲಕ ಪ್ರಸ್ತುತಪಡಿಸುವ ತರಬೇತಿ ನೃತ್ಯಕಲಿಕೆಗೆ ಅನಿವಾರ್ಯವಾಗಿದೆ. ಅದಕ್ಕಿರುವ ಪ್ರಯತ್ನವನ್ನು ಈ ಯೂನಿಟ್‌ನಲ್ಲಿ ಮಾಡಲಾಗಿದೆ.

## ಕಲಿಕಾ ಸಾಧನೆ

- ಆಶಯ ವಿನಿಮಯಕ್ಕಾಗಿ ಆಂಗಿಕ ರೀತಿಗಳನ್ನು ಸರಳವಾಗಿ ಉಪಯೋಗಿಸುವುದು.

## ಆಶಯ, ತಿಳುವಳಿಕೆ

- ಮನದ ವಿಚಾರಗಳನ್ನು ತಿಳಿಯಪಡಿಸಲು ಮಾತಿನಂತೆಯೇ ಆಂಗಿಕ ಚಲನೆಗಳೂ ಸಹಾಯಕವಾಗುತ್ತವೆ.

## ಪ್ರಕ್ರಿಯೆ

- ಒಂದು ಅಥವಾ ಎರಡು ಮಾತುಗಳಲ್ಲಿ ಸಂಕ್ಷಿಪ್ತಗೊಳಿಸಬಹುದಾದ ಆಶಯಗಳನ್ನು ತಲೆ, ಕೈ, ಕಣ್ಣು, ಮುಖ ಎಂಬಿವುಗಳ ಸಹಾಯದಿಂದ ಪ್ರಸ್ತಾಪಿಸಬಹುದು.
- ಮುಖದಲ್ಲಿ ಪ್ರಕಟವಾಗುವ ಕೆಲವು ಭಾವನೆಗಳು ಮಾತಿಗಿಂತ ಆಶಯ ವಿನಿಮಯಕ್ಕೆ ಸೂಕ್ತವೆಂದು ತೋರಿಸುವುದು. ಇದು ಮಕ್ಕಳು ಮತ್ತು ಅದ್ಯಾಪಕರು ಜತೆಯಾಗಿ ಮಾಡಬಹುದಾದ ಚಟುವಟಿಕೆಯಾಗಿದೆ.

## ಕಲಿಕಾ ಚಟುವಟಿಕೆಗಳು

- ಗುಂಪುಗಳಲ್ಲಿ ಒಂದು ಮಗುವಿನ ಕೈಯಲ್ಲಿ ಕೊಡಲಾದ ಸ್ಲಿಪ್ಪಿನಲ್ಲಿ ಕೊಟ್ಟಿರುವ ವಿಚಾರವನ್ನು (ವಸ್ತುಗಳ ಹೆಸರು) ಸೇರಿಸಿ ಅದನ್ನು ಆಂಗಿಕ ಭಾಷೆಯ ಮೂಲಕ ತನ್ನ ತಂಡದ ಸದಸ್ಯರಿಗೆ ತಿಳಿಯಪಡಿಸಲು ಸಂಜ್ಞೆಗಳನ್ನು ತೋರಿಸಬಹುದು. ಅರ್ಥವಾಗದವರಿಗೆ ಸೂಚನೆಗಳನ್ನು ನೀಡಿ ಪ್ರಶ್ನೆಗಳನ್ನು ಕೇಳಬಹುದು. ಮಗು ಸಂಜ್ಞೆಯ ಮೂಲಕ ಪ್ರಶ್ನೆಗಳಿಗೆ ಉತ್ತರಿಸುವರು. ಕೊನೆಗೆ ತಂಡದ ಸದಸ್ಯರಿಗೆ ನಿರ್ದಿಷ್ಟ ಸಮಯದೊಳಗೆ ಉತ್ತರವನ್ನು ಕಂಡುಹಿಡಿಯಲು ಸಾಧ್ಯವಾದರೆ ಅವರಿಗೆ ನಿಗದಿತ ಪೋಯಿಂಟ್ ಲಭಿಸುವುದು. ಹೇಳಲು ಸಾಧ್ಯವಾಗದಿದ್ದರೆ ಇದೇ ಚಟುವಟಿಕೆಗಳನ್ನು ವೀಕ್ಷಿಸುತ್ತಿದ್ದ ಇನ್ನೊಂದು ಗುಂಪಿಗೆ ಉತ್ತರಗಳನ್ನು ಹೇಳಲು ಸಾಧ್ಯವಾದರೆ ಅವರಿಗೆ ಅರ್ಧ ಪೋಯಿಂಟ್ ಲಭಿಸುವುದು. ಹೀಗೆ ಆಟವನ್ನು ಮುಂದುವರಿಸಬಹುದು.

## ಮುಂದುವರಿದ ಚಟುವಟಿಕೆ

- ಹೆಚ್ಚುವರಿ ಚಟುವಟಿಕೆಗಳನ್ನು ಕಂಡುಹಿಡಿದು ಸಂಜ್ಞೆಯ ಮೂಲಕ ಪ್ರಸ್ತುತಪಡಿಸುವುದು.

## ಮೌಲ್ಯಮಾಪನ

- ಪ್ರತಿಯೊಂದು ಆಟಗಳನ್ನು ಆಡುವಾಗ ಅಧ್ಯಾಪಕರು ಯಥಾಸಮಯದಲ್ಲಿ ದಾಖಲಿಸಬೇಕು.
- ಆಶಯಗಳಿಗೆ ತಲುಪಲಿಕ್ಕಿರುವ ಒಳ್ಳೆಯ ಪ್ರಶ್ನೆಗಳನ್ನು ಕೇಳುವವರನ್ನೂ ಮೌಲ್ಯಮಾಪನ ಮಾಡಲು ಪರಿಗಣಿಸಬೇಕು.

***ಸೂಚಕಗಳು***

- ಸಂಜ್ಞೆಯ ಆಶಯ ಸ್ಪಷ್ಟತೆ
- ಸಮಗ್ರತೆ (ಶರೀರದ ವಿವಿಧ ಆಶಯಗಳನ್ನು ಹೊಂದಾಣಿಸಿದ ಅಭಿವ್ಯಕ್ತಿಯನ್ನು ಪರಿಗಣಿಸಬೇಕು)

# ಮೂರನೇ ತರಗತಿ

## ಯೂನಿಟ್ 1 : ಪ್ರಾದೇಶಿಕ ನೃತ್ಯ

ನೃತ್ಯದ ಮಾಧ್ಯಮವು ಶರೀರವಾಗಿದೆ. ಶಾರೀರಿಕ ಚಲನೆಗಳು ಅದರ ಭಾಷೆಯೂ ಆಗಿದೆ. ಅಂಗ, ಪ್ರತ್ಯಂಗ, ಉಪಾಂಗ ಎಂಬೀ ಎಲ್ಲ ಘಟಕಗಳಲ್ಲಿಯೂ ಶಾರೀರಿಕ ಚಲನೆಗಳು ಒಳಗೊಂಡಿವೆ. ಸಂತೋಷವಾಗುವಾಗ ನೃತ್ಯ ಮಾಡುವುದಿದ್ದರೆ ನೃತ್ಯದ ಮೂಲಕವೂ ಸಂತಸಪಡಬಹುದು. ಚುಟುಕಾಗಿ ಹೇಳುವುದಾದರೆ ನೃತ್ಯ ಎಂಬ ಆತ್ಮಾವಿಷ್ಕಾರ ಆನಂದ ಹಾಗೂ ಆಸ್ವಾದನೆಗೆ ಕಾರಣವಾಗುವುದು.

ನಾವು ಹೆಚ್ಚು ಭಾವುಕರಾಗುವಾಗ ಶರೀರಭಾಗಗಳನ್ನು ಚಲಾಯಿಸುತ್ತೇವಲ್ಲವೇ? ಅಂಗೋದಾಗಗಳಲ್ಲಿ ಮನಸ್ಸನ್ನು ಕೇಂದ್ರೀಕರಿಸುವಾಗ ಹೊರಹೊಮ್ಮುವ ಚಲನೆಗಳೇ ನೃತ್ಯ ರೂಪದ ಚಲನೆಗಳು. ಈ ರೀತಿ ಭಾವನೆಗಳನ್ನು ಪ್ರಕಟಪಡಿಸುವ ಚಲನೆಗಳನ್ನು ಪ್ರದರ್ಶಿಸುವ ಸಂದರ್ಭಗಳು ನೃತ್ಯ ತರಗತಿಗಳಲ್ಲಿ ಉಂಟಾಗಬೇಕು.

ಈ ಪ್ರಾಯ ಮಕ್ಕಳಿಗೆ ಆಟದ ಪ್ರಾಯವಾಗಿದೆ. ಮಕ್ಕಳಲ್ಲಿ ಅಂತರ್ಗತವಾಗಿರುವ ಮೇಲೆ ಹೇಳಿದ ಚಲನೆಯನ್ನು ಘೋಷಿಸುವುದಕ್ಕಾಗಿ ಆಟಗಳು ಉಪಯೋಗವಾಗುತ್ತವೆ. ಪ್ರಸ್ತುತ ಚಲನೆಯು ಮಗುವಿನ ಆನಂದದಾಯಕ ಅನುಭವವಾಗಿ ಬದಲಾಗುವುದು.

ಸ್ನಾಯುಗಳು, ನರಗಳು ಮತ್ತು ಕೀಲುಗಳೊಂದಿಗೆ ಮನಸ್ಸಿಗೂ ವ್ಯಾಯಾಮ ನೀಡುವ ನೃತ್ಯಾಭ್ಯಾಸವು ಆರೋಗ್ಯಕರವೂ ಉಲ್ಲಾಸದಾಯಕವೂ ಆಗಿದೆ. ಸ್ವತಂತ್ರವಾದ ಚಲನೆಗಳಿಂದ ನಿಯಂತ್ರಿತ ಚಲನೆಗಳಿಗೆ ಮಕ್ಕಳನ್ನು ಮುನ್ನಡೆಸುವ ನೃತ್ಯರೂಪಗಳಿಂದ ಅಮೂರ್ತವಾದ ಅನುಭೂತಿಯ ವಿನಿಮಯದತ್ತ ಮುನ್ನಡೆಸುವ ರೀತಿ ನೃತ್ಯಕಲಿಕೆಯನ್ನು ನಡೆಸಬೇಕು.

### ಕಲಿಕಾ ಸಾಧನೆ

- ಪ್ರಾದೇಶಿಕವಾಗಿ ಪರಿಚಯವಿರುವ ಆಟಗಳು ಮತ್ತು ನೃತ್ಯರೂಪಗಳನ್ನು ನಿರೀಕ್ಷಣೆ ಮಾಡುವುದು ಮತ್ತು ವೈಶಿಷ್ಟ್ಯಗಳನ್ನು ತಿಳಿಯುವುದು.

### ಆಶಯ ತಿಳುವಳಿಕೆ

- ಹೆಜ್ಜೆಗಳು ಮತ್ತು ಚಲನೆಗಳಲ್ಲಿರುವ ವೈವಿಧ್ಯ
- ಪ್ರತಿಯೊಂದು ನೃತ್ಯ ಆಯಾ ಜನರ ಜೀವನಕ್ಕೆ ಸಂಬಂಧಿಸಿದೆ.

**ಪ್ರಕ್ರಿಯೆ**

- ವಿವಿಧ ಪ್ರದೇಶಗಳ ನೃತ್ಯರೂಪಗಳನ್ನು ವೀಕ್ಷಿಸುವುದು, ಅವುಗಳ ಕುರಿತು ಚರ್ಚಿಸುವುದು.

**ವಿಷಯ**

ನಮ್ಮ ಪ್ರಾದೇಶಿಕ ಆಟಗಳಲ್ಲಿ ಹೆಚ್ಚಿನವುಗಳು ಆಯಾ ಪ್ರದೇಶದ ಆಚಾರಾನುಷ್ಠಾನಗಳಿಗೆ ಸಂಬಂಧವಿದೆ. ಈ ನೃತ್ಯರೂಪಗಳನ್ನು ನಾವು ಕಾಣುತ್ತೇವೆಯಾದರೂ ಅವುಗಳ ಕುರಿತು ಚೆನ್ನಾಗಿ ತಿಳಿಯಲು ಪ್ರಯತ್ನಿಸುವುದಿಲ್ಲ. ಅವುಗಳಲ್ಲಿ ಉಪಯೋಗಿಸಲ್ಪಡುವ ಹಾಡುಗಳಲ್ಲಿಯೂ ಪ್ರಾದೇಶಿಕವಾಗಿ ವ್ಯತ್ಯಾಸಗಳಿರಬಹುದು. ಅದನ್ನು ಪರಿಶೀಲಿಸುವುದು ಸುಲಭದ ಕೆಲಸವಲ್ಲದಿದ್ದರೂ ಅವುಗಳನ್ನು ನಿರೀಕ್ಷಣೆ ಮಾಡಿ ವೈಶಿಷ್ಟ್ಯಗಳನ್ನು ತಿಳಿಯಲೂ ಬೇಕು. ಅದಕ್ಕಿರುವ ಒಂದು ಸೋಪಾನವಾಗಿ ಈ ಪಾಠಭಾಗವನ್ನು ಕಾಣಬಹುದು.

**ಕಲಿಕಾ ಚಟುವಟಿಕೆಗಳು**

- ಪ್ರಾದೇಶಿಕ ಆಟಗಳನ್ನು ಪ್ರತ್ಯಕ್ಷವಾಗಿ ಕಾಣಲು ಮಕ್ಕಳಿಗೆ ಸಂದರ್ಭ ಒದಗಿಸುವುದು. ಆಟಗಳನ್ನು ನಿರೀಕ್ಷಣೆ ಮಾಡಿ ವೈಶಿಷ್ಟ್ಯಗಳನ್ನು ಕಂಡುಹಿಡಿಯಲು ಹೇಳುವುದು. ಹೆಜ್ಜೆಗಳಲ್ಲಿರುವ ವೈವಿಧ್ಯವನ್ನು ನಿರೀಕ್ಷಣೆ ಮಾಡುವುದು. ಚರ್ಚಿಸುವುದು.

## ಯೂನಿಟ್ 2 : ಮಾತ್ರೆಗಳು, ಅಕ್ಷರಗಳು

ಮಾತ್ರೆಯು ತಾಳದ ಅತ್ಯಂತ ಚಿಕ್ಕ ಘಟಕವಾಗಿದೆ. ಮಾತ್ರೆಗಳು ಸೇರಿ ಅಕ್ಷರ ಉಂಟಾಗುವುದು. ಅಕ್ಷರಗಳ ಸಂಖ್ಯೆಗನುಸರಿಸಿ ಐದು ಜಾತಿಗಳಾಗಿ ವರ್ಗೀಕರಿಸಲಾಗಿದೆ. ಅವುಗಳನ್ನು ಪಂಚಜಾತಿಗಳು ಎಂದು ನಾಟ್ಯಶಾಸ್ತ್ರದಲ್ಲಿ ಉಲ್ಲೇಖಿಸಲಾಗಿದೆ.

ಅವುಗಳು –

ಚದುರಶ್ರ ಜಾತಿ – (4ಅಕ್ಷರ) ತ ಕ ಧಿ ಮಿ
ತಿಶ್ರ ಜಾತಿ – (3 ಅಕ್ಷರ) ತ ಕಿ ಟ
ಖಂಡ ಜಾತಿ – (5 ಅಕ್ಷರ) ತ ಕ ತಕಿ ಟ
ಮಿಶ್ರ ಜಾತಿ – (7 ಅಕ್ಷರ) ತಕಿಟ ತಕಧಿಮಿ
ಸಂಕೀರ್ಣ ಜಾತಿ – (9 ಅಕ್ಷರ) ತಕಧಿಮಿ ತಕ ತಕಿಟ

ತಾಳವು ಕಾಲ, ಕ್ರಿಯೆ, ಮಾನ ಎಂಬಿವುಗಳನ್ನು ಒಳಗೊಂಡಿದೆ. ಎಂದರೆ ಸಮಯದ ಅವಧಿಯನ್ನು ಸೂಚಿಸುವ ಕ್ರಿಯೆಯೇ ತಾಳ. ಚಪ್ಪಾಳೆ ತಟ್ಟುವುದು ಕೈ ಬೀಸುವುದು, ಬೆರಳಲ್ಲಿ ಎಣಿಕೆ ಮಾಡುವುದು ಮುಂತಾದವುಗಳು ಇದರಲ್ಲಿ ಸೇರಿವೆ.

ಮಕ್ಕಳಲ್ಲಿ ಸುಪ್ತವಾಗಿರುವ ವಿಚಾರಗಳಲ್ಲಿ ತಾಳವೂ ಒಂದಾಗಿದೆ. ಅದು ನೃತ್ಯದ ಅವಿಭಾಜ್ಯ ಘಟಕವೂ ಆಗಿದೆ. ಮಕ್ಕಳಿಗೆ ತಾಳದ ಬಗೆಗಿನ ಅರಿವು ಹಾಗೂ ತಾಳಕ್ರಮಗಳನ್ನು ಅಭ್ಯಾಸಮಾಡಲಿರುವ ಚಟುವಟಿಕೆಗಳನ್ನು ನಾವು ಸಜ್ಜುಗೊಳಿಸಬೇಕು. ಅವರಿಗೆ ತಿಳಿದಿರುವ ತಾಳದ ಪೆಟ್ಟುಗಳ ಕ್ರಮದಲ್ಲಿ ವರ್ಗೀಕರಿಸಬೇಕು. ಅದರ ಮೊದಲ ಹಂತ ಎಂಬ ನಿಟ್ಟಿನಲ್ಲಿ 4 ಪೆಟ್ಟು (ಚದುರಶ್ರ) 3 ಪೆಟ್ಟು (ತಿಶ್ರ) 5 ಪೆಟ್ಟು (ಖಂಡ) ಎಂಬೀ ತಾಳಗಳನ್ನು ತಿಳಿದುಕೊಳ್ಳಲು ಪ್ರಾಪ್ತರಾಗುವಂತೆ ಮಾಡಬೇಕು. ನಾಟ್ಯ ಶಾಸ್ತ್ರದ ಮೂಲತಾಳಗಳ

ಮುಡಿಗಟ್ಟುಗಳಿಗೆ (ತಕಧಿಮಿ ತಕಿಟ ತಕ ತಕಿಟ) ಅನುಸಾರವಾಗಿ ಹೆಜ್ಜೆ ಹಾಕಲು ಅಭ್ಯಾಸ ಮಾಡುವುದು ಈ ಚಟುವಟಿಕೆಯ ಉದ್ದೇಶವಾಗಿದೆ.

## ಕಲಿಕಾ ಸಾಧನೆ

- 4, 3, 4 ಅಕ್ಷರಗಳು (ಮಾತ್ರೆಗಳು) ಇರುವ ತಾಳಕ್ರಮಗಳನ್ನು ಅಭ್ಯಸಿಸುವುದು.
- 7, 9 ಅಕ್ಷರಗಳಿರುವ (ಮಾತ್ರೆಗಳು) ಇರುವ ತಾಳಕ್ರಮಗಳನ್ನು ಅಭ್ಯಸಿಸುವುದು.

## ಆಶಯ ತಿಳುವಳಿಕೆ

- ಚದುರಶ್ರಿ ಜಾತಿ, ತ್ರಿಶ್ರ ಜಾತಿ, ಖಂಡ ಜಾತಿ ಎಂಬೀ ಹೆಜ್ಜೆಗಳನ್ನು ಅಭ್ಯಾಸ ಮಾಡುವುದು
- ಹೆಜ್ಜೆ ಇರಿಸುವ ನೈಪುಣ್ಯ.

## ಪ್ರಕ್ರಿಯೆ

- 1, 2, 3, 4 ಎಂದು ಎಣಿಸಬಹುದಾದ ತಾಳ – ಚದುರಶ್ರ–ತ–ಕ–ಧಿ–ಮಿ
- 'ಹಲಸು ತುಂಡ ಕಡಿದುತಿಂದು' ಎಂದು ನಿರಂತರವಾಗಿ ಹೇಳುತ್ತಾ ತಾಳ ಹಾಕಿದ ಬಳಿಕ ಸೊಲ್ಲು ಕಟ್ಟನೊಂದಿಗೆ ಪಾದಗಳಿಂದ ನೆಲಕ್ಕೆ ಅದನ್ನು ಮನಸ್ಸಿನಲ್ಲಿ ಗಟ್ಟಿಗೊಳಿಸಬೇಕು.
- 1, 2, 3 ಎಂದು ಎಣಿಸಬಹುದಾದ ತಾಳ – ತಿಶ್ರ– ತ–ಕ್ಕಿ–ಟ್ಟ
- 'ತತ್ತಮಪೆಣ್ಣಿಂಡೆ ಚುಂಡತ್ತು ಚೆಂಜಾಯಂ' ಎಂದು ಹೇಳುತ್ತಾ ಚಪ್ಪಾಳೆ ತಟ್ಟಿ ತಾಳವನ್ನು ದೃಢಪಡಿಸುವುದು.
- 1, 2, 3, 4, 5, ಎಂದು ಪರಿಗಣಿಸಬಹುದಾದ ತಾಳ–ಖಂಡ– ತ–ಕ್ಕ–ತ–ಕ್ಕಿ–ಟ್ಟ
- 'ಪುಲಿಮಡಯಿಲೊರುಮುಯಲಿನುಯಿರೆತ್ರಕಾಲಂ' ಎಂದು ಹೇಳುತ್ತಾ ಚಪ್ಪಾಳೆ ತಟ್ಟಿ
- ತಾಳವನ್ನು ಪಾದಗಳಿಂದ ತಟ್ಟುವ ಕ್ರಿಯೆಯನ್ನು ಮಾಡಿರಿ.
- ಅವುಗಳನ್ನು ಖಚಿತಪಡಿಸಲು ಹೆಚ್ಚುವರಿ ಚಟುವಟಿಕೆಗಳನ್ನು ರೂಪೀಕರಿಸಬಹುದು.

## ಕಲಿಕಾ ಚಟುವಟಿಕೆಗಳು

- ತಕ್ಕಿಟ್ಟ (3 ಪೆಟ್ಟುಗಳು, 3ಅಕ್ಷರ) ತಿಶ್ರ
- ಕಾಲನ್ನು ಅರ್ಧ ಮಂಡಲದಲ್ಲಿ ಇರಿಸಿರಿ. ಬಲಗಾಲಿನ ಪಾದ ಮುಂದೆ ಬರುವಂತೆ ಕಾಲನ್ನು ಇರಿಸಬೇಕು. 'ತ' ಎನ್ನುವಾಗ ಬಲಗಾಲನ್ನು ಎತ್ತಿ ಮೆಟ್ಟಿರಿ. 'ಕಿ' ಎಡಗಾಲಿನ ಬೆರಳುಗಳಿಂದ ಮೆಟ್ಟಿರಿ 'ಟ್ಟ' ಎಡಗಾಲಿನ ಹಿಮ್ಮಡಿಯನ್ನು ಸಾಮಾನ್ಯ ರೀತಿಯಲ್ಲಿ ನೆಲದಲ್ಲಿರಿಸಿರಿ.
- ತಕಧಿಮಿ (4 ಪೆಟ್ಟು /4 ಅಕ್ಷರ) ಚದುರಶ್ರ
- ಅರ್ಧ ಮಂಡಲದಲ್ಲಿ ನಿಲ್ಲಿರಿ. ಕಾಲಿನ ಪಾದ ಮುಂದಕ್ಕೆ ಬರುವ ರೀತಿಯಲ್ಲಿ ಬಲಗಾಲನ್ನು ಇರಿಸಿರಿ. ತ ಬಲಗಾಲನ್ನು ಮೇಲೆತ್ತಿ ನೆಲಕ್ಕೆ ಮೆಟ್ಟಿರಿ. 'ಕ' ಬಲಗಾಲಿನ ಹಿಮ್ಮಡಿಯನ್ನು ಮಾತ್ರ ಮೇಲೆತ್ತಿ ನೆಲಕ್ಕೆ ಮೆಟ್ಟಿರಿ 'ದಿ' ಎಡಗಾಲಿನ ಬೆರಳುಗಳಿಂದ ಮೆಟ್ಟಿರಿ. 'ಮಿ' ಎಡಗಾಲಿನ ಹಿಮ್ಮಡಿಯನ್ನು ಸಾಮಾನ್ಯ ರೀತಿಯಲ್ಲಿ ನೆಲದಲ್ಲಿರಿಸಿರಿ. ಇದನ್ನು ಆವರ್ತಿಸಿರಿ.
- ತಕಟಕಿಟ್ಟ (5 ಅಕ್ಷರ) ತಕತಕಿಟ್ಟ

- ಅರ್ಧಮಂಡಲದಲ್ಲಿ ನಿಲ್ಲಿರಿ. ಬಲಗಾಲಿನ ಪಾದ ಮುಂದಕ್ಕೆ ಬರುವ ರೀತಿಯಲ್ಲಿರಿಸಿ 'ತಕ' ಒಂದು ಸಲ ಮೆಟ್ಟಿರಿ. ತಕಿಟ್ಟ ತಿಶ್ರದಲ್ಲಿರುವಂತೆಯೇ ಮಾಡಿರಿ. ಅದನ್ನು ಆವರ್ತಿಸಿರಿ.
- ಮಕ್ಕಳು ಗುಂಪಾಗಿ ಕುಳಿತು ಹಾಡುವಾಗ ಇನ್ನೊಂದು ಗುಂಪು ಹೆಜ್ಜೆಗಳನ್ನು ಇಡುತ್ತಾರೆ.

### ಮೌಲ್ಯಮಾಪನ

- ಮಕ್ಕಳು ಸ್ವತಃ ಪರಸ್ಪರ ಮೌಲ್ಯನಿರ್ಣಯ ಮಾಡುವುದು
- ಅಧ್ಯಾಪಕರು ಸೂಚಕಗಳನ್ನು ಆಧಾರವಾಗಿರಿಸಿ ಮೌಲ್ಯಮಾಪನ ಮಾಡುವುದು.

***ಸೂಚಕಗಳು***

- ತಾಳದ ಅರಿವು
- ಮಂಡನೆಯ ನಿಖರತೆ
- ಹೆಜ್ಜೆಗಳನ್ನು ಮನದಟ್ಟು ಮಾಡಿರುವನೇ ಎಂದು ತಿಳಿಯಲು ಪ್ರಶ್ನೆಗಳು.

## ಯೂನಿಟ್ 3 : ಸಂಗೀತ ತಾಳ

### ಕಲಿಕಾ ಸಾಧನೆ

- ಸಂಗೀತಕ್ಕೆ ಅನುಸಾರವಾಗಿ ಚಲನೆ, ತಾಳ ಎಂಬಿವುಗಳ ವೇಗವನ್ನು ಕ್ರಮೀಕರಿಸುವ ಸಾಮರ್ಥ್ಯ ಗಳಿಸುವುದು.

### ಕಲಿಕಾ ಚಟುವಟಿಕೆಗಳು

*ಚಟುವಟಿಕೆ–1*

- ಮಕ್ಕಳನ್ನು 4 ಗುಂಪುಗಳಾಗಿ ವಿಂಗಡಿಸುವುದು.

  *ಒಂದನೇ ಗುಂಪು*
  ಝುಂಪಟ ಪಟ ಪಟ ಝುಂಪಟ ಪಟ ಪಟ
  ಡಿಂಡಕ್ಕ ಡಿಂಡಕ್ಕ ಡಿಂಡಕ್ಕ
  (ಚೆಂಡೆ ಬಡಿಯುವ ರೀತಿ)
  *ಎರಡನೇ ಗುಂಪು*
  ಝಿಂ ಝಿಂ ಝುಕ ಝುಕ ಝಿಂ ಝಿಂ ಝುರ್ ಝುರ್
  ಝೀಯಕ ಝೀಯಕ ಝೀಯಝುಂ
  (ಚಕ್ರತಾಳ ತಟ್ಟುವಂತೆ)
  *ಮೂರನೇ ಗುಂಪು*
  ಪೆಪ್ಪರ ಪರಪರ ಪೆಪ್ಪರ ಪರಪರ
  ಪೆಪ್ಪರ ಪೆಪ್ಪರ ಪೆಪ್ಪೇ
  (ಕೊಳಲೂದುವಂತೆ)
  *ನಾಲ್ಕನೇ ಗುಂಪು*
  ಝುಂಪಡ ಝುಂಪಡ ಝಿಂ ಝುಕ ಝಿಂ ಝುಕ
  ಪೆಪ್ಪರ ಪೆಪ್ಪರ ಪೆಪ್ಪೇ

ಒಂದೊಂದೇ ಗುಂಪು ಒಂದರ ಬಳಿಕ ಇನ್ನೊಂದಾಗಿ ದ್ರುತತಾಳದಲ್ಲಿ ಹಾಡುವುದು.

*ಚಟುವಟಿಕೆ–2*

- ಕುಟ್ಟನಾಡನ್ ಪಂಜಯಿಲ್
  ಕೊಚ್ಚುಪೆಣ್ಣೇ ಕುಯಿಲಾಳೆ
  ಈ ಹಾಡನ್ನು ವೇಗ ಹೆಚ್ಚಿಸಿ ಹಾಡಿರಿ.
- ತಾಳಬದ್ಧವಾದ ಚಲನೆಗಳಲ್ಲಿ ನಿರತರಾಗುವುದು.
  ಉದಾ: ರೈಲುಗಾಡಿಯ ಚಲನೆ ಮತ್ತು ಶಬ್ದ
  ಅದನ್ನು ವೇಗ ಹೆಚ್ಚಿಸಿ ಮಾಡುವುದು.
  ದೋಣಿಗೆ ಹುಟ್ಟು ಹಾಕುವ ಸಂಜ್ಞೆ
  ಅದನ್ನು ವೇಗ ಹೆಚ್ಚಿಸಿ ಮಾಡುವುದು

## ಮೌಲ್ಯಮಾಪನ

- ಸ್ವ ಮೌಲ್ಯಮಾಪನ
- ತಾಳಕ್ಕೆ ಅನುಸಾರವಾಗಿ ಚಲಿಸುತ್ತಾನೆಯೇ ಎಂದು ಅಧ್ಯಾಪಕರು ಮಾಡುವ ಮೌಲ್ಯಮಾಪನ.

# ಯೂನಿಟ್ 4 : ದೃಶ್ಯಾವಿಷ್ಕಾರ

## ಕಲಿಕಾ ಸಾಧನೆ

- ಚಿಕ್ಕ ಗೀತೆಗಳಿಗೆ ದೃಶ್ಯಾವಿಷ್ಕಾರ ಸೂಕ್ಷ್ಮ ನಿರೀಕ್ಷಣೆಯ ಅಗತ್ಯವಿದೆ.

## ಆಶಯ, ತಿಳುವಳಿಕೆ

- ದೃಷ್ಯಾವಿಷ್ಕಾರಕ್ಕೆ ಸೂಕ್ಷ್ಮವಾದ ನಿರೀಕ್ಷಣೆ ಅಗತ್ಯವಿದೆ.
- ಯೋಗ್ಯವಾದ ದೃಶ್ಯವನ್ನು ಚರ್ಚೆಯ ಮೂಲಕ ಆರಿಸಲು ಸಾಧ್ಯವಾಗುವುದು.

## ಪ್ರಕ್ರಿಯೆ

- ಆರ್ಜಿಸಿದ ಅನುಭವಗಳಿಂದ ಮನುಷ್ಯರು ಮತ್ತು ಪ್ರಾಣಿಗಳು ಸ್ವಭಾವಗಳ ವೈಶಿಷ್ಟ್ಯಗಳನ್ನು ನೆನಪಿಗೆ ತರುವುದು.
- ಸಂದರ್ಭಕ್ಕೆ ಯೋಗ್ಯವಾದ ಕಥಾಪಾತ್ರಗಳಿಗೆ ಸರಿಹೊಂದುವ ಸ್ವಭಾವ ವೈಶಿಷ್ಟ್ಯಗಳನ್ನು ಚರ್ಚೆಯ ಮೂಲಕ ತೀರ್ಮಾನಿಸುವುದು.
- ಶರೀರ ಮತ್ತು ಶಬ್ದವನ್ನು ಉಪಯೋಗಿಸಿ ಕಥಾಪಾತ್ರವನ್ನು ಆವಿಷ್ಕರಿಸುವುದು.

## ಮೌಲ್ಯಮಾಪನ

- ಪರಸ್ಪರ ಮೌಲ್ಯಮಾಪನ ನಡೆಸುವುದು.
- ಮೌಲ್ಯಮಾಪನ ಮಾಡುವುದು

## ವಿಷಯ

- ಗುಂಪು ಚಟುವಟಿಕೆಗೆ ಒತ್ತು ನೀಡಿ ಎಲ್ಲ ವಿದ್ಯಾರ್ಥಿಗಳ ಸಹಭಾಗಿತ್ವದೊಂದಿಗೆ ಸರಳವಾದ ಹೆಜ್ಜೆಯನ್ನಿರಿಸಿ ಲಘುಗೀತೆಗಳನ್ನು ದೃಶ್ಯಾವಿಷ್ಕಾರ ಮಾಡುವಾಗ ಆಶಯಗಳನ್ನು ಆಳವಾಗಿ ಮನದಟ್ಟು ಮಾಡಲು ಸಹಾಯಕವಾಗುವುದು.
- ಆಶಯ ಪ್ರಚಾರಕ್ಕೆ ಈ ರೀತಿಯ ಚಟುವಟಿಕೆಗಳನ್ನು ಉಪಯೋಗಿಸಬಹುದು.

## ಕಲಿಕಾ ಚಟುವಟಿಕೆ

***ಚಟುವಟಿಕೆ–1***

ಕುನ್ನತ್ತುನಾಟಿಲೆ ಕುಞ್ಞಿಪೆಣ್ಣೆ ನಿಂಡೆ
ಕುಂಞ್ಞಿಕುಳುತ್ತಿಲೆದೆಂದಾನ್
ತಟ್ಟಾರಂ ಕುನ್ನಿಲೆ ತಟ್ಟಾರು ತೀರ್ತೋರು
ಪತ್ತರಮಾಟ್ಟುಳ್ಳ ಪೊನ್ನಾಲ
ಕುನ್ನತ್ತುನಾಟಿಲೆ ಕುಞ್ಞಿಪೆಣ್ಣೆ ನಿಂಡೆ
ಮೂಕತ್ತುಮಿನ್ನುನ್ನದೆಂದಾನ್
ಮೂತುನರಚ್ಚೊರು ಮುತ್ತಶ್ಶಿ ತನ್ನೊರು
ಮುತ್ತುಪದಿಚ್ಚೊರು ಮೂಕುತ್ತಿ
ಕುನ್ನತ್ತುನಾಟಿಲೆ ಕುಞ್ಞಿಪೆಣ್ಣೆ ನಿಂಡೆ
ಕಾಲಿಲ್ ಕಿಲುಙ್ಙುನ್ನದೆಂದಾನ್
ಅಯ್ಯಪ್ಪನ್ ಕಾವಿಲ್ ವಿಳಕ್ಕಿನ್ ಪೋಯಪ್ಪೋ
ಕಾಲಿಲ್ ಕುಡುಂಙಿಯ ಕಾಲ್ ಚಿಲಂಗ
ಕುನ್ನತ್ತುನಾಟಿಲೆ ಕುಞ್ಞಿಪೆಣ್ಣೆ ನಿಂಡೆ
ಉಳ್ಳಿಲ್ ಕೊದಿಯಿಂದಾನ್
ಕಟ್ಟಚ್ಚಿರಕ್ಕಾರನ್ ಕೊಚ್ಚೆಟನ್ ವನ್ನೆನ್ನೆ
ಕೆಟ್ಟುನ್ನ ಪೊನ್ನಾಲ ತಾಲಿಮಾಲ

- ಇದನ್ನು ಪ್ರಶ್ನೋತ್ತರದ ರೀತಿಯಲ್ಲಿ ಅಭಿನಯಿಸಿ ತೋರಿಸುವುದು. ಗುಂಪು ಚಟುವಟಿಕೆ ಒತ್ತು ನೀಡಿ ಎಲ್ಲ ವಿದ್ಯಾರ್ಥಿಗಳ ಸಹಯೋಗದೊಂದಿಗೆ ಸರಳವಾದ ಹೆಜ್ಜೆಯನ್ನಿರಿಸಿ ಲಘು ಗೀತೆಗಳನ್ನು ದೃಶ್ಯಾವಿಷ್ಕಾರಗೊಳಿಸುವಾಗ ಆಶಯಗಳು ಆಳವಾಗಿ ಮನದಟ್ಟಾಗಲು ಸಹಾಯಕವಾಗುವುದು.
- ಆಶಯದ ಪ್ರಚಾರಕ್ಕೆ ಈ ರೀತಿಯ ಚಟುವಟಿಕೆಗಳನ್ನು ಉಪಯೋಗಿಸಬಹುದು.

***ಚಟುವಟಿಕೆ– 2***

ಪಾತುಪದುಙಿ ಪಮ್ಮಿ ನಡಕ್ಕುಂ
ಕುನ್ನಿಕುಳಿಮಡಿಯನ್
ಆಮಚ್ಚೆಟನುಮೋಟಕ್ಕಾರನ್
ಮುಯಲುಂ ಕೂಟುಕಾರ್
ಒರುನಾಳವರ್ ರಂಡುಪೇರುಂ
ಪಂದಯಂ ವೆಚ್ಚು.

ಓಟಪಂದಾಯಂ ವೆಚ್ಚು
ಮಲಯೋರಂ ಕಾಣುವನೊರು
ಮತ್ಸರಂ ವೆಚ್ಚು
ಓಟಮತ್ಸರಂ ವೆಚ್ಚು
ಇೞಯುಂ ಕರಯಾಮಯುಂ
ಪಾಯುನ್ನೊರು ಪೆನ್‌ಮುಯಲುಂ
ಪರಿಪಾಡಿಯಿಲಾರಾದ್ಯಂ
ಸಮ್ಮಾನಂ ನೇಡುಂ?

- ಸಾಲುಗಳನ್ನು ಸಂಯೋಜಿಸಿ ಅಭಿನಯಿಸುವುದು.
- ಲಘುಗೀತೆಗಳಿಗೆ ದೃಶ್ಯಾವಿಷ್ಕಾರ ನೀಡುವುದು.

ಮುಟ್ಟೋೞಂ ಖದರ್‌ವಸ್ತ್ರಮುಡುತ್ತೊರು
ಮುಟ್ಟನ್ ವಡಿಯುಂ ಕುತ್ತಿ
ಮಾರಿಲ್ ಮುಂಡುಂ ಪುದಚ್ಚುವರುನ್ನೊರು
ಮೆಲಿಞ್ಞೊರು ಮುತ್ತಚ್ಚನ್
ಸ್ವಂತಕ್ಕಾರಾಯಿಟ್ಟಾರುಂಡೀ
ಮುತ್ತಚ್ಚನಿವಿಡೆ
ಇಂಡಿಯಕ್ಕಾರೆಲ್ಲಾರುಂ ಬಾಪುವಿ–
ನಡುತ್ತ ಬಂಧುಕ್ಕಳ್
ಕಪ್ಪಲಿಲೇರಿಯಣಞ್ಞ ವಿದೇಶ–
ಕುತ್ತಗ ಭೂದತ್ತೆ
ಉಪ್ಪುಕುರುಕ್ಕಿ ವಿರಚ್ಚಲ್ಲೋ
ನಮ್ಮುಡೆ ಮುತ್ತಚ್ಚನ್
ಚಂಪಾರನಿಲ್ ವನ್ನಜುತುಡಂಗಿಯ
ಸತ್ಯಾಗ್ರಹಮಿಪ್ಪೋೞ್
ಎಂಬಾಡುಂ ಸಮರಾಯುಧಮಾಯಿ
ಇಜಳ್‌ಕ್ಕಭಿಮಾನಂ
ಅರುಪ್ಪತ್ತೇೞುತಿಕಞೊರು ನಾಡಿನ್
ಸ್ವಾತಂತ್ರ್ಯಂ ಕಂಡ್
ಅಲಿವಲ್ ಚಿರಿಚ್ಚು ನಿಲ್ಪು ಚುವರಿಲ್
ಗಾಂಧೀಜಿ ಮುತ್ತಚ್ಚನ್

- ಈ ಕಥಾ ಗೀತೆಯನ್ನು ಅಭಿನಯಿಸಿ ಹಾಡಿರಿ.

### ಮೌಲ್ಯಮಾಪನ

- ಪರಸ್ಪರ ಮೌಲ್ಯಮಾಪನ ಮಾಡುವುದು
- ಸ್ವ ಮೌಲ್ಯಮಾಪನ ಮಾಡುವುದು.

## ಯೂನಿಟ್ 5 : ಅನುಕರಿಸುವ

### ಕಲಿಕಾ ಸಾಧನೆ

ಪ್ರಕೃತಿಯ ವಿವಿಧ ಶಬ್ದಗಳು, ಚಲನೆಗಳು ಎಂಬಿವುಗಳನ್ನು ನಿರೀಕ್ಷಣೆ ಮಾಡಿ ಅನುಕರಿಸುವುದರೊಂದಿಗೆ ಅವುಗಳನ್ನು ಗುಂಪಿನಲ್ಲಿ ಹಂಚಿಕೊಳ್ಳುವುದು ಹಾಗೂ ಒಂಟಿಯಾಗಿ ಮತ್ತು ಗುಂಪಾಗಿ ಪ್ರಸ್ತುತಪಡಿಸುವುದು.

### ಆಶಯಗಳು

- ಪ್ರಕೃತಿಯಲ್ಲಿ ವಿವಿಧ ರೀತಿಯ ಶಬ್ದಗಳೂ ಚಲನೆಗಳೂ ಇವೆ.
- ತನ್ನ ಅನುಭವಗಳನ್ನು ಗುಂಪಿನಲ್ಲಿ ಹಂಚಿಕೊಳ್ಳುವುದು. ಗುಂಪಿನವರ ಆವಿಷ್ಕಾರಗಳಿಗೆ ಸಹಾಯಕವಾಗುವುದಲ್ಲದೆ ತನ್ನ ಅನುಭವಗಳು ಪರಿಶೋಧಿಸಲ್ಪಡುತ್ತವೆ ಮತ್ತು ಪೋಷಿಸಲ್ಪಡುತ್ತವೆ.

### ಪ್ರಕ್ರಿಯೆ

- ಪ್ರಕೃತಿಯ ವಿವಿಧ ರೀತಿಯ ಶಬ್ದಗಳನ್ನೂ ಚಲನೆಗಳನ್ನೂ ನಿರೀಕ್ಷಣೆ ಮಾಡುವುದು.
- ಗುಂಪಿನಲ್ಲಿ ಚರ್ಚಿಸುವುದು, ಪರಸ್ಪರ ಮೌಲ್ಯಮಾಪನ ಮಾಡುವುದು.
- ಅನುಭವಗಳು ಮತ್ತು ಚರ್ಚೆಯ ಫಲಿತಾಂಶಗಳನ್ನು ಗುಂಪು ಮಂಡನೆಯನ್ನು ಉಪಯೋಗಿಸುವುದು.
- ವಿಶ್ಲೇಷಿಸುವುದು.

### ಚಟುವಟಿಕೆಗಳು

- ಕಾಗೆ, ಚಿಟ್ಟೆ, ಬೆಕ್ಕು ಮುಂತಾದ ದೈನಂದಿನ ಕಾಣಸಿಗುವ ಜೀವಿಗಳ ಚಲನೆಗಳನ್ನು ಅನುಕರಿಸುವುದು. ಪ್ರತಿಯೊಂದು ಮಗುವಿನ ಅನುಕರಣೆಯಲ್ಲಿರುವ ಕೊರತೆಯನ್ನು ಪರಿಹರಿಸಿ ಮುಂದಿನ ಮಗು ಪ್ರಸ್ತುತಪಡಿಸುವುದು.

### ಮೌಲ್ಯಮಾಪನ

- ಪರಸ್ಪರ ಮೌಲ್ಯಮಾಪನ ನಡೆಸುವುದು
- ಸ್ವತಃ ಮೌಲ್ಯಮಾಪನ ನಡೆಸುವುದು.

# ನಾಲ್ಕನೇ ತರಗತಿ

## ಯೂನಿಟ್ 1 : ಪ್ರಾದೇಶಿಕ ನೃತ್ಯ ರೂಪಗಳು

ಸ್ವತಃ ಸಿದ್ಧವಾದ ಶಾರೀರಿಕ ಚಲನೆಗಳನ್ನು ತಾಳಬದ್ಧವಾಗಿ ಅಭ್ಯಸಿಸಿ ನೃತ್ಯದ ರೂಪದಲ್ಲಿ ಕರಗತಮಾಡಿಕೊಂಡು ಮಕ್ಕಳು ಕೇರಳದಲ್ಲಿ ಪ್ರಚಲಿತವಿರುವ ವಿವಿಧ ನೃತ್ಯರೂಪಗಳ ಕುರಿತಾಗಿಯೂ ಅವು ಜೀವನದೊಂದಿಗೆ ಹೇಗೆ ಸಂಬಂಧವನ್ನು ಹೊಂದಿವೆ ಎಂಬುವುದರ ಕುರಿತಾಗಿಯೂ ತಿಳಿದುಕೊಳ್ಳಬೇಕು ವಿವಿಧ ನೃತ್ಯ ರೂಪಗಳನ್ನು ಅರಿತುಕೊಳ್ಳುವ ಮಗು ಎಲ್ಲ ನೃತ್ಯ ರೂಪಗಳೂ ಮೂಲಭೂತವಾಗಿ ನಮ್ಮ ಸಂಸ್ಕೃತಿಗೆ ಸಂಬಂಧಿಸಿವೆ ಎಂದು ತಿಳಿಯಬೇಕು. ಒಂದು ನೃತ್ಯರೂಪದ ಕುರಿತು ತಿಳಿಯುವಾಗ ಅಲ್ಲಿನ ಜನರ ಸಂಸ್ಕೃತಿ, ಜೀವನಶೈಲಿ, ಕೆಲಸ ಎಂಬಿವುಗಳ ಕುರಿತಾದ ಸಣ್ಣ ಮಟ್ಟಿನ ತಿಳುವಳಿಕೆ ನಮಗೆ ಲಭಿಸುವುದು.

ಯಾವುದೇ ದೇಶದ ನೃತ್ಯರೂಪಗಳಾದರೂ ಅವುಗಳ ತಾಳಗಳಲ್ಲಿ ಅನೇಕ ಸಾಮ್ಯಗಳನ್ನು ಕಾಣಬಹುದು. ಸಂಗೀತದಲ್ಲಿಯೂ ಇದೇ ಸಾಮ್ಯವನ್ನು ನಾವು ಕಾಣಬಹುದು. ಆದರೆ ವೇಷಭೂಷಣ ಬಹಳಷ್ಟು ವೈವಿಧ್ಯ ಕಂಡುಬರುವುದು ಈ ವೈವಿಧ್ಯವೇ ನಮ್ಮ ಸಂಸ್ಕೃತಿಯ ಅತ್ಯಂತ ದೊಡ್ಡ ಪ್ರತ್ಯೇಕತೆ ಎಂದು ತಿಳಿದುಕೊಳ್ಳಬೇಕು. ಶಾರೀರಿಕ ಚಲನೆಗಳು ಭಾವನೆಗಳನ್ನು ಪ್ರಕಟಪಡಿಸುತ್ತವೆ. ನೃತ್ಯವು ಜೀವನದ ತಾಳವನ್ನು ಕಂಡುಹಿಡಿಯಲು ಮಕ್ಕಳಿಗೆ ಸಹಾಯಕವಾಗುವುದು. ಆರೋಗ್ಯವಂತ ಶರೀರದೊಂದಿಗೆ ಮತ್ತು ಏಕಾಗ್ರತೆಯಿಂದ ಕಲಿಕಾ ವಿಷಯವನ್ನು ಸಮೀಪಿಸಲು ಅವರಿಗೆ ಸಾಧ್ಯವಾಗಬೇಕು. ನೃತ್ಯ ಮತ್ತು ಅದರ ಘಟಕಗಳನ್ನು ಸಂಸ್ಕೃತಿಯ ಭಾಗವೆಂಬ ನೆಲೆಯಲ್ಲಿ ಅವುಗಳ ಕುರಿತು ಹೆಚ್ಚು ತಿಳಿದುಕೊಳ್ಳಲು ಈ ಯೂನಿಟ್ ಸಹಾಯಕವಾಗುವುದು.

### ಕಲಿಕಾ ಸಾಧನೆ

- ಕೇರಳದ ವಿವಿಧ ಭಾಗಗಳಲ್ಲಿ ಪ್ರಚಾರದಲ್ಲಿರುವ ನೃತ್ಯರೂಪಗಳನ್ನು ಕಂಡುಹಿಡಿಯುವುದು.

### ಆಶಯ, ತಿಳುವಳಿಕೆ

- ಚಲನೆಗಳ ವೈವಿಧ್ಯ
- ನೃತ್ಯರೂಪಗಳಲ್ಲಿ ಹೆಚ್ಚಿನವುಗಳು ಜೀವನ ಶೈಲಿಯೊಂದಿಗೆ ಸಂಬಂಧವನ್ನು ಹೊಂದಿವೆ.

### ವಿಷಯ

ಪ್ರಾದೇಶಿಕವಾದ ಆಟಗಳಲ್ಲಿ ಆಯಾ ಪ್ರದೇಶದ ವಿವಿಧ ವಿಭಾಗಕ್ಕೆ ಸೇರಿದ ಆಚಾರ ಅನುಷ್ಠಾನಗಳು ಜೀವನಶೈಲಿಗಳೂ ಅಡಕವಾಗಿವೆ. ಆಯಾ ದೇಶಗಳಲ್ಲಿ ಬದಲಾಗುತ್ತಿರುವ

ಕ್ರಮಗಳೂ ಹೆಜ್ಜೆಗಳೂ ಈ ನೃತ್ಯಗಳಲ್ಲಿ ಪ್ರತಿಫಲಿಸ್ಪಡುತ್ತವೆ. ಆಚಾರಗಳು ಮತ್ತು ನಂಬಿಕೆಗಳು ಹೊಸೆದುಕೊಂಡ ಅವುಗಳು ನಮ್ಮ ಕಲಾಪರಂಪರೆಯ ತಾಯಿ ಬೇರುಗಳಾಗಿವೆ. ಅವುಗಳ ವೇಗ, ತಾಳ, ಹೆಜ್ಜೆಗಳ ವೈವಿಧ್ಯ ವೇಷಭೂಷಣ ಎಂಬಿವುಗಳು ಪ್ರಾದೇಶಿಕವಾಗಿ ವಿಭಿನ್ನವಾಗಿರುತ್ತವೆ. ಶಾಸ್ತ್ರೀಯ ನೃತ್ಯಗಳಂತೆಯೇ ಇವು ಸಹೃದಯರಿಗೆ ಆನಂದವನ್ನುಂಟುಮಾಡುತ್ತವೆ ಅವುಗಳ ಸತ್ವ ನಷ್ಟವಾಗದಂತೆ ತಲೆಮಾರುಗಳಿಗೆ ವರ್ಗಾಯಿಸಲು ಅವುಗಳ ಕುರಿತಾದ ಕಲಿಕೆಯ ಅಗತ್ಯವಿದೆ.

## ಕಲಿಕೆಯ ಚಟುವಟಿಕೆಗಳು

- ಕೇರಳದ ವಿವಿಧ ಪ್ರದೇಶಗಳ ನೃತ್ಯರೂಪಗಳನ್ನು ನಿರೀಕ್ಷಣೆ ಮಾಡುವುದು (ಸಿ.ಡಿಯ ಸಹಾಯದಿಂದ, ಪ್ರತ್ಯಕ್ಷವಾಗಿ)
- ಪ್ರತಿಯೊಂದು ನೃತ್ಯ ಯಾವ ಜನವಿಭಾಗಕ್ಕೆ ಸಂಬಂಧವಿದೆ ಅವರ ವಸ್ತ್ರಧಾರಣೆ, ಆಹಾರ ಕ್ರಮ, ಕೆಲಸ ಎಂಬಿವುಗಳ ನಡುವೆ ಸಂಬಂಧವಿದೆಯೇ ಎಂದು ಕಂಡುಹಿಡಿಯುವುದು.
- ಅವರವರ ಪ್ರದೇಶಗಳಲ್ಲಿ ಅಸ್ತಿತ್ವದಲ್ಲಿರುವ ನೃತ್ಯ ಸಂಪ್ರದಾಯಗಳ ಕುರಿತು ಟಿಪ್ಪಣಿ ತಯಾರಿಸುವುದು. ಚಿತ್ರಗಳನ್ನು ಸಂಗ್ರಹಿಸುವುದು, ತರಗತಿಯಲ್ಲಿ ಚರ್ಚಿಸುವುದು.
- ಕೊಯ್ಲು ನೃತ್ಯದ ಸಿ.ಡಿಯನ್ನು ತೋರಿಸುವುದು. (ಪ್ರಾದೇಶಿಕ ಆಟಗಳಾದ ಕೋಲಾಟ, ಸುಗ್ಗಿ ಕುಣಿತ ಇತ್ಯಾದಿ)
  - ವಸ್ತ್ರಧಾರಣೆಯ ರೀತಿ
  - ಸ್ತ್ರೀ ಪುರುಷರಿಬ್ಬರೂ ಮಾಡುತ್ತಿರುವ ಕೆಲಸ
  - ಆ ಪ್ರದೇಶದ ಭೂ ಪ್ರಕೃತಿ

ಈ ರೀತಿಯ ವಿಚಾರಗಳನ್ನು ನೃತ್ಯದ ಆಧಾರದಲ್ಲಿ ಚರ್ಚಿಸುವುದು.

## ಮೌಲ್ಯಮಾಪನ

- ಇದಕ್ಕೆ ಸಂಬಂಧಿಸಿದ ಸತ್ಯಾಂಶಗಳನ್ನು ಕಿರುಪ್ರಶ್ನೆಗಳಾಗಿ ಕೇಳುವುದರೊಂದಿಗೆ ಮೌಲ್ಯಮಾಪನವನ್ನು ಮಾಡಬಹುದು.

# ಯೂನಿಟ್ 2 : ಹೆಜ್ಜೆ ಹಾಕುವುದು

ತಕಿಟ್ಟ (3 ಅಕ್ಷರ) ತಕಧಿಮಿ (4 ಅಕ್ಷರ) ತಕತಿಕಿಟ್ಟ (5 ಅಕ್ಷರ) ಎಂಬೀ ನುಡಿಗಟ್ಟುಗಳನ್ನು ಈಗಾಗಲೇ ಕಲಿತಿರುವೆವು. ಅದರ ಮುಂದುವರಿಕೆಯಾಗಿ 7, 9 ತಟ್ಟುಗಳಿರುವ (ಅಕ್ಷರಗಳು) ತಾಳಕ್ರಮವನ್ನು ಅಭ್ಯಾಸಿಸಬೇಕು.

ಈ ಹೆಜ್ಜೆಗಳನ್ನು ಕಲಿಯುವುದಕ್ಕಿರುವುದಕ್ಕಿಂತ ಮೊದಲು ಶಾಸ್ತ್ರೀಯ ನೃತ್ಯಗಳ ಮೂರು ಹಂತಗಳನ್ನು ನಾವು ತಿಳಿದಿರಬೇಕು.

1. ಸಮಂ – ಕಾಲುಗಳನ್ನು ಪರಸ್ಪರ ತಾಗಿಸಿ ನೆಟ್ಟಗೆ ನಿಲ್ಲುವುದು.

2. ಅರೆಮಂಡಲ – ಹಿಮ್ಮಡಿಗಳು ಪರಸ್ಪರ ತಾಗದಂತೆ ಪಾದಗಳನ್ನು ಎರಡು ಬದಿಗಳಿಗೆ ತಿರುಗಿಸಿ ಅರ್ಧ ಕುಳಿತುಕೊಳ್ಳುವುದು.
3. ಪೂರ್ಣ ಮಂಡಲ – ಪಾದದ ಮುಂಭಾಗವನ್ನು (ಬೆರಳುಗಳು) ನೆಲಕ್ಕೆ ಊರಿ ಹಿಮ್ಮಡಿಯಲ್ಲಿ ಪೂರ್ಣ ರೀತಿಯಲ್ಲಿ ಕುಳಿತುಕೊಳ್ಳುವುದು.

ಎಂಬೀ ರೀತಿಗಳಲ್ಲಿ ಹೆಜ್ಜೆಗಳನ್ನಿರಿಸಬೇಕು.

## ಕಲಿಕಾ ಸಾಧನೆ

- 7, 9 ಪೆಟ್ಟುಗಳಿರುವ (ಅಕ್ಷರಗಳು) ತಾಳಕ್ರಮವನ್ನು ಅಭ್ಯಸಿಸುವುದು.

## ಆಶಯ/ತಿಳುವಳಿಕೆ

- ಮಿಶ್ರಜಾತಿ, ಸಂಕೀರ್ಣ ಜಾತಿ ಎಂಬೀ ತಾಳಗಳಲ್ಲಿರುವ ನಡೆಗಳನ್ನು ಅಭ್ಯಸಿಸುವುದು.

## ಕಲಿಕಾ ಚಟುವಟಿಕೆಗಳು

- (ಮಿಶ್ರ) ತಕಿಟ ತಕಧಿಮಿ(7 ಅಕ್ಷರ)
- ಅರೆಮಂಡಲದಲ್ಲಿ ಕುಳಿತುಕೊಳ್ಳಿರಿ. ಬಳಿಕ ಬಲಗಾಲಿನ ಪಾದವನ್ನು ಎದುರು ಬದಿಯಲ್ಲಿ ಇರಿಸಿರಿ. 'ತ' ಬಲಗಾಲಿನಿಂದ ಮೆಟ್ಟಿರಿ. 'ಕಿ' ಎಡಗಾಲಿನ ಬೆರಳುಗಳಿಂದ ಮೆಟ್ಟಿರಿ. 'ಟ' ಹಿಮ್ಮಡಿ ಪೂರ್ವಸ್ಥಿತಿಗೆ ಬರುವಂತೆ ಮೆಟ್ಟಿರಿ. ತಕಧಿಮಿ 'ತ' ಬಲಗಾಲಿನ ಪಾದವನ್ನು ಮುಂದಕ್ಕೆ ಚಾಚಿ ಬಲಗಾಲಿನಿಂದ ಮೆಟ್ಟಿರಿ. 'ಕ' ಬಲಗಾಲಿನ ಹಿಮ್ಮಡಿಯಿಂದ ನೆಲಕ್ಕೆ ತಟ್ಟಿರಿ 'ಧಿ' ಎಡಗಾಲಿನ ಬೆರಳುಗಳಿಂದ ನೆಲಕ್ಕೆ ಮೆಟ್ಟಿರಿ. 'ಮಿ' ಎಡಗಾಲಿನ ಹಿಮ್ಮಡಿಯನ್ನು ಪೂರ್ವಸ್ಥಿತಿಗೆ ತಂದು ಮೆಟ್ಟಿರಿ. 'ಕಿ' ಎಡಗಾಲಿನ ಬೆರಳುಗಳಿಂದ ಮೆಟ್ಟಿ ಟ ಅದೇ ಕಾಲನ್ನು ಸಾಮಾನ್ಯ ನಿಲುವಿಗೆ ತಂದು ಮೆಟ್ಟಿರಿ.

## ಮೌಲ್ಯಮಾಪನ

*ಸೂಚಕಗಳು*

- ತಾಳದ ಅರಿವು
- ಮಂಡನೆಯ ನಿಖರತೆ
- ನಡೆಗಳು ಮನದಟ್ಟಾಗಿವೆಯೇ ಎಂದು ತಿಳಿಯುವ ಪ್ರಶ್ನೆಗಳು

## ಸಂಪನ್ಮೂಲ

- ಅಡವುಗಳ ಸಿ.ಡಿಗಳು, ಸೊಲ್ಲುಕಟ್ಟುಗಳು

# ಯೂನಿಟ್ 3 : ವೇಷಭೂಷಣಗಳು

ವೇಷಭೂಷಣಗಳು ಯಾವುದೇ ನೃತ್ಯರೂಪದ ಸೊಬಗನ್ನು ಹೆಚ್ಚಿಸುವ ಘಟಕಗಳಾಗಿವೆ. ಪ್ರೇಕ್ಷಕರನ್ನು ಆಕರ್ಷಿಸಲು ವೃತ್ತಿಗನುಸಾರವಾದ ವೇಷಭೂಷಣಗಳು ಸೂಕ್ತ.

## ಕಲಿಕಾ ಸಾಧನೆ

- ಪ್ರತಿಯೊಂದು ನೃತ್ಯ ರೂಪಕ್ಕೂ ಅದರದ್ದೇ ಆದ ವೇಷಭೂಷಣಗಳಿವೆ ಎಂಬ ತಿಳುವಳಿಕೆ ಗಳಿಸುವುದು.

## ಆಶಯ, ತಿಳುವಳಿಕೆ

- ನೃತ್ಯವನ್ನು ಪ್ರಸ್ತುತ ಪಡಿಸುವ ಪ್ರದೇಶದ ಜನರ ವೇಷಗಳೊಂದಿಗೆ ನೃತ್ಯಗಳಿಗೆ ಸಂಬಂಧವಿದೆ
- ಕಸುಬಿನೊಂದಿಗೆ ಸಂಬಂಧವಿದೆ.
- ಸಂಸ್ಕೃತಿಯೊಂದಿಗೆ ಸಂಬಂಧವಿದೆ.
- ವೇಷಭೂಷಣಗಳು ಆಶಯ ವಿನಿಮಯಕ್ಕೆ ಹೊಂದಿಕೊಂಡವುಗಳಾಗಿವೆ.

## ವಿಷಯ

ಒಂದು ರಂಗಪ್ರದರ್ಶನಕ್ಕೆ ಪ್ರಧಾನವಾಗಿ ನಾಲ್ಕು ಅಭಿನಯ ರೀತಿಗಳಿವೆಯೆಂದು ನಾಟ್ಯಶಾಸ್ತ್ರ ಪ್ರವೀಣರು ಹೇಳಿರುವರು.

ಅವು ಆಂಗಿಕ, ವಾಚಿಕ, ಆಹಾರ್ಯ, ಸಾತ್ವಿಕ ಎಂಬಿವುಗಳಾಗಿವೆ. ಇವುಗಳಲ್ಲಿ ಎಲ್ಲ ನೃತ್ಯ ರೀತಿಗಳಲ್ಲಿಯೂ ಆಹಾರ್ಯಾಭಿನಯವನ್ನು ಬಹಳ ವಿಶೇಶವಾಗಿ ಉಪಯೋಗಿಸಲಾಗುತ್ತದೆ. ಆಹಾರ್ಯಾಭಿನಯವೆಂದರೆ ವೇಷಭೂಷಣಗಳೊಂದಿಗೆ ಅಭಿನಯಿಸುವ ರೀತಿ.

ವೇಷಗಳು ಪ್ರತಿಯೊಂದು ಕಲಾರೂಪವನ್ನು ಭಿನ್ನವಾಗಿಸುತ್ತವೆ. ದೈನಂದಿನ ಜೀವನದಲ್ಲಿ ವೇಷಗಳು ವಿವಿಧ ಸಂಸ್ಕೃತಿಗಳನ್ನೂ ಆಚಾರ ಅನುಷ್ಠಾನಗಳನ್ನೂ ಸೂಚಿಸುತ್ತವೆ. ಅಂದವಾಗಿ ವಸ್ತ್ರಧರಿಸುವುದು ಇತರ ವ್ಯಕ್ತಿಗಳ ಗಮನ ಸೆಳೆಯಲಿಕ್ಕಿರುವ ಒಂದು ವಿಧಾನವಾಗಿದೆ. ಪ್ರತಿಯೊಂದು ಸಂದರ್ಭದಲ್ಲಿಯೂ ಪ್ರತ್ಯೇಕ ಉಡುಪನ್ನು ಧರಿಸುವುದು ಸರ್ವೇಸಾಮಾನ್ಯವಾಗಿದೆ.

ನೃತ್ಯ ರೂಪಗಳಿಗೆ ಮಾನವ ಸಂಸ್ಕೃತಿಯೊಂದಿಗೆ ನಿಕಟಸಂಬಂಧವಿದೆ ಜಾತಿ, ಧರ್ಮ, ಕುಲ, ಮುಂತಾದ ಅನೇಕ ಪ್ರತ್ಯೇಕತೆಗಳನ್ನು ವೇಷಗಳು ಸೂಚಿಸುತ್ತವೆ. ಆದುದರಿಂದಲೇ ಸಾಂಪ್ರದಾಯಿಕ ನೃತ್ಯಗಳು ವೇಷಗಳಿಂದ ಸಂಪನ್ನವಾಗಿವೆ. ಹಿಂದಿನ ಕಾಲದಲ್ಲಿ ಪ್ರಕೃತ್ತಿದತ್ತವಾದ ವೇಷಗಳನ್ನು ಉಪಯೋಗಿಸುತ್ತಿದ್ದರು. ಬಳಿಕ ಪ್ರತ್ಯೇಕವಾಗಿ ತಯಾರಿಸಿದ ವಸ್ತ್ರಗಳು ಪ್ರತಿಯೊಂದು ನೃತ್ಯರೂಪವನ್ನು ಗಮನಾರ್ಹಗೊಳಿಸಿತು.

ವಿವಿಧ ಪ್ರದೇಶಗಳಲ್ಲಿರುವ ನೃತ್ಯರೂಪಗಳನ್ನು ನೋಡುವ ಅವಕಾಶವನ್ನು ಮಕ್ಕಳಿಗೆ ಒದಗಿಸಿದರೆ ವೇಷಭೂಷಣಗಳ ವೈವಿಧ್ಯವನ್ನು ಅವರಿಗೆ ಸ್ವತಃ ತಿಳಿದುಕೊಳ್ಳಲು ಸಾಧ್ಯವಿದೆ.

## ಕಲಿಕಾ ಚಟುವಟಿಕೆಗಳು

- ವಿವಿಧ ನೃತ್ಯರೂಪಗಳನ್ನು ಐ.ಟಿಯ ಸಹಾಯದಿಂದ ನೋಡಲು ಅವಕಾಶ ಒದಗಿಸುವುದು.

- ಆದಿವಾಸಿ (ಗುಡ್ಡಗಾಡು ಜನರ) ನೃತ್ಯ
- ಕೊಯ್ಲು ನೃತ್ಯ
- ಕೊರತಿಯಾಟ
- ತಿರುವಾದಿರ ಕಳಿ
- ಒಪ್ಪನ
- ಮಾರ್ಗಂಕಳಿ
- ಕೋಲಾಟ
- ಪರಿಚಮುಟ್ಟು ಕಳಿ
- ಪೂರಕ್ಕಳಿ
- ಇತರ ರಾಜ್ಯಗಳ ನೃತ್ಯ ರೂಪಗಳು

- ಪ್ರತಿಯೊಂದು ನೃತ್ಯರೂಪಗಳ ಕುರಿತು ಎರಡು ಲಘು ಟಿಪ್ಪಣಿಗಳನ್ನು ತಯಾರಿಸುವುದು.
- ಅವುಗಳನ್ನು ಗುಂಪಿನಲ್ಲಿ ಚರ್ಚಿಸಿ ಕ್ರೋಢೀಕರಿಸುವುದು, ಪ್ರಸ್ತುತಪಡಿಸುವುದು.
- ಇಲ್ಲಿ ವಿವರಣೆಯ ಸಮಗ್ರತೆಯ ಕುರಿತಾದ ಪ್ರಶ್ನೆಗಳನ್ನು ಬರೆದ ಟಿಪ್ಪಣಿಗಳನ್ನು ಮೌಲ್ಯಮಾಪನ ಮಾಡಬಹುದು.

## ಯೂನಿಟ್ 4 : ಬಾಗುಬಾಗುವಿಕೆ

ನೃತ್ಯ ಮಾಡಲು ಶರೀರವನ್ನು ಸಜ್ಜುಗೊಳಿಸುವುದು ಅನಿವಾರ್ಯವಾಗಿದೆ. ಇಲ್ಲದಿದ್ದರೆ ನೃತ್ಯಕ್ಕೆ ಅಂಗಶುದ್ಧಿ ಲಭಿಸಲಿಕ್ಕಿಲ್ಲ. ಶರೀರವನ್ನು ಸಿದ್ಧಗೊಳಿಸಲು ನರ್ತಕರು ಮಾಡುವ ಅಭ್ಯಾಸವನ್ನು ವ್ಯಾಯಾಮ ಎನ್ನುವರು. ಇದೇ ರೀತಿ ಕಾಲು, ಕೈ, ಕುತ್ತಿಗೆ, ಕಣ್ಣು ಮಾತ್ರವಲ್ಲ ಶರೀರದ ಎಲ್ಲ ಭಾಗಗಳಿಗೂ ಈ ವ್ಯಾಯಾಮ ಕ್ರಿಯೆಗಳು ಅನಿವಾರ್ಯವಾಗಿದೆ. ಆರೋಗ್ಯವಂತ ಶರೀದಲ್ಲಿಯೇ ಆರೋಗ್ಯವಂತ ಮನಸ್ಸಿರಲು ಸಾಧ್ಯ. ಮನಸ್ಸಿಗೂ ಶರೀರಕ್ಕೂ ಪೂರ್ಣ ಆರೋಗ್ಯವಿದ್ದರೆ ಮಾತ್ರ ಒಳ್ಳೆಯ ನರ್ತಕನಾಗಲು ಸಾಧ್ಯವಾಗುವುದು.

### ಕಲಿಕಾ ಸಾಧನೆ

- ಬಾಗುಬಳುಕನ್ನು ಗಳಿಸುವುದು.

### ಆಶಯ, ತಿಳುವಳಿಕೆ

- ಆರೋಗ್ಯಕ್ಕೆ ಬಾಗು ಬಳುಕು ಬೇಕೇ ಬೇಕು.
- ನೃತ್ಯ ಚಲನೆಗಳಿಗೆ ಬಾಗು ಬಳುಕು ಬೇಕು.

### ಪ್ರಕ್ರಿಯೆ

- ವ್ಯಾಯಾಮ–3 ಕಾಲಗಳಲ್ಲಿಯೂ ಆರೋಹಣ ಅವರೋಹಣದಲ್ಲಿ ಅಭ್ಯಾಸ ಮಾಡುವುದು.

### ಕಲಿಕಾ ಚಟುವಟಿಕೆಗಳು

*ಚಟುವಟಿಕೆ – 1*

- ಒಂದನೇ ಕಾಲದಲ್ಲಿ ತ....ಕ....ಧಿ.....ಮಿ

- ಸಾಧ್ಯವಾಗುವಾಗ ಸಮದಲ್ಲಿ ನಿಧಾನವಾಗಿ ಅರೆಮಂಡಲಕ್ಕೆ ತಲುಪಿ ಪೂರ್ಣ ಮಂಡಲದಲ್ಲಿ ಕುಳಿತುಕೊಳ್ಳಿರಿ.
- ಪೂರ್ಣಮಂಡಲದಿಂದ ನಿಧಾನವಾಗಿ ಎದ್ದು ಅರೆ ಮಂಡಲಕ್ಕೆ ತಲುಪಿ ಅರೆಮಂಡಲದಿಂದ ಸಮಕ್ಕೆ ತಲುಪಿರಿ.

*ಚಟುವಟಿಕೆ–2*

- ಇದೇ ಸೊಲ್ಲುಗಳನ್ನು ಉಪಯೋಗಿಸಿ ಮಾಡಬಹುದಾದ ಇನ್ನೊಂದು ವ್ಯಾಯಾಮ.
- ಅರೆಮಂಡಲದಲ್ಲಿ ಕುಳಿತುಕೊಳ್ಳಿರಿ. ಹಿಮ್ಮಡಿಯನ್ನೆತ್ತಿ ಕಾಲಿನ ಬೆರಳುಗಳನ್ನು ನೆಲಕ್ಕೆತ್ತಿರಿ. ಹಿಮ್ಮಡಿ ಎತ್ತಿದಲ್ಲಿಂದ ನಿಧಾನವಾಗಿ ಅರೆ ಮಂಡಲಕ್ಕೆ ತಲುಪಿರಿ. ಒಂದನೇ ಕಾಲದಲ್ಲಿ, ಎರಡನೇ ಕಾಲದಲ್ಲಿ ಮೂರನೇ ಕಾಲದಲ್ಲಿ ಮಾಡಿರಿ.

### ಮೌಲ್ಯಮಾಪನ

ಬಾಗುಬಳುಕನ್ನು ನಿರೀಕ್ಷಣೆ ಮಾಡಿ ಮೌಲ್ಯಮಾಪನ ಮಾಡುವುದು.

## ಯೂನಿಟ್ 5 : ಅನುಕರಣೆ

ಅನುಕರಣೆಯು ಮನುಷ್ಯನ ಹುಟ್ಟುಗುಣಗಳಲ್ಲಿ ಒಂದು. ಅದೊಂದು ಕಲೆಯೂ ಆಗಿದೆ. ಮೃಗಪಕ್ಷಿಗಳು ಮತ್ತು ಪ್ರಕೃತಿಯನ್ನು ಅನುಕರಿಸಲು ಪ್ರಾರಂಭಿಸಿದಂದಿನಿಂದ ಅವನಲ್ಲಿರುವ ನರ್ತಕ, ಸಂಗೀತಜ್ಞ, ಶಿಲ್ಪಿ, ಚಿತ್ರಕಲಾವಿದ ಎಲ್ಲವೂ ಜಾಗೃತಗೊಳ್ಳಲು ಆರಂಭವಾಯಿತು. ಅನುಕರಣೆಯ ಪುಟಾಣಿಗಳಿಗೆ ಹೆಚ್ಚು ಇಷ್ಟ. ಬಹಳ ಸೂಕ್ಷ್ಮವಾಗಿ ನಿರೀಕ್ಷಣೆ ಮಾಡಿ ಕೇಳಿ ತಿಳಿದುಕೊಂಡು ಅವುಗಳನ್ನು ಪುನರಾವಿಷ್ಕರಿಸಲು ಮಗುವಿಗೆ ಸಾಧ್ಯವಿದೆ. ಈ ನೈಪುಣ್ಯವನ್ನು ಬೆಳೆಸಲು ಕ್ರಿಯಾತ್ಮಕವಾಗಿ ಪ್ರಸ್ತುತಪಡಿಸಲು ಬೇಕಾದ ಆತ್ಮವಿಶ್ವಾಸವನ್ನು ಮಕ್ಕಳಲ್ಲಿ ಉಂಟುಮಾಡಬೇಕು.

### ಕಲಿಕಾ ಸಾಧನೆ

- ಅನುಕರಣೆಯ ಸಾಮರ್ಥ್ಯವನ್ನು ಗಳಿಸುವುದು.

### ಕಲಿಕಾ ಚಟುವಟಿಕೆಗಳು

*ಚಟುವಟಿಕೆ–1*

- ಪ್ರಕೃತಿಯ ಜೀವಜಾಲಗಳನ್ನು (ಉದಾ: ಚಿಟ್ಟೆ, ಕಾಗೆ, ಹದ್ದು, ಕೋಳಿ) ಎಂಬೀ ಪರಿಚಿತವಾದ ಜೀವಿಗಳ ಚಲನೆಗಳನ್ನು ಮಕ್ಕಳು ನೋಡಿರಬಹುದು. ಅವುಗಳನ್ನು ಅನುಕರಿಸಲು ಹೇಳಿರಿ. ಆನೆ, ಇತರ ಪ್ರಾಣಿಗಳು ಎಂಬಿವುಗಳ ಚಲನೆಗಳನ್ನು ಸಿ.ಡಿ ಉಪಯೋಗಿಸಿ ತೋರಿಸಿರಿ. ಬಳಿಕ ಪ್ರತಿಯೊಂದು ಮಗುವಿಗೆ ಇಷ್ಟವಿರುವ ಪ್ರಾಣಿಯನ್ನು ಅನುಕರಿಸುವ ಅವಕಾಶವನ್ನು ನೀಡಿರಿ. ಕಾಡು ಎಂದು ಅಧ್ಯಾಪಕರು ಹೇಳುವಾಗ ಕಾಡಿನಲ್ಲಿರುವ ಪ್ರಾಣಿಗಳೆಲ್ಲವೂ ಒಟ್ಟಿಗೆ ಬಂದು ಪ್ರಸ್ತುತಪಡಿಸಲಿ.

*ಚಟುವಟಿಕೆ–2*

- ನವಿಲಿನ ನೃತ್ಯದ ಸಿ.ಡಿಯನ್ನು ಪ್ರದರ್ಶಿಸಿರಿ. ಬಳಿಕ ಮಕ್ಕಳಲ್ಲಿ ಅದರ ಚಲನೆಗಳ ಪ್ರತ್ಯೇಕತೆಗಳನ್ನು ಅನುಕರಿಸಿ ತೋರಿಸಲು ಹೇಳಿರಿ. ಗುಂಪಾಗಿ ನವಿಲಿನ ನೃತ್ಯವನ್ನು ಅನುಕರಿಸಿ ತೋರಿಸಿರಿ.
  ಹೆಚ್ಚಿನ ಚಟುವಟಿಕೆಗಳನ್ನೂ ನೀಡಬಹುದು.

### ಮೌಲ್ಯಮಾಪನ

- ಪರಸ್ಪರ ಮೌಲ್ಯಮಾಪನ ಮಾಡುವುದು
- ಸ್ವ ಮೌಲ್ಯಮಾಪನ ಮಾಡುವುದು
- ಮಂಡನೆಯ ನಿಖರತೆಯನ್ನು ಅಧ್ಯಾಪಕರು ಮೌಲ್ಯಮಾಪನ ಮಾಡುವುದು.

### ರಿಸೋರ್ಸ್

- ನೇಷನಲ್ ಜ್ಯೂ ಜಿಯೊಗ್ರಾಫಿಕ್ ಚ್ಯಾನೆಲ್
- ಪ್ರಾಣಿ, ಪಕ್ಷಿಗಳಿಗೆ ಸಂಬಂಧಿಸಿದ ಸಿ.ಡಿಗಳು
- ನವಿಲಿನ ನೃತ್ಯ (ಸಿ.ಡಿ)

## ಯೂನಿಟ್ 6 : ಚಲನೆ

ಆಂಗಿಕ ಚಲನೆಗಳು ಅಭಿನಯದ ಪ್ರಧಾನ ಸತ್ವಗಳಾಗಿವೆ ಅದರಲ್ಲಿ ಪ್ರಧಾನವಾದೊಂದು ದೃಷ್ಟಿ (ಕಣ್ಣು) ಮುಖಭಾವ ಪೂರ್ಣಗೊಳ್ಳಬೇಕಾದರೆ ಕಣ್ಣುಗಳ ಸೂಕ್ಷ್ಮ ಚಲನೆ ಅಗತ್ಯ ಕೋಪ, ನಿರಾಶೆ, ಬೇಸರ ಮುಂತಾದ ಭಾವಗಳನ್ನು ಕಣ್ಣಿನಿಂದಲೇ ಸುಲಭವಾಗಿ ಪ್ರಕಟಪಡಿಸಲು ಸಾಧ್ಯವಿದೆ. ಆಂಗಿಕ ಚಲನೆಗಳ ಆಕರ್ಷಣೆಯನ್ನು ದೃಷ್ಟಿ ವಿನ್ಯಾಸದ ಮೂಲಕ ಹೆಚ್ಚಿಸಲು ಸಾಧ್ಯವಿದೆ. ಕಣ್ಣುಗಳ ಚಲನೆಯ ಆಶಯ ವಿನಿಮಯಕ್ಕಿರುವ ಉತ್ತಮವಾದೊಂದು ಮಾಧ್ಯಮವಾಗಿದೆ.

### ಕಲಿಕಾ ಸಾಧನೆ

- ಕಣ್ಣು, ಕುತ್ತಿಗೆ, ತಲೆ ಎಂಬಿವುಗಳನ್ನು ಸುಲಭವಾಗಿ ಚರ್ಚಿಸುವಂತೆ ಮಾಡಲು ಸಾಧ್ಯವಾಗುವುದು.

### ಆಶಯ, ತಿಳುವಳಿಕೆ

- ಅಭಿನಯದ ಮಾಧ್ಯಮವಾದ ಕಣ್ಣುಗಳೊಂದಿಗೆ ಕುತ್ತಿಗೆ ಮತ್ತು ತಲೆಯ ಚಲನೆಗಳಿಗೂ ಪ್ರಧಾನ ಪಾತ್ರವಿದೆ.

### ಪ್ರಕ್ರಿಯೆ

- ಕಣ್ಣಿಗಿರುವ ವ್ಯಾಯಾಮ, ಕುತ್ತಿಗೆ, ತಲೆ ಮುಂತಾದವುಗಳಿಗಿರುವ ವ್ಯಾಯಾಮಗಳನ್ನು ಅಭ್ಯಾಸಮಾಡುವುದು ಅವುಗಳ ಮೂಲಕ ಆಶಯ ವಿನಿಮಯ ರೀತಿಗಳನ್ನು ತಿಳಿದುಕೊಳ್ಳುವುದು.

## ವಿಷಯ

ಕಣ್ಣು ಪ್ರಧಾನವಾದ ಆಶಯ ವಿನಿಮಯದ ಮಾಧ್ಯಮಗಳಲ್ಲಿ ಒಂದು ನೃತ್ಯದಲ್ಲಿ ಕಣ್ಣು, ಕುತ್ತಿಗೆ, ತಲೆ ಎಂಬಿವುಗಳ ಚಲನೆಗಳು ಮುಖ್ಯವಾದುವುಗಳು. ಆಶಯ ವಿನಿಮಯ ಮಾಧ್ಯಮವಾದ ಕಣ್ಣಿನ ಉಪಯೋಗಗಳನ್ನು ಕೆಳಗೆ ಕೊಡಲಾಗಿದೆ. ಅದಕ್ಕೆ ಪೂರ್ವಭಾವಿಯಾಗಿ ಕಣ್ಣು, ಕುತ್ತಿಗೆ ತಲೆ ಎಂಬಿವುಗಳಿಗಿರುವ ವ್ಯಾಯಾಮವನ್ನು ಅಭ್ಯಾಸ ಮಾಡುವುದು ಉತ್ತಮ. ಕಣ್ಣಿನ ಚಲನೆಗಳಲ್ಲಿ ಎಂಟುವಿಧ ಕುತ್ತಿಗೆ ಚಲನೆಗಳು ನಾಲ್ಕು ವಿಧ, ತಲೆಯ ಚಲನೆಗಳು 9 ವಿಧಗಳಲ್ಲಿವೆ.

## ಕಲಿಕಾ ಚಟುವಟಿಕೆಗಳು

- ***ಕಣ್ಣಿನ ಚಲನೆಗಳು (ದೃಷ್ಟಿ ಭೇದಗಳು)***

ಸಮಮಾಲೋಕಿತಂ ಸಾಚಿ
ಪ್ರಲೋಕಿತ ನಿಮೀಲಿತೇ
ಉಲ್ಲೋಕಿತಾನುವೃತ್ತೇ ಚ
ತಥಾ ವಾವಲೋಕಿತಂ ಚೈ

***ಸಮಂ***

(ಕಣ್ಣಿನ ರೆಪ್ಪೆಗಳನ್ನು ಮುಚ್ಚದೆ ನಿಶ್ಚಲವಾಗಿರಬೇಕು.) ನಾಟ್ಯಾರಂಭ, ತಕ್ಕಡಿ, ಅನಿರ್ಧಾರ, ಆಶ್ಚರ್ಯ, ದೇವತಾರೂಪ ಎಂಬೀ ಅಭಿನಯಗಳಲ್ಲಿ ಉಪಯೋಗಿಸುವರು.

***ಅಲೋಕಿತ***

(ಸುತ್ತಲೂ (ವರ್ತುಲಾಕಾರದಲ್ಲಿ) ಕಣ್ಣು ತಿರುಗಿಸಿ ನೋಡುವುದು ಅಲೋಕಿತ ದೃಷ್ಟಿಯಾಗಿದೆ. (ಕುಂಬಾರನ ಚಕ್ರದ ತಿರುಗುವಿಕೆಗೆ, ವಸ್ತುಗಳ ವೀಕ್ಷಣೆ ಮನಸ್ಸಿನ ಆಸೆಯ ಪ್ರಕಟನೆ

***ಸಾಚಿ***

ಸಮಯದಿಂದ ಕಣ್ಣಂಚಿನ ದೃಷ್ಟಿ ಚಲಿಸುವುದು
(ಅಭಿಪ್ರಾಯ, ಸೂಚನೆ, ಸ್ಮೃತಿ, ಮೀಸೆ ತಿರುಗುವಿಕೆ, ಬಾಣದ ಗುರಿ, ಗಿಳಿ)

***ಪ್ರಲೋಕಿತ***

(ಎರಡು ಬದಿಗಳಿಗೂ ದೃಷ್ಟಿಯನ್ನು ಚಲಿಸುವುದು)
ಎರಡು ಬದಿಗಳಲ್ಲಿಯೂ ಇರುವ ವಸ್ತುಗಳನ್ನು ನೋಡುವುದು.
ಸೂಚನೆ: ಚಲಿಸುವುದು, ಅತಿಯಾದ ವಾತ್ಸಲ್ಯ, ಬುದ್ಧಿ ಮಾಂದ್ಯ

***ನಿಮೀಲಿತ***

ಅರೆಗಣ್ಣು ಮುಚ್ಚಿ ನೋಡುವುದು–ನಿಮೀಲಿತ ದೃಷ್ಟಿ
(ಹಾವು, ಪರವರ್ಶತೆ, ಜಪ, ಧ್ಯಾನ, ಉನ್ಮಾದ, ನಮಸ್ಕಾರ, ಸೂಕ್ಷ್ಮ ನಿರೀಕ್ಷಣೆ)

***ಉಲ್ಲೋಕಿತ***

ಕಣ್ಣು ಬೊಂಬೆಯನ್ನು ಮೇಲೆ ತಂದು ನೋಡುವುದು.
(ಧ್ವಜ, ಗೋಪುರ, ದೇವಮಂಟಪ, ಪೂರ್ವಜನ್ಮ ಸ್ಮರಣೆ, ಮೇಲಿರುವ ವಸ್ತುಗಳು, ಬೆಳದಿಂಗಳ ಸೂಚನೆ)

***ಅನುವೃತ್ತ***

ಮೇಲಕ್ಕೂ ಕೆಳಕ್ಕೂ ದೃಷ್ಟಿಯನ್ನು ವೇಗವಾಗಿ ತಿರುಗಿಸುವುದು ಕೋಪ ಪ್ರಕಟಣೆ,

ಪ್ರಿಯನನ್ನು ಕರೆಯುವುದು.

***ಅವಲೋಕಿತ***

ಕಣ್ಣು ಗೊಂಬೆಯನ್ನು ಕೆಳಗೆ ತರುವುದು (ಕೆಳಗೆ ನೋಡುವುದು)
(ನೆರಳನ್ನು ನೋಡುವುದು, ಯೋಚನೆ, ಚರ್ಚೆ, ಓದುವುದು, ದೇಹದ ಅವಯವಗಳನ್ನು ನೋಡುವುದು, ದೋಣಿ ಎಂಬೀ ಅಭಿನಯಗಳಲ್ಲಿ ಉಪಯೋಗಿಸುವರು.

- ***ಕುತ್ತಿಗೆಯ ಚಲನೆಗಳು (ಗ್ರೀವಾಭೇದಗಳು)***

> ಸುಂದರೀ ಚ ತಿರಶ್ಚಿನಾ
> ತಥೈವ ಪರಿವರ್ತಿತಾ
> ಪ್ರಕಂಪಿತಾ ಚ ಭಾವಜ್ಞೈರ್
> ಜ್ಞೇಯ ಗ್ರೀವ ಚತುರ್ವಿಧಾ"

***ಸುಂದರಿ***

ಕುತ್ತಿಗೆಯನ್ನು ಅಡ್ಡಲಾಗಿ, ಬಲದಿಂದ ಎಡಕ್ಕೆ,
ಎಡದಿಂದ ಬಲಕ್ಕೆ ತಿರುಗಿಸುವುದು.
(ಸ್ನೇಹಾರಂಭ, ಯಜ್ಞ, ವ್ಯಂಗ್ಯಾರ್ಥ, ಪೂರ್ತಿ ಎಂಬ ಅರ್ಥ, ಸಂತೋಷದಿಂದ ಅನುಮೋದನೆ) ಎಂಬೀ ಅಭಿನಯಗಳಲ್ಲಿ ಉಪಯೋಗಿಸುವರು.

***ತಿರಶ್ಚೀನ***

ಸರ್ಪದಂತೆ ಎರಡೂ ಬದಿಗಳಿಗೆ ಹಾಗೂ ಮೇಲು ಭಾಗಕ್ಕೆ ತಲೆಯನ್ನು ಆರಿಸುವುದು.
(ಕತ್ತಿವರಸೆ, ಹಾವಿನಗಮನ ಎಂಬೀ ಅಭಿನಯಗಳಲ್ಲಿ ಉಪಯೋಗಿಸುವರು.)

***ಪರಿವರ್ತಿತಾ***

ಕುತ್ತಿಗೆಯನ್ನು ಎಡದಿಂದ ಬಲಕ್ಕೂ ಬಲದಿಂದ ಎಡಕ್ಕೂ ಅರ್ಧ ಚಂದ್ರಾಕೃತಿಯಲ್ಲಿ ತಿರುಗಿಸುವುದು.
(ಶೃಂಗಾರನೃತ್ಯ, ಪ್ರೇಯಸಿಯ ಕೆನ್ನೆಗೆ ಮುದ್ದಿಡುವುದು ಎಂಬೀ ಅಭಿನಯಗಳಲ್ಲಿ ಉಪಯೋಗಿಸುವರು)

***ಪ್ರಕಂಪಿತ***

(ಪಾರಿವಾಳಗಳಂತೆ ಕುತ್ತಿಗೆಯನ್ನು ಹಿಂದಕ್ಕೆ ಮುಂದಕ್ಕೆ ಆಡಿಸುವುದು, ನಾನು–ನೀನು ಎನ್ನುವುದು, ಲೆಕ್ಕ ಹಾಕುವುದು ಇತ್ಯಾದಿ)

- ***ತಲೆಯ ಚಲನೆಗಳು (ಶಿರೋಭೇದಗಳು)***

***ಸಮ***

ಕೆಳಕ್ಕೆ ಬಗ್ಗಿಸದೆ, ಮೇಲಕ್ಕೆ ಎತ್ತದೆ ನಿಶ್ಚಲವಾಗಿರುವುದು.

ಪ್ರಯೋಗ (ವಿನಿಯೋಗ) : ನೃತ್ಯಾರಂಭ, ಜಪ, ಗರ್ವ, ಪ್ರೀತಿ, ಕೋಪ, ಪ್ರಣಯ, ಕಲಹ, ಸ್ತಂಭನ, ನಿಷ್ಕ್ರಿಯೆ ಎಂಬೀ ಅಭಿನಯಗಳಲ್ಲಿ ಉಪಯೋಗಿಸುವರು.)

***ಉದ್ವಾಹಿತ***

ಮೇಲಕ್ಕೆತ್ತಿದ ತಲೆ (ಧ್ವಜ, ಚಂದ್ರ, ಆಕಾಶ, ಪರ್ವತ, ಅಧೋಮುಖ: ಕೆಳಕ್ಕೆ ಬಾಗಿಸಿದ ತಲೆ (ನಾಚಿಕೆ, ದುಃಖ, ನಮಸ್ಕಾರ, ನಿದ್ದೆ ಕೆಳಗಿರುವ ವಸ್ತುಗಳನ್ನು ಸೂಚಿಸುವುದು.

**ಅಲೋಲಿತ**

ತಲೆಯನ್ನು ಚಕ್ರಾಕಾರವಾಗಿ ಸುತ್ತುವುದು (ನಿದ್ದೆ, ಗ್ರಹಭಾಧೆ, ಮೂರ್ಛೆ, ಅಮಲು, ಭ್ರಮೆ, ಅಡ್ಡಾಡುವುದು.)

**ಧೃತ**

ಮುಖವನ್ನು ಎಡಕ್ಕೂ ಬಲಕ್ಕೂ ತಿರುಗಿಸುವುದು (ಇಲ್ಲ ಎನ್ನಲು, ವಿಷಾದ, ಎಡಬಲ ನೋಡುವುದು, ಆಶ್ಚರ್ಯ, ವಿಷಾದ, ಚಳಿ, ಉರಿ, ಭಯ, ನಿಷೇಧ, ಯುದ್ಧ, ಪ್ರಯತ್ನ ಪಕ್ಕದಲ್ಲಿರುವವರನ್ನು ಕರೆಯುವುದು ಇತ್ಯಾದಿ.

**ಕಂಪಿತ**

ಮೇಲಕ್ಕೂ ಕೆಳಕ್ಕೂ ತಲೆಯಲ್ಲಾಡಿಸುವುದು. (ಪ್ರಶ್ನಿಸುವುದು, ಕೋಪದಿಂದ ನಿಲ್ಲಿಸಲು ಹೇಳುವುದು, ಎಣಿಕೆ ಮಾಡುವುದು, ಪಕ್ಕದಲ್ಲಿರುವವರನ್ನು ಕರೆಯುವುದು, ದೇವತೆಗಳನ್ನು ಆವಾಹನೆ ಮಾಡುವುದು, ಬೆದರಿಸುವುದು.

**ಪರಾವೃತ್ತ**

ತಲೆಯನ್ನು ಎಡ ಅಥವಾ ಬಲಕ್ಕೆ ತಿರುಗಿಸಿ ಭುಜದ ಮೇಲಿನಿಂದಾಗಿ ಹಿಂದಕ್ಕೆ ನೋಡುವುದು (ಕೋಪ, ನಾಚಿಕೆ, ಜಿಗುಪ್ಸೆಯಿಂದ ಮುಖ ತಿರುಗಿಸುವುದು, ಅನಾದರ ತೋರಿಸುವುದು ತನ್ನ ತುರುಬನ್ನು ನೋಡುವುದು.)

**ಉತ್ಕ್ಷಿಪ್ತ**

ಬದಿಗೆ ತಲೆಯನ್ನು ತಿರುಗಿಸಿ ಸ್ವಲ್ಪ ಮೇಲೆತ್ತುವುದು (ಇನ್ನೊಬ್ಬನಿಗೆ ತಿಳಿಯದಂತೆ ಹೋಗು ಎಂದು ಹೇಳುವುದು, ಸಮ್ಮತಿ ಪ್ರಕಟಿಸುವುದು, ಬೆಂಬಲಿಸುವುದು.)

**ಪರಿವಾಹಿತ**

ಮುಖವನ್ನು ತಿರುಗಿಸದೆ ತಲೆಯನ್ನು ಚಾಮರದಂತೆ ಎರಡು ಬದಿಗಳಿಗೂ ತಿರುಗಿಸುವುದು. (ಮೋಹ, ವಿರಹ, ಸ್ತೋತ್ರ ಹೇಳುವುದು, ಸಂತೋಷ, ಒಪ್ಪಿಗೆ, ವಿಚಾರ)

7.4



# ನಾಟಕ



# ನಾಟಕ

## ಮುನ್ನುಡಿ

ಸಂಗೀತ, ನೃತ್ಯ, ಅಭಿನಯ, ಚಿತ್ರಕಲೆ, ಸಾಹಿತ್ಯ ಮೊದಲಾದ ಎಲ್ಲಾ ಕಲಾ ರೂಪಗಳು ನಾಟಕ ಕಲೆಯಲ್ಲಿ ಸಮ್ಮೇಳಿಸಿವೆ. ಅದಕ್ಕಾಗಿಯೇ ಕಲಿಕಾ ಪ್ರಕ್ರಿಯೆಯಲ್ಲಿ ನಾಟಕ ಕಲೆಯನ್ನು ಉಪಯೋಗಿಸುವುದು ಅನಿವಾರ್ಯವಾಗಿದೆ. ಸೌಂದರ್ಯ ಅನುಭವಿಸಲಿರುವ ಸಂದರ್ಭಗಳು, ನಾಟಕ ಆಸ್ವಾದನಾ ಕ್ಷಮತೆ ಪಡೆಯಲಿರುವ ತರಬೇತಿಯನ್ನು ಒಳಗೊಂಡಿರುವ ನಾಟಕದ ಪಾಠ್ಯಪದ್ಧತಿಯ ಅಗತ್ಯವಿದೆ.

ಪ್ರಧಾನವಾಗಿ ಮೂರು ಹಂತಗಳಲ್ಲಾಗಿ ನಾಟಕ ಸನ್ನಿವೇಶಗಳು ಇಂದು ನಮ್ಮ ಚಟುವಟಿಕೆಗಳಲ್ಲಿ ಹಾಸುಹೊಕ್ಕಿವೆ. ತರಗತಿಗಳಲ್ಲಿ ಅಧ್ಯಾಪಿಕೆ ಅಭಿನೇತ್ರಿಯಾಗಿಯೂ ತರಗತಿ ಕೋಣೆ ವೇದಿಕೆಯಾಗಿಯೂ ಸ್ವಾಭಾವಿಕವಾಗಿ ಪರಿವರ್ತನೆಯಾಗುತ್ತದೆ ಎಂಬುದು ಮೊದಲ ಹಂತ. ನಾಟಕ ಸನ್ನಿವೇಶಗಳ ಕೆಲವು ಅಂಶಗಳನ್ನು ಕಲಿಕಾಚಟುವಟಿಕೆಗಳ ಪ್ರತಿಯೊಂದು ಹಂತಗಳಲ್ಲೂ ಅಗತ್ಯಕ್ಕನುಸರಿಸಿ ಉಪಯೋಗಿಸುವುದು ಎರಡನೇ ಹಂತ. ನಾಟಕ ರೂಪದಲ್ಲಿರುವ ಪಾಠಭಾಗಗಳಿಗಾಗಿ ಕಲಿಕಾಪ್ರಕ್ರಿಯೆಗಳನ್ನು ರೂಪಿಸುವಾಗ ಪ್ರದರ್ಶನ ಮತ್ತು ಅಭಿನಯ ಕಲೆಯನ್ನು ಉಪಯೋಗಿಸಬೇಕಾಗಿ ಬರುವುದು ಮೂರನೇ ಹಂತವಾಗಿದೆ.

ಓದುವಿಕೆಯ ಮೂಲಕ ಭಾವನಾದೃಶ್ಯಗಳನ್ನು ಸೃಷ್ಟಿಸುತ್ತೇವೆ. ನಾಟಕ ಹಾಗೂ ಇತರ ದೃಶ್ಯಕಲೆಗಳು. ಈ ಭಾವನಾ ದೃಶ್ಯಗಳ ಆವಿಷ್ಕಾರವಾಗಿದೆ. ಕೃತಿಗಳನ್ನು ದೃಶ್ಯಗಳಾಗಿ ಬದಲಾಯಿಸುವಾಗ ಆಳವಾದ ವಿಶ್ಲೇಷಣೆಗೂ ಪಾಠನಿರ್ಮಾಣಕ್ಕೂ ಸಾಧ್ಯವಾಗುವುದು. ಭಾಷೆಯ ವಿಭಿನ್ನ ಸೌಂದರ್ಯ ಮತ್ತು ಶೈಲಿಗಳನ್ನು ಅರ್ಥೈಸಿಕೊಂಡು ಸ್ವಂತ ಸಂಸ್ಕೃತಿಯ ಕುರಿತು ಹೆಚ್ಚಿನ ತಿಳುವಳಿಕೆ ಗಳಿಸಲು ಸಹಾಯವಾಗುವುದು. ನಾಟಕ ಆವಿಷ್ಕಾರದಲ್ಲೂ ಇತರ ಇಂತಹ ಕಲಾರೂಪಗಳಲ್ಲಿ ಪಾಲ್ಗೊಳ್ಳುವುದರ ಮೂಲಕವೂ ಭಿನ್ನಮಟ್ಟದ ಮಕ್ಕಳಿಗೂ ಭಾಗವಹಿಸಲು ಅವಕಾಶವುಂಟಾಗಿ ಅಧಿಕ ಆತ್ಮವಿಶ್ವಾಸ ಬೆಳೆಯುವುದು.

ಮಕ್ಕಳ ನಾಟಕಗಳು ಹಿರಿಯರ ನಾಟಕಗಳಿಂದ ವ್ಯತ್ಯಸ್ತವಾಗಿದೆ. ಶಾರೀರಿಕವಾಗಿಯೂ ಮಾನಸಿಕವಾಗಿಯೂ ಮಕ್ಕಳಿಗೆ ಹಲವು ವಿಶೇಷತೆಗಳಿವೆ. ಅವರ ಭಾವನಾತ್ಮಕ ವ್ಯವಸ್ಥೆಯಲ್ಲೂ ವಿಚಾರ ಪ್ರಕ್ರಿಯೆಗಳಲ್ಲೂ ವ್ಯತ್ಯಾಸಗಳಿವೆ. ಹಾಗಾಗಿಯೇ ಮಕ್ಕಳ ನಾಟಕಗಳಲ್ಲಿಯೂ ಆ ವಿಶೇಷತೆಗಳನ್ನು ಕಾಣಲು ಸಾಧ್ಯವಿದೆ. ಅವುಗಳೆಂದರೆ ಅನಿಶ್ಚಿತತೆ, ಪ್ರತಿಭಾನ್ವಿತ ಮಾನಸಿಕ ಆಕರ್ಷಕತೆ, ಘಟಕಗಳ ತನ್ಮಯತೆ, ಮಕ್ಕಳ ಮಟ್ಟಕ್ಕೆ ಯೋಗ್ಯವಾಗಿ ಮಾಡಲಿರುವ ಸಾಮರ್ಥ್ಯ, ಸಂಭಾಷಣೆಗಿಂತ ಆಂಗಿಕ ಚಲನೆಯ ಪ್ರಾಧಾನ್ಯ, ನಾಟಕೀಯ ಸಂದರ್ಭ ಹಾಗೂ ಸಂಭಾಷಣೆಗಳ ಮಿಡಿತಗಳಾಗಿವೆ. ಇವುಗಳನ್ನು ಅರ್ಥೈಸಿಕೊಂಡು ಮಕ್ಕಳಿಗೆ ನಾಟಕ ಕಲಿಕೆಗೆ ಅವಕಾಶ ನೀಡಬೇಕು. ಪಾಠ ವಿಷಯಗಳನ್ನು ರಸವತ್ತಾಗಿಸಲು ಸೃಜನಾತ್ಮಕ ನಾಟಕವೇದಿಕೆಗಳಾಗಿ ನಮ್ಮ ತರಗತಿಕೋಣೆಗಳು ಬದಲಾಗಬೇಕು.

## ಕಲಿಕಾ ಸಾಧನೆಗಳು

### ನಾಟಕ

**ಒಂದನೇ ತರಗತಿ**

- ಆಂಗಿಕ ಚಲನೆಗಳನ್ನು ಉಪಯೋಗಿಸಿ ಆಕೃತಿ, ಗಾತ್ರ, ದಿಕ್ಕು, ಮೇಲ್ಮೈ ಎಂಬಿವುಗಳನ್ನು ಸೂಚಿಸುತ್ತಾರೆ.
- ಏಕಾಂಗಿಯಾಗಿಯೂ ಗುಂಪಿನಲ್ಲಿಯೂ ತಾಳ ಸಹಿತವಾಗಿ ನಡೆಯುವುದು, ಓಡುವುದು, ಹಾರುವುದು ಇತ್ಯಾದಿ ಕ್ರಿಯೆಗಳನ್ನು ನಿರ್ವಹಿಸುತ್ತಾರೆ.
- ವಿವಿಧ ಸಂದರ್ಭಗಳು, ಸ್ಥಳಗಳು, ಘಟನೆಗಳು ಎಂಬಿವುಗಳನ್ನು ಸೂಕ್ತವಾದ ವೈಶಿಷ್ಟ್ಯಗಳೊಂದಿಗೆ ತಿಳಿದುಕೊಳ್ಳುತ್ತಾರೆ.
- ಮೃಗ ಪಕ್ಷಿಗಳು, ಮನುಷ್ಯರು ಸಂಚರಿಸುವ ರೀತಿ, ನಾದ ಮತ್ತು ಚಲನೆಯ ವೈಶಿಷ್ಟ್ಯಗಳನ್ನು ಅನುಕರಣೆ ಮಾಡುತ್ತಾರೆ.
- ಕಥೆ, ಹಾಡುಗಳಿಗೆ ಆಂಗಿಕ ಅಭಿನಯವನ್ನು ನೀಡಿ ಏಕಾಂಗಿಯಾಗಿಯೂ ಗುಂಪಾಗಿಯೂ ಪ್ರಸ್ತುತಪಡಿಸುತ್ತಾರೆ.
- ಕಥೆಯ ಸಂದರ್ಭದಲ್ಲಿ ಕಥಾ ಪಾತ್ರವನ್ನು ಅಭಿನಯಿಸುವ ಮೂಲಕ ಪ್ರಸ್ತುತ ಪಡಿಸುತ್ತಾರೆ.
- ಸೂಕ್ತವಾದ ಆಂಗಿಕ ಚಲನೆಗಳು, ಸಂಭಾಷಣೆಗಳು ಎಂಬಿವುಗಳೊಂದಿಗೆ ಕಥೆಯನ್ನು ಭಾವನಾತ್ಮಕವಾಗಿ ಪ್ರಸ್ತುತ ಪಡಿಸುತ್ತಾರೆ.

**ಎರಡನೇ ತರಗತಿ**

- ಮೃಗ ಪಕ್ಷಿಗಳ ಜೀವನದ ಕಿರು ಸಂದರ್ಭಗಳನ್ನು ಏಕಾಂಗಿಯಾಗಿಯೂ ಗುಂಪಾಗಿಯೂ ಅನುಕರಣೆ ಮಾಡುತ್ತಾರೆ.
- ವಿವಿಧ ವ್ಯಕ್ತಿ, ಪ್ರವೃತ್ತಿ ಎಂಬಿವುಗಳ ಅನುಕರಣೆಯನ್ನು ಮಾಡುತ್ತಾರೆ ಮತ್ತು ಮೌಲ್ಯ ಮಾಪನ ಮಾಡುತ್ತಾರೆ.
- ಕಥೆ, ಹಾಡುಗಳಿಗೆ ಆಂಗಿಕ ಅಭಿನಯವನ್ನೂ ಭಾವನೆಯನ್ನು ಬೆರೆಸಿ ಅದರಲ್ಲಿ ತಲ್ಲೀನರಾಗಿ ಪ್ರದರ್ಶಿಸುತ್ತಾರೆ.
- ಲಘು ಸಂಗೀತಕ್ಕೆ ನಿಶ್ಚಲವಾದ ಸಂಯೋಜನೆಯನ್ನು ಆವಿಷ್ಕರಿಸುತ್ತಾರೆ.
- ಸಂದರ್ಭಕ್ಕೆ ಅನುಗುಣವಾಗಿ ಬೆರಳು ಬೊಂಬೆಗಳಿಗೆ ಸಂಭಾಷಣೆಯನ್ನು ತಯಾರಿಸಿ ಪ್ರದರ್ಶಿಸುತ್ತಾರೆ.

**ಮೂರನೇ ತರಗತಿ**

- ನಿರ್ದಿಷ್ಟ ಸಂದರ್ಭಗಳಲ್ಲಿ ಮೃಗ ಪಕ್ಷಿಗಳು ಮತ್ತು ಮನುಷ್ಯರು ವರ್ತಿಸುವ ವಿಧಾನವನ್ನು ಪ್ರದರ್ಶಿಸುತ್ತಾರೆ.
- ಸಂಗೀತಕ್ಕೆ ಅನುಸಾರವಾಗಿ ಚಲನೆ, ತಾಳ ಎಂಬಿವುಗಳ ವೇಗವನ್ನು ಕ್ರಮೀಕರಿಸುವ ಸಾಮರ್ಥ್ಯವನ್ನು ಗಳಿಸುತ್ತಾರೆ.
- ಕಥಾಪಾತ್ರವನ್ನು ತನ್ಮಯರಾಗಿ ಆವಿಷ್ಕರಿಸಲು ದೇಹ ಮತ್ತು ಸ್ವರವನ್ನು ಸೂಕ್ತವಾಗಿ ಉಪಯೋಗಿಸಿಕೊಳ್ಳುತ್ತಾರೆ.
- ಲಘು ಸಂಗೀತಗಳಿಗೆ ನಿಶ್ಚಲವಾದ ದೃಶ್ಯ ಸಂಯೋಜನೆಯನ್ನು ಆವಿಷ್ಕರಿಸುತ್ತಾರೆ.
- ಪ್ರಕೃತಿಯಲ್ಲಿರುವ ವಿವಿಧ ರೀತಿಯ ನಾದಗಳು, ಚಲನೆಗಳು ಎಂಬಿವುಗಳ ನಿರೀಕ್ಷಣೆಯನ್ನು ಮಾಡಿ ಅನುಕರಿಸುತ್ತಾರೆ ಮತ್ತು ಅವುಗಳನ್ನು ಗುಂಪಿನಲ್ಲಿ ಹಂಚಿಕೊಂಡು ಏಕಾಂಗಿಯಾಗಿಯೂ ಗುಂಪಾಗಿಯೂ ಆವಿಷ್ಕರಿಸುತ್ತಾರೆ.
- ಪರಿಚಿತರಾದ ವ್ಯಕ್ತಿಗಳನ್ನೂ ಸುತ್ತಮುತ್ತಲಿನ ಜೀವಿಗಳನ್ನೂ ಮೂಕಾಭಿನಯದ ಮೂಲಕ ಮತ್ತು ವಸ್ತು, ಮುಖವಾಡ, ವೇಷ ಎಂಬಿವುಗಳನ್ನು ಉಪಯೋಗಿಸಿಯೂ ಸ್ವರ, ಚಲನೆ, ಆಂಗಿಕ ಅಭಿನಯ, ದೇಹಸ್ಥಿತಿ ಎಂಬಿವುಗಳನ್ನು ಉಪಯೋಗಿಸಿ ಪ್ರದರ್ಶಿಸುತ್ತಾರೆ.
- ಒಂದು ಸಂದರ್ಭದ ಸ್ವಲ್ಪ ಮೊದಲು ಮತ್ತ ನಂತರದ ಸಂದರ್ಭಗಳನ್ನು ಕಂಡುಹಿಡಿದು ಈ ಮೂರನ್ನು ನಿಶ್ಚಲ ದೃಶ್ಯಗಳು, ಸೂಕ್ತ ಸಂಭಾಷಣೆಗಳನ್ನು ತಯಾರಿಸಿ ಪ್ರದರ್ಶಿಸುತ್ತಾರೆ.
- ಸಂದರ್ಭ, ಕಥಾಪಾತ್ರಗಳು ಎಂಬಿವುಗಳಿಗೆ ಅನುಗುಣವಾಗಿ ನಾದವನ್ನು ಕ್ರಮೀಕರಿಸಿ ಮತ್ತು ಹಾಡುಗಳನ್ನು ಆಲಾಪಿಸಿ ಗೊಂಬೆ ನಾಟಕಗಳನ್ನು ಪ್ರದರ್ಶಿಸುತ್ತಾರೆ.

**ನಾಲ್ಕನೇ ತರಗತಿ**

- ವ್ಯಕ್ತಿಗಳನ್ನು ವೈಶಿಷ್ಟ್ಯ ಪೂರ್ಣವಾದ ಚಲನೆಗಳನ್ನು ಪುನಃ ಪ್ರದರ್ಶಿಸುತ್ತಾರೆ.
- ತಾಳಕ್ಕೆ ಅನುಗುಣವಾದ ವಿವಿಧ ರೀತಿಯ ಚಲನೆಗಳಿಂದ ದೊರೆತ ಅನುಭವಗಳನ್ನು ಅಭಿನಯದ ಹೆಜ್ಜೆಗಳಾಗಿ ಅಭಿವೃದ್ಧಿಪಡಿಸುತ್ತಾರೆ.
- ಸ್ವರ, ಚಲನೆ, ಅಭಿನಯ ಎಂಬಿವುಗಳನ್ನು ಕ್ರಮೀಕರಿಸಲು ಮತ್ತು ಹಿನ್ನಲೆ ಸ್ವರಗಳಿಗನುಸರಿಸಿ ತಾಳಾತ್ಮಕೊಗೊಳಿಸಲು ಸಾಧ್ಯವಾಗುವುದು.
- ಒಂದು ಆಶಯಕ್ಕೆ ಸಮೀಪದಿಂದ ದೊರೆತ ವಸ್ತುಗಳು, ಬಣ್ಣಗಳು, ವೇಷಗಳು ಎಂಬಿವುಗಳನ್ನು ಉಪಯೋಗಿಸಿ ಗುಂಪಾಗಿ ಪ್ರದರ್ಶಿಸುತ್ತಾರೆ.
- ಸರಳ ನಾಟಕೀಯ ರಂಗಗಳಲ್ಲಿ ಭಾಗವಹಿಸಲು ಮತ್ತು ಸರಳ ಪ್ರಶ್ನೆಗಳ ಸಂದರ್ಭಗಳನ್ನು ಗುಂಪಾಗಿ ಪ್ರದರ್ಶಿಸಲು ಸಾಧ್ಯವಾಗುತ್ತದೆ.
- ನಿರಂತರವಾಗಿರುವ ಒಂದು ಘಟನೆಯನ್ನು ಸ್ವರ ಸಂಗೀತ ಹಿನ್ನಲೆಯಲ್ಲಿ ಉಪಯೋಗಿಸಿ ಬಾನುಲಿ ನಾಟಕಗಳಾಗಿ ಪ್ರದರ್ಶಿಸಲು ಮತ್ತು ಮೌಲ್ಯಮಾಪನ ಮಾಡಲು ಸಾಧ್ಯವಾಗುತ್ತದೆ.
- ಪಾಠಗಳನ್ನು ಕಥಾಪಾತ್ರದ ಸ್ವಭಾವ, ರಂಗ ಕ್ರಮೀಕರಣ, ಸಂಭಾಷಣೆ, ವರ್ಣಾಲಂಕಾರ, ಸ್ಥಳ ಎಂಬಿವುಗಳನ್ನು ಅನುಸರಿಸಿಕೊಂಡು ಪ್ರದರ್ಶಿಸುತ್ತಾರೆ.

# ಒಂದನೇ ತರಗತಿ

## ಅಧ್ಯಾಯ 1 : ಅನುಕರಣೆ

ನಾಟಕಗಳಲ್ಲಿ ಪಾಲ್ಗೊಳ್ಳಲು ಮಕ್ಕಳ ನಡುವೆ ಮತ್ತು ಮಕ್ಕಳು ಹಾಗೂ ಅಧ್ಯಾಪಕರ ನಡುವೆ ಪರಸ್ಪರ ಉತ್ತಮ ಬಾಂಧವ್ಯವಿರಬೇಕು. ಮಗುವಿನ ಸ್ವಾಭಾವಿಕ ಪರಿಸರಕ್ಕಿಂತ ತರಗತಿ ಕೋಣೆಯು ವಿಭಿನ್ನವಲ್ಲ ಎಂಬುದನ್ನು ತಿಳಿದುಕೊಳ್ಳಲಿರುವ ಸಂದರ್ಭಗಳನ್ನು ವಿದ್ಯಾರ್ಥಿಗಳಿಗೆ ಕೊಡಬೇಕು. ವಿದ್ಯಾರ್ಥಿಗಳನ್ನು ಇಂತಹ ಒಂದು ಸಂದರ್ಭಕ್ಕೆ ಸಜ್ಜುಗೊಳಿಸುವುದು ಉತ್ತಮವಾಗಿದೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ಸೂಚನೆಗಳಿಗನುಸಾರವಾಗಿ ಆಟಗಳಲ್ಲಿ ನಿರಂತರವಾದ ಇತರ ವಿದ್ಯಾರ್ಥಿಗಳೊಂದಿಗೆ ಹೊಂದಾಣಿಕೆಯಿಂದ ಇರಬೇಕು. ಇದು ಅವರಲ್ಲಿ ಸ್ವಯಂ ಚಲನೆಗಳನ್ನು ಅಗತ್ಯಕ್ಕನುಸಾರವಾಗಿ ತಾಳಾತ್ಮಕವಾಗಿ ಸಾಮಾಜಿಕ ಜವಾಬ್ದಾರಿಯೊಂದಿಗೆ ಮುಂದುವರಿಯಲಿರುವ ತರಬೇತಿಯಾಗಿ ಬದಲಾಗುತ್ತದೆ.

ಗ್ರಿಡ್‌ನ ಎಲ್ಲ ಕಲಿಕಾ ಸಾಧನೆಯನ್ನು ಪಡೆದುಕೊಳ್ಳಲಿರುವ ರೀತಿಯಲ್ಲಿ ವರ್ಷ ಪೂರ್ತಿ ಮುಂದುವರಿಯುವ ವಿವಿಧ ಹಂತಗಳುಳ್ಳ ಒಂದು ಚಟುವಟಿಕೆಯನ್ನು ಪ್ರಧಾನವಾಗಿ ಒಂದನೇ ತರಗತಿಗೆ ಸೂಚಿಸಲಾಗುತ್ತದೆ. ಆರಂಭದ 3 ಚಟುವಟಿಕೆಗಳು ಮಕ್ಕಳಿಗೆ ಆಟಗಳ ಸಾಮಾನ್ಯ ಲೋಕದೆಡೆಗೆ ತಲುಪಿಸುವ ಸರಳ ಕ್ರೀಡೆಗಳಾಗಿವೆ. ಪಠ್ಯಪುಸ್ತಕದಲ್ಲಿರುವ ಇತರ ಚಟುವಟಿಕೆಗಳ ಜೊತೆ ಸಾಧ್ಯವಾದಷ್ಟು ಹೊಂದಿಸಿ ಸೂಕ್ತವಾದ ಚಟುವಟಿಕೆಗಳನ್ನು ಆಯೋಜಿಸಲು ಪ್ರಯತ್ನಿಸುವಿರಲ್ಲವೇ.

### ಕಲಿಕೆಯ ಸಾಧನೆಗಳು

- ಆಂಗಿಕ ಚಲನೆಗಳನ್ನು ಉಪಯೋಗಿಸಿ ಆಕೃತಿ, ಗಾತ್ರ, ದಿಕ್ಕು, ಮೇಲ್ಮೈ ಎಂಬಿವುಗಳನ್ನು ಸೂಚಿಸುತ್ತಾರೆ.
- ಏಕಾಂಗಿಯಾಗಿಯೂ ಗುಂಪಿನಲ್ಲಿಯೂ ತಾಳ ಸಹಿತವಾಗಿ ನಡೆಯುವುದು, ಓಡುವುದು, ಹಾರುವುದು ಇತ್ಯಾದಿ ಕ್ರಿಯೆಗಳನ್ನು ನಿರ್ವಹಿಸುತ್ತಾರೆ.
- ವಿವಿಧ ಸಂದರ್ಭಗಳು, ಸ್ಥಳಗಳು, ಘಟನೆಗಳು ಎಂಬಿವುಗಳನ್ನು ಸೂಕ್ತವಾದ ವೈಶಿಷ್ಟ್ಯಗಳೊಂದಿಗೆ ತಿಳಿದುಕೊಳ್ಳುತ್ತಾರೆ.
- ಪರಿಚಿತವಾದ ಪಕ್ಷಿ, ಪ್ರಾಣಿಗಳ ಧ್ವನಿಯನ್ನು ಅನುಕರಣೆ ಮಾಡುತ್ತಾರೆ.
- ಮೃಗ ಪಕ್ಷಿಗಳು, ಮನುಷ್ಯರು ಸಂಚರಿಸುವ ರೀತಿ, ನಾದ ಮತ್ತು ಚಲನೆಯ ವೈಶಿಷ್ಟ್ಯಗಳನ್ನು ಅನುಕರಣೆ ಮಾಡುತ್ತಾರೆ.
- ಮನುಷ್ಯರ ವಿವಿಧ ಶಾರೀರಿಕ ಸ್ಥಿತಿಗಳನ್ನು ಅನುಕರಿಸುತ್ತಾರೆ.
- ಕಥೆಯ ಸಂದರ್ಭದಲ್ಲಿ ಕಥಾ ಪಾತ್ರವನ್ನು ಅಭಿನಯಿಸುವ ಮೂಲಕ ಪ್ರಸ್ತುತ ಪಡಿಸುತ್ತಾರೆ.
- ನಿತ್ಯಜೀವನದ ಸಂದರ್ಭಗಳಲ್ಲಿನ ದೃಶ್ಯಗಳನ್ನು ಪಟ್ಟಿಮಾಡಿ ಮಂಡಿಸುತ್ತಾರೆ.
- ಸೂಕ್ತವಾದ ಆಂಗಿಕ ಚಲನೆಗಳು, ಸಂಭಾಷಣೆಗಳು ಎಂಬಿವುಗಳೊಂದಿಗೆ ಕಥೆಯನ್ನು ಭಾವನಾತ್ಮಕವಾಗಿ ಪ್ರಸ್ತುತ ಪಡಿಸುತ್ತಾರೆ.

**ಆಶಯ, ತಿಳುವಳಿಕೆ**

- ಪ್ರಕೃತಿಯಲ್ಲಿರುವ ವಸ್ತುಗಳಿಗೆ ವಿಭಿನ್ನ ಗಾತ್ರವೂ ಆಕೃತಿಯೂ ಇದೆ. ಆಂಗಿಕ ಅಭಿನಯದ ಮೂಲಕ ಗಾತ್ರ, ಆಕೃತಿ, ದಿಕ್ಕು ಮೇಲ್ಮೈ ಎಂಬಿವುಗಳನ್ನು ವಿನಿಮಯ ಮಾಡಿಕೊಳ್ಳಲು ಸಾಧ್ಯವಾಗುತ್ತದೆ.
- ಗುಂಪು ಚಟುವಟಿಕೆಯನ್ನು ತಾಳಾತ್ಮಕವಾಗಿ ನಿರ್ವಹಿಸುವುದರ ಸೌಂದರ್ಯವನ್ನು ತಿಳಿದುಕೊಳ್ಳುತ್ತಾರೆ.
  ಗುಂಪಿನ ತಾಳವನ್ನು ಕಾಪಾಡಿಕೊಳ್ಳುವುದು ಸದಸ್ಯರ ಸಾಮೂಹಿಕ ಜವಾಬ್ದಾರಿಯಾಗಿದೆ. (ತಾಳಾತ್ಮಕವಾದ ಚಲನೆಗಳಿಗಿರುವ ನಿಯಂತ್ರಣ ಸಾಮರ್ಥ್ಯವನ್ನು ಗಳಿಸುತ್ತಾರೆ)
- ಬೇರೆ ಬೇರೆ ಸ್ಥಳಗಳು ಮತ್ತು ಸಂದರ್ಭಗಳಲ್ಲಿ ಕೇಳಲು ಸಾಧ್ಯವಿರುವ ಧ್ವನಿಯ ಮೂಲಕ ಅವುಗಳನ್ನು ಪ್ರತ್ಯೇಕಿಸಿ ತಿಳಿದುಕೊಳ್ಳಬಹುದು.
- ಮಾನವರ ಮತ್ತು ಮನುಷ್ಯರಲ್ಲದವರ ವಿವಿಧ ರೀತಿಯ ಹಂತದ ತನಕ ಪ್ರಕೃತಿಯು ಸಂಪದ್ಭರಿತವಾಗಿದೆ.
  ಇಂತಹ ನಾದ ವೈಶಿಷ್ಟ್ಯಗಳನ್ನು ಒಂದು ಹಂತದ ತನಕ ಅನುಕರಿಸಲು ಮನುಷ್ಯನಿಗೆ ಸಾಧ್ಯವಿದೆ.
- ಪ್ರತಿಯೊಂದು ಜೀವಿಗೂ ಅದರದ್ದೇ ಆದ ಸಂಚಾರ ರೀತಿ ಇದೆ.
  ಇವುಗಳನ್ನು ಒಂದು ಹಂತದ ತನಕ ಅನುಕರಿಸಲು ಮನುಷ್ಯರಿಗೆ ಸಾಧ್ಯವಿದೆ.
- ಆಂಗಿಕ ಚಲನೆಯೊಂದಿಗೆ ಬಾವನೆಯೂ ಸೇರಿದಾಗ ಮಂಡನೆ ಆಕರ್ಷಕವಾಗುವುದು.
- ಇತರರ ದೈಹಿಕ ಸ್ಥಿತಿಯನ್ನು ಅನುಕರಿಸಲಿರುವ ಸಾಮರ್ಥ್ಯವಿರುವುದು ಮನುಷ್ಯನಿಗೆ ಮಾತ್ರ.
- ಆಂಗಿಕ ವಿನಿಮಯ ಸಾಮರ್ಥ್ಯ.
  ಸೂಕ್ತವಾದ ಆಂಗಿಕ ಚಲನೆಗಳು ಆಶಯ ವಿನಿಮಯವನ್ನು ಹೆಚ್ಚು ಯಶಸ್ವಿಗೊಳಿಸುತ್ತದೆ.
- ಕಥೆಗಾರನು ಸೂಚಿಸುವ ವೈಶಿಷ್ಟ್ಯಗಳನ್ನು ಸ್ವಯಂ ಅನುಭವಕ್ಕೆ ಒಳಪಡಿಸಿಕೊಂಡು ಮಂಡಿಸಲಿರುವ ನೈಪುಣ್ಯ.
- ಪ್ರಕಟಗೊಳ್ಳುವ ವೈಶಿಷ್ಟ್ಯಗಳನ್ನು ಮಂಡನೆಗೆ ಪರಿಗಣಿಸಬೇಕು. (ಪರಸ್ಪರ ಸಹಕಾರದೊಂದಿಗೆ ಶೀಘ್ರವಾಗಿ ಚಲನೆಗಳನ್ನು ನಡೆಸಲಿರುವ ಸಾಮರ್ಥ್ಯ)
- ಭಾಷಾ ಪ್ರಯೋಗ ಸಾಮರ್ಥ್ಯ – ಸಂಭಾಷಣೆಯನ್ನು ಅರ್ಥಭರಿತವಾಗಿ ಮಾಡಲು ಆಂಗಿಕ ಚಲನೆ ಮತ್ತು ಭಾವನೆಗಳು ಅಗತ್ಯವಾಗಿದೆ.

**ಚಟುವಟಿಕೆ 1 : ಬೌ...ಬೌ.. ಮ್ಯಾಂವ್ ಬೌ ಬೌ ಮ್ಯಾಂವ್**

- ಶಿಕ್ಷಕರು ತರಗತಿಗೆ ಬರುವಾಗ ವಿದ್ಯಾರ್ಥಿಗಳು ಸ್ವಾಭಾವಿಕ ಎದ್ದು ನಿಲ್ಲುತ್ತಾರೆ ಕುಳಿತುಕೊಳ್ಳಲು ಹೇಳುವಾಗ ಜೊತೆಯಾಗಿ ಕುಳಿತುಕೊಳ್ಳುತ್ತಾರೆ. ವಿದ್ಯಾರ್ಥಿಗಳನ್ನು ಒಟ್ಟಿಗೆ ನಿಲ್ಲಿಸಲು ಮತ್ತು ಕುಳಿತುಕೊಳ್ಳಿಸಲು ಸಾಮಾನ್ಯವಾಗಿ ಸ್ಟೇಂಡ್, ಸಿಟ್ ಇತ್ಯಾದಿ ಸೂಚನೆಗಳನ್ನು ನೀಡಲಾಗುತ್ತದೆಯಲ್ಲವೇ. ಇದರಲ್ಲಿ ಸಣ್ಣ ಒಂದು ಬದಲಾವಣೆ ತಂದರೆ ಇದೊಂದು ಆಟವಾಗುತ್ತದೆ. ಉದಾಹರಣೆಗೆ ಸ್ಟೇಂಡ್ ಎಂಬುದಕ್ಕೆ ಬೌಬೌ ಎಂದೂ ಸಿಟ್ ಎಂಬುದಕ್ಕೆ ಮ್ಯಾಂವ್ ಎಂದೂ ಹೇಳಬೇಕು ಆವರ್ತಿಸಿ ಬೌ ಬೌ ಮ್ಯಾಂವ್ ಎಂದು ಹೇಳುವುದರ ಮಧ್ಯೆ ಕ್ರಮತಪ್ಪಿ ಹೇಳಬೇಕು. ಕುಳಿತು ಕೊಂಡಿರುವಾಗ ಪುನಃ ಕುಳಿತುಕೊಳ್ಳಲು ಮತ್ತು ನಿಂತುಕೊಂಡಿರುವಾಗ ಪುನಃ ನಿಲ್ಲುವಂತೆ ಸೂಚನೆಗಲನ್ನು ನೀಡ ಬಹುದು.
- ವೇಗವಾಗಿ ಸೂಚನೆಯನ್ನು ನೀಡಿದರೆ ವಿದ್ಯಾರ್ಥಿಗಳ ನಡುವೆ ಉಂಟಾಗುವ ಆಶಯದ

ಕೊರತೆಯು ಒಂದು ಆಸಕ್ತಿದಾಯಕ ಆಟವಾಗಿ ಬದಲಾಗುತ್ತದೆ. ನಿಲ್ಲುವುದು, ಕುಳಿತುಕೊಳ್ಳುವುದು ಇತ್ಯಾದಿ ಚಟುವಟಿಕೆಗಳನ್ನೇ ಮಾಡಬೇಕೆಂದಿಲ್ಲ. ಕೈ ಎತ್ತುವುದು ಅಥವಾ ಸೂಕ್ತವಾದ ಇತರ ಚಟುವಟಿಕೆಗಳನ್ನು ಸಂದರ್ಭೋಚಿತವಾಗಿ ಉಪಯೋಗಿಸಬಹುದು. ಇದಕ್ಕೆ ಬೇಕಾಗಿರುವ ಸೂಚನಾ ಪದಗಳನ್ನು ಶಿಕ್ಷಕರು ನಿರ್ಧರಿಸಿಕೊಳ್ಳಬಹುದು.

**ಚಟುವಟಿಕೆ 2 : ತೈ ತೈ – ತಕ ತಕ**

- ವಿದ್ಯಾರ್ಥಿಗಳು ವೃತ್ತಾಕಾರವಾಗಿ ನಿಲ್ಲುತ್ತಾರೆ. ತೈ ತೈ ತೈ ತೈ ಎಂದು ಬಾಯಿಯ ಹೇಳುತ್ತಿರುವಾಗ ಅದರ ತಾಳ ಮತ್ತು ವೇಗವನ್ನು ಅನುಸರಿಸಿ ಬಲಬದಿಗೆ ನಡೆಯುತ್ತಾರೆ/ ಓಡುತ್ತಾರೆ. ವಿದ್ಯಾರ್ಥಿಗಳು ತಾಳದಲ್ಲಿ ನಡೆಯುವಾಗ ನುಡಿಯು ತಕ ತಕ ತಕ ತಕ ಎಂದು ಬದಲಾಗುತ್ತದೆ. ಆಗ ಮಕ್ಕಳು ಹಿಂತಿರುಗಿ ನಡೆಯಬೇಕು/ಓಡಬೇಕು. ಈ ಸೂಚನೆ ಗಳೆಲ್ಲವನ್ನೂ ವಿದ್ಯಾರ್ಥಿಗಳಿಗೆ ಸ್ಪಷ್ಟವಾಗಿ ನೀಡಬೇಕು. ಸೂಚನೆಗಳನ್ನು ಪಾಲಿಸಲು ಸಾಧ್ಯವಾಗದವರು ವೃತ್ತದಿಂದ ಹೊರಹಾಕಲ್ಪಡುತ್ತಾರೆ. ಒಂದೋ ಎರಡೋ ಬಾರಿ ಆಟವನ್ನು ಆವರ್ತಿಸಿ ಸ್ವಲ್ಪ ಹೆಚ್ಚು ಶಿಸ್ತಿನಿಂದ ಕೂಡಿದ ಇನ್ನೊಂದು ಆಟದ ಕಡೆಗೆ ಸಾಗೋಣ.

**ಚಟುವಟಿಕೆ 3 : ಗುಬ್ಬಿ ಗುಬ್ಬಿ**

- ಇದು ತರಗತಿಯ ವಿದ್ಯಾರ್ಥಿಗಳು ಏಕಕಾಲದಲ್ಲಿ ಭಾಗವಹಿಸಲು ಸಾಧ್ಯವಿರುವ ಜನಪದ ಆಟವಾಗಿದೆ. ಕೊನೆಗೆ ಪ್ರಾಸಬದ್ಧವಾಗಿ ಬರುವ ಆರು ಗೆರೆಯ ಗ್ರಾಮೀಣ ರಚನೆಯು ಈ ಹಾಡಿನ ತಾಳ ಮತ್ತು ನಿಯಮವನ್ನು ನಿರ್ಧರಿಸುತ್ತದೆ.

  * *ಗುಬ್ಬಿ ಗುಬ್ಬಿ*
  *ಚುಂ ಚುಂ ಎಂದು*
  *ಕರೆಯುವುದು ಯಾರನ್ನು?*

  * *ಆಚೆ ಈಚೆ*
  *ಹೊರಳಿಸಿ ಕಣ್ಣನು*
  *ನೋಡುವುದು ಏನನ್ನು?*

- ಇಬ್ಬರು ಎದುರು ಬದುರಾಗಿ ನಿಂತು ಕೈಗಳನ್ನೆತ್ತಿ ಕಮಾನಿನಾಕಾರದಲ್ಲಿ ಹಿಡಿದು ಅದರ ಅಡಿಯಿಂದಾಗಿ ಇತರ ಮಕ್ಕಳನ್ನು ಸಾಲು ಸಾಲಾಗಿ ನಡೆದು ಹೋಗುವಂತೆ ನಿಲ್ಲುತ್ತಾರೆ. ಇತರ ಮಕ್ಕಳು ಹಾಡಿನ ತಾಳಕ್ಕನುಗುಣವಾಗಿ ಕಮಾನಿನ ಅಡಿಯಿಂದಾಗಿ ನಡೆದು ಹೋಗುತ್ತಿರಬೇಕು. 'ಕರೆಯುವುದು ಯಾರನ್ನು' ಎಂದು ಹಾಡುವಾಗ ಕಮಾನಿನ ಒಳಗಿರುವವರನ್ನು ಕಮಾನನ್ನು ಕೆಳಗೆ ತಂದು ಹಿಡಿಯಬೇಕು. ಹಿಡಿಯಲ್ಪಟ್ಟವರು ಹೊರಸಾಗುತ್ತಾರೆ. ಹಾಡು ಮತ್ತು ಆಟವನ್ನು ಆವರ್ತಿಸುವುದು (ನಡೆಯುವುದು, ಓಡುವುದು, ಹಾರುವುದು) ಎಂಬಿವುಗಳ ತಾಳವನ್ನು ಅನುಸರಿಸುವ ಇನ್ನಷ್ಟು ಆಟಗಳನ್ನು ಸಂದರ್ಭೋಚಿತವಾಗಿ ಕಂಡುಹಿಡಿಯಬಹುದು.

## ಯೂನಿಟ್ 2 : ನಾನಿದ್ದೇನೆ ನಿಮ್ಮ ಹಿಂದೆ

ಕಥೆ ಹೇಳುವುದು ಎಂಬ ವಿಚಾರವನ್ನು ಎರಡನೇ ಹಂತದಲ್ಲಿ ಕಲಿಕಾ ಸಾಧನೆಗಳನ್ನು ಗಳಿಸಲು ನಾವಿಲ್ಲಿ ಸ್ವೀಕರಿಸುತ್ತೇವೆ. ಶಿಕ್ಷಕರ ಮತ್ತ ವಿದ್ಯಾರ್ಥಿಗಳ ಸಾಮೂಹಿಕ ಜವಾಬ್ದಾರಿಯೊಂದಿಗಿರುವ ಒಂದು ಕೊಡು – ಕೊಳ್ಳುವಿಕೆಯ ಪ್ರಕ್ರಿಯೆಯ ಮೂಲಕ ಈ ಹಂತವು ಮುಂದೆ ಸಾಗುತ್ತದೆ. ಪಕ್ಷಿಮೃಗ ಇತ್ಯಾದಿಗಳ ನಾದ, ಸಂಚಾರ ರೀತಿ, ವಿಶೇಷವಾದ ಚಲನೆಗಳನ್ನು ಅನುಕರಿಸಲಿರುವ

ಸಾಮರ್ಥ್ಯವನ್ನು ಈ ಚಟುವಟಿಕೆಯ ಮೂಲಕ ಗಳಿಸಲಾಗುವುದು (ಎಲ್ಲ ಕಲಿಕಾ ಸಾಧನೆಗಳನ್ನು ಪೂರ್ತಿಯಾಗಿ ಈ ಚಟುವಟಿಕೆಯಲ್ಲಿ ಸಮನ್ವಯಗೊಳಿಸಲಾಗಿದೆ.)

***ಹಂತ – 1***

- ಮುತ್ತು ಮತ್ತು ಮೀರಾ ಜಾತ್ರೆಗೆ ಹೊರಡುವ ತಯಾರಿಯಲ್ಲಿದ್ದಾರೆ. ಅಜ್ಜಿಯ ಮನೆಯ ಪಕ್ಕದಲ್ಲಿರುವ ದೇವಸ್ಥಾನದಲ್ಲಿ ಜಾತ್ರೆ. ಹೊರಡಲನುವಾಗಿದ್ದಾಗ ಕೋಳಿ ಮತ್ತು ಮರಿಗಳು ಓಡಿ ಬಂದವು. ಕೋಳಿಯು ಮುತ್ತುವಿನ ಬಳಿ ಕೇಳಿತು.

*'ಮುತ್ತು ಮುತ್ತು, ಜಾತ್ರೆಗೆ ನಾವು ಬರಬಹುದೇ?'*
*'ಬೇಡ ಬೇಡ, ಕೋಳಿಗಳನ್ನೆಲ್ಲ ಜಾತ್ರೆಗೆ ಕರೆದುಕೊಂಡು ಹೇಗಲು ಸಾಧ್ಯವಿಲ್ಲ'*
*ಕೋಳಿ ಮರಿಗಳು ಮೀರಾ ಬಳಿ ಕೇಳಿದವು*
*'ಮೀರಾ ಮೀರಾ, ಜಾತ್ರೆಗೆ ನಾವೂ ಬರಬಹುದೇ?'*
*"ಬೇಡ...ಬೇಡ... ಕೋಳಿಮರಿಗಳನ್ನೆಲ್ಲ ಜಾತ್ರೆಗೆ ಕರೆದುಕೊಂಡು ಹೋಗಲು ಸಾಧ್ಯವಿಲ್ಲ. ಬೇಗನೇ ಗೂಡು ಸೇರಿಕೊಳ್ಳಿ....ಆ ಕಿಟ್ಟುನರಿ ಎಲ್ಲಿಯಾದರೂ ಬಂದರೆ....!"*
*"ಏಯ್, ನಾವು ಗೂಡು ಸೇರುವುದಿಲ್ಲ. ನಾವು ಆಹಾರ ಹುಡುಕಿಕೊಂಡು ಹೋಗುತ್ತೇವೆ. ಗೂಡು ಸೇರುವ ಸಮಯ ಇನ್ನೂ ಆಗಿಲ್ಲ."*

**ಚಟುವಟಿಕೆ 1**

- ಎಲ್ಲಾ ವಿದ್ಯಾರ್ಥಿಗಳೂ ಕೋಳಿಮರಿಗಳಾಗಲಿ, ಟೀಚರ್ ತಾಯಿ ಕೋಳಿಗಳಾಗಲಿ ಮಕ್ಕಳು ಕೋಳಿಗಳ ನಡೆ ಮತ್ತು ಶಬ್ಧವನ್ನು ಅನುಕರಿಸುತ್ತಾರೆ. ಸ್ವಲ್ಪ ಸಮಯದ ನಂತರ ಗುಂಪಿನಿಂದ ಇಬ್ಬರು ಮಕ್ಕಳು ಮುತ್ತು ಮತ್ತು ಮೀರಾ ಆಗಿ ಅಭಿನಯಿಸುತ್ತಾರೆ. ತರಗತಿಯ ಒಂದು ಬದಿಯಲ್ಲಿ ಚೋಕು ಉಪಯೋಗಿಸಿ ಒಂದು ವೃತ್ತವನ್ನು ರಚಿಸಿ 'ಕೋಳಿಗೂಡು'ಮಾಡಿರಿ. ಮುತ್ತು ಮತ್ತು ಮೀರಾ, ತಾಯಿ ಕೋಳಿ ಹಾಗೂ ಕೋಳಿಮರಿಗಲನ್ನು ಗೂಡು ಸೇರಿಸುತ್ತಾರೆ.

- ನಡತೆ, ನಾದ ಎಂಬಿವುಗಳ ಸ್ಪಷ್ಟತೆ, ಪಾಲ್ಗೊಳ್ಳುವಿಕೆ, ಗುಂಪುಪ್ರಜ್ಞೆ, ತಾಳಾತ್ಮಕತೆ ಎಂಬಿವುಗಳನ್ನು ಶಿಕ್ಷಕರಿಗೆ ಮೌಲ್ಯಮಾಪನ ಮಾಡಬಹುದು.
- ಶಿಕ್ಷಕಿ ಕಥೆಯನ್ನು ಮುಂದುವರಿಸುತ್ತಾರೆ. ಕೋಳಿಗಳನ್ನು ಗೂಡು ಸೇರಿಸಿ ಮುತ್ತು ಮತ್ತು ಮೀರಾ ಹೊರಡಲು ತಯಾರಾದರು.

*'ಮೇ...ಮೇ...'*
*ಮಿನಿ ಎಂಬ ಮರಿ ಆಡು ಓಡಿಬಂತು.*

*'ಜಾತ್ರೆಗೆ ನನ್ನನ್ನು ಕರೆದುಕೊಂಡು ಹೋಗುವಿರಾ?' ಮಿನಿಯು ಅಂಗಲಾಚಿತು.*
*ಮೀರಾ : 'ಏಯ್ ಇಲ್ಲ. ಆಡಿನ ಮರಿಗಳನ್ನೆಲ್ಲ ಜಾತ್ರೆಗೆ ಕರೆದುಕೊಂಡು ಹೋಗಲು ಸಾಧ್ಯವಿಲ್ಲ. ಆ ದೊಡ್ಡ ನರಿ ಇಲ್ಲಿ ಹೊಂಚು ಹಾಕುತ್ತಿದೆ. ಬೇಗನೆ ತಾಯಿಯ ಜೊತೆ ಸೇರಿಕೋ.'*

**ಚಟುವಟಿಕೆ 2**

- ಟೀಚರ್: 'ನರಿ ಹೆದರಿಸುವುದಾದರೂ ಹೇಗೆ....?'
- ಎಲ್ಲ ಮಕ್ಕಳೂ ನರಿಯ ಸ್ವರವನ್ನು ಅನುಕರಿಸುತ್ತಾರೆ.
- ಕಥೆ ಮುಂದುವರಿಯುತ್ತದೆ.

- ಮುತ್ತು ಮತ್ತು ಮೀರಾ ಪ್ರಯಾಣವನ್ನು ಮುಂದುವರಿಸಿದರು. ದಡ್ಡಮ್ಮೆಯನ್ನು ದಾಟಿ ಪೊನ್ನಾರಂ ಬಯಲಿನ ಬದಿಯ ಹಿತ್ತಲಿನಲ್ಲಿ ನಡೆದು ಹೋಗುತ್ತಿದ್ದಾರೆ. ಗದ್ದೆಯಲ್ಲಿ ನೋಡಿ, ಒಂದಷ್ಟು ಕೊಕ್ಕರೆಗಳು ಅವರು ಸಂತೋಷದಲ್ಲಿದ್ದಾರೆ.

**ಚಟುವಟಿಕೆ 3**

ಮಕ್ಕಳು ಕೊಕ್ಕರೆಗಳಾಗುತ್ತಾರೆ. ಕೊಕ್ಕರೆಯು ನಡೆಯುವ ಕ್ರಮವನ್ನು ಅನುಕರಿಸುತ್ತಾರೆ.

ಶಿಕ್ಷಕಿ ಹಾಡು ಹಾಡುತ್ತಾರೆ. 'ಕೊಕ್ಕರೆಗಳು' ಆಡುತ್ತವೆ. ಎಲ್ಲರೂ ಸೇರಿ ಹಾಡುತ್ತಾರೆ. (ಹಾಡಿಗೆ ಅನುಗುಣವಾದ ಆಂಗಿಕ ಅಭಿನಯ ಸಹಿತ ಗುಂಪುಗಳಾಗಿ ಮತ್ತು ವೈಯಕ್ತಿಕವಾಗಿ ಪ್ರದರ್ಶಿಸಲಿರುವ ಸಾಮರ್ಥ್ಯವನ್ನು ಈ ಚಟುವಟಿಕೆಯ ಮೂಲಕ ಗಳಿಸಬೇಕು) ಸೂಕ್ತವಾದ ಆಂಗಿಕಾಭಿನಯದ ಪ್ರಯೋಗ ಸಾಮರ್ಥ್ಯ, ನೇತೃತ್ವ, ತಾಳಾತ್ಮಕತೆ ಎಂಬಿವುಗಳನ್ನು ಮೌಲ್ಯಮಾಪನ ಮಾಡಬೇಕು.

***ಹಾಡು***

ನೀರಿನಲ್ಲಿ ಈಜುವುದು ಎಷ್ಟು ಸುಖ
ಆಕಾಶವನ್ನು ನೋಡುವುದು ಎಷ್ಟು ಸುಖ
ನೀರಿನಲ್ಲಿ ಈಜುವ ಮೀನಿನ ಹಿಂದೆ
ಮುಳುಗಿ ಹೊರಳಲು ಎಷ್ಟು ಸುಖ
ಹೂವುಗಳನ್ನು ನೋಡಲು ಎಷ್ಟು ಸುಖ
ಹುಲ್ಲಿನ ಮೇಲೆ ಓಡಲು ಎಷ್ಟು ಸುಖ
ಓಡಿ ಆಡುವ ಕಪ್ಪೆಯ ಮುಂದೆ
ಕ್ರೋಂ ಕ್ರೋಂ ಮಾಡಲು ಎಷ್ಟು ಸುಖ
ಕ್ರೋಂ ಕ್ರೋಂ ಮಾಡಲು ಎಷ್ಟು ಸುಖ

**ಚಟುವಟಿಕೆ 4**

- ಗುಂಪಿನಲ್ಲಿ ಇಬ್ಬರು ಮುತ್ತು ಮತ್ತು ಮೀರಾ ಆಗಿ ಬಂದು ಕೊಕ್ಕರೆಗಳಿಗೆ ವಿದಾಯ ಹೇಳುತ್ತಾರೆ. 'ಮರಿಕೊಕ್ಕರೆ'ಗಳೆಲ್ಲವೂ ತಮ್ಮ ಆಸನಕ್ಕೆ ಹಿಂತಿರುಗುತ್ತಾರೆ.

***ಹಂತ – 2***

- ಕಥೆಯ ಸಂದರ್ಭದಲ್ಲಿ ಕಥಾಪಾತ್ರ ಅಭಿನಯಿಸಿ ಪ್ರದರ್ಶಿಸುತ್ತಾರೆ. ಸೂಕ್ತವಾದ ಆಂಗಿಕ ಚಲನೆ, ಸಂಭಾಷಣೆ, ಆಂಗಿಕ ಅಭಿನಯ, ಸಾಂದರ್ಭಿಕತೆ ಎಂಬಿವುಗಳನ್ನು ಇಲ್ಲಿ ಮೌಲ್ಯಮಾಪನ ಮಾಡಲು ಉಪಯೋಗಿಸಬೇಕು.
- ಟೀಚರ್ ಕಥೆ ಮುಂದುವರಿಸುತ್ತಾರೆ

ಕೊಕ್ಕರೆಗಳಿಗೆ ವಿದಾಯ ಹೇಳಿ ಮುತ್ತು ಮತ್ತು ಮೀರಾ ಪುನಃ ನಡೆದರು. ನಡೆದು ಅವರು ದೊಡ್ಡದೊಂದು ಲದ ಮರ ಸನಿಹಕ್ಕೆ ತಲುಪಿದರು. ಆಲದಮರ ಕೆಳಭಾಗದಲ್ಲಿರುವ ಗೆಲ್ಲುಗಳಿಗೆ ಬಳ್ಳಿಗಳು ಇಳಿದು ಕಾಡು ತುಂಬಿಕೊಂಡಿದೆ. ಅನಿರೀಕ್ಷಿತವಾಗಿ ಆ ಕಾಡು ಬಳ್ಳಿಗಳಿಗೆ ಚಲನೆ ಬಂತು!ಇಬ್ಬರೂ ಹೆದರಿ ಹಿಂದಕ್ಕೆ ಓಡಿದರು. ಹತ್ತಿರದಲ್ಲೇ ಕಂಡ ತೇಗದಮರದ ಹಿಂಬದಿಯಲ್ಲಿ ಅಡಗಿ ಮೆಲ್ಲನೆ ಗಮನಿಸಿದರು. ಮರದ ಗೆಲ್ಲಿನಲ್ಲಿ ತೂಗಿ ಆಡುತ್ತಿದ್ದ ಚಿಂಟು ಮಂಗ ಕೆಣಕುತ್ತಿದ್ದನು. ಮರದ ಗೆಲ್ಲಿನಿಂದ ಹಾರಿ ಕೆಳಬಂದು ಅವನು ಹಾಡಿದನು.

ನಾನಿದ್ದೇನೆ ನಿಮ್ಮ ಹಿಂದೆ
ನಾನಿದ್ದೇನೆ ನಿಮ್ಮ ಹಿಂದೆ
ಈ ಚಿಂಟು ಮಂಗ ಎಂದರೆ ಯಾರು? ಅದನ್ನು ತಿಳಿದುಕೊಳ್ಳಬೇಡವೇ?
ಈ ಚಿಂಟು ಮಂಗ ಮುತ್ತುವಿನ ಸ್ನೇಹಿತ. ತುಂಬಾ ಚೂಟಿ ಇರುವವ ತಿಳಿಯಿತೇ. ಎಲ್ಲಾ ಮನೆಗಳಿಗೆ ನುಗ್ಗಿ ಆಹಾರ ಪದಾರ್ಥಗಳನ್ನು ಕದ್ದೊಯ್ಯುತ್ತಾನೆ. ಶಾಲೆ ಬಿಟ್ಟು ಬರುವ ಚೂಟಿ ಮಕ್ಕಳನ್ನು ಹೆದರಿಸುತ್ತಾನೆ. ಮೀರಾಳ ಮನೆಯ ಪಕ್ಕದ ಪೇರಳೆ ಹಣ್ಣಾದರೆ ಕುಯ್ದು ತಿನ್ನುತ್ತಾನೆ. ಹೀಗಿದ್ದರೂ ಚಿಂಟುವಿನಿಂದ ಕೆಲವು ಉಪಕಾರಗಳಿವೆ ಗೊತ್ತೇ? ಕೋಳಿಮರಿಗಳನ್ನು ಹಿಡಿಯಲು ಬರುವ ಕೊಂಕು ಕಣ್ಣಿನ ಕಾಗೆ ಮತ್ತು ಕಿಟ್ಟು ನರಿಯನ್ನು ಬೊಬ್ಬೆ ಹಾಕಿ ಓಡಿಸುತ್ತಾನೆ. ಹಾಗೆ ಹಾಗೆ.....
ಜಾತ್ರೆಗೆ ಹೋಗುವ ಮಕ್ಕಳನ್ನು ಕಂಡಾಗ ಚಿಂಟುವಿಗೆ ಉತ್ಸಾಹ ಏರಿತು. ಚಿಂಟು ಮಕ್ಕಳ ಬಳಿ ಕೇಳಿದನು.
ನಾನಿದ್ದೇನೆ ನಿಮ್ಮ ಹಿಂದೆ
ನಿಮ್ಮ ಹಿಂದೆಯೇ ಬರಲೇ
ಜಾತ್ರೆಯ ಬೆಳಕಿನಲ್ಲಿ ಪೀಪಿ ಊದಲು
ಚಿಂಟು ಮಂಗನೂ ಬರಲೇ
ಆಗ ಅವರು ಹೇಗೆ ಉತ್ತರಿಸಿದರು?

**ಚಟುವಟಿಕೆ 1**

- ಎಲ್ಲಾ ವಿದ್ಯಾರ್ಥಿಗಳನ್ನೂ ತಲಾ ಮೂವರು ಇರುವ ಗುಂಪುಗಳನ್ನಾಗಿ ಮಾಡಿ. ಮಕ್ಕಳು ಮಂಗ, ಮುತ್ತು ಮತ್ತು ಮೀರಾ ಆಗಿ ಅಭಿನಯಿಸಲಿ (ತರಗತಿ ಕೋಣೆಯ ಒಳಗೆ ಹಲವು ಕಡೆಗಳಲ್ಲಿ ನೆಲೆಯೂರಲಿ) ಏಕಕಾಲದಲ್ಲಿ ಮಾಡಲಿ. ಎರಡೋ ಮೂರೋ ಮಿನಿಟುಗಳ ಕಾಲ ಮಾತನಾಡಲಿ. ನಂತರ ಮಕ್ಕಳನ್ನು ವೃತ್ತಾಕಾರವಾಗಿ ಕುಳಿಕುಕೊಳ್ಳಿಸಿ ಯಾವುದಾದರೂ ಒಂದು ಗುಂಪನ್ನು ನಡುವಿನಲ್ಲಿ ಕುಳ್ಳಿರಿಸಿ ಸಂಭಾಷಣೆಯನ್ನು ದೊಡ್ಡದಾಗಿ ಹೇಳಿಸಿರಿ. ಒಂದು ಅಥವಾ ಎರಡು ಗುಂಪಿಗೆ ಅವಕಾಶ ನೀಡಬಹುದು. (ಕಥಾಪಾತ್ರಗಳಿಗೆ ಸೂಕ್ತವಾಗುವ ಸಂಭಾಷಣೆಯನ್ನು ರೂಪಿಸಿ ಮಂಡಿಸಿರಿ, ಸೂಕ್ತವಾದ ಆಂಗಿಕ ಅಭಿನಯಗಳೊಂದಿಗೆ ಕಥೆಯನ್ನು ಭಾವನಾತ್ಮಕವಾಗಿ ಪ್ರದರ್ಶಿಸುವುದು ಇತ್ಯಾದಿ ಸಾಮರ್ಥ್ಯಗಳನ್ನು ಈ ಚಟುವಟಿಕೆಯ ಮೂಲಕ ಪಡೆಯಬಹುದು. ಭಾಷಾ ಪ್ರಯೋಗ ಸಾಮರ್ಥ್ಯ, ಆಂಗಿಕ ಚಲನೆಗಳ ಸಾಂದರ್ಭಿಕತೆ, ಭಾವನೆ ಎಂಬಿವುಗಳನ್ನು ಮೌಲ್ಯಮಾಪನ ಮಾಡಬೇಕು)

- ಕಥೆ, ಮುಂದುವರಿಯುತ್ತದೆ.

ಮುತ್ತು ಮತ್ತು ಮೀರಾ ಏನೆಂದು ಹೇಳಿದರು ಗೊತ್ತೆ?
ಬೇಡ ಬೇಡಾ ಚಿಂಟು ಮಂಗಾ
ನಮ್ಮ ಜೊತೆ ಬರಬೇಡಾ
ಜಾತ್ರೆಯ ಬೆಳಕಿನಲ್ಲಿ ಪೀಪಿ ಊದಲು
ನಮ್ಮ ಜೊತೆ ಬರಬೇಡಾ

(ಮಕ್ಕಳು ಆವರ್ತಿಸಲು ಹೇಳುವಿರಲ್ಲವೇ)

ಜಾತ್ರೆಗೆ ಕರೆದುಕೊಂಡು ಹೋಗಲು ಸಾಧ್ಯವಿಲ್ಲವೆಂದು ಮುತ್ತು ಮತ್ತು ಮೀರಾ ಖಚಿತವಾಗಿ ಹೇಳದಾಗ ಚಿಂಟು ಮಂಗನಿಗೆ ಸಂಕಟವಾಯಿತು. ಚಿಂಟು ಮರಕ್ಕೆ ಓಡಿ ಹತ್ತಿ ಮರದಲ್ಲಿ ಕುಳಿತನು. ಮುತ್ತು ಮತ್ತು ಮೀರಾ ವೇಗವಾಗಿ ನಡೆದರು.

ಗೋಪಾಲಣ್ಣನ ಬಾಳೆತೋಟದ ಬದಿಯಲ್ಲಿ , ಕಲ್ಲಗುಡ್ಡದ ಬುಡದಲ್ಲೇ, ಕೇಪುಳ ಗಿಡದ ನೆರಳಿನಲ್ಲೇ ನಡೆದು ಅವರು ಹರಿಯುವ ಹೊಳೆಯ ಬದಿಗೆ ತಲುಪಿದರು. ಇನ್ನು ಹೊಳೆ ದಾಟಬೇಕು. ಇಳಿದು ಈಜೋಣವೆಂದು ಆಲೋಚಿಸಿದಾಗ ಅಯ್ಯೋ, ಒಂದು ಮೊಸಳೆ! ಒಂದಲ್ಲ ತಾಯಿ ಮತ್ತು ಮಕ್ಕಳೆಲ್ಲ ಸೇರಿ ಒಂದು ಗುಂಪು. ಮೀರಾ ಮತ್ತು ಮುತ್ತುವನ್ನು ಕಂಡಾಗ ಅವುಗಳು ತಲೆಯನ್ನೆತ್ತಿ ಬಾಯಿ ಒಡೆದು ನೋಡುತ್ತಾ ನಿಂತವು.

'ಅಯ್ಯೋ, ಇನ್ನೇನು ಮಾಡುವುದು? ಮೀರಾ ಒಟ್ಟು ಸಂಕಟಕ್ಕೀಡಾದಳು. ಛೇ!, ಆ ಚಿಂಟು ಮಂಗ ಇದ್ದಿದ್ದರೆ ಯಾವುದಾದರೂ ಒಂದು ದಾರಿಯನ್ನು ಕಂಡುಹಿಡಿಯುತ್ತಿದ್ದ.'

ಏನು ಮಾಡಬೇಕೆಂದು ತೋಚದೆ ಸಂಕಟದಿಂದಿರುವಾಗ ದಾರಿ ಬದಿಯ ಗೆಲ್ಲುಗಳಲ್ಲಿ ಅಲುಗಾಟ ಕಾಣಸಿತು. ನೋಟುವಾಗ ಗೆಲ್ಲಿನಿಂದ ಹಾರಿ ಇಳಿದು ನಿಂದದ್ದು ನಮ್ಮ ಚಿಂಟು ಮಂಗ ಅವನು ಹೀಗೆ ಹಾಡಿದನು.

ನಾನಿದ್ದೇನೆ ನಿಮ್ಮ್ ಹಿಂದೆ
ನಿಮ್ಮ ಹಿಂದೆ ನಾನಿದ್ದೇನೆ
ಚಿಂಟುವನ್ನು ಕಂಡಾಗ ಇಬ್ಬರಿಗೂ ಸಂತಸವಾಯಿತು.

'ಮುತ್ತಾ: ಏ ಚಿಂಟು, ಈ ಹೊಳೆಯನ್ನು ದಾಟುವಾಗ ಹೇಗೆ? ಇದರಲ್ಲಿ ಪೂರ್ತಿ ಮೊಸಳೆಗಳಿವೆ. ಬಾಯಿ ಒಡೆದು ನೋಡುವುದನ್ನು ನೋಡಿದ್ದೀಯಲ್ಲವೇ.'

'ಚಿಂಟು ಮಂಗ: ಅದುವಾ ಸಮಸ್ಯೆ? ಅದಕ್ಕೊಂದು ಪರಿಹಾರವಿದೆ. ಸ್ವಲ್ಪ ಕೆಳಗೆ ನಡೆದರೆ ಹೊಳೆಯ ಅಗಲ ಕಿರಿದಾದ ಒಂದು ಜಾಗವಿದೆ. ಅಲ್ಲಿ ಬಾಗಿದ ಮರದ ಗೆಲ್ಲಿನಲ್ಲಿ ನೇತಾಡುತ್ತಾ ನಮಗೆ ಆ ಕಡೆಗೆ ದಾಟಬಹುದು.'

ಚಿಂಟು ಮಂಗನು ಮುಂದಿನಿಂದ ಮತ್ತು ಮುತ್ತು ಹಾಗೂ ಮೀರಾ ಹಿಂದಿನಿಂದ ಹೊಳೆಬದಿಯಲ್ಲೇ ನಡೆಯಲು ಆರಂಭಿಸಿದರು. ಮರಗಳನ್ನು ಕಂಡಾಗ ಚಿಂಟು ಅದನ್ನು ಏರಿ ಹತ್ತಿರದ ಮರಕ್ಕೆ ಹಾರುತ್ತಿದ್ದನು.

ಹೊಳೆಗೆ ನೋಡಿದ ಮೀರಾ ಒಂದು ಮಿಂಚುಳ್ಳಿ ಮೀನು ಹಿಡಿಯುವುದನ್ನು ಕಂಡಳು. ಮಿಂಚುಳ್ಳಿಯು ನೀರಿನಲ್ಲಿ ಎಷ್ಟಂದು ಖುಷಿ. ಹೊಳೆ ಬದಿಯಲ್ಲಿ ನೋಡುತ್ತಾ ಒಂದು ಪ್ರಾಯದ್ದು ಕೊಕ್ಕು ಅಲುಗಾಡಿಸದೆ ಕುಳಿತಿದೆ. ಹೊಳೆಯ ಇನ್ನೊಂದು ಕಡೆಯಲ್ಲಿ ಉರುಟಾದ ಕಲ್ಲುಗಳು ಎತ್ತರಕ್ಕೆ ನಿಂತಿವೆ. ಮುತ್ತು ನೋಡುವಾಗ ಹಲವು ಏಡಿಗಳು ಬಿಸಿಲಿಗೆ ಕುಳಿತಿವೆ. ಚಿಂಟು ಮಂಗ ಕಾಡನ್ನು ಅಲುಗಾಡಿಸಿದಾಗ ಹಲವು ಕಾಡು ಕೋಳಿಗಳು ಹೆದರಿ ಓಡಿದವು.

ನಡೆದು ನಡೆದು ಅವರು ಚಿಂಟು ಮಂಗ ಹೇಳಿದ ಸ್ಥಳ ತಲುಪಿದರು. ಮರದ ಗೆಲ್ಲುಗಳು ಹೊಳೆಯ ಆ ಬದಿಯ ತನಕ ಬಾಗಿಕೊಂಡಿದೆ. ಮುತ್ತು ಮತ್ತು ಮೀರಾ ಓಡಿ ಹತ್ತಿಬಾಗಿದ ಗೆಲ್ಲನ್ನು ಹಿಡಿದು ನೇತಾಡುತ್ತಾ ಆ ಬದಿಗೆ ದಾಟಿದರು. ಆಚೆ ಬದಿಗೆ ತಲುಪಿದಾಗ ಚಿಂಟು ಮಂಗನು ಹಾಡಲು ಆರಂಭಿಸಿದನು.

ನಾನಿದ್ದೇನೆ ನಿಮ್ಮ ಹಿಂದೆ
ನಿಮ್ಮ ಹಿಂದೆ ನಾನು ಬರಲೇ
ಜಾತ್ರೆಯ ಬೆಳಕಿನಲ್ಲಿ ಡುಂಡುಂಡುಂ ಬಡಿಯಲು
ಚಿಂಟು ಮಂಗನೂ ಬರಲೇ

ಆಗ ಮಕ್ಕಳು ಹೀಗೆ ಹೇಳಿದರು
ಬೇಡ ಬೇಡ ಚಿಂಟು ಮಂಗಾ
ನಮ್ಮ ಜೊತೆ ಬರಬೇಡಾ
ಜಾತ್ರೆಯ ಬೆಳಕಿನಲ್ಲಿ ಡುಂಡುಂಡುಂ ಬಡಿಯಲು
ನಮ್ಮ ಜೊತೆ ಬರಬೇಡಾ

## ಚಟುವಟಿಕೆ 2 : ಹೊಳೆ ದಾಟೋಣ

ತರಗತಿಯ ಕೋಣೆಯಲ್ಲಿ ಚೋಕಿನಿಂದ ಹೊಳೆಯ ಚಿತ್ರ ಬಿಡಿಸಬಹುದು. ಹೊಳೆಗೆ ನಡುವೆ ಮೂರೋ ನಾಲ್ಕೋ ಅಗಲ ಕಿರಿದಾದ ಮರದ ಸಂಕ (ಒಂದೇ ಮರ)ಗಳನ್ನೂ ಮಾಡೋಣ.

***ಹಂತ – 1***

- ಮಕ್ಕಳನ್ನು ಗುಂಪುಗಳನ್ನಾಗಿ ಮಾಡಿ ಸಾಲು ಸಾಲಾಗಿ ಸಂಕದ ಮೇಲಿನಿಂದ ನಡೆಯಲು ಸೂಚಿಸಬೇಕು.
- ಅಗಲ ಕಿರಿದಾದ ಸಂಕ. ಜಾಗ್ರತೆಯಿಂದ ನಡೆಯಬೇಕು. ಕೆಳಗೆ ಬಿದ್ದರೆ ಮೊಸಳೆ ಹಿಡಿಯುತ್ತದೆ. ನಿರ್ದಿಷ್ಟ ಸಮಯದೊಳಗೆ ಅತ್ಯಂತ ಮೊದಲು ಆಚೆ ಬದಿಗೆ ತಲುಪುವ ಗುಂಪು ಗೆಲ್ಲುತ್ತದೆ. ಇದು ಸ್ಪರ್ಧೆ (ಸಂಕಕ್ಕಾಗಿ ಸೌಕರ್ಯಕ್ಕನುಸಾರವಾಗಿ ಬಿದಿರ ಮೊಳೆಗಳೋ ಅಡಿಕೆ ಮರದ ತುಂಡುಗಳೋ ಉಪಯೋಗಿಸಿದರೆ ಆಟವು ಹೆಚ್ಚು ಆಸಕ್ತಿದಾಯಕವಾಗಬಹುದು)



**ಹಂತ – 2**

- ಸಂಕವು ಒಂದು ಬದಿಯಿಂದ ಹಾದುಹೋಗುತ್ತದೆಯಲ್ಲವೇ. ಇನ್ನು ಎರಡೂ ಬದಿಯಿಂದ ಆಗಲಿ. ಆಚೆ ಈಚೆ ಜೊತೆಯಾಗಿ ದಾಟುವಾಗ ಎದುರಿನಿಂದ ಬರುವವರನ್ನು ದೂಡಿ ಹಾಕದಂತೆ ನೋಡಬೇಕು. ಒಂದು ಮಗುವೂ ಕೆಳಗೆ ಬೀಳದಂತೆ ಆಚೆ ಬದಿಯನ್ನು ತಲುಪುವ ತಂಡವು ಗೆಲ್ಲುತ್ತದೆ. ಏಕಾಂಗಿಯಾಗಿಯೂ ಗುಂಪಾಗಿಯೂ ತಾಳತ್ಮಕವಾಗಿಯೂ ನಡೆಯಬಹುದು, ಓಟ, ಹಾರುವುದು ಎಂಬಿವುಗಳನ್ನು ನಿರ್ವಹಿಸಲು ಈ ಚಟುವಟಿಕೆಯು ಸಹಾಯ ಮಾಡಬಹುದು. ಗುಂಪು ಪ್ರಜ್ಞೆ, ಇತರರನ್ನು ಪರಿಗಣಿಸುವುದು, ಸ್ವಯಂ ನಿಯಂತ್ರಣ ಸಾಮರ್ಥ್ಯ, ಆರೋಗ್ಯಕರವಾದ ಸ್ಪರ್ಧಾ ಮನೋಭಾವ ಎಂಬಿವುಗಳನ್ನು ಶಿಕ್ಷಕರು ಮೌಲ್ಯಮಾಪನ ಮಾಡಬಹುದು.